# ಭಗವದ್ಗೀತೆಯ ಹೃದಯ

## ಪ್ರಸ್ತಾವನೆ

ಇಡೀ ಪ್ರಪಂಚದ ಸಾಹಿತ್ಯ ಶ್ರೇಣಿಯಲ್ಲಿ ಆಸಕ್ತಿಯ ಹಾಗೂ ಪ್ರಭಾವದ ದೃಷ್ಟಿಯಿಂದ ಕೇವಲ ಕೆಲವೇ ಪುಸ್ತಕಗಳು ಭಗವದ್ಗೀತೆಯ ಹೋಲಿಕೆಗೆ ಅನುಕೂಲವಾಗಿ ಸಿಕ್ಕುತ್ತದೆ .ಏಳುನೂರು ಶ್ಲೋಕಗಳ ಈ ಗೀತೆಯು ತನ್ನ ಸಣ್ಣ ಪರಿಧಿಯಲ್ಲಿ ,ಮುಂದಿನ ಪ್ರಕರಣಗಳಲ್ಲಿ ನೋಡುವಂತೆ ಪ್ರಪಂಚಕ್ಕೆ ಪುರಾತನ ಭಾರತದ ಕೊಡುಗೆಯಾದ ಅತ್ಯುತ್ತಮ ತತ್ವಶಾಸ್ತ್ರ ಮತ್ತು ನೈತಿಕ ನಿಯಮಗಳನ್ನು ಒಳಗೊಂಡಿದೆ. ಉನ್ನತವಾದ ತತ್ವ ಬೋಧನೆ ಸರಳ ಸುಂದರವಾದ ಪದ ಪ್ರಯೋಗಗಳಿಂದ ಮಧುರವಾದ ಶ್ಲೋಕರೂಪದಲ್ಲಿ ಹೆಣೆಯಲ್ಪಟ್ಟಿದ್ದು ಅಭ್ಯಾಸಮಾಡಲು ಮನೋಹರವಾಗಿದೆ.
ಬೋಧನೆಯು ಅದ್ಭುತವಾದ ಕ್ರಮದಿಂದ ಪ್ರತಿಪಾದಿಸಲ್ಪಟ್ಟಿದ್ದು ವಿಚಾರ ಪ್ರಚೋದಕವಾಗಿದೆ .ವಾಕ್ಯ ಮತ್ತು ವಾಕ್ಯಾಂಗಗಳನ್ನು ಪ್ರಸಿದ್ಧವಾದ ಮೂಸೆಯಲ್ಲಿ ಎರಕಹೊಯ್ದು ಅತ್ಯಂತ ಉದಾತ್ತವಾದ ಸತ್ಯವನ್ನು ಪ್ರತಿಪಾದಿಸಿರುವುದು ಇದನ್ನು ಒಂದು ಅತೀವ ಆಸಕ್ತಿ ಮೂಡಿಸುವ ಗ್ರಂಥವಾಗಿಸಿದೆ.

ಅತ್ಯಂತ ಪ್ರಾಚೀನ ಕಾಲದಿಂದ ನಮ್ಮ ಕಾಲದವರೆಗೂ ಭಾರತ ದೇಶದ ಪವಿತ್ರಗ್ರಂಥ ಕೇವಲ ಸಾಮಾನ್ಯ ಜನರ ಮೇಲಲ್ಲದೆ ಮನನಶೀಲರ ಮೇಲು ವ್ಯಾಪಕವಾಗಿ ಪ್ರಭಾವ ಬೀರುತ್ತಲೇ ಇರುವುದು ಗಮನಾರ್ಹ ಸಂಗತಿ.ಭಾರತೀಯ ಪರಂಪರೆಯ ಎಲ್ಲ ಮೌಲ್ಯಗಳನ್ನು ಪ್ರತಿಪಾದಿಸಿದ್ದು ಅವುಗಳಿಗೆ ಘನವೆತ್ತ ಸೂಕ್ತ ಸ್ಥಾನಗಳನ್ನು ಕಲ್ಪಿಸಿದೆ. ಹೀಗಾಗಿ ಶಾಸ್ತ್ರೀಯ ಹಿಂದೂ ಮನಸ್ಸಿನ ಮೇಲೆ ಬಲವಾದ ಹಿಡಿತವನ್ನು ಸಾಧಿಸಿರುವುದು ಆಶ್ಚರ್ಯವೇನಲ್ಲ. ಆಧ್ಯಾತ್ಮಿಕ ಸಾಹಿತ್ಯಿಕ ಪ್ರತಿಭೆಯುಳ್ಳ ಹಿಂದೂ

ವ್ಯಾಖ್ಯಾನ ಕಾರರಿಗೆ ಈ ಕೃತಿಯ ಮೇಲೆ ವ್ಯಾಖ್ಯಾನ ಬರೆಯುವ ತುಡಿತವನ್ನು ನಿಯಂತ್ರಿಸಲಾಗಲಿಲ್ಲ. ಆದರೆ ಈ ವ್ಯಾಖ್ಯಾನಗಳು ನವ ಸುಶಿಕ್ಷಿತ ಹಿಂದೂವಿನ ಮೆಚ್ಚುಗೆ ಮತ್ತು ಶ್ಲಾಘನೆಗಳನ್ನು ಸಂಪಾದಿಸುವುದು ಅಂತೆ ವೈಚಾರಿಕ ಪಾಶ್ಚ್ಯಾತ್ಯರ ಗಮನವನ್ನು ತನ್ನೆಡೆಗೆ ಸೆಳೆದುಕೊಳ್ಳುವುದು ಪುರಾತನ ಭಾರತೀಯ ಸಾಹಿತ್ಯದಲ್ಲಿನ ಒಂದು ಅಪೂರ್ವವಾದ ವೈಶಿಷ್ಟ್ಯವಾಗಿದೆ. ಈ ಗ್ರಂಥದ ಅಸಂಖ್ಯಾತ ಆವೃತ್ತಿಗಳು ಬೆಳಕನ್ನು ಕಾಣುತ್ತಲಿದ್ದು ದೇಶ ವಾಸಿಗಳಿಂದ ಸ್ವಾಗತಿಸಲ್ಪಟ್ಟಿದೆ ಭಾರತೀಯ ಎಲ್ಲಾ ಭಾಷೆಗಳಿಗೂ ಭಾಷಾಂತರಿಸಲ್ಪಟ್ಟಿದ್ದು ಯಾವುದೇ ಧಾರ್ಮಿಕ ಅಥವಾ ಅಧ್ಯಾತ್ಮಿಕ ಲೇಖನ ,ಪುಸ್ತಕ ನೇರವಾಗಿ ಅಥವಾ ಪರೋಕ್ಷವಾಗಿ ಇಲ್ಲಿನ ವಿಷಯಗಳನ್ನು ಉಧಾಹಾರಣೆಯಾಗಿ ತೆಗೆದುಕೊಳ್ಳಲ್ಪಟ್ಟಿರುತ್ತದೆ .ಅಷ್ಟೇ ಏಕೆ ಈ ಕಾಲದ ದೇಶಭಕ್ತರು ಬರೆಯುವ ಸಾಮಾಜಿಕ, ರಾಜಕೀಯ ಪ್ರಬಂಧ, ಲೇಖನಗಳಲ್ಲಿ ಕೂಡ ಗೀತೆಯ ವಾಕ್ಯಗಳನ್ನು ಉದಾಹರಿಸುವ ತೀವ್ರವಾದ ಒಲವನ್ನು ತೋರುತ್ತಾರೆ.ಈ ಗ್ರಂಥದ ಪ್ರಭಾವವು ಪಾಶ್ಚಾತ್ಯರ ಮೇಲೆ ಏನು ಕಡಿಮೆ ಇಲ್ಲ .ಈ ಕೃತಿಯು ಇಂಗ್ಲಿಷ್, ಗ್ರೀಕ್, ಲ್ಯಾಟಿನ್, ಇಟಾಲಿಯನ್ ,ಫ್ರೆಂಚ್ ಮತ್ತು ಜರ್ಮನ್ ಭಾಷೆಗಳಿಗೂ ತರ್ಜುಮೆಗೊಂಡಿದೆ. ಇದರ ಬೋಧನೆಯ ಕಾರ್ಯಶೀಲತೆ, ಸ್ವಭಾವ, ಭಾಷೆಯ ಗೇಯತೆ ಪಾಶ್ಚಾತ್ಯರ ಮನಸ್ಸಿಗೆ ಮುದವನ್ನು ಕೊಟ್ಟಿದೆ .ಸಾಹಿತ್ಯ ಮತ್ತು ತತ್ವಶಾಸ್ತ್ರಗಳಲ್ಲಿ ದಣಿವರಿಯದ ಪರಿಶ್ರಮವನ್ನು ಹೊಂದಿದ ಕುಶಾಗ್ರಮತಿಗಳಾದ ಪಂಡಿತರಿಂದ ಇದಕ್ಕೆ ಕೊಡಲ್ಪಟ್ಟ ವಿಶೇಷವಾದ ಗೌರವ ಕ್ರಿಸ್ತ ಮಿಷನರಿಗಳ ಗಮನವನ್ನು ಸೆಳೆದಿದೆ .ಇವರಲ್ಲಿ ಕೆಲವರು ಇದರ ಬೋಧನೆಗಳ ಸಾಮ್ಯವನ್ನು ಹೊಸ ಒಡಂಬಡಿಕೆ ಯೊಂದಿಗೆ ಗುರುತಿಸಿ ಗೀತೆಯು ತನ್ನ ಉತ್ತಮವಾದ ವಿಚಾರಗಳನ್ನು ಬೈಬಲ್ನಿಂದ ಕಡ ತೆಗೆದುಕೊಂಡಿದೆ ಎಂದು ಸಾಧಿಸಲು ಪ್ರಯತ್ನಿಸಿದ್ದಾರೆ. ಹೀಗಾಗಿ ಈ ಗ್ರಂಥವು ಬೇರೆ ಬೇರೆ ಓದುಗರಿಂದ ಬೇರೆಬೇರೆಯ ಅಭಿಪ್ರಾಯಗಳನ್ನು ಪಡೆದಿದೆ. ಸಾಂಪ್ರದಾಯಿಕ ಹಿಂದೂ ಇದನ್ನು ದೈವವಾಣಿ ಎಂದು ಅಭಿಪ್ರಾಯಪಟ್ಟು ಇದರ ಉಪದೇಶಗಳನ್ನು ಅನುಸರಿಸಲು ಪ್ರಯತ್ನಿಸುತ್ತಾನೆ, ಆಧುನಿಕ ಹಿಂದೂ

ಇದನ್ನು ಪ್ರಶಂಸಿಸುತ್ತಾ ನೆ, ಯುರೋಪಿನ ಪಂಡಿತರು ಇದನ್ನು ಮೆಚ್ಚುತ್ತಾರೆ, ಮಿಷನರಿಗಳ ಆದನ್ನು ತಮ್ಮ ಉದ್ದೇಶಕ್ಕೆ ಹೊಂದುವಂತೆ ವಿವರಿಸಿ ಬಿಡುತ್ತಾರೆ .

ಪಂಡಿತರಲ್ಲಿ ಈ ಕೃತಿಯ ರಚನೆಯ ಕರ್ತೃ ಮತ್ತು ಕಾಲದ ಬಗ್ಗೆ ಸಾಕಷ್ಟು ಭಿನ್ನಾಭಿಪ್ರಾಯಗಳು ಇದೆ. ಈ ಕಾರಣದಿಂದ ಇದು ಬೇರೆ ಬೇರೆ ಕಾಲದ ಬೇರೆ ಬೇರೆ ದೇಶದ ಬಿನ್ನ ಬಿನ್ನ ಬೌದ್ಧಿಕ ಮಟ್ಟದ ಜನರ ಆಸಕ್ತಿಯನ್ನು ಕೆರಳಿಸಿದೆ. ಆಧುನಿಕ ವಿಜ್ಞಾನಿಗಳ ಮನಸ್ಸಿನ ಮೇಲೆ ಹೆಚ್ಚಿನ ಮಟ್ಟದಲ್ಲಿ ಪ್ರಭಾವ ಬೀರಿದೆ ಇದು, ಚಿಂತನಶೀಲ ವ್ಯಕ್ತಿ ಒಂದು ಕ್ಷಣ ತಡೆದು, ವ್ಯಾವಹಾರಿಕ ಜೀವನಕ್ಕೆ ಮಾರ್ಗದರ್ಶಕವಾಗಿ ಗೀತೆಯ ಸ್ಥಾನವೇನು ಎಂದು ಪ್ರಶ್ನಿಸುವಂತೆ ಮಾಡುತ್ತದೆ.

ಮುಂದಿನ ಪುಟಗಳಲ್ಲಿ ಈ ಮುಖ್ಯವಾದ ಪ್ರಶ್ನೆಗೆ ಉತ್ತರವನ್ನು ಕೊಡುವ ಪ್ರಯತ್ನವನ್ನು ಮಾಡಲಾಗುತ್ತದೆ. ಈ ಕೃತಿಯ ಇತರ ಮಜಲುಗಳ ಅಧ್ಯಯನವನ್ನು, ಪರಿಶೀಲನೆಯನ್ನು ಈ ಮುಖ್ಯ ಪ್ರಶ್ನೆಗೆ ಪರಿಣಾಮವಾಗುವ ಮಟ್ಟಿಗೆ ಗೌಣವಾಗಿಸಲಾಗುತ್ತದೆ. ಇಲ್ಲಿ ಪ್ರಸ್ತುತಪಡಿಸಿರುವ ವಿಷಯಗಳಿಗೆ ಯಾವ ವಿಶೇಷವಾದ ಹಕ್ಕನ್ನು ಚಲಾಯಿಸುವುದಿಲ್ಲ, ಯಾವ ವಿಶೇಷವಾದ ಸಂಪ್ರದಾಯದ ತತ್ವಶಾಸ್ತ್ರವನ್ನು ಆಧಾರಕ್ಕಾಗಿ ಬಯಸುವುದಿಲ್ಲ. ಈ ಗ್ರಂಥದ ಕೃತಿಕಾರ ನಾಯಕ ಹಾಗೂ ಘಟನೆಗಳ ಯಥಾರ್ಥತೆ ಹಾಗೂ ಐತಿಹಾಸಿಕತೆಯನ್ನ ಮಂಡಿಸುವುದಕ್ಕೇ ಆಗಲಿ ಖಂಡಿಸುವುದಕ್ಕೇ ಆಗಲಿ ಯಾವುದೇ ವಾಕ್ಯವೃಂದವನ್ನು ಮೀಸಲಾಗಿಡುವದಿಲ್ಲ ಈ ಕೃತಿಯ ಶಬ್ದಕೋಶ ಕಾಲ ಸಾಹಿತ್ಯಕ ಮೌಲ್ಯ, ದೈವೀ ಪ್ರೇರಣೆಯ ಸ್ವರೂಪ ಎಂಬ ಅನುಯಾಯಿಗಳ ಸಂಖ್ಯೆ, ಗೀತಾಚಾರ್ಯನ ಶೀಲ, ಸಾಮಾಜಿಕ ಸ್ಥಾನಮಾನ, ಪ್ರಸಿದ್ಧಿ ಇವುಗಳ ಬಗ್ಗೆ ಯಾವುದೇ ರೀತಿಯ ಚರ್ಚೆಗೆ ಇಲ್ಲಿ ಸ್ಥಾನವಿಲ್ಲ.ಹಾಗೆಂದ ಮಾತ್ರಕ್ಕೆ ಇವುಗಳ ಪರಿಗಣನೆ ನಿರುಪಯೋಗಿ ಎಂದೇನೂ ಅಲ್ಲ. ಇವುಗಳುಭಾಷಾಶಾಸ್ತ್ರಜ್ಞರು, ವೇದಾಂತಿಗಳು ಮತ್ತು ಇತಿಹಾಸಜ್ಞರಿಗೆ ಬೆಲೆಯುಳ್ಳದ್ದಾಗಿರ

ಬಹುದು. ಆದರೆ ಮೇಲೆ ಹೇಳಿದ ಪ್ರಶ್ನೆಗೆ ಉತ್ತರವನ್ನು ಹುಡುಕುವಲ್ಲಿ ಖಂಡಿತವಾಗಿಯೂ ಇದು ಅನವಶ್ಯಕ. ಬೋಧಿಸಲು ಗೀತೆಯಲ್ಲಿ ಕಾರ್ಯ ರೂಪವಾದ ವಿವೇಕ (ಪ್ರಜ್ಞೆ) ಇದೆಯೇ? ಇದರ ತತ್ವ ಅಥವಾ ವೇದಾಂತ ಆತ್ಮೋನ್ನತಿಗೆ ಬೇಕಾದ ಪ್ರಾಯೋಗಿಕ ಮಾರ್ಗಗಳನ್ನು ಕೊಡುತ್ತದೆಯೇ? ಎಂಬ ಸರಳ ಪ್ರಶ್ನೆಗಳಷ್ಟೇ ನಮ್ಮ ಚಿಂತನೆ. ಹೀಗಾಗಿ ಈ ಗ್ರಂಥವನ್ನು ಕಟ್ಟಾ ಸಂಪ್ರದಾಯವಾದಿ ದೃಷ್ಟಿ, ಎಲ್ಲವನ್ನು ಮೆಚ್ಚುವ ರಾಷ್ಟ್ರಭಕ್ತ ದೃಷ್ಟಿ, ಅಥವಾ ತಪ್ಪು ಹುಡುಕುವ ವಿಮರ್ಶಕರ ದೃಷ್ಟಿಕೋನಗಳಿಂದ ಅಧ್ಯಯನ ಮಾಡಲಾಗದು .ರಸಾಯನಶಾಸ್ತ್ರವನ್ನು ಪ್ರಯೋಗಗಳಿಂದ ವಿಮರ್ಶಿಸುವಂತೆ ವಸ್ತುನಿಷ್ಠವಾಗಿ ಈ ಗ್ರಂಥವನ್ನು ತರ್ಕ ಮತ್ತು ಅನುಭವದ ಆಧಾರದ ಮೇಲೆ ನಿರ್ಧಾರ ಮಾಡಬೇಕು .ತರ್ಕ ಸತ್ಯವನ್ನು ಅನುಗ್ರಹಿಸಿದರು ಅದರ ನೀತಿ-ನಿಯಮಗಳನ್ನು ವಿವೇಚನಾಶಕ್ತಿ ಒಪ್ಪಿದರೆ ನಾವು ಆ ಸತ್ಯವನ್ನು ಸ್ವೀಕರಿಸೋಣ ಇಲ್ಲವಾದಲ್ಲಿ ಇಲ್ಲ.

## ಭಗವದ್ಗೀತೆ ಎಂಬ ಶಿರೋನಾಮೆ

ಭಗವದ್ಗೀತೆ ಎಂಬ ಹೆಸರಿನ ವ್ಯಾಕರಣ ಬದ್ಧತೆಯನ್ನು ಸೂಕ್ಷ್ಮವಾಗಿ ಪರಿಶೀಲಿಸುವುದು ಅಗತ್ಯ. ಗೀತಾ ಎಂಬ ಪದವು "ಗೈ" ಎಂಬ ಧಾತುವಿನ ಭೂತ ಕರ್ಮಣಿ ಕೃದಂತ ಪ್ರಯೋಗವಾಗಿದೆ.ತ ಎಂಬ ಅಂತ್ಯವನ್ನು ಇನ್ನೊಂದು ಅಮೂರ್ತ ಭಾವದಲ್ಲಿ ನಪುಂಸಕ ಲಿಂಗ ವಾಗಿ ಪಾಣಿನಿಯ ಸೂತ್ರವಾದ /"ನಪುಂಸಕ ಭಾವೆ ಕ್ತಃ " ಎಂಬಂತೆ ಬಳಸಬಹುದು. "ತಿನ್" ಪ್ರತ್ಯಯಾಂತ ವಾಗಿ ಇನ್ನೊಂದು ರೀತಿಯಲ್ಲಿ ಗೀತಿ ಎಂಬ ಅರ್ಥದಲ್ಲಿ ಬಳಸಬಹುದು. ಪ್ರಸ್ತುತ ಪರಿಸ್ಥಿತಿಯಲ್ಲಿ ಟಾಪ್(ಆ) ಎಂಬ ಸ್ತ್ರೀಲಿಂಗಾಂತ್ಯವನ್ನು ತೆಗೆದುಕೊಂಡಿದೆ. ತ ಎಂಬುದು ಕರ್ಮಣಿ ಕೃದಂತಾಂತ್ಯ ಎಂಬುದು ಸ್ಪಷ್ಟವಾಗಿದೆ. ಭಗವದ್ಗೀತೆ ಎಂಬ ಪದವು ಕೇವಲ ವಿಶೇಷಣ ವಾಗಿದ್ದು ಗುಣವಾಚಕ ವಾಗಲು

ಸ್ತ್ರೀಲಿಂಗ ನಾಮಪದವನ್ನು ಬಯಸುತ್ತದೆ. ಆದ್ದರಿಂದ ಈ ಪದವು ಸ್ವತಂತ್ರವಾಗಿ ಪೂರ್ಣ ಶಿರೋನಾಮೆಯಾಗಲಾರದು, ಮತ್ತು ವ್ಯಾಕರಣಬದ್ಧವಾಗಿಯೂ ಇರದು.

ಪ್ರತಿ ಅಧ್ಯಾಯದ ಕೊನೆಯಲ್ಲಿ ಬರುವ" ಇತಿ ಶ್ರೀಮದ್ ಭಗವದ್ಗೀತಾಸೂಪನಿಷತ್ತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನ ಸಂವಾದೆ" ಯನ್ನು ಪರೀಕ್ಷಿಸಿದಾಗ ಇದು ಇನ್ನಷ್ಟು ಸ್ಪಷ್ಟವಾಗುತ್ತದೆ.ಈ ವಾಕ್ಯದ ಪ್ರತಿಪದಾನ್ವಯ ಮಾಡಿದಾಗ ವ್ಯಾಕರಣಬದ್ಧವಾಗಿ ಭಗವದ್ಗೀತಾಸು ಪದಕ್ಕೆ ಹೊಂದುವ ಪದ ಉಪನಿಷತ್ತ್ಸು. ಲಿಂಗ, ವಚನ, ವಿಭಕ್ತಿಎರಡೂ ಪದಗಳಿಗೂ ಸಮಾನವಾಗಿದ್ದು ಬೇರೆ ಪದಗಳು ಸ್ವತಂತ್ರವಾಗಿವೆ. ಆದ್ದರಿಂದ "ಭಗವದ್ಗೀತಾಸು" ಎಂಬ ಪದವು "ಭಗವದ್ಗೀತೋಪನಿಷತ್" ಎಂಬ ಪೂರ್ಣ ಮತ್ತು ಸರಿಯಾದ ಶಿರೋನಾಮೆಯ ಸಂಕ್ಷಿಪ್ತ ರೂಪವಾಗಿದೆ. ಇಲ್ಲಿರುವ ಬಹು ವಚನವು ಪ್ರತಿಪಾದಿಸುವ ಉಪನಿಷತ್ತಿನ ಸಿದ್ಧಾಂತಗಳನ್ನು ಉದ್ದೇಶಿಸಿದ್ದಾಗಿದೆ. ಗೀತೆ ಎಂಬುದು ಮುಂದುವರೆದ ಸಂಕ್ಷಿಪ್ತ ರೂಪವಾಗಿದೆ. ಈ ರೀತಿಯ ಸಂಕ್ಷೇಪೀಕರಣ ಸಂಸ್ಕೃತ ಭಾಷೆಯಲ್ಲಿ ಅಪರೂಪವೇನಲ್ಲ ವೇದವ್ಯಾಸಃ ವ್ಯಾಸಃ ಎಂದು ಭೀಮಸೇನಃ ಭೀಮಃ ಎಂದು ಆಗುತ್ತದೆ.

ಈ ಪ್ರಬಂಧಕ್ಕೆ ಕಾರಣವಾದ ಮೂಲ ಪ್ರಶ್ನೆಯು ಮತ್ತೊಂದು ಸಾಂದರ್ಭಿಕ ಅಂಶವನ್ನು ನಿಷ್ಕರ್ಷಿಸುವ ಅವಶ್ಯಕತೆಗೆ ಅವಕಾಶ ಕೊಡುತ್ತದೆ. ಭಗವದ್ಗೀತೆ ಎಂದರೇನು? ಎಂಬ ಪ್ರಶ್ನೆಯ ಉತ್ತರದ ಮೇಲೆ ಮೂಲ ಪ್ರಶ್ನೆಯ ವಿಚಾರಣೆಯ ಯುಕ್ತತೆ ಅವಲಂಬಿತವಾಗಿದೆ ಯಾರೂ ಆರೋಗ್ಯಶಾಸ್ತ್ರದ ಗ್ರಂಥಗಳಲ್ಲಿ ವ್ಯಾಕರಣದ ನಿಯಮಗಳನ್ನು, ಖಗೋಳಶಾಸ್ತ್ರದ ಪುಸ್ತಕಗಳಲ್ಲಿ ನ್ಯಾಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ಹುಡುಕುವುದಿಲ್ಲವೆಂಬುದು ನಿರ್ವಿವಾದ. ಭಗವದ್ಗೀತೆಯಲ್ಲಿ ವ್ಯಾವಹಾರಿಕ ನೈತಿಕತೆ ಇರುವುದನ್ನು ನಾವು ಮನದಟ್ಟು ಮಾಡಿಕೊಳ್ಳುವುದಕ್ಕಾಗಿ ಈ ಗ್ರಂಥವು

ಏನನ್ನು ಪ್ರತಿಪಾದಿಸುತ್ತದೆ ಎಂಬುದನ್ನು ತಿಳಿದುಕೊಳ್ಳುವುದು ಅತಿ ಅಗತ್ಯವಿದೆ. ಈ ಪ್ರಶ್ನೆಗೆ ಬೇರೆಬೇರೆ ಪಂಡಿತರು ಬೇರೆ ಬೇರೆ ರೀತಿಯಲ್ಲಿ ಉತ್ತರಿಸಿದ್ದಾರೆ. ಕೆಲವರು ಕಲಹ ಮಾಡುತ್ತಿರುವ ಧಾರ್ಮಿಕ ಪಂಥಗಳ ಸಮೀಕರಣ ಎಂದು ಯೋಚಿಸುತ್ತಾರೆ. ಇನ್ನು ಕೆಲವರು ವರ್ಣಾಶ್ರಮ ಧರ್ಮವನ್ನು ಬೇರೆಲ್ಲ ಕರ್ತವ್ಯಗಳಿಗಿಂತ ಮೇಲೆತ್ತುವ ಪ್ರಯತ್ನ ಎನ್ನುತ್ತಾರೆ. ಕೆಲವರು ಕೃಷ್ಣ ತತ್ವವನ್ನು ಪುನರುಜ್ಜೀವಿತ ಗೊಳಿಸಲು ಕೃಷ್ಣಾವತಾರಕ್ಕೆ ಒತ್ತುಕೊಡುವುದು ಉದ್ದೇಶ ಎನ್ನುತ್ತಾರೆ. ಈ ಯಾವ ಅಭಿಪ್ರಾಯಗಳು ಗ್ರಂಥಕರ್ತ ತನ್ನ ಕೃತಿಯ ಬಗ್ಗೆ ಹೇಳಿರುವ ದೃಷ್ಟಿಗೆ ಹೊಂದುಗಡೆಯಾಗುವುದಿಲ್ಲ. ಪ್ರತಿ ಅಧ್ಯಾಯದ ಕೊನೆಯಲ್ಲಿ ಉಪಸಂಹಾರಾರ್ಥವಾಗಿ "ವ್ಯಾಸಮಹರ್ಷಿಗಳಿಂದ ರಚಿತವಾದ ಲಕ್ಷ ಶ್ಲೋಕಗಳ ಸಂಹಿತೆಯಲ್ಲಿ ಭೀಷ್ಮ ಪರ್ವದಲ್ಲಿ ಶ್ರೀ ಭಗವಂತನಿಂದ ಗಾನಮಾಡಲ್ಪಟ್ಟ ಬ್ರಹ್ಮವಿದ್ಯೆಯೂ ಯೋಗಶಾಸ್ತ್ರವೂ ಆಗಿರುವ ಶ್ರೀ ಕೃಷ್ಣಾರ್ಜುನ ಸಂವಾದ ರೂಪವಾದ ಉಪನಿಷತ್ತುಗಳಲ್ಲಿ" ಎಂದು ಬರೆದು, ಕೃತಿಕಾರ ಇದನ್ನು ಬ್ರಹ್ಮನ ತತ್ವಶಾಸ್ತ್ರ ಮತ್ತು ಯೋಗವಿಜ್ಞಾನ ಎಂದು ನಿರ್ಣಯಿಸಬೇಕೆಂದು ಆಶಿಸುತ್ತಾನೆ

ಈಗ ಪ್ರಶ್ನೆ ಇನ್ನೊಂದು ರೂಪ ತಾಳುತ್ತದೆ ಗೀತೆಯ ಪ್ರಕಾರ ಬ್ರಹ್ಮ ಎಂದರೇನು? ಯೋಗ ಎಂದರೇನು? 8ನೇ ಅಧ್ಯಾಯದ ಮೊದಲಲ್ಲೇ ಅರ್ಜುನನು ಕೃಷ್ಣನನ್ನು ಕುರಿತು ಕೇಳಿದ ಏಳು ಪ್ರಶ್ನೆಗಳಲ್ಲಿ ಮೊದಲನೆಯದು ಆ ಬ್ರಹ್ಮ ಎಂಬುದು ಯಾವುದು? ಕೊಟ್ಟ ಉತ್ತರ ಪರಮ ವಾದ ಅಕ್ಷರವೇ ಬ್ರಹ್ಮವು. ಹದಿಮೂರನೆಯ ಅಧ್ಯಾಯದಲ್ಲಿ ಮತ್ತೆ ಬ್ರಹ್ಮವನ್ನು ವಿವರಿಸಿದೆ, "ಯಾವುದನ್ನು ಅರಿಯಬೇಕು ಮತ್ತು ಅರಿತರೆ ಅಮೃತತ್ವವನ್ನು ಹೊಂದುವೆ ಅದನ್ನು ತಿಳಿಸುತ್ತೇನೆ ಅದು ಅನಾದಿಯಾದ ಪರಬ್ರಹ್ಮವು. ಮುಂದುವರೆದು ದೀರ್ಘವಾದ ವಿವರಣೆಯನ್ನು, ತೋರಿಕೆಗೆ ಪರಸ್ಪರ ವಿರುದ್ಧವೋ ಎನ್ನಿಸುವ ಹೇಳಿಕೆಗಳಿಂದ ಕೊಡಲ್ಪಟ್ಟಿದೆ .ಈ

ಎರಡುವಾಕ್ಯಾಂಶಗಳಿಂದ ಗೀತೆಯ ಬ್ರಹ್ಮವು ಬದಲಾವಣೆಯಿಲ್ಲದ ಪರಮ ಸತ್ಯ ಎಂದು ತಿಳಿಯುತ್ತದೆ.

ಇನ್ನು ಯೋಗ ಎಂಬ ಪದವನ್ನು ಕುರಿತು ಬ್ರಹ್ಮ ಶಬ್ದದಂತೆ ಎರಡು ಸ್ಥಳಗಳಲ್ಲಿ ಉಲ್ಲೇಖಿಸಲಾಗಿದೆ. ಒಂದರಲ್ಲಿ ಶಬ್ದವನ್ನು ನಿರೂಪಿಸಲಾಗಿದೆ. ಇನ್ನೊಂದೆಡೆಯಲ್ಲಿ ಪದದ ಅರ್ಥವು ಓದುಗರ ಮನಸ್ಸಿಗೆ ಹತ್ತುವಂತೆ ಸಾಮಾನ್ಯ ವಿವರಣೆ ನೀಡಲಾಗಿದೆ. ಎರಡನೇ ಅಧ್ಯಾಯದ **48**ನೇಯ ಶ್ಲೋಕದಲ್ಲಿ **"**ಸಮತ್ವಂ ಯೋಗಉಚ್ಯತೆ**"** ಸಮತ್ವವು ಯೋಗವೆನಿಸುವುದು .ಆರನೇ ಅಧ್ಯಾಯದ **20**ರಿಂದ **23** ಶ್ಲೋಕದವರೆಗೆ ಯೋಗದ ವಿವರಣೆ ಇಂತಿದೆ. ಯೋಗಾಭ್ಯಾಸದಿಂದ ಯಾವಾಗ ಚಿತ್ತವು ಸುಮ್ಮನಾಗುವುದೋ, ಯಾವಾಗ ಆತ್ಮನಿಂದ ಆತ್ಮನನ್ನು ಕಂಡುಕೊಂಡು ತನ್ನಲ್ಲಿ ಸಂತುಷ್ಟನಾಗುವನೋ, ಬುದ್ಧಿ ಗ್ರಾಹ್ಯವಾದ, ಅತೀಂದ್ರಿಯವಾದ, ಆತ್ಯಂತಿಕವಾದ ಯಾವ ಸುಖವುಂಟೋ ಅದನ್ನು ಯಾವಾಗ ಅರಿತುಕೊಳ್ಳುವನೋ, ಯಾವಾಗ ತತ್ವದಲ್ಲಿ ನೆಲೆನಿಂತು ಅಲುಗಾಡದೆ ಇರುವನೊ, ಯಾವ ಲಾಭವನ್ನು ಹೊಂದಿದ ಬಳಿಕ ಮಿಕ್ಕ ಲಾಭವನ್ನು ಅದಕ್ಕಿಂತ ಹೆಚ್ಚಿನದೆಂದು ಎಣಿಸುವುದಿಲ್ಲವೋ, ಯಾವುದರಲ್ಲಿ ನಿಂತವನಾಗಿ ಭಾರಿ ದುಃಖದಿಂದಲೂ ವಿಚಲಿತನಾಗನೋ ದುಃಖ ಸಂಯೋಗ ವಿಯೋಗವಾದ ಅದನ್ನು ಯೋಗವೆಂದು ತಿಳಿಯಬೇಕು.

ಸಮಗ್ರ ಗೀತೆಯಲ್ಲಿ ಬೇರೆಲ್ಲೂ ಯೋಗ ಮತ್ತು ಬ್ರಹ್ಮ ಶಬ್ದಗಳು ಚರ್ಚೆಗೆ ಒಳಪಟ್ಟಿಲ್ಲ. ಈಎರಡು ಶಬ್ದಗಳು ಉದಾರವಾಗಿ ಅಲ್ಲಲ್ಲಿ ಬಳಸಲಾಗಿದೆ. ಮೇಲೆ ಹೇಳಿದ ಸಣ್ಣ ವಾಕ್ಯಗಳು ಪದಗಳ ನಿರೂಪಣೆಯಾಗಿದ್ದು ದೊಡ್ಡ ವಾಕ್ಯಗುಚ್ಛಗಳು ಅದರ ವಿವರಣೆಯಾಗಿದೆ. ಈ ನಿರೂಪಣೆಯಲ್ಲಿ ಬ್ರಹ್ಮನಿಗೆ ವಿಶೇಷಣವಾದ" ಪರಮಮ್" ಹೆಚ್ಚಿನದಾದ ಎಂಬುದು ಬ್ರಹ್ಮ ಪದದ ವಿವರಣೆಯಲ್ಲಿ "ಪರಂ" ಹೆಚ್ಚಿನ ಎಂಬ ಪದದಿಂದ ಗುರುತಿಸಲ್ಪಟ್ಟಿದ್ದು ಬ್ರಹ್ಮ ಪದದ ನಿರೂಪಣೆ ಮತ್ತು ವಿವರಣೆಯನ್ನು

ಪುಷ್ಟೀಕರಿಸಿದೆ .ಎರಡು ಪ್ರಕರಣಗಳಲ್ಲೂ ಬ್ರಹ್ಮ ಅರಿಯಬೇಕಾದ ಸತ್ಯ ಎಂದು ಅಭಿಪ್ರಾಯಪಟ್ಟಿದೆ, ಆದರೆ ಮಮಯೋನಿರ್ಮಹದ್ಬ್ರಹ್ಮ ಎನ್ನುವಲ್ಲಿ" ಮಹತ್" ವಿಶೇಷಣವನ್ನು ಬಳಸಿದ್ದರೂ, ಬ್ರಹ್ಮ ಸ್ಪಷ್ಟವಾಗಿ ಸತ್ಯಕ್ಕಿಂತ ಬೇರೊಂದನ್ನು ನಿರ್ದೇಶಿಸುತ್ತದೆ. ಅಂತೆ ಯೋಗ ಪದವು ನಿರೂಪಣ ಮತ್ತು ವಿವರಣೆಯಲ್ಲಿ ಸಮತ್ವವನ್ನು ಸೂಚಿಸಿದರೂ, ಯೋಗ ಪದದ ಮುಖ್ಯಾರ್ಥ ಒಂದುಗೂಡುವಿಕೆಯೇ (ಸಂಯೋಗ) ಆಗಿದ್ದರೂ ವಿಪರೀತ ಲಕ್ಷಣದಿಂದ ದುಃಖ ಸಂಯೋಗದ ವಿಯೋಗ ಎಂಬರ್ಥದಲ್ಲಿ ಬಳಸಲಾಗಿದೆ. ಆರನೇ ಅಧ್ಯಾಯದ ೩೩ನೇ ಶ್ಲೋಕದಲ್ಲಿ "ಯೋಽಯಂ ಯೋಗಸ್ತ್ವಯಾ ಪ್ರೋಕ್ತಂ ಸಾಮ್ಯೇನ ಮಧುಸೂದನ ಏತಸ್ಯಾಹಂ ನ ಪಶ್ಯಾಮಿ ಚಞ್ಚಲತ್ವಾತ್ ಸ್ಥಿತಿಂ ಸ್ಥಿರಾಂ" ಅರ್ಜುನ ಹೀಗೆ ಹೇಳಿದನು ಎಲೆ ಮಧುಸೂದನನೇ ಸಾಮ್ಯ ವೆಂದು ನೀನು ಹೇಳಿದ ಯಾವ ಯೋಗವುಂಟೋ ಮನಸ್ಸು ಚಂಚಲವಾಗಿರುವುದರಿಂದ ಇದು ಸ್ಥಿರವಾಗಿರುವ ಬಗೆಯನ್ನು ನಾನು ಕಾಣೆನು. ಆದ್ದರಿಂದ ನಮ್ಮ ವಿಚಾರಣೆ ಈ ನಿರ್ಧಾರಕ್ಕೆ ಬರುತ್ತದೆ. ಸಮತ್ವವನ್ನು ಹೊಂದಿದ ಯಾವ ಮನಸ್ಸಿನಲ್ಲಿ ಪರಮ ಸತ್ಯವಾದ ಬ್ರಹ್ಮವು ಪ್ರಕಟವಾಗುವುದೋ ಆ ಮನಸ್ಸಿನ ಸಮತ್ವವು ಯೋಗ .ಹೀಗಾಗಿ ಬ್ರಹ್ಮವಿದ್ಯೆಯು ಸತ್ಯವೆಂಬ ಪದಾರ್ಥದ ವಿಜ್ಞಾನ. ಯೋಗಶಾಸ್ತ್ರ ಸಮತ್ವತೆಯ ವಿಜ್ಞಾನ. ಗೀತೆಯ ಪ್ರಕಾರ ಉತ್ತಮವಾದ ಸಮತ್ವತೆಯು ಮನಸಿಗೆ ಸತ್ಯವನ್ನು ಮುಟ್ಟಲು ಬೇಕಾದ ಮಾರ್ಗವನ್ನು ತೋರಿಸುವ ಮನಸ್ಸಿನ ಸಮತ್ವತೆ. ಹಾಗಾದರೆ ಭಗವದ್ಗೀತೆಯು ಸ್ಪಷ್ಟವಾಗಿ ಹೇಳುವುದೇನು? ಅದು ಸತ್ಯದ ಸಿದ್ಧಾಂತವನ್ನು ಪ್ರಸ್ತಾಪಿಸುತ್ತದೆ ಮತ್ತು ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಲು ಬೇಕಾದ ನಡತೆಯ ನಿಯಮಗಳನ್ನು ಶಿಫಾರಸ್ಸು ಮಾಡುತ್ತದೆ. ಗೀತೆಯಂತೆ ಯೋಗವು ಸತ್ಯವನ್ನು ಸಾಕ್ಷಾತ್ಕರಿಸಲು ಸಾಧನ. ಇನ್ನು ಯಾವ ಯಾವುದು ಈ ಸಾಧನವನ್ನು ಮುಟ್ಟಲು ಸಹಾಯ ಮಾಡುವುದೋ ಅದೆಲ್ಲವನ್ನು ಯೋಗವೆಂದು ಕರೆದಿದೆ. ಗೀತೆಯ ಪ್ರತಿ ಅಧ್ಯಾಯವು ಪ್ರತ್ಯೇಕ ಪ್ರತ್ಯೇಕ ಯೋಗಗಳೊಡನೆ ವ್ಯವಹರಿಸುತ್ತದೆ. ಮುಖ್ಯಾರ್ಥದಲ್ಲಿ ಯೋಗವು ಸಮತ್ವವನ್ನು

ಹೊಂದುವ ಚಾತುರ್ಯವೇ ಆಗಿದೆ. ಸಂಸ್ಕೃತ ಭಾಷೆಯಲ್ಲಿ ಯೋಗ ಪದಕ್ಕೆ ಅನೇಕ ಅರ್ಥಗಳಿದ್ದರೂ ಗೀತೆಯ ಯೋಗದ ಬಗ್ಗೆ ಮಾತನಾಡುವಾಗ ಆ ಎಲ್ಲ ಅರ್ಥಗಳಿಂದ ದೂರವಿರುವುದು ವಾಸಿ

## ಯೋಗಶಾಸ್ತ್ರ

ಗೀತೆಯು ಬ್ರಹ್ಮವಿದ್ಯೆ ಮತ್ತು ಯೋಗ ಶಾಸ್ತ್ರಗಳ ಪ್ರತಿಪಾದನೆಯಾದರೂ, ಬಹುಪಾಲು ಯೋಗ ಶಾಸ್ತ್ರವೇ ವ್ಯಾಪಿಸಿದೆ. ಬೌದ್ಧಿಕವಾಗಿ ತತ್ವಶಾಸ್ತ್ರದ ಸಮಸ್ಯೆಗಳನ್ನು ಚರ್ಚಿಸುವ ಸಲುವಾಗಿ ಅಲ್ಲದೆ, ಯೋಗ ಸಿದ್ಧಾಂತವನ್ನು ಅದಕ್ಕೆ ಆಧಾರವಾಗಿರುವ ತಾತ್ವಿಕ ಸತ್ಯಗಳನ್ನು ಉಲ್ಲೇಖಿಸಲಾಗಿದೆ. ಹಾಗೆಂದ ಮಾತ್ರಕ್ಕೆ ಗೀತೆಯು ಪ್ರಜ್ಞೆ( ಬೌದ್ಧಿಕತೆ) ಯನ್ನು ಕೀಳು ಮಾಡಿದೆ ಎಂದಾಗಲೀ ತಾರ್ಕಿಕ ಪರಿಶೀಲನೆಯ ಫಲಿತಾಂಶವನ್ನು ಅಗೌರವಯುತವಾಗಿ ಅಥವಾ ಹಾಸ್ಯಾಸ್ಪದವಾಗಿ ಕಂಡಿದೆ ಎಂದಾಗಲಿ ಅಲ್ಲ. ತನ್ನ ಪ್ರಮುಖ ವಿಷಯವಾದ ಯೋಗವನ್ನು ತಾತ್ವಿಕ ಚಿಂತನೆಯ ಹಿನ್ನೆಲೆಯಲ್ಲಿ ಪ್ರತಿಪಾದಿಸಿದೆ. ತತ್ವಜ್ಞಾನವನ್ನು ನಿತ್ಯ ಜೀವನದ ಅನುಭವದ ಮಟ್ಟಕ್ಕೆ, ಅದರ ಹೊಳಪು ಒಂದಿನಿತೂ ಮಾಸದಂತೆ ಇಳಿಸಲಾಗಿದೆ. ತಾತ್ವಿಕ ಸತ್ಯಗಳನ್ನು ಅತಿ ಸರಳ ರೂಪದಲ್ಲಿ ಪ್ರತಿಪಾದಿಸಿದ್ದು ಸಾಮಾನ್ಯರಲ್ಲಿ ಸಾಮಾನ್ಯ ಬುದ್ಧಿಮತ್ತೆಯು ಅರ್ಥಮಾಡಿಕೊಂಡು ದೈನಂದಿನ ಜೀವನದಲ್ಲಿ ಅನುಸರಿಸುವಂತಿದೆ. ಭಾರತೀಯ ತತ್ವಶಾಸ್ತ್ರವು ಪ್ರಪಂಚಾತೀತವಾದದ್ದನ್ನು ಗುರಿಯಾಗಿಸಿಕೊಂಡು ವ್ಯಾವಹಾರಿಕ ವರ್ತಮಾನ ಜೀವನವನ್ನು ಗೌಣವಾಗಿಸಿದೆ ಎಂಬ ಅಪವಾದಕ್ಕೆ ಗುರಿಯಾಗಿದೆ .ನಾವು ಜೀವನದ ಅನಿಷ್ಟಗಳನ್ನು ತೊಳೆದುಕೊಳ್ಳಲು ಬಯಸಿದರೆ, ಅದು ಜೀವನವನ್ನೇ ಬಿಡು ಎನ್ನುತ್ತದೆ. ಒಟ್ಟಿನಲ್ಲಿ ಸಂಗ್ರಹವಾಗಿ ಹೇಳುವುದಾದರೆ ಇದು ಒಂದು ಅಪ್ರಾಯೋಗಿಕವಾದ, ವರ್ತಮಾನ ಜೀವನವನ್ನು ಸಂಪೂರ್ಣವಾಗಿ ತ್ಯಜಿಸಿದ್ದರ ಫಲವಾಗಿ ಮರಣಾನಂತರದ ಅನಂತವಾದ ಸುಖವನ್ನು ಪಡೆಯುವೆ ಎಂಬ ಪೊಳ್ಳು ಭರವಸೆಯ ಸಿದ್ಧಾಂತ ಎಂಬ ಆರೋಪಕ್ಕೆ ಗುರಿಯಾಗಿದೆ .ಈ ಆಧಾರರಹಿತವಾದ ಭಾರತೀಯ ತತ್ವಶಾಸ್ತ್ರದ ಮೇಲಿನ

ಆರೋಪಕ್ಕೆ ಗೀತೆಯು ಒಂದು ಪ್ರತಿರೋಧ ವಾಗಿದೆ. ವೇದಾಂತದ ಪರಮ ಸತ್ಯಗಳು ಅಷ್ಟೇ ಸರಳವಾಗಿದ್ದು ಪ್ರತಿಯೊಬ್ಬನು ಪ್ರತಿನಿತ್ಯದ ವ್ಯಾವಹಾರಿಕ ಜೀವನದಲ್ಲಿ ಅಳವಡಿಸಿಕೊಳ್ಳಬಲ್ಲದ್ದು, ಅಳವಡಿಸಿಕೊಳ್ಳಬೇಕಾದದ್ದು ಎಂದು ತೋರಿಸಿಕೊಡುವುದು ಗೀತೆಯ ಪರಮಧ್ಯೇಯ. ಅಂತೆಯೇ ಧರ್ಮ ಎಂಬುದು ಜೀವನದಲ್ಲಿ ಅನುಷ್ಠಾನಕ್ಕೆ ತಂದ ಶಾಸ್ತ್ರಕ್ಕಿಂತ ಬೇರೆಯಲ್ಲ. ಗೀತೆಯ ಯೋಗಶಾಸ್ತ್ರ ಎನ್ನುವುದು ಪ್ರತಿಯೊಬ್ಬನು ಜೀವನದ ಯಾವುದೇ ಘಟ್ಟ ವಿರಲಿ, ಬೌಧಿಕಸ್ಥರ ಎಂತೆ ಇರಲಿ ಶಾಸ್ತ್ರವನ್ನು ಅರಿತು ಅವರವರ ಯೋಗ್ಯತಾನುಸಾರ ಅದನ್ನು ಜೀವನದ ಪ್ರತಿ ನಿಮಿಷದಲ್ಲೂ ಆಚರಣೆಗೆ ತರಬಹುದು ಎಂದು ತೋರಿಸುತ್ತದೆ. ಶಾಸ್ತ್ರಕ್ಕೂ ದೈನಂದಿನ ಜೀವನಕ್ಕೂ ಬಹಳ ವೈರುಧ್ಯವಿದೆ ಎಂಬ ಕಲ್ಪನೆಯನ್ನು ಅಲ್ಲವೆಂದು ತಿಳಿಸಿ ಯೋಗಶಾಸ್ತ್ರದ ಆಚರಣೆ ಇಲ್ಲೇ ಈಗಲೇ ಪರಮಾನಂದವನ್ನು ಹೊಂದುವಂತೆ ಮಾಡುತ್ತದೆ ಎಂಬುದನ್ನು ಗೀತೆಯು ಗುರಿಮಾಡಿ ತೋರಿಸುತ್ತದೆ. ಈ ಹೇಳಿಕೆಯನ್ನು ಮೊದಲಿಗೆ ಕೆಲವು ವಾಚಕರು ಸಂಶಯದಿಂದ ಸ್ವೀಕರಿಸಬಹುದು. ಆದರೆ ಮುಂದುಮುಂದಿನ ಪ್ರಕರಣಗಳಲ್ಲಿ ಗಟ್ಟಿ ತಳಹದಿಯನ್ನು ಹಾಕಿ ಮೇಲಿನ ಹೇಳಿಕೆಯನ್ನು ಮನವರಿಕೆ ಮಾಡಿಕೊಡುತ್ತದೆ. ಸದ್ಯದ ಮಟ್ಟಿಗೆ ಯೋಗಶಾಸ್ತ್ರವು ವೇದಾಂತದ ಪ್ರಾಯೋಗಿಕ ಭಾಗವನ್ನು ವಿಷದ ಗೊಳಿಸುತ್ತದೆ ಮತ್ತು ಹೊಂದಬೇಕಾದ ಮಾದರಿ ವ್ಯಕ್ತಿತ್ವವನ್ನು ಪ್ರಸ್ತುತಗೊಳಿಸುತ್ತದೆ.

ಗೀತೆಯ ಪ್ರಾಯೋಗಿಕತೆಯು ವಿವಿಧವಾದ ಮನಸ್ಸುಗಳನ್ನು ಅದರ ಪ್ರವೃತ್ತಿಗಳನ್ನು ಗುರುತಿಸುತ್ತದೆ. ಸತ್ಯವು ಒಂದೇ ಆಗಿದ್ದು ಜೀವನದ ಅಂತಿಮ ಗುರಿಯಾಗಿದೆ. ಆದರೆ ಎಲ್ಲ ಸ್ತರದವರಿಗೂ ಒಂದೇ ಮಾರ್ಗವನ್ನು ಅನುಸರಿಸುವಂತೆ ಆಗ್ರಹ ಪಡಿಸಲಾಗುವುದಿಲ್ಲ. ವೈದ್ಯನಿಗೆ ಎಲ್ಲ ರೋಗಿಗಳ ಪೂರ್ಣ ಆರೋಗ್ಯವೇ ಉದ್ದೇಶವಾದರೂ ಎಲ್ಲರಿಗೂ ಒಂದೇ ರೀತಿಯ ಚಿಕಿತ್ಸಾ ಕ್ರಮವನ್ನು

ಬಳಸಲಾಗುವುದಿಲ್ಲ ಅಲ್ಲವೇ? ವೈದ್ಯನು ತನ್ನ ಚಿಕಿತ್ಸಾ ಪದ್ಧತಿಗೆ ರೋಗಿಯ ವಯೋಮಾನ, ಲಿಂಗ ,ಪ್ರಸ್ತುತ ಆರೋಗ್ಯ, ರೋಗಿಯ ಪ್ರವೃತ್ತಿ ಇವುಗಳನ್ನು ಗಮನದಲ್ಲಿಡಬೇಕಾಗುತ್ತದೆ. ಅದೇ ರೀತಿ ಧರ್ಮವೂ ಬಹುಸಂಖ್ಯೆಯ ಜನರಿಗೆ ಪ್ರಾಯೋಗಿಕವಾಗಲು ಅದನ್ನರಸುವವರ ಅವಶ್ಯಕತೆಗಳಿಗೆ ಅನುಗುಣವಾಗಿ ಅವಕಾಶವನ್ನು ಒದಗಿಸಬೇಕು. ಭಗವದ್ಗೀತೆಯು ಈ ದಿಶೆಯಲ್ಲಿ ಪ್ರಯತ್ನ ಮಾಡಿದೆ. ಹಂಬಲಿಸುವ ಭಕ್ತರನ್ನು ಆರ್ತ , ಜಿಜ್ಞಾಸು, ಅರ್ಥಾರ್ಥಿ ಮತ್ತು ಜ್ಞಾನಿ ಎಂದು ನಾಲ್ಕು ವಿಧವಾಗಿ ವಿಭಾಗಿಸಲಾಗಿದೆ .ಈ ನಾಲ್ವರು ಪರಸ್ಪರ ನಿವರ್ತಕರಲ್ಲ. ಪ್ರತಿಯೊಬ್ಬನಲ್ಲೂ ಈ ನಾಲ್ಕು ಗುಣಧರ್ಮಗಳು ವಿಭಿನ್ನ ಮಟ್ಟದಲ್ಲಿ ಇರುತ್ತದೆ .ಯಾವ ಜೀವನಲ್ಲಿ ಯಾವ ಗುಣಧರ್ಮವು ಪ್ರಬಲವಾಗಿರುವುದೋ ಆ ಗುಂಪಿಗೆ ಅವನನ್ನು ಸೇರಿಸಲಾಗುತ್ತದೆ. ಯಾವುದೇ ಎರಡು ಅಂತಃಕರಣವೂ ಸರ್ವ ಸಮಾನವಾಗಿರಲಾರದಾದರೂ, ಈ ರೀತಿಯ ವಿಶಾಲವಾದ ವಿಭಾಗವು ವ್ಯವಹಾರಕ್ಕೆ ಸಾಕೆಂದು ಗೀತೆ ಎಣಿಸುತ್ತದೆ . ಪ್ರತಿಯೊಂದು ವಿಭಾಗದಲ್ಲೂ ಹೊಂದಬೇಕಾದ ಗುರಿಯು ಒಂದೇಆದರೂ ಒಂದೊಂದು ವಿಭಾಗಕ್ಕೂ ಪ್ರತ್ಯೇಕ ಯೋಗವಿದೆ.

## ಗೀತೆಯ ಆದರ್ಶ

ಗೀತೆಯ ಉದಾತ್ತ ಧ್ಯೇಯವೇನು? ಎಂಬ ಪ್ರಶ್ನೆಗೆ ಅನೇಕ ಉತ್ತರಗಳು ಗೀತೆಯನ್ನು ವಿಮರ್ಶೆ ಮಾಡಿರುವ ಆಚಾರ್ಯರಿಂದ ವಿವಿಧವಾಗಿ ಕೊಡಲ್ಪಟ್ಟಿದೆ. ಕೆಲವರು ಕರ್ಮಯೋಗವೇ ಗೀತೆಯ ಆದರ್ಶ ಎನ್ನುತ್ತಾರೆ, ಕೆಲವರು ಭಕ್ತಿಯೋಗವೆಂದು ಕೆಲವರು ಜ್ಞಾನಯೋಗ ವೆಂದು, ಮತ್ತೆ ಕೆಲವರು ಧ್ಯಾನಯೋಗವೆಂದೂ ಹೇಳುತ್ತಾರೆ.

ಗೀತೆಯಲ್ಲಿ ಕೆಲವು ವಾಕ್ಯಗಳು ಕೆಳಗೆ ಹೇಳುವ ಅಭಿಪ್ರಾಯಗಳನ್ನು ಸ್ವತಂತ್ರವಾಗಿ ದೃಢ ಗೊಳಿಸುತ್ತವೆ "ಕರ್ಮ "ಪದವನ್ನು ನೋಡೋಣ.2- 47 ರಲ್ಲಿ" ಕರ್ಮಣ್ಯೇವಾಧಿಕಾರಸ್ತೇ" ಎಂದು

ಮತ್ತೆ **3-8** ರಲ್ಲಿ" ನಿಯತಂ ಕುರು ಕರ್ಮತ್ವಂ ಕರ್ಮಜ್ಯಾಯೋ ಹ್ಯ ಕರ್ಮಣಃ". ನೀನು ನಿಯತವಾದ ಕರ್ಮವನ್ನು ಮಾಡುತ್ತಿರು, ಏಕೆಂದರೆ ಕರ್ಮವು ಅಕರ್ಮಕ್ಕಿಂತ ಮೇಲು. **3- 19**ರಲ್ಲಿ ಅಸಕ್ತನಾಗಿ ಸತತವು ಕರ್ಮವನ್ನು ಆಚರಿಸುತ್ತಿರು ಇದರಿಂದ ಪುರುಷನು ವರವನ್ನು ಪಡೆಯುತ್ತಾನೆ.**3- 20**ರಲ್ಲಿ ಜನಕನೆ ಮೊದಲಾದವರು ಕರ್ಮದೊಡನೆಯೇ ಸಂಸಿದ್ಧಿಯನ್ನು ಪಡೆದರು. ಕರ್ಮದ ಅಭಿಪ್ರಾಯವನ್ನು ಮೇಲಿನ ವಾಕ್ಯಗಳಿಂದ ಅನುಮೋದಿಸುವುದಲ್ಲದೆ, ತರ್ಕದಿಂದ ಸಮರ್ಥಿಸುತ್ತದೆ. ಈ ಕೆಳಗಿನ ಹೇಳಿಕೆಗಳಿಂದ ತನಗೆ ಬೇಕಾದ್ದನ್ನು ಪಡೆಯಲು ಯಾವನೊಬ್ಬನು ಕರ್ಮ ಮಾಡಲೇಬೇಕೆಂಬುದು ಸಹಜವಲ್ಲವೇ? ಕೇವಲ ಇಂದ್ರಿಯಾರಾಮನಾದವನು ಕರ್ಮ ಮಾಡದೆ ಗುರಿಯನ್ನು ಸೇರಬಯಸುತ್ತಾನೆ." ಪ್ರೇಮ" ಎಂಬ ಪದಕ್ಕೂ ಅನೇಕ ವಾಕ್ಯಗಳಿವೆ. **5 -25**ರಲ್ಲಿ ಯಾರು ಸಂಶಯಗಳನ್ನೆಲ್ಲಾ ಕತ್ತರಿಸಿಕೊಂಡು ಇಂದ್ರಿಯಗಳನೆಲ್ಲ ಬಿಗಿಹಿಡಿದು ಸರ್ವಭೂತ ಹಿತದಲ್ಲಿ ರತರಾಗಿ ಇರುವರೋ ಅವರು ಬ್ರಹ್ಮನಿರ್ವಾಣವನ್ನು ಪಡೆಯುವರು ಎಂದು ಹೇಳಿದೆ. **11-55** ರಲ್ಲಿ ಎಲ್ಲ ಭೂತಗಳಲ್ಲಿಯು ನಿರ್ವೈರನಾಗಿರುವವನು ನನ್ನನ್ನು ಸೇರುತ್ತಾನೆ. **12- 4** ರಲ್ಲಿ ಭೂತ ಹಿತದಲ್ಲಿ ರತರಾದ ಅವರು ನನ್ನನ್ನೇ ಪಡೆಯುವರು. ಇದೇ ರೀತಿಯ ಅನೇಕ ವಾಕ್ಯಗಳು ಸರ್ವಭೂತಪ್ರೇಮವನ್ನು ಸಮರ್ಥಿಸುತ್ತವೆ. ಪ್ರೇಮದಿಂದ ಪ್ರೇರಿತವಾಗಿಲ್ಲದೆ ಯಾವ ಒಳ್ಳೆಯ ಕೆಲಸವು ನಡೆಯದು. ವಿಶ್ವ ಪ್ರೇಮವೇ ಜೀವನದಲ್ಲಿನ ದುಷ್ಟಶಕ್ತಿಗಳನ್ನು ನಿವಾರಿಸಲು ಇರುವ ಏಕೈಕ ಮಾರ್ಗ. ಎಲ್ಲ ಕಾಲದ ಉತ್ತಮ ಚಿಂತಕರು ಇದನ್ನೇ ಬೋಧಿಸಿದ್ದಾರೆ ಮತ್ತು ಸಮಾಜ ಅದನ್ನು ಒಪ್ಪಿಕೊಂಡಿದೆ. ಧ್ಯಾನ ಮನಸ್ಸಿನ ಏಕಾಗ್ರತೆ ಕೂಡ ಗೀತೆಯ ಆಧಾರವನ್ನು ಪಡೆದಿದೆ. ಏಕಾಗ್ರತೆಯಿಲ್ಲದಿದ್ದಲ್ಲಿ ಮುಕ್ತಿ ಯಾಗಲಿ ಆಧ್ಯಾತ್ಮಿಕತೀವ್ರತೆಯಾಗಲಿ ಸಾಧ್ಯವಿಲ್ಲ. ತೀವ್ರತೆಯಿಲ್ಲದಿದ್ದಲ್ಲಿ ಶಾಂತಿ ಇಲ್ಲ, ಶಾಂತಿ ಇಲ್ಲದೆಡೆ ಆನಂದವಿಲ್ಲ. **6-15** ರಲ್ಲಿ ನಿಯತಮಾನಸನಾಗಿ ಯಾವಾಗಲೂ ಮನಸ್ಸನ್ನು ಯೋಗದಲ್ಲಿ ಇಟ್ಟುಕೊಳ್ಳುವ ಯೋಗಿಯು

ನಿರ್ವಾಣಪರಮವಾದ ನನ್ನಲ್ಲಿರುವ ಶಾಂತಿಯನ್ನು ಪಡೆಯುವನು. **06-46** ರಲ್ಲಿ ತಪಸ್ವಿ ಗಳಿಗಿಂತಲೂ ಜ್ಞಾನಿಗಳಿಗಿಂತಲೂ ,ಕರ್ಮಿಗಳಿಗಿಂತಲೂ ಯೋಗಿಯು ಹೆಚ್ಚಿನವನು ಎಂದುಹೇಳಿದೆ. ಇದು ಧ್ಯಾನ ಮತ್ತು ಏಕಾಗ್ರತೆಯನ್ನು ದೃಢಪಡಿಸುತ್ತದೆ. ಎಲ್ಲ ಸಾಧನಗಳು ಮಾನಸಿಕ ಏಕಾಗ್ರತೆಯ ವಿವಿಧ ಮಜಲುಗಳನ್ನು ಪ್ರತಿನಿಧಿಸುವ ಮಾರ್ಗವಾಗಿದೆ. ಅನ್ವೇಷಣೆಯ ವಿಷಯದಲ್ಲಿ ,ಏಕೀಕೃತಗೊಂಡ ಮನಸ್ಸನ್ನು ನೆಡುವುದರಿಂದ ಮಾತ್ರ ಆವಿಷಯಕವಾದ ಜ್ಞಾನವನ್ನು ಪಡೆಯಲು ಸಾಧ್ಯ .ಹೀಗಾಗಿ ಏಕಾಗ್ರತೆಯನ್ನು ಒಂದು ಗುರಿ ಎಂದು ಹೇಳಬಹುದು.

ಜ್ಞಾನದ ಬಗ್ಗೆ ಗೀತೆಯಲ್ಲಿ ಸಾಕಷ್ಟು ವಾಕ್ಯಗಳಿವೆ" ಎಲೈ ಪಾರ್ಥನೆ ಎಲ್ಲ ಕರ್ಮಗಳ ಅಂತ್ಯವು ಜ್ಞಾನದಲ್ಲೇ ಪರಿಸಮಾಪ್ತಿಗೊಳ್ಳುತ್ತದ"," ಜ್ಞಾನವೇ ನನ್ನಸ್ವರೂಪ". ಹೀಗೆ ಜ್ಞಾನವನ್ನು ಪ್ರಶಂಸಿಸುವ ವಾಕ್ಯಗಳು ಹಲವಾರು ಇವೆ. ಜ್ಞಾನದ ಹೆಚ್ಚುಗಾರಿಕೆಗೆ ಕಾರಣಗಳು ಅನೇಕ. ಈ ಕಾರಣಗಳೇ ಹಿಂದಿನ ಜ್ಞಾನದ ಆಧಾರದ ಮೇಲೆ ನಿಲ್ಲುತ್ತವೆ ಮತ್ತು ಮುಂದಿನ ಜ್ಞಾನದ ಸಂಗ್ರಹಕ್ಕೆ ಆಧಾರವಾಗುತ್ತವೆ. ಕರ್ಮ, ಪ್ರೇಮ ,ಏಕಾಗ್ರತೆಗಳು ಜ್ಞಾನಕ್ಕೆ ಇಂಬುಗೊಡುವುದರಿಂದ ಜ್ಞಾನದ ಉದಾತ್ತತೆಯನ್ನು ಸಮರ್ಥಿಸುವವರಿಗೆ ಒಂದುಹೆಚ್ಚಿನ ಬಲಬಂದಂತೆ. ನಾವು ಈಗಾಗಲೇ ನೋಡಿರುವಂತೆ ಪ್ರಪಂಚದಲ್ಲಿ ನಾಲ್ಕು ರೀತಿಯ ಪ್ರಮುಖ ಮನೋಧರ್ಮಗಳು ಇದೆ. ಅವರವರ ಪ್ರವೃತ್ತಿಗೆ ಹೊಂದುವಂತೆ ಗುರಿಗಳು ವ್ಯತ್ಯಯವಾಗುತ್ತದೆ. ಈ ಪ್ರಮುಖವಾದ ಮನೋಧರ್ಮಗಳಲ್ಲದೆ ಅನೇಕ ವಿಧವಾದ ಕವಲು ಮನೋಧರ್ಮಗಳಿಗೂ ನಮ್ಮ ಪ್ರಪಂಚದಲ್ಲಿ ಅವಕಾಶವಿರುವುದರಿಂದ ಅವರವರಿಗೆ ತಕ್ಕಂತೆ ಅನೇಕ ಪ್ರತ್ಯೇಕ ಗುರಿ ಇರುವುದರ ಬಗ್ಗೆ ಆಶ್ಚರ್ಯವೇನಿಲ್ಲ.

ಈ ಎಲ್ಲ ಪ್ರವೃತ್ತಿಗಳನ್ನು ಗೀತೆ ತನ್ನ ವಾಕ್ಯಗಳಿಂದ ಪುಷ್ಟೀಕರಿಸುತ್ತದೆ. ಹಾಗಾದರೆ ಗೀತೆ ಯಾವುದಾದರೂ ಒಂದು ಆದರ್ಶವನ್ನು( ಪ್ರವೃತ್ತಿಯನ್ನು) ಮೇಲ್ಸ್ತರದ್ದಾಗಿ ಗುರುತಿಸುವುದಿಲ್ಲವೇ?

ಯಾವುದಾದರೂ ಒಂದು ಪ್ರವೃತ್ತಿಯನ್ನು ಆರಿಸಿಕೊಳ್ಳುವ ಮಾರ್ಗವಿಲ್ಲವೇ? ಎಂಬುದು ನಮ್ಮ ಮನಸ್ಸಿನಲ್ಲಿ ಏಳುವ ಪ್ರಶ್ನೆ. ಇದಕ್ಕೆ ಉತ್ತರ ಬಹಳ ಸರಳ .ಗೀತೆಯು ಈ ಎಲ್ಲ ಪ್ರವೃತ್ತಿಗಳನ್ನು ಯೋಗ ಎಂದು ಕರೆಯುವ ಯೋಗವಿಜ್ಞಾನವಾಗಿದೆ. ಗೀತೆಯ ಗುರಿ ಈ ಎಲ್ಲ ಪ್ರವೃತ್ತಿಗಳನ್ನು ಸಮನ್ವಯಗೊಳಿಸುವುದಾಗಿರುವುದರಿಂದ ಯಾವುದೇ ಒಂದನ್ನು ಮೇಲಕ್ಕೆತ್ತಿ ಅಧಿಕಾರ ಚಲಾಯಿಸುವಂತೆ ಮಾಡಿ ಮಿಕ್ಕವುಗಳನ್ನು ಕೀಳು ಮಾಡುವುದು ಸಾಧ್ಯವಿಲ್ಲ. ಗೀತೆಯ ಅನುಷ್ಠಾನಪರತೆಯು ,ಈ ಸಮನ್ವಯ ಸಮಸ್ಯೆಯನ್ನು ಪರಿಹರಿಸುವಲ್ಲಿ ಅಡಕವಾಗಿದೆ. ಇದರಿಂದ ಗೀತೆಯು ವೇದಾಂತಕ್ಕೆ ಬರೆದ ಅತಿ ಉತ್ತಮ ವ್ಯಾಖ್ಯೆಯಾಗಿದೆ. ಗೀತೆಯ ತಾತ್ಪರ್ಯವನ್ನು ಅರಿಯದ ಜನರು ಅದನ್ನು ಮತೀಯ ಗ್ರಂಥವೆಂದು ಗುರುತಿಸಿ, ಅದನ್ನು ಸಾಧಿಸಲು ಶ್ಲೋಕಗಳನ್ನು ತಿರುಚಿ ಮಗುಚಿ ವಾಕ್ಯಗಳನ್ನು ಉದ್ಧರಿಸುತ್ತಾರೆ. ಇಂಥವರಿಂದ ಗೀತೆಯು ಸರತಿಯಿಂದ ಧರ್ಮಕ್ಕೂ- ಅಕರ್ಮಕ್ಕೂ, ಪ್ರೀತಿಗೂ- ದ್ವೇಷಕ್ಕೂ, ವಿವೇಕಯುತ ಆಚರಣೆಗೂ- ಗೋಪ್ಯವಾದ ಆಚರಣೆಗೂ, ಒತ್ತು ಕೊಡುತ್ತದೆಯೆಂದಾಗುತ್ತದೆ. ಈ ಎಲ್ಲ ಸಿದ್ಧಾಂತಗಳು ಕೇವಲ ಯಾವುದೋ ಒಂದು ವಾಕ್ಯದ ಭಾಗವನ್ನು ತೆಗೆದುಕೊಂಡು ಉಳಿದ ಭಾಗವನ್ನು ಗೌಣಮಾಡುವುದರಿಂದ ಬಂದಿರುತ್ತದೆ. ಸಮಗ್ರವಾಗಿ ಗೀತೆಯನ್ನು ಪರಿಶೀಲನೆ ಮಾಡಿದಾಗ ,ಈಯಾವ ಸಿದ್ಧಾಂತಕ್ಕೂ ಗೀತೆಯು ಪ್ರತ್ಯೇಕವಾಗಿ ಆಧಾರವಲ್ಲ . ಅದು ಎಲ್ಲ ಪ್ರವೃತ್ತಿಗಳಿಗೆ ಬೆಂಬಲ ಕೊಡುತ್ತದೆ ಇಲ್ಲವೇ ಯಾವುದಕ್ಕೂ ಇಲ್ಲ. ಯಾವುದೇ ಒಂದು ಮತವೂ( ಪಂಥವು) ಗೀತೆಯಿಂದ ತನ್ನ ಪರವಾಗಿ ವಿಶೇಷವಾದ ಅಂಗೀಕಾರವನ್ನು ಪಡೆಯಲಾಗದು. ಇಲ್ಲಿ ಜ್ಞಾನ, ಕರ್ಮ, ಪ್ರೀತಿ, ಏಕಾಗ್ರತೆ ಎಲ್ಲವನ್ನು ಸ್ತುತಿಸಿದೆ. ಆದರೆ ಈ ಸ್ತುತಿಸುವಿಕೆ ಇನ್ನೊಂದರ ಹೀಗಳಿಕೆಗಾಗಿ ಅಲ್ಲ.

ವಿಷಯಕ್ಕೆ ಮಹತ್ವ ಕೊಡದೆ ಕೇವಲ ಶಬ್ದವನ್ನು ಹಿಡಿದು ಕೆಲವರು ವಾದಮಾಡುತ್ತಾರೆ. ಅತ್ಯಂತ ಬುದ್ಧಿವಂತರು ಒಂದೇ ವಿಷಯವನ್ನು ಭಿನ್ನಭಿನ್ನ ಪದಗಳನ್ನು ಬಳಸಿ ಅಭಿವ್ಯಕ್ತಿ ಮಾಡುತ್ತಾ ಅದಕ್ಕಾಗಿ

ಕಾದಾಡುತ್ತಾರೆ. ಈ ವಿಷಯಕ್ಕೆ ಒಂದು ವಿಸ್ಮಯವಾದ ಕಥೆ. ನಾಲ್ಕು ಜನ ಹುಡುಗರಿಗೆ ಒಂದು ನಾಣ್ಯವನ್ನು ಕೊಟ್ಟು ಅವರಿಗೆ ಇಷ್ಟವಾದ ಹಣ್ಣನ್ನು ಕೊಂಡು ಸಮವಾಗಿ ಹಂಚಿಕೊಳ್ಳಲು ತಿಳಿಸಲಾಯಿತು. ನಾಲ್ಕು ಜನರು ಒಂದೇ ಹಣ್ಣನ್ನು ಇಷ್ಟಪಟ್ಟರೂ, ಭಾಷೆ ಬೇರೆಯಾಗಿ ಹೆಸರು ಬೇರೆಯಾದ್ದರಿಂದ ಕಚ್ಚಾಡಲು ಪ್ರಾರಂಭಿಸಿದರು. ಪ್ರತಿಯೊಬ್ಬನಿಗೂ ತಾನು ಹೇಳಿದ ಹೆಸರಿನ ಹಣ್ಣೇಬೇಕು. ಕೊನೆಗೆ ನಾಲ್ಕೂ ಭಾಷೆಗಳನ್ನು ಬಲ್ಲವನು ಹುಡುಗರಿಗೆ ಹಣ್ಣನ್ನೇ ತೋರಿಸಿದಾಗ ಎಲ್ಲರಿಗೂ ಸಂತಸವಾಗಿ ತನ್ನ ಮಾತೇ ನಡೆಯಿತೆಂದುಕೊಂಡರು. ಅವರು ಎಣಿಸಿದಂತೆ ಹೆಸರುಗಳು ಬೇರೆಬೇರೆ ಹಣ್ಣನ್ನು ಪ್ರತಿನಿಧಿಸುವುದಿಲ್ಲ ವೆಂದು ತಿಳಿದಾಗ ಜಗಳವಾಡುವುದನ್ನು ನಿಲ್ಲಿಸಿ ತಮ್ಮ ತಪ್ಪನ್ನು ಅರಿತರು. ಸತ್ಯವೇ ಮೇಲೆ ಹೇಳಿದ ನಾಲಕ್ಕು ಪ್ರವೃತ್ತಿಗಳ ಫಲ. ದತ್ತ ಉದಾಹರಣೆಯಂತೆ ನಾಲಕ್ಕು  ಪ್ರವೃತ್ತಿಗಳು ಒಂದೇ ಸತ್ಯವನ್ನೇ ಹೇಳುತ್ತಿದ್ದರು ಅದರ ಬಗ್ಗೆ ವಾದ ವಿವಾದಗಳು ತಪ್ಪಿಲ್ಲ.  ಪ್ರಾರಂಭಕ್ಕೆ ಅವುಗಳು ಬೇರೆ ಬೇರೆ ಎನಿಸಿದರೂ ಎಲ್ಲದರ ಗುರಿಯೂ ಒಂದೇ ಆಗಿದ್ದು ಕೇಂದ್ರವಾದ ಸತ್ಯದೆಡೆಗೆ ವಾಲುತ್ತದೆ.

ಈ ನಾಲ್ಕು ಪ್ರವೃತ್ತಿಗಳೂ ಸಂಧಿಸುವ ಬಿಂದುವೇ ಯೋಗ. ಈ ಮಾನಸಿಕ ಸ್ತರವನ್ನು ಹೊಂದುವುದೇ ಯೋಗಾರೂಢನಾಗುವುದು. ಈ ಮನಸ್ಸಿನ ಸ್ಥಿತಿಯನ್ನೇ ಗೀತೆಯು ಸಮತ್ವ ಎನ್ನುತ್ತದೆ. ಹೊರಗಿನ ಯಾವ ಸನ್ನಿವೇಶವು ಮನಸ್ಸಿನ ಮೇಲೆ ಪರಿಣಾಮ  ಬೀರದ ಘಟ್ಟವನ್ನು ಮನಸ್ಸು ತಲುಪಬೇಕು. ಮನಸ್ಸಿನ ಸಹಜತೆಯೇ ಸಾವಿರಾರು ಬದಲಾವಣೆಗಳಿಗೆ ಒಳಪಡುವುದಾದರೂ, ಮನಸ್ಸನ್ನು ಸಮತ್ವಕ್ಕೆ ಮಾರ್ಪಡಿಸುವುದೇ ಗುರಿ. ಮನಸ್ಸಿನ ಪ್ರತಿ ಬದಲಾವಣೆಯು ಅದರ ಮಿತಿಯಾಗಿದ್ದು ಮನಸ್ಸನ್ನು ಈ ಎಲ್ಲ ಮಿತಿಗಳಿಂದ ಸಾಧ್ಯವಾದಷ್ಟು ಮೇಲೇರುವಂತೆ ಹುರಿಗೊಳಿಸುವುದೇ ಗೀತೆಯ ಧ್ಯೇಯವಾಗಿದೆ. ವ್ಯಕ್ತಿಗತವಾಗಿ ಹೊಂದುವಂತೆ ಯಾವುದೇ ವಿಧಾನವನ್ನು ಈ ದಿಸೆಯಲ್ಲಿ ಬಳಸಿದರು ಅದನ್ನು ಯೋಗ ಎಂದು ಕರೆಯಲಾಗಿದೆ. ಏಕೆಂದರೆ ನಿಜವಾದ ಯೋಗವಾದ ಸಮತ್ವಕ್ಕೆ ಅದು

ಮುಟ್ಟಿಸುತ್ತದೆ. 4 ಪ್ರವೃತ್ತಿಗಳ ಧ್ಯೇಯಗಳನ್ನು ಸಮ್ಮಿಳಿತಗೊಳಿಸದೆ ಯಾವೊಬ್ಬನೂ ಸಮತ್ವವನ್ನು ಹೊಂದಲಾರನು. ಇನ್ನು ಮುಂದೆ ಈ ನಾಲ್ಕು ಯೋಗಗಳನ್ನು ವಿವರವಾಗಿ ಪರಿಶೀಲಿಸೋಣ, ಹಾಗೆ ಅವುಗಳ  ಮೂಲಕ ಗೀತೆಯ ಪರಮ ಧ್ಯೇಯವನ್ನು ತಲುಪುವುದು ಹೇಗೆ ಎಂದು ನೋಡೋಣ.

# ಹಾರ್ಟ್ ಆಫ್ ಭಗವದ್ಗೀತ ಎಂಬ

# ಆಂಗ್ಲ ಪುಸ್ತಕದ

(ಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳಿಂದ ವಿರಚಿತ)

# ಕನ್ನಡಾನುವಾದ

# ಕರ್ಮಯೋಗ

ನಾವು ಮೊತ್ತಮೊದಲು ಪರಾಮರ್ಶೆಗೆ ಕರ್ಮಯೋಗವನ್ನು ತೆಗೆದುಕೊಳ್ಳುತ್ತೇವೆ. ಕೃ ಎನ್ನುವ ಮೂಲ ಧಾತುವಿನಿಂದ ಸಂಸ್ಕೃತದ ಕರ್ಮ ಎನ್ನುವ ಪದದ ವ್ಯುತ್ಪತ್ತಿಯಾಗಿದೆ .ಕೃ ಎನ್ನುವ ಪದದ ಅರ್ಥ ಮಾಡು ಎಂದಿದೆ ಆದ್ದರಿಂದ ಕರ್ಮ ಎನ್ನುವ ಪದದ ಪ್ರಧಾನ ಅರ್ಥ ಕ್ರಿಯೆ ಆಗುತ್ತದ. ಇದಲ್ಲದೆ ಇನ್ನೂ ಅನೇಕ ಉಪ ಅರ್ಥಗಳು ಕರ್ಮ ಎನ್ನುವ ಪದಕ್ಕೆ ಇದ್ದರೂ ಸಹ ಕರ್ಮಯೋಗದಲ್ಲಿ ಕ್ರಿಯೆ ಎನ್ನುವುದನ್ನೇ ವಿಚಾರಕ್ಕೆ ತೆಗೆದುಕೊಳ್ಳಲಾಗಿದೆ. ನಮ್ಮಿಂದ ಇತರರಿಗಾಗಿ ನಡೆಸಲೇಬೇಕಾದ ಕ್ರಿಯೆಯು ಕರ್ತವ್ಯ ಆಗುತ್ತದೆ .ಶಾಸ್ತ್ರೋಕ್ತವಾಗಿ ನಡೆಸಲಾಗುವ ಕಾರ್ಯ ಶಾಸ್ತ್ರವಿಧಿ (ಧರ್ಮಾಚರಣೆ) ಆಗುತ್ತದೆ. ಈ ಎಲ್ಲ ಮಜಲುಗಳನ್ನು ಒಳಗೊಂಡ ಕ್ರಿಯೆಯು ಕರ್ಮಯೋಗದ ವ್ಯಾಪ್ತಿಗೆಬರುತ್ತದೆ. ಹಾಗೂ ಕರ್ಮಯೋಗವು ಕ್ರಿಯೆ, ಕ್ರಿಯೆಯ ವಿಧಿ-ವಿಧಾನಗಳನ್ನು ಅಷ್ಟೇ ಅಲ್ಲದೆ ಉದ್ದೇಶ ಪ್ರವೃತ್ತಿ ಮತ್ತು ಫಲವನ್ನು ಒಳಗೊಂಡ ವಿಜ್ಞಾನವಾಗಿದೆ.

## ಕಾರ್ಯದಿಂದ  ಬಿಡುಗಡೆಯು ದುಸ್ಸಾಧ್ಯ

ಕ್ರಿಯೆಯು ಪ್ರಕೃತಿಯ ನಿಯಮ ಎನ್ನುವುದನ್ನು ಗೀತೆಯು ಗುರುತಿಸಿದೆ. ಮನುಷ್ಯರು ಪ್ರಾಣಿಗಳು ಗಿಡಮರಬಳ್ಳಿಗಳು ಅಷ್ಟೇಕೆ ಖನಿಜ ವಸ್ತುಗಳು ಸಹ ಬದಲಾವಣೆ ಹೊಂದುತ್ತವೆ. ಪ್ರಕೃತಿಯಲ್ಲಿ ಅಗಾಧವಾದ ಬದಲಾವಣೆಯಾಗದ ಒಂದೇ ಒಂದು ಕ್ಷಣವೂ ಸಹ ಇರುವುದಿಲ್ಲ. ಇಡೀ ಪ್ರಕೃತಿಯೇ ನಿಲುಗಡೆ ಇಲ್ಲದ ಚಟುವಟಿಕೆಗಳ ಕಾರ್ಯಗಾರ. ಪ್ರಕೃತಿ ಬಿಡುವಿಲ್ಲದ  ಹಾಗೂ ಎಂದೆಂದಿಗೂ ಮರುಕಳಿಸುವ ಚಟುವಟಿಕೆಯೊಂದಿಗೆ ಅನನ್ಯ ತ್ವವನ್ನು ಹೊಂದಿರುತ್ತದೆ. ತಿಳಿದೋ ತಿಳಿಯದೆಯೋ ಒಂದು ಸಣ್ಣ ಗರಿಕೆಯಿಂದ ಹಿಡಿದು ದಿವ್ಯ ಪುರುಷರು ಸೇರಿ ಎಲ್ಲರೂ ಕಾರ್ಯತತ್ಪರರೇ. ಸಾಂಖ್ಯರ ಪ್ರಕಾರ ಈ ಮರುಕಳಿಸುವ ಕಾರ್ಯವಾಗಲಿ ಅಥವಾ ಬದಲಾವಣೆಯೇ ಆಗಲಿ ಮೂರು ಮೂಲಭೂತ ಪ್ರಾಕೃತಿಕ ಶಕ್ತಿಯಿಂದ ಜರುಗುತ್ತದೆ. ಇವುಗಳನ್ನು ಅವರು ಗುಣಗಳು ಎನ್ನುತ್ತಾರೆ. ಸತ್ವ ರಜಸ್ಸುಮತ್ತು ತಮಸ್ಸು ಗಳೇ ಈ ಮೂರು ಗುಣಗಳು. ಆಂಗ್ಲಭಾಷೆಯಲ್ಲಿ ಶಕ್ತಿ ಎನ್ನುವ ಪದವನ್ನು ಭೌತದ್ರವ್ಯಕ್ಕಿಂತ ವಿಭಿನ್ನ ಎಂಬ ಅರ್ಥದಲ್ಲಿ ಬಳಸುವ ಪ್ರಯೋಗವಿದೆ. ಆದರೆ ಇಲ್ಲಿ ಎಂದರೆ ಸಾಂಖ್ಯ ದರ್ಶನದಲ್ಲಿ ಗುಣಗಳು ಮೂಲಭೂತ ದ್ರವ್ಯದ ಅಂಶವಾಗಿದ್ದು ಯಾವುದರಿಂದ ಇಡೀ ವಿಶ್ವದ ಉಗಮವಾಗುವುದೊ ಅದೇ ಆಗಿರುತ್ತದೆ. ಗುಣಧರ್ಮ ಎನ್ನುವ  ಪಾರಿಭಾಷಿಕ ಪದವೂ ಇದೇ ರೀತಿಯ ಆಕ್ಷೇಪಣೆಗೆ ಒಳಗಾಗುತ್ತದೆ.ಕ್ರಿಯೆಗೆ

ಸಂಬಂಧಿಸಿದಂತೆ ಆದರೋ ಸತ್ವ ಎನ್ನುವ ಪದವನ್ನು ಸಮತೆ ಎಂದು ರಜಸ್ಸನ್ನು ಭಿನ್ನತ್ವ ಎಂದು ತಮಸ್ಸನ್ನು ಜಡತ್ವ ಎಂದು ತರ್ಜುಮೆ ಮಾಡಬಹುದು. ಈ ಮೂರು ಮೂಲಭೂತ ಶಕ್ತಿಗಳ ಪರಸ್ಪರ ಏರುಪೇರಿನ ಆಟವೇ ಪ್ರಕೃತಿಯ ಕ್ಷೇತ್ರವಾಗಿದೆ.ಹೀಗಾಗಿ ಒಂದು ಕಡೆ ಸಮತೆ ಮತ್ತು ಸಾಮರಸ್ಯವನ್ನು ತರಲು ಸಾತ್ವಿಕ ಶಕ್ತಿಯು ಕೆಲಸ ಮಾಡುವಂತೆ ರಾಜಸಿಕ ಶಕ್ತಿಯು ಪ್ರಮುಖವಾಗಿರುವಲ್ಲಿ ಅತಿ ಹೆಚ್ಚಿನ ಚಟುವಟಿಕೆ ಹಾಗೂ ಅನೇಕ ಅಸಮತೋಲನಕ್ಕೆ ಅವಕಾಶಗಳು ಇರುವುದು .ಅಂತೆಯೇ ಮೂರನೆಯದಾದ ತಾಮಸಿಕ ಶಕ್ತಿಯು ಎಲ್ಲಾಕಾರ್ಯಗಳನ್ನು ನಿಷ್ಕ್ರಿಯಗೊಳಿಸಿ ಕೇವಲ ಜಡತ್ವವನ್ನು ತೋರುವುದು ಕಾಣುತ್ತದೆ. ಈ ಶಕ್ತಿಗಳು ಎಲ್ಲೆಲ್ಲೂ ತಮ್ಮ ಕಾರ್ಯವನ್ನು ಜರುಗಿಸುತ್ತದೆ.

" ನ ತದಾಸ್ತಿ ಪ್ರಥಿವ್ಯಾಂ ವಾ ದಿವಿ ದೇವೇಶು ವಾ ಪುನಃ. ಸತ್ವಂ ಪ್ರಕೃತಿ ಜೈರ್ಮುಕ್ತಂ ಎದೇಭಿಃ ಸ್ಯಾತ್ ತ್ರಿಭಿರ್ಗುಣೈಃ"18:40. ಪ್ರಕೃತಿಯ ಈ ಮೂಲ ಗುಣಗಳಿಂದ ವಿಮುಕ್ತರಾದವರು ಭೂಮಿಯ ಮೇಲಾಗಲಿ ಅಥವಾ ಸ್ವರ್ಗದ ದೇವತೆಗಳಲ್ಲಿಯಾಗಲಿ ಯಾರೂ ಇರುವುದಿಲ್ಲ. ಇದೀಗ ಈ ಗುಣಗಳ ಕಾರ್ಯವನ್ನು ,ಮಾನವ ನಡತೆಯ ಮೇಲೆ ಅವುಗಳ ಪ್ರಭಾವವನ್ನು ಪರಿಶೀಲಿಸುವುದು ಕರ್ಮಯೋಗದ ಕಾರ್ಯಕ್ಷೇತ್ರದ ಭಾಗವಾಗಿದೆ.

ಈ ಮೇಲೆ ತಿಳಿಸಿದಂತೆ ಪ್ರತಿಯೊಬ್ಬರೂ ಕಾರ್ಯಪ್ರವೃತ್ತರಾಗಬೇಕು."ನಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್;ಕಾರ್ಯತೇಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈ ರ್ಗುಣೈಃ"

ಒಂದೇ ಒಂದು ಕ್ಷಣಕ್ಕೂ ಯಾರು ಕಾರ್ಯಪ್ರವೃತ್ತರಾಗದೆ ಇರಲಾರರು ಗುಣಗಳಿಗೆ ವಶರಾಗಿ ಪ್ರತಿಯೊಬ್ಬರೂ ಕಾರ್ಯಪ್ರವೃತ್ತರಾಗಬೇಕು. ನಮಗೆ ಇಚ್ಛೆ ಇದ್ದರೂ ಅಥವಾ ಇಲ್ಲದಿದ್ದರೂ ನಾವು ಮುನ್ನಡೆಯುತ್ತಲೇ ಇರಬೇಕು. ಯಾರಾದರೂ ಒಂದೇ ಒಂದು ಕ್ಷಣವೂ ಕಾರ್ಯಪ್ರವೃತ್ತರಾಗದಿದ್ದಲ್ಲಿ ಅವರು ನಿರ್ನಾಮವಾಗುವರು. ಕಾರ್ಯಪ್ರವೃತ್ತರಾಗಿ ಅದರಿಂದಾದ ಫಲ ಭೋಗವನ್ನು ಅನುಭವಿಸುವುದಕ್ಕೆ ಮನುಷ್ಯನು ಬದ್ಧನಾಗಿದ್ದಾನೆ. ಪ್ರಕೃತಿಯ ನಿಯಮಗಳು ಎಷ್ಟು ಕಠೋರವಾಗಿದೆ! ಪ್ರತಿಕ್ರಿಯೆಯಿಂದ ಅನುಸರಿಸಲ್ಪಡದ,ದೇಹದ ಅಥವಾ ಮನಸ್ಸಿನ ಸಣ್ಣ ಕ್ರಿಯೆಯೂ ಇಲ್ಲವೇಇಲ್ಲ. ಸಮತೆಯನ್ನೋ ಅಥವಾ ವಿಷಮತೆಯನ್ನೋ ಸಾಧಿಸಲು ಪ್ರತಿಯೊಬ್ಬರೂ ಕಾರ್ಯಪ್ರವೃತ್ತರಾಗುತ್ತಾರೆ, ಆದರೂ ಕೆಲವೊಮ್ಮೆ ಅವರು ಆಲಸಿಗಳಾಗಲು ಆಯ್ಕೆ ಮಾಡುವುದೂ ಉಂಟು. ಆಲಸ್ಯದ ಹಾಗೂ ಕಾರ್ಯಪ್ರವೃತ್ತಿಯ ಫಲವನ್ನು ಭೋಗಿಸುತ್ತೇವೆ. ಇದರಿಂದ ಬಿಡುಗಡೆ ಇಲ್ಲ. ನಾವು ರೋಷದಿಂದ ಬುಸುಗುಟ್ಟಿದರೂ ಅನ್ಯಮಾರ್ಗ ಇಲ್ಲ. ನಾವು ಮರೆಗುಳಿತನದಿಂದಲೋ

ಉಪೇಕ್ಷೆಯಿಂದಲೋ ನಿದ್ರಾವಶರಾಗಿಯೋ ಉತ್ತೇಜಕ ಅಥವಾ ಶಾಮಕ ವಸ್ತು ಸೇವನೆಯಿಂದಲೋ ನಿಯಮವನ್ನು ಮರೆಯಲು ಯತ್ನಿಸಬಹುದು ಆದರೆ ಯಾವುದೋ ಆಘಾತವಾದಾಗ ಸತ್ಯವನ್ನು ಗುರುತಿಸಲೇಬೇಕಾಗುತ್ತದೆ.

"ಲೋಕೋಯಂ ಕರ್ಮಬಂಧನಃ " ಇಡೀ ಪ್ರಪಂಚವೇ ತನ್ನ ಕರ್ಮದಿಂದ ಬಂಧಿಸಲ್ಪಟ್ಟಿದೆ (III-೯)ಎಂಬ ಸೂಕ್ತಿಯನ್ನು ಎಲ್ಲರೂ ಒಪ್ಪಬೇಕಾಗುತ್ತದೆ. ಎಷ್ಟು ಶೀಘ್ರದಲ್ಲಿ ಇದನ್ನು ನಾವು ಅರ್ಥಮಾಡಿಕೊಳ್ಳುತ್ತೇವೋಅಷ್ಟು ನಮಗೆ ಒಳ್ಳೆಯದು ಏಂದು ಕರ್ಮಯೋಗವು ಬೋಧಿಸುತ್ತದೆ. ಎಂದಾದರೂ ಒಂದು ದಿನ ನಾವು ಉತ್ತರಿಸಲು ಬದ್ಧರಾಗಿರುವ ಒಂದು ಪ್ರಶ್ನೆಯನ್ನು ಮುಂದೆ ಹಾಕುವುದರಲ್ಲಿ ಏನೂ ಉಪಯೋಗವಿಲ್ಲ. ಪ್ರಕೃತಿಯು ನಮ್ಮನ್ನು ಕೆಲಸಮಾಡುವಂತೆ ಬಲಾತ್ಕರಿಸುತ್ತದೆ ಎಂಬ ನಮ್ಮ ನಿಜ ಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು  ನಮ್ಮ ಪ್ರಥಮ ಕರ್ತವ್ಯ. "ನಹಿ ದೇಹಬೃತ್ ಶಕ್ಯಂ ತ್ಯಕ್ತುಂ ಕರ್ಮಣ್ಯಶೇಷತಃ" ಯಾರೊಬ್ಬರೂ ದೇಹವಿರುವವರೆಗೂ ಸಂಪೂರ್ಣವಾಗಿ ಕರ್ಮತ್ಯಾಗವನ್ನು ಮಾಡಲು ಶಕ್ಯರಿಲ್ಲ?(xvIII_10) ಎಂಬುವ ನಿಜಸ್ಥಿತಿಯನ್ನು ನಾವು ಮೊತ್ತಮೊದಲು ಅರಿಯುವುದು ಅಗತ್ಯ

## ಕರ್ಮದಲ್ಲಿ ತೊಡಗುವುದೇ ಕರ್ಮ ವಿಮುಕ್ತಿ

ಮನುಷ್ಯನು ತನ್ನ ಬಿಡುಗಡೆಗಾಗಿ ಸತತವಾಗಿ ಶ್ರಮಿಸುತ್ತಿದ್ದಾನೆ ಎನ್ನುವುದು ಒಂದು ವಾಸ್ತವಾಂಶ.  ಮನುಷ್ಯನನ್ನು ತನ್ನ ಗುಲಾಮನಾಗಿಸುವುದಕ್ಕೆ ಪ್ರಕೃತಿಯು ಒತ್ತಾಯಿಸುತ್ತಿರುವುದು ಒಂದು ಕಡೆಯಾದರೆ ಮತ್ತೊಂದು ಕಡೆ ಆತ್ಯಂತಿಕವಾಗಿ ತಾನೇ ಪ್ರಭುವಾಗುವೆನೆಂಬ ದೃಢ ನಿಶ್ಚಯದಿಂದ ಮನುಷ್ಯ ಪ್ರಕೃತಿಯ ವಿರುದ್ಧ ತೀವ್ರ ಹೋರಾಟ ನಡೆಸಿದ್ದಾನೆ. ನಮ್ಮೆಲ್ಲರಲ್ಲೂ ಬಿಡುಗಡೆಯ ಅಭಿಲಾಷೆಯೂ ದೃಢವಾದ ನಂಬಿಕೆಯೇ ಆಗಿದೆ.

ಮನುಷ್ಯನ  ಕಾರ್ಯಶಕ್ತಿಗೆ ಪ್ರಕೃತಿಯು ತಡೆಯ ಮೇಲೆ ತಡೆಯನ್ನು ಒಡ್ಡುತ್ತಿದ್ದರೂ ಮನುಷ್ಯನು ಎಲ್ಲ ತಡೆಗಳನ್ನು  ಮೀರಲು ಸಾಧ್ಯವಾದಷ್ಟು  ಪ್ರಯತ್ನಿಸುತ್ತಿದ್ದಾನೆ. ಪ್ರಕೃತಿಯು ಮನುಷ್ಯನು ಅಂತ್ಯವಿಲ್ಲದೆ ಶ್ರಮಿಸುವಂತೆ ಮಾಡುತ್ತದೆಯಾದರೂ ಮನುಷ್ಯನು ವಿಶ್ರಾಂತಿಗಾಗಿ ಹಂಬಲಿಸುತ್ತಿದ್ದಾನೆ. ನಿರಂತರ ತಿರುಗುತ್ತಿರುವ

ಕರ್ಮಚಕ್ರವು ಮನುಷ್ಯನನ್ನು ತನ್ನೆಡೆಗೆ ಸೆಳೆದುಕೊಂಡಿದೆ . ಆದರೆ ಅವನು ಸಂಪೂರ್ಣ ವಿಶ್ರಾಂತಿಯನ್ನು ಮತ್ತು ಸಂಪೂರ್ಣ ಬಿಡುಗಡೆಯನ್ನು ಬಯಸುತ್ತಿದ್ದಾನೆ.

ಮನುಷ್ಯನ ಈ ಹೋರಾಟ ನಿಷ್ಫಲವೇ ಅಥವಾ ಸಾಫಲ್ಯದ ಭರವಸೆಇದೆಯೆ? ಇದು ಬಹಳ ಮುಖ್ಯವಾದ ಒಂದು ಪ್ರಶ್ನೆ. ಕಾರಣವೆಂದರೆ ನೀತಿಯ ಬುನಾದಿಯು ಈ ಪ್ರಶ್ನೆಯ ಉತ್ತರದ ಮೇಲೆ ಅವಲಂಬಿತವಾಗಿದೆ. ಮನುಷ್ಯನು ಕೇವಲ ಸಂದರ್ಭದ ಕೂಸಾಗಿದ್ದಲ್ಲಿ ಮತ್ತು ತನ್ನತನವನ್ನು ಬದಿಗೊತ್ತಿ ಸಂದರ್ಭದ ಗುಲಾಮಗಿರಿಗೆ ತಳ್ಳಲ್ಪಟ್ಟವನಾಗಿದ್ದರೆ, ಭವಸಾಗರದಲ್ಲಿ ಮಾರುತದ ಹೊಡೆತಕ್ಕೆ ಸಿಕ್ಕ ನೌಕೆಗಿಂತ ಹೆಚ್ಚಿನವನಾಗದಿದ್ದರೆ ಅವನ ಜವಾಬ್ದಾರಿಯೂ ಅಲ್ಲಿಗೆ ಮುಗಿಯಿತು ಮತ್ತು ಅವನ ಕುಕೃತ್ಯಕ್ಕೆ ಅವನನ್ನು ದೂಷಿಸುವಂತೆಯೂ ಇಲ್ಲ ಹಾಗೂ ಸುಕೃತ್ಯಕ್ಕೆ ಹೊಗಳುವಂತೆಯೂ ಇಲ್ಲ. ಹಾಗಿಲ್ಲದ ಪಕ್ಷದಲ್ಲಿ ಮನುಷ್ಯನು ತನ್ನ ಎಲ್ಲಾ ಕಾರ್ಯಗಳಿಗೆ ತಾನೇ ಜವಾಬ್ದಾರನು ಮತ್ತು ಪ್ರಾಕೃತಿಕ ಶಕ್ತಿಗಳ ದಾಸನಷ್ಟೇ ಅಲ್ಲ ಎಂದಾದರೆ ಮಾತ್ರ ನೈತಿಕತೆಗೆ ಒಂದು ಆಶಯವಿದೆ. ತನ್ನ ಸ್ವಾತಂತ್ರ್ಯದ ಮಿತಿಯನುಸಾರವಾಗಿ ,ಮನುಷ್ಯನು ತನ್ನ ಕೃತ್ಯಗಳಿಗೆ ತಾನೇನೇರವಾಗಿ ಜವಾಬ್ದಾರನಾಗುತ್ತಾನೆ. ಹಾಗಾಗಿ ಮನುಷ್ಯನು ತನ್ನಕೃತ್ಯಗಳನ್ನು ನಡೆಸಲು ಸ್ವತಂತ್ರನೊ? ಇಲ್ಲ ಅಸ್ವತಂತ್ರನೋ?ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಅಗತ್ಯವಿದೆ. ಮನುಷ್ಯನು ತಾನು ಏನೇ ಆಗಿದ್ದರು ಕಾರ್ಯಪ್ರವೃತ್ತನಾಗಲೇಬೇಕು, ಆದರೆ ಯಾವ ರೀತಿಯ ಕಾರ್ಯವನ್ನು ಎಸಗುತ್ತಾನೆ ಎಂಬುದು ಅವನ ಆಯ್ಕೆ ಎಂದು ಗೀತೆಯು ಹೇಳುತ್ತದೆ. ಒಂದು ಹಗ್ಗವನ್ನು ಉಪಯೋಗಿಸಿ ತನ್ನನ್ನು ತಾನೇ ನೇಣು ಹಾಕಿಕೊಳ್ಳಲು ಅಥವಾ ಆನೆಗಳನ್ನು ಮತ್ತು ಹುಲಿಗಳನ್ನು ಬಂದಿಸಿ ಅದನ್ನು ಆಳಲು ಬಹುದು. ತನ್ನ ಕೃತ್ಯದಿಂದ ಬಿಡುಗಡೆಯನ್ನೋ ಅಥವಾ ನಾಶವನ್ನೋ ಸಾಧಿಸಬಹುದು." ಆತ್ಮೈವ ಹ್ಯಾತ್ಮನೋ ಬಂದುರಾತ್ಮೈವ ರಿಪುರಾತ್ಮನಃ " ತಾನೇ ತನ್ನ ಬಂದುವು ಮತ್ತು ತಾನೇ ತನ್ನ ಶತ್ರು.6:5 ಕರ್ಮಯೋಗದ ವಿಶೇಷ ಗುರಿಯೇ ಕಾರ್ಯವನ್ನು ಹೇಗೆ ತನ್ನ ಪ್ರಯೋಜನಕ್ಕೆ ಬಳಸಬಹುದು ಮತ್ತು ತನ್ನ ಬಿಡುಗಡೆಯನ್ನು ಪಡೆಯಲು ಉಪಯೋಗಿಸಬಹುದು ಎಂದು ಹೇಳಿಕೊಡುವುದಾಗಿದೆ.

ಸ್ವಾತಂತ್ರ್ಯವು ಅಪೇಕ್ಷೆಪಡತಕ್ಕಂತಹುದು ಮತ್ತುಅದು ಸಾಧ್ಯವೆಂದು ಗೀತೆಯು ಒಪ್ಪುತ್ತದೆ. ಆದರೆ ಈ ಸ್ವಾತಂತ್ರ್ಯವು ಕರ್ಮದಿಂದಲೇ ಆಗುವಂತಹದೇ ಹೊರತು ನಿಷ್ಕ್ರಿಯೆಯಿಂದಲ್ಲ."ನ ಕರ್ಮಣಾಮನಾರಂಭ

ನೈಷ್ಕರ್ಮ್ಯ ಪುರುಷೋಶ್ನುತೆ "3:4 ಕರ್ಮವನ್ನು ಆರಂಭಿಸದೆ ಇರುವುದರಿಂದಲೇ ವ್ಯಕ್ತಿಗೆ ಸ್ವಾತಂತ್ರ್ಯವು ದೊರಕಲಾರದು, ಹಾಗೆಯೇ ಕೇವಲ ಕರ್ಮವನ್ನು ತೊರೆದು ಬಿಡುವುದರಿಂದಲೇ ಅವನು ಪರಿಪೂರ್ಣತೆಯನ್ನು ಗಳಿಸಲಾರನು. ಯಾರೊಬ್ಬರೂ ತಮ್ಮ ಕರ್ಮಸ್ಥಾನವನ್ನು ತೊರೆದು ಬಿಡುವುದರಿಂದಲೇ ಜಯ ಗಳಿಸಲಾರರು ಆದರೆ ಧೈರ್ಯದಿಂದ ಇರುವಲ್ಲಿಯೇ ಹೋರಾಡುವುದರಿಂದ ಮಾತ್ರ ಜಯಗಳಿಸಲು ಸಾಧ್ಯ. ವಿಶ್ರಾಂತಿಯನ್ನು ಬಯಸಿದಲ್ಲಿ ಅದನ್ನು ಕರ್ಮದಲ್ಲಿ ಕಾಣಬೇಕೇ ಹೊರತು ಮತ್ತೆಲ್ಲೋ ಅಲ್ಲ. ಎಲ್ಲಾ ಕರ್ಮಗಳನ್ನು ತೊರೆದು ಬಿಡುವುದರಿಂದಲೇ ವಿಶ್ರಾಂತಿಯನ್ನು ಪಡೆಯಲು ಏಕೆ ಸಾಧ್ಯವಿಲ್ಲ?. ಯಾಕೆಂದರೆ ಜೀವ ಇರುವವರೆಗೂ ಹಾಗೆ ಮಾಡಲು ಸಾಧ್ಯವಿಲ್ಲ. ಕರ್ಮವನ್ನು ಸಂಪೂರ್ಣ ತೊರೆಯುವುದೆಂದರೆ ಜೀವವನ್ನೇ ತೊರೆದಂತೆ. "ಶರೀರ ಯಾತ್ರಿಪಿ ಚ ತೇ ನ ಪ್ರಸಿಧ್ಯೇದ ಕರ್ಮಣಃ"3:8. ಕರ್ಮವಿಲ್ಲದೆ ಜೀವನ ಇರುವುದು ದುಷ್ಕರ. ಜೀವನವೆಂದರೆ ಅದು ಪ್ರಕೃತಿಯೊಡನೆ ಹೋರಾಡುವುದು ಎಂದೇ ಅಲ್ಲವೇ?. ಹಾಗಾಗಿ ಈ ಹೋರಾಟವುಜೀವನದ ಕೊನೆಯಯವರೆಗೂ ನಡೆಯುತ್ತಲೇ ಇರುವುದು. ಸಾಧುಗಳು ಮತ್ತು ಪಾಪಿಗಳು, ಬಡವರು ಮತ್ತು ಬಲ್ಲಿದರು, ಹರೆಯದವರು ಮತ್ತು ವೃದ್ಧರೂ, ಎಲ್ಲರೂಈ ಹೋರಾಟದಲ್ಲಿ ಭಾಗಿಗಳೆ. ಹಾಗಾಗಿ ನಮಗೆ ಕ್ರಿಯೆ ಮತ್ತು ನಿಶ್ಕ್ರಿಯೆಯ ನಡುವೆ ಆಯ್ಕೆಯಿಲ್ಲ. ಆದರೆ ಆಯ್ಕೆಯಿರುವುದು, ಜಾಣ್ಮೆಯ ಕೆಲಸ ಮತ್ತು ಮನಒಪ್ಪದ ದುಡಿತ, ಪ್ರಕೃತಿಯ ಗುಲಾಮ ಆಗುವುದು ಮತ್ತು ಒಡೆಯ ನಾಗುವುದು ಇವುಗಳ ಅಂತರದಲ್ಲಿ. ಕರ್ಮಯೋಗವು ನಮಗೆ ಜಾಣ್ಮೆಯ ಕೆಲಸವನ್ನು ಮಾಡುವುದರ ಬಗ್ಗೆ ತಿಳಿವನ್ನು ನೀಡುತ್ತದೆ.

# ಎರಡು ರೀತಿಯ ಕಾರ್ಯಗಳು

"ದೂರೇಣ ಹ್ಯವರಂ ಕರ್ಮ ಬುದ್ಧಿಯೋಗಾತ್ ಧನಂಜಯ; ಬುದ್ಧೌಶರಣಮನ್ವಿಚ್ಛ ಕೃಪಣಾಃ ಫಲಹೇತವಃ"2:49. ಓ ಧನಂಜಯನೆ ಬುದ್ಧಿಮತ್ತೆಯ ಕರ್ಮಕ್ಕಿಂತ ಫಲಾಕಾಂಕ್ಷೆಯಿಂದ ಮಾಡುವ ಕರ್ಮಗಳು ನಿಕೃಷ್ಟ ಕರ್ಮಗಳು. ಯಾರು ಫಲದ ಆಸೆಗಾಗಿ ದುಡಿಯುತ್ತಾರೋ ಅವರು ದಯನೀಯ ಸ್ಥಿತಿ ತಲುಪುತ್ತಾರೆ . ಆದ್ದರಿಂದ ಈ ಜ್ಞಾನದಲ್ಲಿ ನೀನು ಆಶ್ರಯ ಪಡೆ.ಈ ಬೋದನೆಯಲ್ಲಿ ಗುಲಾಮನ ದುಡಿತಕ್ಕೆ ಮತ್ತೆ ಒಡೆಯನ ದುಡಿತಕ್ಕೆ ಇರುವ ಅಂತರವನ್ನು ಶ್ರೀಕೃಷ್ಣಪರಮಾತ್ಮನು ವಿವರಿಸಿದ್ದಾನೆ. ಗೀತೆಯ ಎರಡನೇ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ಕರ್ಮಯೋಗವನ್ನು ತಿಳಿಸಿದ್ದಾನೆ. ಈ ಕರ್ಮಯೋಗಕ್ಕೂ, ಮತ್ತೆ ಅದೇ ಅಧ್ಯಾಯದ ಕೊನೆಯ ಶ್ಲೋಕಗಳಲ್ಲಿ ವಿವರಿಸಿರುವ ಎಲ್ಲಾ ದ್ವಂದ್ವಗಳನ್ನು ಮೀರಿದ ಯೋಗಿಯ ಲಕ್ಷಣಗಳಿಗೂ ಇರುವ ವ್ಯತ್ಯಾಸವು ಅರ್ಜುನನಿಗೆ ಸಂಶಯಕ್ಕೆ

ಎಡೆಮಾಡಿದ್ದು, ಮೂರನೇ ಅಧ್ಯಾಯದ ಪ್ರಾರಂಭದಲ್ಲಿ ಓ ಜನಾರ್ದನನೇ, ಜ್ಞಾನವೇ ಕರ್ಮಕ್ಕಿಂತ ಶ್ರೇಷ್ಠವೆಂಬುದು ನಿನ್ನ ಅಭಿಪ್ರಾಯವಾದಲ್ಲಿ ನನ್ನನ್ನು ಘೋರ ಯುದ್ಧಕ್ಕೆ ತೊಡಗಲು ಒತ್ತಾಯಿಸುವುದು ಏಕೆ ಎಂದು ಪ್ರಶ್ನಿಸುತ್ತಾನೆ. ಇಲ್ಲಿ ಅರ್ಜುನನು ಜ್ಞಾನಕ್ಕೂ ಕರ್ಮಕ್ಕು ಸ್ವಾಭಾವಿಕ ವಿರೋಧಾಭಾಸವಿದೆ ಎಂದು ಭಾವಿಸಿದಂತೆ ಕಾಣುತ್ತದೆ. ಆದರೆ ನಿಜವಾದ ವಿರೋಧವು ( ಫಲದ ಆಸೆಯ) ಕೀಳು ಮಟ್ಟದ ಕರ್ಮಕ್ಕೂ ಮತ್ತುಜ್ಞಾನದಿಂದ ಒಡಗೂಡಿದ ಬುದ್ಧಿಯ ಕರ್ಮಕ್ಕೂ ಇರುವುದು. ಇಡೀ ಮೂರನೆಯ ಅಧ್ಯಾಯವು ಹಾಗೂ ಬಹಳಷ್ಟು ನಾಲ್ಕನೆಯ ಅಧ್ಯಾಯವು ಈ ವಿಷಯದ ಬಗೆಗೆ ಸ್ಪಷ್ಟ ವಿವರಣೆಯನ್ನು ಮೂಡಿಸಲು ಮುಡುಪಾಗಿದೆ.ಭಿನ್ನ ಸ್ವಭಾವ ಉಳ್ಳವರಿಗಾಗಿ ಅವರವರ ಮೋಕ್ಷ ಸಿದ್ಧಿಗಾಗಿ ಜ್ಞಾನ ಯೋಗ ಮತ್ತು ಕರ್ಮಯೋಗ ಎಂಬ ಎರಡು ಮಾರ್ಗಗಳನ್ನು ಪರಮಾತ್ಮನು ತಿಳಿಸಿದರೂ ಸಹ, ಈ ಎರಡು ಮಾರ್ಗಗಳು ವ್ಯಾವರ್ತಕ ಮಾರ್ಗಗಳಲ್ಲ. ಜ್ಞಾನ ಎಂದೂ ಸಂಪೂರ್ಣ ಕರ್ಮ ನಿಷೇಧವಲ್ಲ. ಏಕೆಂದರೆ ಈಗಾಗಲೇ ತಿಳಿಸಿರುವಂತೆ ಸಂಪೂರ್ಣ ಕರ್ಮ ನಿಷೇಧವು ಭೌತಿಕವಾಗಿ ದುಸ್ಸಾಧ್ಯ. ಪ್ರಾಕೃತರು ಸೇವಕರಂತೆ ಕರ್ಮವನ್ನು ಮಾಡುತ್ತಿದ್ದರೆ, ಕರ್ಮಯೋಗಿಗಳು ಪ್ರಭುಗಳಂತೆ ಕರ್ಮವನ್ನು ಮಾಡುತ್ತಾರೆಂಬುದು ಗಮನಿಸಬೇಕಾದ ವಿಷಯವಾಗಿದೆ. ಪ್ರಕೃತಿಯ 3 ಗುಣಗಳಾದ ಸತ್ವ, ರಜಸ್ ಮತ್ತು ತಮೋ ಗುಣಗಳು, (ಕರ್ಮಯೋಗಿಯು ಈ ಗುಣಗಳ ಮೇಲೆ ಪ್ರಭುತ್ವವನ್ನು ಸಾಧಿಸಿದ್ದ ರಿಂದ ) ಅವನಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ.

## ಪ್ರಕೃತಿಯ ಮೂರು ಮೂಲಭೂತ ಶಕ್ತಿಗಳು

ಕರ್ಮಯೋಗಿಯಾಗಲು ಇಚ್ಚಿಸುವವರಿಗೆ ಈಮೂರು ಗುಣಗಳು ಹೇಗೆ ಪ್ರಭಾವ ಬೀರುತ್ತದೆ ಎನ್ನುವುದರ ಬಗೆಗೆ ಸ್ಪಷ್ಟ ಜ್ಞಾನವು ಇರುವುದು ಅತ್ಯವಶ್ಯ. ಹದಿನಾಲ್ಕನೆಯ ಮತ್ತು ಹದಿನೆಂಟನೆಯ ಅಧ್ಯಾಯಗಳಲ್ಲಿ ಇವುಗಳ ಬಗೆಗೆ ಒಂದು ಸಾಮಾನ್ಯ ವಿವರಣೆ ನೀಡಲಾಗಿದೆ. ಇಲ್ಲಿ ಈಗ ಮೂರು ಶ್ಲೋಕಗಳ ಭಾಷಾಂತರವನ್ನು ಕೊಡುತ್ತೇವೆ." ಎಲೈ ಮಹಾಬಾಹುವೇ , ಸತ್ವ ,ರಜ ,ತಮ ಎಂಬ ಪ್ರಕೃತಿಯಿಂದ ಉಂಟಾಗುವ ಗುಣಗಳು ದೇಹದಲ್ಲಿ ಅವ್ಯಯನಾದ ದೇಹಿಯನ್ನು ಬಂಧಿಸುವವು. ಇವುಗಳಲ್ಲಿ ಸತ್ವವು ನಿರ್ಮಲ ವಾಗಿರುವುದರಿಂದ ಪ್ರಕಾಶಕವೂ ಅನಾಮಯವು ಆಗಿದ್ದು ಸುಖ ಸಂಗದಿಂದಲೂ ಜ್ಞಾನಸಂಗದಿಂದಲೂ ಬಂಧಿಸುತ್ತದೆ. ರಜಸ್ಸು ರಾಗಾತ್ಮಕವಾಗಿರುವುದೆಂದು ತಿಳಿ, ಅದು ತೃಷ್ಣೆ , ಆಸಂಗ[ಎಂದರೆ ಸಿಕ್ಕಿರುವ ವಿಷಯದಲ್ಲಿ ಮನಸ್ಸು ಸುಖಿಸುವುದು ಎಂಬ ಅಂಟು] ಇವುಗಳನ್ನು ಉಂಟುಮಾಡುವುದು. ಅದು ಕರ್ಮಸಂಗದಿಂದ ದೇಹಿಯನ್ನು

ಬಂಧಿಸುತ್ತದೆ. ತಮಸ್ ಆದರೋ ಅಜ್ಞಾನಜವೆಂದೂ ಸರ್ವದೇಹಿಗಳನ್ನೂ ಮೋಹಪಡಿಸುವುದೆಂದು ತಿಳಿ. ಅದು ಪ್ರಮಾದ ,ಆಲಸ್ಯ, ಮತ್ತು ನಿದ್ರೆ ಗಳಿಂದ ಬಂಧಿಸುತ್ತದೆ." ಹಾಗಾಗಿ, ಈ ಮೂರು ಸ್ವಭಾವಗಳು ಸರ್ವದಾ ಪರಸ್ಪರ ವರ್ತಿಸುತ್ತವೆ. ನಮ್ಮ ಪ್ರತಿಯೊಂದು ಕಾರ್ಯವೂ, ಇವುಗಳಲ್ಲಿ ಒಂದು ಶಕ್ತಿಯಿಂದ ಪ್ರಚೋದಿತವಾಗಿರುತ್ತದೆ. ಹಾಗೆಂದು ಈ ಶಕ್ತಿಗಳು ಒಂದೊಂದು ಪ್ರತ್ಯೇಕವಾಗಿ ತಮ್ಮ ವಿಶೇಷ ಕ್ಷೇತ್ರದಲ್ಲಿ ವರ್ತಿಸುತ್ತವೇ ಎಂದು ತಿಳಿಯಬಾರದು. ಅವು ಏಕಕಾಲಕ್ಕೆ ವಿವಿಧ ಸಂಯೋಜನೆಯಲ್ಲಿ ಪ್ರವರ್ತಿಸಿ ಬೇರೆ ಬೇರೆ ರೀತಿಯ ಪರಿಣಾಮಗಳನ್ನು ಉಂಟು ಮಾಡುತ್ತವೆ. ಯಾವುದೇ ಒಬ್ಬ ವ್ಯಕ್ತಿಯಲ್ಲಿ ಇವುಗಳಲ್ಲಿ ಯಾವುದಾದರು ಒಂದುಶಕ್ತಿಯು ಪ್ರಬಲವಾಗಿದ್ದು ಆ ವ್ಯಕ್ತಿಯ ಕಾರ್ಯದ ಆಯ್ಕೆಯನ್ನು ನಿರ್ಧರಿಸುತ್ತದೆ. ಆತನ ಆಯ್ಕೆ ಹಾಗೂ ಕಾರ್ಯವು ಆತನ ಮೇಲೆ ಹಾಗೂ ಸುತ್ತಲಿನ ಪರಿಸರದ ಮೇಲೆ ತನ್ನ ಪ್ರತಿಕ್ರಿಯೆಯನ್ನು ಹಾಗೂ ಪ್ರಭಾವವನ್ನು ಬೀರುತ್ತದೆ. ನಿರ್ಮೋಹಯುಕ್ತ ಕರ್ಮವು ಕರ್ಮಯೋಗದ ಮುಖ್ಯ ಸಿದ್ಧಾಂತ.ಇದೀಗ ಕರ್ಮಯೋಗವು ತನ್ನಷ್ಟಕ್ಕೆ ತಾನು ನಿರುಪದ್ರವಿ ಎಂದು ನಮ್ಮ ಎಲ್ಲಾ ಉಪದ್ರವಗಳೂ ತ್ರಿಗುಣಗಳಿಂದ ಉಂಟಾದ ಕಾರ್ಯದೊಡನೆ ನಾವು ಇಟ್ಟ ಸಂಗವೇ ಕಾರಣ ಎಂದು ಕರ್ಮಯೋಗವು ಬೋಧಿಸುತ್ತದೆ. "ಪ್ರಕೃತೇರ್ಗುಣಸಮ್ಮೂಢಾಃ ಸಜ್ಜನ್ತೇ ಗುಣಕರ್ಮಸು"3:29." ಗುಣಗಳ ಸ್ವಭಾವವನ್ನು ತಿಳಿಯದವರು ( ಅಜ್ಞರು)ತಮ್ಮ ಕರ್ಮಗಳಿಗೆ ಬಂಧಿತರಾಗುತ್ತಾರೆ." ಇಷ್ಟನ್ನು ನಾವು ಸರಿಯಾಗಿ ಅರಿತು ಈ ಒಂದು ಪ್ರಮಾದವನ್ನು ದೂರವಿರಿಸಿದರೆ ಕರ್ಮವು ಒಂದು ಭಯಪಡಿಸುವ ಭೂತವಾಗುವ ಬದಲು ಕೇವಲ ಒಂದು ಆಟ ವಾಗುತ್ತದೆ.

## ಸಂಗವೆಂದರೇನು?

ಸಂಗವೆಂದರೆ ಅಹಂತೆಯೇ. ಯಾವಾಗ ಯಾವುದೇ ಕರ್ತೃವು ತನ್ನನ್ನೇ ಮರೆತು ಕರ್ಮದಲ್ಲಿ ತೊಡಗುತ್ತಾನೋ ಅಥವಾ ಕೆಲಸದಲ್ಲಿ ತನ್ಮಯನಾಗಿ ತಾನು ಕರ್ಮದಲ್ಲಿ ತೊಡಗಿದ್ದೇನೆ ಎಂಬುದನ್ನು ಮರೆಯುತ್ತಾನೋ ಆಗ ಉತ್ಕೃಷ್ಟ ಕಾರ್ಯವು ಹೊರಹೊಮ್ಮುತ್ತದೆ ಎನ್ನುವುದು ಎಲ್ಲೆಲ್ಲೂ ಕಂಡಿದೆ.ಆದರೆ ಜನರು ತಮ್ಮ ಅಂತಃಕರಣದ ಮುಂದೆ ತಮ್ಮ ಸಣ್ಣದಾದ ಅಹಮಿಕೆಯನ್ನು ವಿಶದವಾಗಿ ತಂದುಕೊಂಡು ತಾವು ಮಾಡುವ ಇಡೀ ಕಾರ್ಯವನ್ನು ಹಾಳುಗೆಡವುವ ತಪ್ಪನ್ನು ನಿರಂತರ ಮಾಡುತ್ತಾರೆ. ನಾನು ಎಂಬ ಭಾವ ಬಂದೊಡನೆ ನಾವು ಕಾರ್ಯದ ಬಗೆಗೆ ಇರಬೇಕಾದ ಗಮನವನ್ನು ಕಳೆದುಕೊಳ್ಳುವೆವು. ಈ ಒಂದು ಅಸಂಗವನ್ನು ಸಾಧಿಸಲು ಮತ್ತು ನಾವು ಮಾಡುವ ಕಾರ್ಯಗಳಲ್ಲಿ ಪ್ರಾವೀಣ್ಯತೆಯನ್ನು ಸಾಧಿಸಲು ಅನುಕೂಲವಾಗಲೆಂದು ಕರ್ಮಫಲತ್ಯಾಗವನ್ನೇ ಗೀತೆಯು

ಬೋಧಿಸುತ್ತದೆ. ನಾವು ನಿಜವಾದ ಕರ್ಮಯೋಗಿಗಳು ಆಗಬೇಕೆಂದಲ್ಲಿ ನಾವು ಅಸಂಗರಾಗಿಯೂ ಫಲದ ಆಸೆಯನ್ನು ತೊರೆದವರಾಗಿಯೂ ಕರ್ಮವನ್ನು ಮಾಡುವವರಾ ಗಬೇಕು.ಏತಾನ್ಯಪಿ ತು ಕರ್ಮಾಣಿ ಸಂಙ್ಗಂತ್ಯಕ್ತ್ವಾ ಫಲಾನಿಚ ;ಕರ್ತವ್ಯಾನೀತಿ ಮೇ ಪಾರ್ಥ ನಿಶ್ಚಿತಂ ಮತಂ ಉತ್ತಮಮ್"(XIII-6). " ಆದರೆ ಪಾರ್ಥನೆ, ಈ ಕರ್ಮಗಳನ್ನು ಕೂಡ ಸಂಗವನ್ನೂ ಫಲಗಳನ್ನೂ ಬಿಟ್ಟು ಮಾಡಬೇಕು ಎಂಬುದು ನನ್ನ ನಿಶ್ಚಿತವಾದ ಉತ್ತಮ ಮತವು".

" ನಿಸ್ಸಂಗ ಕರ್ಮದ" ಈ ಸುಲಭ ತತ್ವವು ಕೆಲವೊಂದು ಕಡೆಗಳಲ್ಲಿ ನಿರೀಕ್ಷಿಸಲಾಗದ ತೊಂದರೆಗಳನ್ನು ತಂದೊಡ್ಡಿದೆ. ಗೀತೆಯು ಇದನ್ನು ಜೀವನದ ಸಾರ್ಥಕತೆಗೆ ಮಾರ್ಗ ಹಾಗೂ ಎಲ್ಲ ನೀತಿ ಶಾಸ್ತ್ರಗಳ ಸಾರವನ್ನು ಒಳಗೊಂಡದ್ದು ಎಂದು ಪದೇಪದೇ ಹೇಳಿದೆ. ಆದರೂ ಕೆಲವೊಂದು ವಿಮರ್ಶಕರು ಇದೇ ಅತ್ಯಂತ ವಿಷಪೂರಿತ ತತ್ವವೆಂದು ಆಲೋಚಿಸುವಲ್ಲಿ ಉತ್ಸುಕರಾಗಿದ್ದಾರೆ. ರೆವರೆಂಡ್ ಜೆ. ಲಾಜರಸ್ ಇವರು ಈ ತತ್ವದ ಬಗೆಗೆ ಈ ಕೆಳಕಂಡ ರೀತಿಯ ಟೀಕೆಯನ್ನು ಮಾಡಿದ್ದಾರೆ." ಅಸಂಗರಾಗಿ ಕರ್ಮವನ್ನು ಮಾಡುವುದೆಂದರೆ ಗುರಿಯಿಲ್ಲದೆ ಅಥವಾ ಉದ್ದೇಶರಹಿತವಾಗಿ ಕ್ರಿಯೆ ಎಸಗುವುದು, ಕ್ರಿಯೆಯಲ್ಲಿ ಯಾವುದೇ ನೋವಾಗಲಿ ನಲಿವಾಗಲಿ ಯಾವುದನ್ನು ಅನುಭವಿಸದೆ ಇರುವುದು, ಹಾಗೂ ಕ್ರಿಯೆಯ ಫಲದ ಅಥವಾ ಪರಿಣಾಮದ ಬಗೆಗೆ ಯೋಚಿಸದಿರುವುದು ಆಗಿದೆ. ಹಾಗಾದಲ್ಲಿ ಅಸಂಗದ ಕರ್ಮವೆನ್ನುವುದು ಸಹಕಾರಿಕವಾದ ಉದ್ದೇಶ, ಅನುಭವ, ಮತ್ತು ಪರಿಣಾಮ ಈ ಮೂರನ್ನು ತೊರೆದದ್ದಾಗಿದೆ . ಮನುಷ್ಯರು ಕೇವಲ ಪ್ರಾಣಿಗಳು ಅಥವಾ ಸ್ವಯಂಪ್ರಜ್ಞೆ ಇಲ್ಲದ ಜೀವಿ ಎನಿಸಿಕೊಂಡು, ಸಹಜ ಪ್ರವೃತ್ತಿಯಿಂದ ಕರ್ಮ ಮಾಡುವವರಾಗುತ್ತಾರೆ. ಈ ಮೂರರಲ್ಲಿ ಯಾವುದೊಂದರ ಸಂಗವಾದರೂ ಕರ್ಮವು ಪಾಪದಿಂದ ಒಡಗೂಡಿದ್ದು ಎನಿಸುತ್ತದೆ. ಪ್ರಜ್ಞಾಜೀವಿಯಾದ ಮನುಷ್ಯನು, ಹುಚ್ಚನೋ ಉನ್ಮತ್ತನೋ ಆದಹೊರತು ಅಸಂಗನಾಗಿ ಕರ್ಮವನ್ನು ಮಾಡುವುದು ದುಸ್ಸಾಧ್ಯ. ಇದರಲ್ಲಿ ದೈಹಿಕ ಅಂಶವಷ್ಟೇ ಅಲ್ಲದೇ ನೈತಿಕ ಅಂಶವು ಇಲ್ಲದ್ದು ಆಗಿರುತ್ತದೆ; ಈ ರೀತಿಯ ಒಂದು ಕರ್ಮವೇ ಸಾಧ್ಯವಿಲ್ಲ. ಅರ್ಜುನನು ಮಾನವನಾಗಿದ್ದು ತನ್ನ ಬಂಧುಗಳಾದ ಶತ್ರುಗಳ ಮೇಲೆ ಬಾಣಗಳ ಗುರಿ ಇಡುವಾಗ ತನ್ನ ದಯೆ ಮತ್ತು ಅನುಕಂಪಗಳನ್ನು ತೊರೆದವನು ಹೇಗೆ ಆಗುತ್ತಾನೆ? ಅತ್ಯಂತ ಘೋರ ಪಾತಕವನ್ನು ಮಾಡುವವರಿಗೂ ಕೂಡ ಅದರ ಜವಾಬ್ದಾರಿಯಿಂದ ಹೊರಬರಲು ಅಸಂಗ ಕರ್ಮವು ಅನುವು ಮಾಡಿಕೊಡುತ್ತದೆ. ಶ್ರೀ ರಾಂಡ್ ಅವರನ್ನು ಕೊಲೆ ಮಾಡಿದ ಪಾತಕಿಯು ಗೀತೆಯನ್ನು ಕೈಯಲ್ಲಿ ಹಿಡಿದು ನೇಣುಗಂಬಕ್ಕೆಹೋದನು. ಈ ಪುಸ್ತಕದಲ್ಲಿ ಇದುವೇ ಅತ್ಯಂತ ವಿಷಯುಕ್ತವಾದ ತತ್ವ ಎಂದು ನನ್ನ ಹೆದರಿಕೆ( ರೆವರೆಂಡ್ ಜಿ ಲಾಸರಸ ಅವರ

ಭಗವದ್ಗೀತೆಯ  ಮೇಲಿನ ಭಾಷಣಗಳು).ಗೀತಾಕಾರನು ಹೇಳದೇ ಇದ್ದ ತತ್ವವನ್ನು ಹೇಳಿದ್ದೆಂದು ಸಾಧಿಸಲು ಈ ಟೀಕೆಯು ಅತ್ಯಂತ ಪ್ರಯಾಸ ಪಟ್ಟಿರುವುದೇ ಅಲ್ಲದೆ ಗೀತೆಯು ಒಂದು ವಿಷಪೂರಿತ ತತ್ವವನ್ನು ಸಾರಿದೆ ಎಂಬ ದೋಷಯುಕ್ತ ತೀರ್ಪನ್ನು ಹೇಳಿದೆ. ಸ್ವತಹ ದೋಷಪೂರಿತವಾದ ಈ

ವಿಮರ್ಶೆಯನ್ನು  ಅಲ್ಲಗಳೆಯುವುದಕ್ಕೋಸ್ಕರ, ನಾವು ನೈಜ ತತ್ವವನ್ನು ವಿವರಿಸುವ ಅಗತ್ಯವಿದೆ. ಅಸಂಗ ಕರ್ಮ ಎಂದರೆ  ಕೇವಲ"ಗುರಿಯಿಲ್ಲದ ಅಥವಾ ಉದ್ದೇಶ ರಹಿತ  ಕರ್ಮವನ್ನು ಎಸಗುವುದು ಮತ್ತು ಆ  ಕರ್ಮದ ಮುಂದಿನ   ಫಲದ  ಬಗೆಗೆ ನಿರ್ಯೋಚನೆಯಿಂದ ಇರುವುದು"ಎಂದು  ಏನೂ  ಅಲ್ಲ. ಯಾವುದೇ ಒಂದು ಉದ್ದೇಶವಿಲ್ಲದೆ ಕರ್ಮವನ್ನೆಸಗುವುದು ಒಬ್ಬ ಹುಚ್ಚ ನಿಗೂ ದುಸ್ಸಾಧ್ಯ, ಹುಚ್ಚನಿಗೂ ತನ್ನ ನಡತೆಗೆ ಅವನದೇ ಆದ ಒಂದು ಭ್ರಮೆ ಇರುತ್ತದೆ. ಎಲ್ಲಾ ಕಾರ್ಯಗಳು ಚಲನೆಗಳಿಂದ ಕೂಡಿರುತ್ತದೆ ,ಮತ್ತುಚಲನೆಗೆ ಗುರಿಯಿರಬೇಕು, ಆದ್ದರಿಂದ ಕರ್ಮಕ್ಕೆ ಒಂದು ಉದ್ದೇಶವನ್ನು ಹೊಂದಿರುವುದು ಅತ್ಯವಶ್ಯ. ಆಶ್ಚರ್ಯವೆಂದರೆ ನಿಷ್ಕ್ರಿಯತೆಗೂ ಸಹ ಒಂದು ಉದ್ದೇಶವಿರುತ್ತದೆ. ಈ ಅರ್ಥದಲ್ಲಿ, ನಿಷ್ಕ್ರಿಯತೆಯೂ ಸಹ ಕ್ರಿಯೆಯ  ವಿಭಿನ್ನ ರೂಪ ಎನ್ನಬಹುದು ಎಂಬುದನ್ನು ಗೀತೆಯು ಸಂಪೂರ್ಣವಾಗಿ  ಒಪ್ಪುತ್ತದೆ. ಅದಲ್ಲದೆ, ಅಸಂಗ ಕ್ರಿಯೆಯೆನ್ನುವುದು ನಿರ್ಭಾವನೆಯಿಂದ  ಮಾಡುವ ಕ್ರಿಯೆ ಎನಿಸುವುದಿಲ್ಲ. ಕಾರಣವೆಂದರೆ, ಮನುಷ್ಯನು ಸ್ವಾಭಾವಿಕವಾಗಿ ಭಾವನಾಜೀವಿ, ಮತ್ತು ಅವನ   ಪ್ರತಿಯೊಂದು ಕ್ರಿಯೆಯು ಸಹ ಒಂದು ಸಂಬಂಧಿತ ಭಾವನೆಯನ್ನು ಉಂಟು ಮಾಡುತ್ತದೆ. ಹೀಗೆ ಬೆಂಕಿಯನ್ನು ಮುಟ್ಟಿದರೂ ಸಹ ಸುಡುವಿಕೆಯ ಅನುಭವವಾಗದು ಎಂದು ಎಣಿಸುವುದು ಮೊಂಡುವಾದವೇ ಸರಿ. ಅಸಂಗ ಕರ್ಮವೆಂದರೆ" ಮುಂದಿನ ಫಲದ ಬಗೆಗೆ ನಿರ್ಯೋಚನೆಯಿಂದ ಇರುವುದು" ಎಂದೇನು ಅಲ್ಲ. ಕೇವಲ ಒಬ್ಬ ಹುಚ್ಚನೋ ಅಥವಾ  ಉನ್ಮತ್ತ  ಕೊಲೆಗಡುಕನೋ ಈ ರೀತಿಯ ಯೋಚನೆಯ ಮಟ್ಟಕ್ಕೆ ಇಳಿದಾನು. ಫಲದ ಅಪೇಕ್ಷೆ ಇರದ ಕರ್ಮದ ಬಗೆಗೆ ಗೀತೆಯು ಹೀಗೆ ವಿವರಿಸುತ್ತದೆ:" ಅನುಬನ್ಧಂ ಕ್ಷಯಂ, ಹಿಂಸಾಮನಪೇಕ್ಷ್ಯ  ಚ ಪೌರುಷಂ; ಮೋಹಾದಾರಭ್ಯತೆ ಕರ್ಮ ಯತ್ತತ್ತಾಮಸ  ಮುಚ್ಯತೆ (18-25).  "ನಂತರದ ಪರಿಣಾಮಗಳನ್ನೂ , ಅದಕ್ಕೆ ತೆರಬೇಕಾದ ಮೌಲ್ಯ / ಶಕ್ತಿಯ ಲಭ್ಯತೆಯನ್ನೂ, ಅದರಲ್ಲಿ ತೊಂದರೆಗಳನ್ನೂ, ಇವುಗಳನ್ನು ಯಾವುದನ್ನೂ ಲೆಕ್ಕಿಸದೆ ಮಾಡುವ ಕಾರ್ಯವು ತಾಮಸವಾದ ಕಾರ್ಯವೆನಿಸುತ್ತದೆ".  ಇದರ ಬದಲಾಗಿ ಉತ್ತಮ ಕಾರ್ಯವು ಹೀಗಿರುತ್ತದೆ ಎಂದು ಗೀತೆಯು ವಿವರಿಸುತ್ತದೆ:" ನಿಯತಂ ಸಂಗ ರಹಿತಂ ಅರಾಗ ದ್ವೇಷತಃ  ಕೃತಂ; ಅಫಲಪ್ರೇಪ್ಸುನಾ  ಕರ್ಮ  ಯತ್ತತ್ ಸಾತ್ವಿಕಂ ಉಚ್ಯತೇ//18-23)." ನಿಯತವಾಗಿ ಸಂಗ ರಹಿತವಾಗಿ ರಾಗದ್ವೇಷಗಳಿಲ್ಲದೆ ಫಲವನ್ನು ಪಡೆಯಬೇಕೆಂಬ ಇಚ್ಛೆ

ಇಲ್ಲದವನು ಮಾಡಿದ ಕರ್ಮವಿದೆಯಲ್ಲ ಅದು ಸಾತ್ವಿಕ (ಉತ್ತಮ) ಎನಿಸುತ್ತದೆ". ಆದ್ದರಿಂದ, ಕರ್ಮಯೋಗವು ನಮ್ಮನ್ನು ಕೇವಲ ಪ್ರಾಣಿಗಳಂತೆ ಸಹಜ ಪ್ರವೃತ್ತಿಯಿಂದ ತಳ್ಳಲ್ಪಟ್ಟಂತೆ ಕರ್ಮವನ್ನು ಮಾಡಬೇಕೆಂದು ಹೇಳುತ್ತಿಲ್ಲ. ಕರ್ಮಯೋಗವು ತ್ರಿವಳಿಗಳಾದ ಉದ್ದೇಶ, ಭಾವನೆ, ಮತ್ತು ಪರಿಣಾಮ ಇವುಗಳನ್ನು ತೊರೆದ ಕರ್ಮ ಎಂದೆನಿಸದು. ಗೀತೆಯು ನಮ್ಮನ್ನು ಉಚ್ಚತಮ ಉದ್ದೇಶಗಳನ್ನೂ, ಅತ್ಯುತ್ತಮ ಮನೋಭಾವವನ್ನೂ, ಮತ್ತು ಯಾವಾಗಲೂ ಅತ್ಯಂತ ಹೆಚ್ಚಿನ ಒಳ್ಳೆಯ ಪರಿಣಾಮವನ್ನು ತನಗಾಗಲಿ , ಬೇರೆಯವರಿಗೇ ಆಗಲಿ ಕನಿಷ್ಠ ತೊಂದರೆಯೊಳಗೆ ಪೂರೈಸುವ ಕರ್ಮದಲ್ಲಿ ತೊಡಗಿಕೊಳ್ಳಲು ಹೇಳುತ್ತದೆ. " ಸಂಗರಹಿತ ಕರ್ಮ" ಎಂದರೇನೆಂಬುದು ಈವೇಳೆಗೆ ಓದುಗರಿಗೆ ಸ್ಪಷ್ಟವಾಗಿ ಅರ್ಥವಾಗಿದೆ ಎಂದು ಕೊಳ್ಳಲಾಗಿದೆ . ಈ ಹಿಂದೆ ಹೇಳಲಾದ ಮೂರು ಮೂಲ ಗುಣಗಳಿಂದ ಪ್ರಭಾವಿತನಾಗಿ ಮನುಷ್ಯನು ತನ್ನನ್ನೇ ಆ ಗುಣಗಳ ಪ್ರಭಾವಕ್ಕೆ ಒಡ್ಡಿಕೊಂಡವನಾಗಿ ಅವುಗಳ ಹಿಂಬಾಲಕ ಆಗುವ ವಿಲಕ್ಷಣತೆಯನ್ನು ಉಳ್ಳವನಾಗುತ್ತಾನೆ. " ನಾನು ಇದನ್ನು ಮಾಡುವವನು, ಇವುಗಳು ನಾನು ಮಾಡಬೇಕಾದವು"( 16-13) ಎಂದು ತನಗೆ ತಾನು ಹೇಳಿಕೊಳ್ಳುತ್ತಾನೆ. ಈ ಆಲೋಚನೆಯು ಮನಸ್ಸಿಗೆ ಬಂದೊಡನೆ,ಈ ಅಹಂಕಾರದಿಂದ ಅವನ ಶಕ್ತಿ ಹ್ರಾಸವು ಆಗುತ್ತದೆ. ಇದಕ್ಕಿಂತ ಉತ್ತಮ ಮನಸ್ಥಿತಿ ಇದೆ,ಮನುಷ್ಯನು ಆ ಉತ್ತಮ ಮನಸ್ಸಿನವನಾದಾಗಲೇ ಆತನ ಕಾರ್ಯಗಳು ಉತ್ತಮವಾಗುವುದು ಎಂದು ಗೀತೆಯು ಬೋಧಿಸಿದೆ. ಪ್ರಪಂಚದೆಲ್ಲೆಡೆ ಮಹಾಪುರುಷರಿಂದ ಅತ್ಯುತ್ತಮ ಫಲವುಂಟಾದಾಗಲೆಲ್ಲ, ಆ ಮಹಾಪುರುಷರು ತಿಳಿದೋ, ತಿಳಿಯದೆಯೋ ತಮ್ಮ ಮನಸ್ಸಿನ ಶಕ್ತಿಯನ್ನು ಈ ಮಟ್ಟಕ್ಕೆ ಏರಿಸಿಕೊಂಡಿರುತ್ತಾರೆ." ನಾನು " ಎಂಬ ಭಾವನೆಗೆ ಅಂಟಿಕೊಂಡಿರುವುದೇ ಅಂದರೆ ಸಂಗರಕ್ತಿ ಇರುವುದೇ ಈ ಉತ್ತಮ ಮನಶಕ್ತಿಯನ್ನು ನಾವು ಹೊಂದಲು ಇರುವ ಅಡ್ಡಿ ಎಂದು ಗೀತೆಯು ಹೇಳುತ್ತದೆ. ಈ ಉತ್ತಮ ಮನಸ್ಥಿತಿಯನ್ನು ಪ್ರಜ್ಞಾಪೂರ್ವಕವಾಗಿ ಹೊಂದಬೇಕೆಂದಲ್ಲಿ ನಮ್ಮ ಸಣ್ಣತನಕ್ಕೆ ಇರುವ ಸಂಗದ ಅಂಟನ್ನು ತೊರೆಯಬೇಕು, ನೇರವಾದ ಪದಗಳಲ್ಲಿ ಹೇಳಬೇಕೆಂದರೆ ನಾವು ನಿಸ್ವಾರ್ಥರಾಗಬೇಕು. ಈ ತತ್ವ ಹಿಂದೂ ಮತದ, ಅಷ್ಟೇಕೆ ವಿಶ್ವದ ನೀತಿ-ನಿಯಮಗಳ ಆಧಾರ. ಎಲ್ಲಾ ಮತಗಳು ನಾನು (ಅಹಂ ) ಎಂಬ ಕೆಳಮಟ್ಟದ ಅನಿಸಿಕೆಯನ್ನು ನಾಶ ಮಾಡಲು ಬೋಧಿಸುತ್ತದೆ. ಅವರಆತ್ಮವನ್ನು ಅಥವಾ ಅಹಂಕಾರವನ್ನು ನಾಶಮಾಡಬೇಕು ಎಂಬುದೇ ಎಲ್ಲ ಮತಗಳ ಸಾರಾಂಶ. ಈ ಕೀಳುತನ ಹೋಗುವವರೆಗೆ ಔನ್ನತ್ಯವನ್ನು ಹೊಂದಲು ಸಾಧ್ಯವಿಲ್ಲ." ತನ್ನತನಕ್ಕಿಂತ ಯಾರಾದರೂ ತನ್ನನ್ನು ಔನ್ನತ್ಯಕ್ಕೆ ಏರಿಸಿಕೊಳ್ಳದಿದ್ದರೆ ಆ ಮನುಷ್ಯನು ಎಷ್ಟು ಸಣ್ಣವನು" ಎಂದು ಒಬ್ಬ ಕವಿಯು ಹೇಳಿರುವನು.

ಫಲತ್ಯಾಗ ಎಂದರೇನು? ಫಲವನ್ನು ಬಿಟ್ಟುಬಿಡುವುದು ಎಂದೇ? ಅದು ಕರ್ಮದಿಂದ ಮುಂದೆ ಆಗಬಹುದಾದ ಅರ್ಥ ಅನರ್ಥಗಳನ್ನು ನಿರ್ಲಕ್ಷಿಸುವುದು ಎಂದಲ್ಲ, ಆದರೆ ತನ್ನೊಬ್ಬನ ಲಾಭ ಅಥವಾ ನಷ್ಟವನ್ನು ಪರಿಗಣಿಸದೇ ಇರುವುದು ಮತ್ತು ತನ್ನ ಕೃತ್ಯದಿಂದ ಏನು ಗಳಿಸಬಹುದು ಎಂಬುದನ್ನು ಯೋಚಿಸದೆ ಇರುವುದು. ದೊರಕಬಹುದಾದ ಕ್ಷುಲ್ಲಕ ,ತಾತ್ಕಾಲಿಕ ಲಾಭದಯೋಚನೆ ಮಾಡುತ್ತಾ, ನಾವು ನಮ್ಮ ಶಕ್ತಿ ಹ್ರಾಸ ಮಾಡಬಾರದು. ತನ್ನ ವ್ಯಕ್ತಿಗತ ಲಾಭವನ್ನು ಲೆಕ್ಕಿಸದೆ ಕರ್ಮ ಮಾಡುವವನ ಕರ್ಮದಿಂದಲೇ ಶಾಶ್ವತ ಫಲ ಉಂಟಾಗಲು ಸಾಧ್ಯ. ಎಲ್ಲಾ ಮತ ಸ್ಥಾಪಕರಲ್ಲೂ ನಿಷ್ಕಾಮಕರ್ಮವೇ ಎದ್ದು ತೋರುವುದು. ಅವರು ತಮ್ಮ ಕೃತ್ಯಗಳಿಂದ ತಮಗೆ ಒದಗಬಹುದಾದ ಫಲ ಅಥವಾ ಅನುಕೂಲವಷ್ಟನ್ನೇ ಪರಿಗಣಿಸಿದ್ದಿದ್ದರೆ ಮಿಕ್ಕ ಸಹಸ್ರಾರು ಪುರುಷರು ಹೇಗೆ ವಿಸ್ಮೃತಿಯಲ್ಲಿ ಮುಳುಗಿಹೋದರೋ ಹಾಗೆಯೇ ಆಗುತ್ತಿದ್ದರೇ ಹೊರತು ಮಹಾತ್ಮರಾಗುತ್ತಿರಲಿಲ್ಲ.

ಪಲತ್ಯಾಗ ಹಾಗೂ ತತ್ವವು ಅಸಾಧ್ಯವೂಅಲ್ಲ ಅಸಂಬದ್ಧವೂ ಅಲ್ಲ. ಈ ತತ್ವವು ಹುಚ್ಚರಿಗೋ ಅಥವಾ ಉನ್ಮತ್ತರಿಗೋ ಹೇಳಿದ್ದಲ್ಲ ಆದರೆ ತಮಗಾಗಿ ಯಾವುದೇ ಪ್ರತಿಫಲ ಬಯಸದೆ ಪ್ರಪಂಚದ ಒಳಿತಿಗಾಗಿ ಶ್ರಮಿಸಬಲ್ಲ ಧೀರಶೂರ ಆತ್ಮಗಳಿಗಾಗಿ ಹೇಳಿರುವುದಾಗಿದೆ. ಯಾವ ಕರ್ಮದಲ್ಲಿ ಸಂಗವೂ ಫಲಾಭಿಸಂಧಿಯೂ ಇರುವುದಿಲ್ಲವೋ ಅಲ್ಲಿ ಬಯಕೆಗಳು ಇಲ್ಲ, ಅನೈತಿಕತೆ ಇಲ್ಲ ಅಥವಾ ಅನ್ಯ ಅಪೇಕ್ಷೆಗಳು ಇಲ್ಲ. ಹಾಗಿರುವ ಕರ್ಮದಲ್ಲಿ ಅಡಗಿರುವ ನೈತಿಕ ಹಾಗೂ ಭೌತಿಕ ಶಕ್ತಿಗಳು ಅತ್ಯಂತ ವಿಶಾಲ ಕ್ಷೇತ್ರದಲ್ಲಿ ತಮ್ಮ ಸಂಪೂರ್ಣ ಪ್ರಭಾವವನ್ನು ಬೀರಬಲ್ಲವು.

ಗಮನಿಸಬೇಕಾದ ಇನ್ನೊಂದು ಸಂಗತಿ ಎಂದರೆ ಗೀತೆಯು ಬೇರೆಯ ತರನಾದ ಕರ್ಮಗಳನ್ನು ತುಚ್ಛೀಕರಿಸಿಲ್ಲ, ಈ ಹೊತ್ತಿಗೆಯ ಪ್ರಕಾರ ಸ್ವಾರ್ಥ ಕರ್ಮವು ಪಾಪಕರ್ಮವು ಆಗಬೇಕಾದದ್ದಿಲ್ಲ, ನ಼ಿಸ್ವಾರ್ಥ ಕರ್ಮವೇ ನಮ್ಮ ಗುರಿಯೇನೋ ಹೌದು ಆದರೆ ಎಲ್ಲರಿಗೂ ಅದನ್ನು ಸಾಧಿಸಲಾಗದು. ಆದ್ದರಿಂದ ಅಗತ್ಯವಿದ್ದಲ್ಲಿ ಸ್ವಾರ್ಥಪರ ಕರ್ಮವನ್ನು ನಡೆಸಬಹುದು, ನಿಜಕ್ಕೆಂದರೆ ಮೈಗಳ್ಳತನಕ್ಕಿಂತ (ಸ್ವಾರ್ಥಪರವಾದ ಉದ್ದೇಶದಿಂದ) ಕರ್ಮದಲ್ಲಿ ತೊಡಗುವುದು ಮೇಲು." ನಿಷ್ಕರ್ಮಕ್ಕಿಂತ ಕರ್ಮವು ಮೇಲು"(III-8). ಸೋಮಾರಿತನವನ್ನು ಹೋಗಲಾಡಿಸಲು ಮೊದಲನೆಯ ಮೆಟ್ಟಿಲೆಂದರೆ ಕರ್ಮದಲ್ಲಿ ತೊಡಗುವುದು. ನಮ್ಮಲ್ಲಿನ

ಬಹಳಷ್ಟು ಜನಕ್ಕೆ ಈ ಹಂತಕ್ಕಿಂತ ಮೇಲೇರುವುದು ಸಾಧ್ಯವಿಲ್ಲ. ನಾವು ಉದ್ದೇಶದಿಂದಲೇ ಒಂದಲ್ಲೊಂದು ಕೆಲಸವನ್ನು ಮಾಡುತ್ತೇವೆ. ಹಣಕ್ಕಾಗಿ ದುಡಿಯುತ್ತಿರುವವರು ಕೆಲವರು ತಾವು ಕುಬೇರನ ಐಶ್ವರ್ಯವನ್ನು ಗಳಿಸಿದಾಗ್ಯೂ ತೃಪ್ತರಲ್ಲ. ರೋಮ್ ಸಾಮ್ರಾಜ್ಯದ ಒಬ್ಬ ಕೋಟ್ಯಾಧೀಶ ಒಂದು ದಿನ ತನ್ನಲ್ಲಿ ಕೇವಲ ಒಂದು ಕೋಟಿ ಪೌಂಡ್ಗಳಷ್ಟೇ ಇರುವುದೆಂದು ಅರಿತು, ಅತೀವ ದುಃಖದಿಂದ ತೀರಿಕೊಂಡ ಎನ್ನುವಂತೆ, ಈ ಜನರು ತಮ್ಮ ಐಶ್ವರ್ಯದಲ್ಲಿ ಆಕಸ್ಮಿಕವಾಗಿ ಒಂದು ಭಾಗ ಕಡಿಮೆಯಾದಲ್ಲಿ ಕುಸಿಯುತ್ತಾರೆ. ಮತ್ತೆ ಕೆಲವರು ಅಧಿಕಾರಕ್ಕಾಗಿ ದುಡಿಯುವವರು. ಅವರ ದೃಷ್ಟಿಯಲ್ಲಿ ಅಧಿಕಾರವಿಲ್ಲದ್ದು ಏನಕ್ಕು ಬಾರದು. ಸರ್ವಶಕ್ತನು ಎನಿಸದ ದೈವವೂ ಅವರಿಗೆ ದೈವ ಎನಿಸದು. ಪ್ರತಿಯೊಂದನ್ನೂ ಅಧಿಕಾರದ ನೆಲೆಗಟ್ಟಿನಲ್ಲಿ ಬೆಲೆ ಕಟ್ಟುತ್ತಾರೆ. ಹಾಗಾಗಿ ಅವರಿಗೆ ಜ್ಞಾನವು ಅಧಿಕಾರ, ಹಣವು ಅಧಿಕಾರ, ಸಮಯವು ಅಧಿಕಾರ,. ಜ್ಞಾನವಾಗಲೀ ,ಹಣವಾಗಲೀ ಅಥವಾ ಸಮಯವಾಗಲೀ ಅಧಿಕಾರವನ್ನು ಗಳಿಸುವಲ್ಲಿ ಉಪಯೋಗಕ್ಕೆ ಬಂದರೆ ಅದಕ್ಕೆ ಬೆಲೆ ನೀಡುತ್ತಾರೆ. ಹಾಗಾಗಿ ಅವರು ಅಧಿಕಾರಕ್ಕಾಗಿ ದುಡಿಯುತ್ತಾರೆ. ಇನ್ನು ಕೆಲವರು ಜ್ಞಾನಕ್ಕಾಗಿ ದುಡಿಯುವವರು. ಮತ್ತೆ ಯಾವುದೇ ಗುರಿಗಾಗಿ ದುಡಿಯುವುದು ಅವರಿಗೆ ಸಮಾಧಾನವಿಲ್ಲ. ಜ್ಞಾನ ಎನ್ನುವುದು ಎಷ್ಟೊಂದು ಸುಂದರ ಎಷ್ಟೊಂದು ಉತ್ಕೃಷ್ಟ! ಹಣವಾಗಲೀ, ಅಧಿಕಾರವಾಗಲೀ ಜ್ಞಾನದ ಮುಂದೆ ತೃಣ. ಹೆಸರು ಗಳಿಸಲೋ, ಕೀರ್ತಿ ಹೊಂದಲೋ, ಮನ್ನಣೆಗೋ ದುಡಿಯುವವರು ಇನ್ನೂ ಕೆಲವರು. ಇದೇ ರೀತಿ ವಿವರಿಸಲಾಗದ ಅಸಂಖ್ಯಾತ ಉದ್ದೇಶಗಳು ದುಡಿಯುವುದಕ್ಕೆ ಇರುವುದು. ಗೀತೆಯು ಈ ಯಾವುದೊಂದನ್ನೂ ಹಳಿದಿಲ್ಲ ಎನ್ನುವುದನ್ನು ಗಮನಿಸುವುದು ಒಳಿತು. ಒಂದು ಅಥವಾ ಹಲವು ಸ್ವಾರ್ಥ ಉದ್ದೇಶಗಳಿಗಾಗಿ ಕರ್ಮದಲ್ಲಿ ತೊಡಗುವುದು ತನ್ನಷ್ಟಕ್ಕೆ ತಾನೇ ಪಾಪಕರ್ಮವಾಗುವುದಿಲ್ಲ. ಈ ಲೋಕದ ಅಥವಾ ಪರಲೋಕದ ಅನುಕೂಲತೆಗಳಿಗಾಗಿ ಮಾಡಿದ ಕರ್ಮಗಳ ಬಗೆಗೆ ಗೀತೆಯು ಏನೂ ಆಕ್ಷೇಪಿಸುವುದಿಲ್ಲ. ನಿಷ್ಕ್ರಿಯನಾಗಿ ಕಾಲ ಕಳೆಯುವುದನ್ನು ಎಂತ ಸಂದರ್ಭದಲ್ಲೂ ಒಪ್ಪುವುದಕ್ಕೆ ಆಗದು." ನಿಯತಂ ಕರ್ಮ ಕುರು ತ್ವಂ"( III-8)." ಯಾವಾಗಲೂ ಕರ್ಮಿಯಾಗಿರು" ಎನ್ನುವುದನ್ನೂ ವಿಧಿಸುತ್ತದೆ.

ಆದರೆ ವಿವೇಚನಾಯುಕ್ತ ಮನುಷ್ಯನು ಇಂದಲ್ಲ ನಾಳೆ ಇನ್ನೂ ಹೆಚ್ಚಿನ ಉದ್ದೇಶಗಳನ್ನು ಮನಗಾಣಬೇಕು. ಐಶ್ವರ್ಯಕ್ಕಾಗಿ , ಅಧಿಕಾರಕ್ಕಾಗಿ ಅಥವಾ ಕೀರ್ತಿಗಾಗಿ ಕರ್ಮವನ್ನು ಎಸಗುವುದು ಒಳ್ಳೆಯದೇ ಆದರೂ ಕರ್ಮವನ್ನು ನಮ್ಮ ಕರ್ತವ್ಯವೆಂದು ಮಾಡುವುದು ಹೆಚ್ಚಿನದು. ಪ್ರಪಂಚದ ಒಳಿತಿಗಾಗಿ ಮಾಡುವ ಕರ್ಮವು ಮೇಲ್ಮಟ್ಟದ್ದಾಗುತ್ತದೆ. ಕರ್ಮಕ್ಕಾಗಿಯೇ ಕರ್ಮವನ್ನು ಮಾಡುವುದು ಇನ್ನೂ ಉತ್ತಮ ಉದ್ದೇಶವಾಗುತ್ತದೆ. ನಮಗೆ ಸಂತೋಷವನ್ನು ಉಂಟುಮಾಡುವುದು ಎಂದೋ, ಮತ್ತೊಬ್ಬರಿಗಾಗಿ ನಾವು ಮಾಡಬೇಕಾದ ಕರ್ತವ್ಯ ಎಂದೋ

ಪ್ರಪಂಚಕ್ಕೆ ಒಳಿತನ್ನು ಉಂಟು ಮಾಡಿ ಅದರ ಉದ್ಧಾರ ಆಗುವುದೆಂದೋ ಮಾಡುವ ಕರ್ಮಕ್ಕಿಂತ ಅದು ಬುದ್ಧಿಪೂರ್ವಕವಾದ  ಒಳ್ಳೆಯ ಕರ್ಮ ಎನ್ನುವುದೇ ಆದರ್ಶವಾದಲ್ಲಿ ಮನುಷ್ಯನು ಈಗಿನ ಪ್ರಪಂಚದಲ್ಲಿ ತಲುಪಬಹುದಾದ ಅತ್ಯುತ್ತಮ ಮಟ್ಟವಾಗುತ್ತದೆ. ಯಾವಾಗಲೂ ಒಳ್ಳೆಯದನ್ನೇ ಮಾಡುವುದು ಮತ್ತು ಒಳ್ಳೆಯದನ್ನೇ ಪ್ರೀತಿಸುವುದು ತನ್ನಷ್ಟಕ್ಕೆ ತಾನೇ  ಒಂದು ಸರಿಸಮಾನ ಇಲ್ಲದ ದೈವೀಕೃಪೆ. ನಿರಂತರ ಹಾಗೂ ನಿಸ್ವಾರ್ಥ ಕರ್ಮದಿಂದ ಉಂಟಾದ ಎಂದಿಗೂ ಬತ್ತದ ಸಂತೋಷದ ಚಿಲುಮೆಯ ರಸಾಸ್ವಾದವೇ ಮನುಷ್ಯನನ್ನು ಉತ್ತೇಜಿಸಬಲ್ಲ ಅತ್ಯುತ್ತಮ ಉದ್ದೇಶವು.

ಗೀತೆಯ ಟೀಕಾಕಾರಾದ ರೆವರೆಂಡ್ರವರು ಉಪಯೋಗಿಸಿರುವ "ಕರ್ಮದ ಸಹವರ್ತಿ" ಬಗೆಗೆ ಹೇಳಲು ಇನ್ನೊಂದು ಪದವು ಉಳಿದಿದೆ. ಕರ್ಮದ ಉದ್ದೇಶ ಮತ್ತು ಪರಿಣಾಮಗಳ ಬಗೆಗೆ ವಿವರಿಸಿದ್ದಾಯಿತು. ಇನ್ನು "ಭಾವನೆ"ಯ ಬಗೆಗೆ ಹೇಳುವುದಿದೆ. ನಮ್ಮ ಯಾವ ಭಾವನೆಯಿಂದಾಗಿ ನಾವು ನಮ್ಮ ಕರ್ಮಗಳ ಬಗೆಗೆ ಉತ್ತೇಜಿತರಾಗುತ್ತೇವೆ? ಸಾತ್ವಿಕ ಕರ್ಮವನ್ನು" ಅ ರಾಗದ್ವೇಷ ತಃ ಕೃತಂ" ಎಂದು ನಿರೂಪಿಸಲಾಗಿದೆ. ನಮ್ಮ ಕರ್ಮವು ಪ್ರೀತಿಯ ಅಥವಾ ದ್ವೇಷದ ಪರಿಣಾಮವಾಗಬಾರದು. ಅನೇಕಬಾರಿ ಯಾವುದೋ ಒಂದುಭಾವೋದ್ವೇಗದಿಂದ  ಉತ್ತೇಜಿತರಲ್ಲದೆ ಕರ್ಮವನ್ನು ಕೈಗೊಳ್ಳಲಾಗದು ಎಂದು ಭಾವಿಸುತ್ತೇವೆ. ಭಾವನೆಯು ಕರ್ಮದ ಅಗತ್ಯ ಸಹವರ್ತಿ ಎನ್ನುವುದು ನಿಜ , ಆದರೆ ಸಾಮಾನ್ಯವಾಗಿ ನಮಗಿರುವ ಆವೇಶಪೂರ್ಣವಾದ ಭಾವೋದ್ರೇಕವು ಅವಶ್ಯಕತೆ ಎನಿಸುವುದಿಲ್ಲ. ನಿಜವೆಂದರೆ ನಮ್ಮ ಭಾವನೆಗಳು ಕರ್ಮಕ್ಕೆ ಅನುವಾಗುವ ಬದಲು ಹಾಳುಗೆಡವುವುದು. ನಮಗೆ ಇರಲೇಬೇಕಾದ ಭಾವನೆಯೆಂದರೆ ಶಾಂತ ಹಾಗೂ ನಿಶ್ಚಲಮನಸ್ಸು. ಅತ್ಯುತ್ತಮ ಸಾಧನೆಯು ನಿಶ್ಚಲ ಹಾಗೂ ಏಕೀಕೃತ ಚಿತ್ತದಿಂದ ಮಾತ್ರ ಸಾಧ್ಯ. ಹಾಗೆಂದೇ ಗೀತೆಯಲ್ಲಿ" ಯೋಗ ಸ್ಯ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ ;ಸಿದ್ಧ್ಯಸಿದ್ಧ್ಯೋ ಸಮೋ ಭೂತ್ವ"!(೨-೪೮)." ಎಲೈ ಧನಂಜಯನೇ, ಯೋಗದಲ್ಲಿ ಇದ್ದುಕೊಂಡು ಸಂಗವನ್ನು ಬಿಟ್ಟು, ಸಿದ್ಧಿ,ಅಸಿದ್ಧಿ ಇವೆರಡರಲ್ಲಿಯೂ ಸಮವಾಗಿದ್ದುಕೊಂಡು ಕರ್ಮಗಳನ್ನು ಮಾಡು". ಇಲ್ಲಿ ಯೋಗವೆಂದರೆ ಏನೆಂದು ನಾವು ತಿಳಿದು ನಮ್ಮನ್ನು ಯೋಗದಲ್ಲಿ ತೊಡಗಿಸಿಕೊಳ್ಳಬೇಕು.

ಸಮತ್ವಂ" ಯೋಗಮು ಉಚ್ಯತೇ(೨-೪೮)." ಸಮತ್ವವು ಯೋಗ ವೆನಿಸುವುದು"

ಕರ್ಮವನ್ನು ಮಾಡುವಾಗ ಪ್ರತಿಯೊಬ್ಬರೂ ಉನ್ನತ ಮನಸ್ಥಿತಿಯಾದ ಸಮತ್ವದಲ್ಲಿ ,ಚಿತ್ತದ ಸಮತೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವ ಪ್ರಯತ್ನ ಪಡಬೇಕು. ಪ್ರೀತಿಯೋ, ದ್ವೇಷವೋ , ಕೋಪವೋ ಅಥವಾ ಯಾವುದೋ ಭಾವೋದ್ರೇಕಕ್ಕೆ ಒಳಗಾದ ಮನುಷ್ಯನಿಂದ ನೈಜ ಹಾಗೂ ಉಪಯೋಗಿ ಕರ್ಮವು ಆಗುವುದಿಲ್ಲ, ಬದಲಾಗಿ ಪ್ರಶಾಂತ ಮತ್ತು ಸಮಚಿತ್ತದ ಪ್ರಭುತ್ವ ಸಾಧಿಸಿದ ವ್ಯಕ್ತಿಯಿಂದಲೇ ಸಾಧ್ಯವು. ಈ ಸಮತ್ವ ಅಥವಾ ನಿಶ್ಚಲ ಸಮಚಿತ್ತವೇ ಗೆಲುವಿನ ಗುಟ್ಟು. ಭಾವೋದ್ರೇಕಕ್ಕೆ ಒಳಗಾದ ಮನುಷ್ಯನು ಯಾವಾಗಲೂ ಅವಸರದಲ್ಲಿ ಇರುತ್ತಾನೆ. ಕಾರಣವೆಂದರೆ ಏನಾದರೂ ಮಾಡಬೇಕೆಂದು ನಿರ್ಧರಿಸುವಷ್ಟರಲ್ಲಿ ಅವನ ಮನಸ್ಸು ಮತ್ತೊಂದೆಡೆಗೆ ಹರಿಹಾಯ್ದಿರುತ್ತದೆ. ಯಾವಾಗಲೂ ಭಾವೋದ್ರೇಕಕ್ಕೆ ಅಡಿಯಾಳಾಗಿರುವವನಿಂದ ನಿಪುಣತೆಯು ಎಲ್ಲಿಂದ ಬರಬೇಕು? ಅದಕ್ಕೆ ಬದಲಾಗಿ ಸಮಚಿತ್ತದವರು ಯಾವಾಗಲೂ ಬಿಡುವನ್ನು ಸಾಧಿಸುವರು. ಒಲವು ಮತ್ತು ಉದ್ದೇಶಗಳನ್ನು ಚೆನ್ನಾಗಿ ತೂಗಬಲ್ಲರು. ಸಮಚಿತ್ತದ ಮನಸ್ಸು ಯುಕ್ತ ಯೋಜನೆ ಯುಕ್ತ ನಿರ್ಧಾರ ಮತ್ತು ಯುಕ್ತ ಆಯ್ಕೆಗಳನ್ನು ಮಾಡಬಲ್ಲದು. "ತಸ್ಮಾತ್ ಯೋಗಾಯ ಯುಜ್ಯಸ್ವ ಯೋಗಃಕರ್ಮ ಸು ಕೌಶಲಂ(೨-೫೦)." ಆದ್ದರಿಂದ ಯೋಗಕ್ಕೆ ಹೊಂದಿಸಿಕೋ. ಯೋಗವು ಕರ್ಮಗಳಲ್ಲಿ ಕೌಶಲವು". ಈ ಸಮಚಿತ್ತದಿಂದ ಮಾಡಿದ ಕರ್ಮವೇ ಚತುರ ಹಾಗೂ ಬುದ್ಧಿವಂತಿಕೆಯ ಕರ್ಮವೆನಿಸುವುದು.

## ಕರ್ತವ್ಯದ ಬಗೆಗೆ ಗೀತೆಯ ಹೇಳಿಕೆ

ಇದೀಗ ಅರ್ಜುನನು ಯುದ್ಧಮಾಡಲು ಒಪ್ಪದಿದ್ದಾಗ ಏಕೆ ಶ್ರೀ ಕೃಷ್ಣನು ಅವನನ್ನು ಹೇಡಿ ಎಂದು ಕರೆದಿದ್ದು ಎಂಬುದನ್ನು ಅರ್ಥಮಾಡಿಕೊಳ್ಳಬಹುದು. "ಎಲೈಅರ್ಜುನನೇ , ಇಂತಹ ವಿಷಮ ಸಂದರ್ಭದಲ್ಲಿ ನಿನಗೆ ಬುದ್ಧಿ ಮಾಲಿನ್ಯವು ಏಕೆ ಬಂದಿತು. ಇದು ಅನಾರ್ಯರು ಮಾತ್ರ ಹೊಂದತಕ್ಕದ್ದು ,ನರಕ ಸಾಧನವಾದದ್ದು , ಅಪಯಶಸ್ಸನ್ನು ಉಂಟುಮಾಡತಕ್ಕದ್ದು. ಪಾರ್ಥನೆ ಹೇಡಿತನವನ್ನು ಹೊಂದದಿರು; ಇದು ನಿನಗೆ ತಕ್ಕದ್ದಲ್ಲ. ಎಲೆ, ಶತ್ರುತಾಪನನೇ , ಅತಿ ತುಚ್ಚವಾದ ಹೃದಯ ದೌರ್ಬಲ್ಯವನ್ನು ಬಿಟ್ಟುಏಳು." ಅರ್ಜುನನು

ಒಬ್ಬ  ಮನುಷ್ಯನಾಗಿ ಮತ್ತು ಬಂಧುವಾಗಿ ಶತ್ರುಗಳ ಬಗೆಗೆ ಸ್ವಾಭಾವಿಕವಾದ ಕನಿಕರಪಟ್ಟನು. ಒಬ್ಬ ಸಾಧಾರಣ ಮರ್ತ್ಯನಂತೆ ಮಿತಿಮೀರಿದ ದಯೆ ಮತ್ತು ಕರುಣೆಯಿಂದ ಬಾಧಿತನಾಗಿ ತಾನು ಯುದ್ಧ ಮಾಡಲು ನಿರಾಕರಿಸಿದನು. ಆದರೆ ಈ ಸಂದರ್ಭದಲ್ಲಿ ಈ ಬಾವೋನ್ಮಾದಕ್ಕೆ  ತನ್ನನ್ನು ತಾನೇ  ಒಳಪಡಿಸಿಕೊಳ್ಳಬಾರದಿತ್ತು. ಒಬ್ಬ ಯೋಧನ ಉತ್ಸಾಹದಿಂದ ಪ್ರೇರೇಪಿಸಲ್ಪಟ್ಟು ಯುದ್ಧ ಮಾಡಲು ಬಂದಿದ್ದ ಪಾರ್ಥನು  ತನ್ನ ಬಂಧುಗಳ ಮೇಲಿನ ಪ್ರೀತಿಯಿಂದ ಕರುಣೆಯನ್ನು ಹೊಂದಿದ್ದು ದೌರ್ಬಲ್ಯಕ್ಕೆ ಈಡಾದನು. ಮೊದಲು ವೀರೋತ್ಸಾಹಕ್ಕೆ   ಒಳಪಟ್ಟಿದ್ದವನು ಮತ್ತೊಂದು ಕ್ಷಣದಲ್ಲಿಯೇ ಅನುಕಂಪೆ ಮತ್ತು  ಪ್ರಾಪಂಚಿಕ ಪ್ರೇಮಕ್ಕೆ  ಈಡು ಮಾಡಿಕೊಂಡಿದ್ದು, ಪ್ರಾಯಶಹ ಮತ್ತೂಂದು ಕ್ಷಣದಲ್ಲಿ ತನಗೆ ಮತ್ತು ತನ್ನ ಅಣ್ಣ-ತಮ್ಮಂದಿರಿಗೆ ವೈರಿಗಳು ಮಾಡಿದ್ದ ಅವಮಾನಗಳನ್ನು ಜ್ಞಾಪಿಸಿಕೊಂಡವನಾಗಿ  ತನ್ನ ಮನಸ್ಸನ್ನು ಬದಲಾಯಿಸಿ ತನ್ನ ಘಾತುಕವಾದ ಬಾಣಗಳಿಂದ ವೈರಿಗಳನ್ನು ಹೊಡೆಯಲು ಸಿದ್ಧವಾಗುವ ಸಾಧ್ಯತೆ ಇತ್ತು. ಈ ರೀತಿ ಮಾಡಬಾರದೆಂದು ಶ್ರೀಕೃಷ್ಣನು ಅವನನ್ನು ಎಚ್ಚರಿಸಿದನು.  "ಯದ್ಯಹಂಕಾರ ಮಾಶ್ರಿತ್ಯ ನ ಯೋತ್ಸ್ಯ  ಇತಿ ಮನ್ಯಸೇ! ಮಿಥ್ಯೇಷ ವ್ಯವಸಾಯಸ್ತೇ ಪ್ರಕೃತಿ ಸ್ತ್ವಾಂ   ನಿಯೋಕ್ಷ್ಯತಿ!! ಸ್ವಭಾವಜೇನ ಕೌಂತೇಯ ನಿಬದ್ಧಃ  ಸ್ವೇನ  ಕರ್ಮಣಾ!  ಕರ್ತುಂ  ನೇಚ್ಚಸಿ ಯನ್ಮೋಹಾತ್ ಕರಿಷ್ಯಸ್ಯ ವಶೋಪಿ  ತತ್!!".( 18:59, 60)." ಅಹಂಕಾರವನ್ನು ಆಶ್ರಯಿಸಿ ಕಾದುವುದಿಲ್ಲ ಎಂದು ಎಣಿಸುವೆಯಾದರೆ  ಈ ನಿನ್ನ  ವ್ಯವಸಾಯವು ವ್ಯರ್ಥವು .  ಪ್ರಕೃತಿಯು ನಿನ್ನನ್ನು ಕಟ್ಟುಮಾಡುವುದು. ಸ್ವಭಾವಜವಾದ ನಿನ್ನ ಕರ್ಮದಿಂದ ನಿಬದ್ಧನಾಗಿ ಮೋಹದಿಂದ ಯಾವುದನ್ನುಈಗ ಮಾಡಲೊಲ್ಲೆ ಎನ್ನುತ್ತಿರುವೆಯೋ ಅದನ್ನು  ಅವಶನಾಗಿಯಾದರೂ ಮಾಡುವೆ". ಈ ರೀತಿಯಾಗಿ ಒಂದು ಭಾವೋದ್ರೇಕಕ್ಕೆ ಒಳಗಾಗಿ ಮತ್ತು ಅದರಂತೆ ಕರ್ಮಗಳಲ್ಲಿ ತತ್ಕ್ಷಣವೇ  ತೊಡಗಿಕೊಳ್ಳುವುದನ್ನು ಹೇಡಿತನವೆಂದು ಶ್ರೀಕೃಷ್ಣನು ನ್ಯಾಯವಾಗಿಯೇ ಹೀಯಾಳಿಸಿದ್ದಾನೆ. ಅರ್ಜುನನು  ಒಬ್ಬ  ವೀರನಂತೆ ಹೋರಾಡುವ ಬದಲು ಭಾವೋದ್ರೇಕಕ್ಕೆ  ದಾಸನಾಗಿ ಅದರಿಂದ ತಳ್ಳಲ್ಪಟ್ಟವನಂತೆ ಹೋರಾಡುದಿರುವುದನ್ನು ಆಯ್ಕೆಮಾಡಿದ.ಇದು ಅರ್ಜುನನ  ನೈಜಸ್ಥಿತಿಯಾದರೂ ಇದಕ್ಕೆ ವಿರುದ್ಧವಾದ ಹೇಳಿಕೆಗಳನ್ನು ನೀಡಿದ. ಯುಕ್ತಾಯುಕ್ತ  ಪರಿಜ್ಞಾನದ ದೃಷ್ಟಿಯಲ್ಲಿ, ಹೋರಾಡದೇ  ಇರುವ ನಿರ್ಧಾರವು ಅವನು ಐಶ್ವರ್ಯ, ಕೀರ್ತಿ , ಗೌರವಗಳನ್ನು ಗಳಿಸಲು ತಾನಾಗಿಯೇ ಒದಗಿದ ಒಂದು ಅಪೂರ್ವ ಸಂದರ್ಭವನ್ನು ಕಳೆದುಕೊಳ್ಳುವ ನಿರ್ಧಾರವಾಗಿತ್ತು. ತನ್ನ ರಾಜ್ಯದ ಮೇಲೆ ಬಂದ ಘೋರ ಆಪತ್ತನ್ನು ನಿವಾರಿಸಲು ಧರ್ಮಯುತವಾದ  ಯುದ್ಧವನ್ನು ಮಾಡುವುದು ಒಬ್ಬ ರಾಜನ ಕರ್ತವ್ಯ ಎಂಬ ನೈತಿಕಹೊಣೆಯ ದೃಷ್ಟಿಯಿಂದ ನೋಡಿದಾಗ   ಅರ್ಜುನನು  ತನ್ನ  ನೈತಿಕ ಹೊಣೆಯಿಂದ ಜಾರಿಕೊಳ್ಳುತ್ತಿದ್ದ. ಪಾಂಡವರ ಮತ್ತು ಕೌರವರ ಮಧ್ಯೆ

ನಡೆದ ಯುದ್ಧ ಕೇವಲ ಪಕ್ಷಗಳ ನಡುವಿನ ಯುದ್ಧವಾಗದೆ ಧರ್ಮ ಮತ್ತುಅಧರ್ಮದ ನಡುವಿನ ಹೋರಾಟವಾಗಿತ್ತು. ಕೇವಲ ಭಾವಾತಿರೇಕಕ್ಕೆ ಒಳಪಟ್ಟು, ಇಂತಹ ಹೋರಾಟವನ್ನು ಕೈಬಿಟ್ಟನೆಂದರೆ ಅರ್ಜುನನು ಒಂದು ಘೋರ ನೈತಿಕ ಅನ್ಯಾಯ ಮಾಡುವವನಾಗಿದ್ದನು. ತಾತ್ವಿಕ ನೆಲೆಗಟ್ಟಿನಿಂದ ನೋಡಿದಾಗ ಅರ್ಜುನನ ಯುದ್ಧಮಾಡೆನೆಂಬ ನಿರ್ಧಾರವು ನೈತಿಕ ಪತನಕ್ಕೆ ಈಡುಮಾಡುತ್ತಿತ್ತು. ಇದು ಅಪರಿಮಿತ ,ಹುಟ್ಟು-ಸಾವುಗಳಿಲ್ಲದ ಆತ್ಮನಿಗೆ ಮಿತಿ ಕಲ್ಪಿಸುವುದಕ್ಕಿಂತ ಏನು ಕಡಿಮೆಯದಲ್ಲ. ನೈಜ ವೇದಾಂತದ ಜ್ಞಾನವಿಲ್ಲದೆ ಅರ್ಜುನನು ದುಃಖದಲ್ಲಿ ಮುಳುಗಿದವನಾಗಿದ್ದನು. ಜ್ಞಾನಿ ಯಾವುದೇ ಕರ್ಮವನ್ನು ಅದು ಕೆಟ್ಟದ್ದೆಂದು ದೂರವಿರಿಸುವುದಾಗಲಿ ಮತ್ತೊಂದನ್ನು ಒಳ್ಳೆಯದೆಂದು ಅನಗತ್ಯವಾದರೂ ಆಹ್ವಾನಿಸಿ ಕೊಳ್ಳುವುದಾಗಲೀ ಮಾಡದೆ ,ತನ್ನ ಮನಸ್ಸಿನ ಸಮಚಿತ್ತವನ್ನು ಕಳೆದುಕೊಳ್ಳದೆ, ಫಲಾಫಲಗಳ ಬಗೆಗೆ ನಿರ್ಯೋಚನೆಯಿಂದ ಆಸನ್ನವಾದ ತನ್ನ ಕರ್ತವ್ಯವನ್ನು ಮಾಡುವನು. ಆದರೆ ದುಃಖತಪ್ತನಾದ ಅರ್ಜುನನು ಈ ರೀತಿಯ ವಿವೇಚನೆ ಮಾಡದಾದನು. ಆದ್ದರಿಂದ ಶ್ರೀಕೃಷ್ಣನು ಅರ್ಜುನನ್ನು ಒಬ್ಬ ಹೇಡಿ ಎಂದು ಬಗೆದನು. ಕೇವಲ ಯುದ್ಧಮಾಡಲು ಹಿಂಜರಿದನೆಂಬ ಕಾರಣವಷ್ಟೇ ಅಲ್ಲದೆ ತನ್ನ ಕರ್ತವ್ಯದಿಂದ ವಿಮುಖನಾದುದರಿಂದಲೂ, ತತ್ವ ಹಾಗೂ ಧರ್ಮದ ಸತ್ಯತೆಯನ್ನು ಎದುರಿಸುವ ಧೈರ್ಯವಿಲ್ಲದವನಾದರೂ ಎಲ್ಲವನ್ನು ಬಲ್ಲವನಂತೆ ವಾದಮಾಡಿದ ಅರ್ಜುನನನ್ನು ಕಂಡು ಶ್ರೀಕೃಷ್ಣನು ಆತನು ವಿವೇಚನೆ ಕಳೆದುಕೊಂಡ ಹೇಡಿ ಎಂದು ಹೀಗಳೆದನು.

ಕೆಲವು ತೋರಿಕೆಯ ವಿದ್ಯಾರ್ಥಿಗಳು ತಪ್ಪಾಗಿ ಅರ್ಥೈಸಿದಂತೆ ಗೀತೆಯು ಯುದ್ಧದ ತತ್ವವನ್ನು ಬೋಧಿಸುವುದಿಲ್ಲ. ಇನ್ನು ತಾವೇನು ಹೇಳುತ್ತಿದ್ದೇವೆ ಎಂಬುದನ್ನೇ ತಿಳಿಯದವರು ಚಿತಾವಣೆ ಮಾಡುವಂತೆ ಘನಘೋರ ಅಪರಾಧಗಳ ಸಮರ್ಥನೆಯನ್ನು ಗೀತೆಯು ಮಾಡುವುದಿಲ್ಲ. ಗೀತೆಯು ಕರ್ಮಯೋಗದಲ್ಲಿ ಭೋಧಿಸುವುದೇನೆಂದರೆ, ಭಾವೋದ್ರೇಕಕ್ಕೆ ಒಳಗಾಗದೆ, ನಮ್ಮ ಆಗಾಗಿನ ಕರ್ತವ್ಯಗಳನ್ನು ಬಿಟ್ಟುಬಿಡದೆ, ಇನ್ನೂ ಹೆಚ್ಚಿನದೇನೆಂದರೆ ಕರ್ತವ್ಯವನ್ನು ಮೀರಿ ಒದಗಿದ ಕರ್ಮವನ್ನು ನಿಶ್ಚಲ ಹಾಗೂ ಸಮಾಧಾನದಿಂದ ಮಾಡಬೇಕು. ನಮ್ಮ ಜೀವನದ ಕ್ಷೇತ್ರ ಯಾವುದೇ ಆಗಲಿ ಕರ್ಮವನ್ನು ಭಾವಾತಿರೇಕಕ್ಕೆ ಒಳಪಡದೆ ಸರಿಯಾಗಿ ಅನಾಸಕ್ತನಾಗಿ ನಿರ್ವಹಿಸಬೇಕು ಮತ್ತು ಕರ್ಮವನ್ನು ಕರ್ಮಕ್ಕಾಗಿಯೇ ನಡೆಸಬೇಕು. ಗೀತೆಯಲ್ಲಿ ಬೇರೆಬೇರೆ ಶ್ಲೋಕಗಳಲ್ಲಿ ಬೇರೆಬೇರೆ ವಾಕ್ಸರಣಿಯಲ್ಲಿ ಹೇಳಿರತಕ್ಕಂತಹ "ಆದ್ದರಿಂದ ಹೋರಾಡು" ಎಂಬ ಚರಣವನ್ನು ಈ ಹಿನ್ನೆಲೆಯಲ್ಲಿ ಅರ್ಥೈಸಿದಲ್ಲಿ, ಗೀತೆಯು ನಿಜಜೀವನದ ಉಪದೇಶಕ ಎನ್ನುವ ಹೆಗ್ಗಳಿಕೆಗೆ

ನ್ಯಾಯ ಒದಗಿಸಿದಂತೆ. ಶಾಂತಿಯ ದೂತನಿಗೆ ,ಧರ್ಮಯುದ್ಧದ ಯೋಧನಿಗೆ ಬಡವನಿಗೆ ಹಾಗೂ ಸಿರಿವಂತನಿಗೆ ಪ್ರಜೆ ಹಾಗೂ ಪ್ರಭುವಿಗೆ ಗೀತೆಯ ಒಂದು ಬೋಧನೆಯೆಂದರೆ" ನೀನು ಜೀವನದ ಯಾವ ಘಟ್ಟದಲ್ಲಿಯಾದರೂ ಇರು ನಿನ್ನ ಕರ್ಮವನ್ನು ಸೇವಕನಂತಲ್ಲ ಒಬ್ಬ ವೀರ ಯೋಧನಂತೆ ನಡೆಸು. "ಸ್ವೇ ಸ್ವೇ ಕರ್ಮಣ್ಯಭಿರತಃಸಂಸಿದ್ಧಿಂ ಲಭತೇ ನರಃ; ಸ್ವಕರ್ಮನಿರತಃ ಸಿದ್ಧಿಂ ಯಥಾ ವಿನ್ದತಿ ತಚ್ಛೃಣು". ತನ್ನ ತನ್ನ ಕರ್ಮದಲ್ಲಿ ಅಭಿರತನಾದ ನರನು ಸಂಸಿದ್ಧಿಯನ್ನು ಹೊಂದುತ್ತಾನೆ. ಸ್ವಕರ್ಮ ನಿರತನು ಹೇಗೆ ಸಿದ್ಧಿಯನ್ನು ಹೊಂದುತ್ತಾನೋ ಅದನ್ನು ಹೇಳುವೆನು ಕೇಳು. ಎಲ್ಲರಿಗೂ ಪರಿಪೂರ್ಣತೆ ಎನ್ನುವುದು ಈ ಮಾರ್ಗದಲ್ಲೇ ಸಿದ್ಧ ಸಾಧ್ಯವೂ.

ನಮ್ಮ ಕರ್ಮಮವೇನೆಂಬುದನ್ನು ಹೇಗೆ ಗೊತ್ತು ಮಾಡಿಕೊಳ್ಳುವುದು? "ತಸ್ಮಾತ್ ಶಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ". ಶಾಸ್ತ್ರವೇ ನಿನ್ನ ಕರ್ತವ್ಯವಾವುದು ಕರ್ತವ್ಯವಲ್ಲದ್ದಾವುದು ಎಂಬುದಕ್ಕೆ ಪ್ರಮಾಣವು. ಈ ವಿಷಯದಲ್ಲಿ ನಾವೇನಾದರೂ ನಮ್ಮ ಊಹೆಯ ಮೇಲೆ ನಿರ್ಭರರಾದರೆ ಅನುಮಾನಗಳಿಗೆ ಕೊನೆಯೇ ಇಲ್ಲವಾದ್ದರಿಂದ ನಾವು ನಮ್ಮ ಊಹೆಯ ಮೇಲೆ ಅವಲಂಬಿಸಬಾರದು. ಒಂದು ದೇಶ ಹಾಗೂ ಕಾಲದಲ್ಲಿ ಸರಿಯೆನಿಸಿದ್ದು ಮತ್ತೊಂದು ದೇಶಕಾಲದಲ್ಲಿ ತಪ್ಪಾಗುವುದು. ಒಂದೇ ದೇಶದ ಒಂದೇ ಕಾಲದ ಒಂದೇ ಸ್ಥಿತಿಯಲ್ಲಿರುವ ಬೇರೆಬೇರೆ ವ್ಯಕ್ತಿಗಳಲ್ಲಿ ಯಾವುದು ಸರಿ ಮತ್ತು ಯಾವುದು ತಪ್ಪು ಎಂಬುದರ ಬಗೆಗೆ ಬೇರೆಬೇರೆಯ ಅಭಿಪ್ರಾಯಗಳಿರುತ್ತವೆ. ಒಬ್ಬ ವ್ಯಕ್ತಿ ಅಥವಾ ಸಮಾಜದ ನೈತಿಕತೆಯು ವ್ಯಕ್ತಿಯ ಅತವ ಸಮಾಜ ಯಾವ ಮಟ್ಟಕ್ಕೆ ತನ್ನ ವಿವೇಚನಾಶಕ್ತಿಯನ್ನು ಬೆಳೆಸಿದೆ ಎನ್ನುವುದರಮೇಲೆ ನಿರ್ಧಾರವಾಗುತ್ತದೆ. ಆದರೆ ಇನ್ನೊಂದು ವಿಷಯವೆಂದರೆ ಇದೇ ಕಾರಣಕ್ಕಾಗಿ ಸದಾಚಾರದ ನೀತಿ-ನಿಯಮಗಳು ವಿವೇಚನಾ ಶಕ್ತಿಯ ಮೇಲೆ ಅವಲಂಬಿಸಬೇಕೇ ಹೊರತು ಯಾವುದೇ ಒಂದು ಧರ್ಮಗ್ರಂಥದ ಮೇಲೋ ಅಥವಾ ಒಂದು ಅಧಿಕಾರಸ್ಥ ವ್ಯಕ್ತಿಯ ಮೇಲೋ ಅವಲಂಬಿಸಬಾರದು ಎಂದಾಗುತ್ತದೆ ಅಲ್ಲವೇ? ಹೌದು ಎನ್ನುವುದೇ ಉತ್ತರ. ಗೀತೆಯು ನಾವು ನಮ್ಮ ಕರ್ತವ್ಯ ಪ್ರಜ್ಞೆಯಿಂದ ಪ್ರೇರಿತರಾಗಬೇಕೆ ಹೊರತು ಯಾವುದೇ ಇತರ ಆಸಕ್ತಿಗಳಿಂದಲ್ಲ ಎಂದು ಬೋಧಿಸುತ್ತದೆಯೇ ಹೊರತು ನಮ್ಮ ವಿವೇಚನಾಶಕ್ತಿಯನ್ನು ಕುಂಠಿತಗೊಳಿಸಲು ಹೇಳುವುದಿಲ್ಲ. ಸ್ವಹಿತಾಸಕ್ತಿಯು ಆ ಪದದ ಉಚ್ಚತಮ ಅರ್ಥದಲ್ಲಿ ಗ್ರಹಿಸಿದಾಗ ಕರ್ತವ್ಯ ಪ್ರಜ್ಞೆಗೆ ವಿರುದ್ಧವಾಗಿರುವುದಿಲ್ಲ .ಆದರೆ ನಮ್ಮಲ್ಲಿನ ಅನೇಕರಲ್ಲಿ ಆಸಕ್ತಿ ಎಂಬುದು ಸಾಧಾರಣವಾಗಿ ಯಾವ ಸೀಮಿತ ಕ್ಷೇತ್ರದಲ್ಲಿ ತೊಡಗಿಕೊಳ್ಳುವುದೋ ಅದರ ವಿರುದ್ಧವಾಗಿ ಎಚ್ಚರದಿಂದಿರಬೇಕು. ಮನುಷ್ಯನು ನಿರ್ಬಂಧವಿಲ್ಲದಿದ್ದಾಗ ತಾತ್ಕಾಲಿಕ ಸಂತೋಷವನ್ನು ಆಯ್ಕೆ ಮಾಡುತ್ತಾನೆಯೆಹೊರತು ದೀರ್ಘಕಾಲಿಕ

ಮತ್ತು ಶಾಶ್ವತ ಪ್ರಯೋಜನವನ್ನಲ್ಲ. ಆದರೆ ತನ್ನ ವೈಯುಕ್ತಿಕ ವಿಚಾರಕಷ್ಟೇ ಅಲ್ಲದೆ ತನ್ನನ್ನು ಅನುಭವ ಶಾಲಿಗಳ ಅಭಿಪ್ರಾಯವಾಗಿರುವ ಶಾಸ್ತ್ರದ ಮಾರ್ಗದರ್ಶನಕ್ಕೆ ಒಡ್ಡಿಕೊಂಡಾಗ ಅವನು ದಾರಿ ತಪ್ಪುವ ಸಾಧ್ಯತೆ ಇಲ್ಲ. ನಮ್ಮಲ್ಲಿ ಅನೇಕರಿಗೆ ತಮಗೆ ಅತ್ಯಂತ ಒಳ್ಳೆಯದು ಯಾವುದೋ ಅದನ್ನೇ ಆರಿಸಿಕೊಳ್ಳುವ ಪ್ರಜ್ಞೆ ಇರುವುದಿಲ್ಲ. ಹಾಗಾಗಿಯೇ ಗೀತೆ ಹೇಳುವುದೇನೆಂದರೆ" ಯಃ ಶಾಸ್ತ್ರ ವಿಧಿಮುತ್ಸೃಜ್ಯ ವರ್ತತೇ ಕಾಮಕಾರಕಃ;ನ ಸ ಸಿದ್ಧಿಮಾವಾಪ್ನೋತಿ ನ ಸುಖಂ ನ ಪರಾಂ ಗತಿಮ್" ಯಾವನು ಶಾಸ್ತ್ರವಿಧಿಯನ್ನು ಬಿಟ್ಟು ಕಾಮದ ಪ್ರೇರಣೆಗೆ ಒಳಗಾಗಿ ನಡೆಯುವನೋ ಅವನು ಸಿದ್ಧಿಯನ್ನೂ ಹೊಂದುವುದಿಲ್ಲ, ಸುಖವನ್ನೂ ಹೊಂದುವುದಿಲ್ಲ, ಪರಗತಿಯನ್ನೂ ಹೊಂದುವುದಿಲ್ಲ.

ಮೇಲೆ ತಿಳಿಸಿದಂತೆ ಯಾವುದೇ ಕಾಲಘಟ್ಟದಲ್ಲಿನ ವಿವೇಚನಾ ಶಕ್ತಿಯು ಪಡೆದ ಪರಿಪೂರ್ಣತೆಯ ಘಟ್ಟವನ್ನು ಅವಲಂಬಿಸಿ ಆಗಿನ ನೈತಿಕ ಹೊಣೆಗಳು ನಿರ್ಧಾರವಾಗುತ್ತದೆ. ಈ ಕಾರಣದಿಂದ ನೈತಿಕತೆಯು ನಡತೆಗೆ ಒಂದು ದಾರಿದೀಪವಾಗಬಲ್ಲದಷ್ಟೇ ಆದರೆ ಅದರ ವಿವರಗಳನ್ನು ಆ ಕಾಲಘಟ್ಟದ ಅಗತ್ಯಗಳಿಗೆ ಅನುಸಾರವಾಗಿ ನಿರ್ಧರಿಸಬೇಕು. ಉದಾಹರಣೆಗೆ ಗೀತೆಯ ಕಾಲದಲ್ಲಿ ವರ್ಣಾಶ್ರಮಧರ್ಮ ಯಥಾಯೋಗ್ಯವಾಗಿ ಅನೂಚಾನವಾಗಿ ಬಂದ ಪದ್ಧತಿಯಾಗಿತ್ತು. ಹೀಗಾಗಿ ಗೀತಕಾರನು ಅನೇಕ ಬಾರಿ ವರ್ಣಾಶ್ರಮ ಪದ್ಧತಿಯಿಂದ ಉದ್ಭೂತವಾದ ನಿಯಮಗಳನ್ನು ನೈತಿಕ ನಿಯಮವೆಂದು ಜೀವನದಲ್ಲಿ ಅವುಗಳ ವ್ಯಾವಹಾರಿಕ ಉಪಯೋಗವನ್ನು ತೋರಿಸಲು ಬಳಸಿರುವನು . ನಮ್ಮ ಕಾಲಘಟ್ಟದ ಭಾರತದಲ್ಲಿ ಜಾತಿಯ ಗೊಂದಲ ಗಲಿಬಿಲಿಗಳು ಉಂಟಾಗಿದ್ದರೂ ಎಲ್ಲ ಹಿಂದೂಗಳ ಮನೋನೆಲೆಯಲ್ಲಿ ಗೀತೆಯು ತನ್ನ ಪ್ರಭುತ್ವವನ್ನು ಪಸರಿಸಿದೆಯಷ್ಟೇಅಲ್ಲದೆ ಅನ್ಯಮತೀಯರ ಮೇಲು ಬಹಳಷ್ಟು ಪ್ರಭಾವ ಬೀರಿದೆ . ಕೆಲವರು ಆರೋಪಿಸುವಂತೆ ಗೀತೆಯ ವಿಸ್ತಾರವಾದ ನೈತಿಕ ಕಟ್ಟಡವು ಕೇವಲ ಜಾತಿಪದ್ಧತಿಯ ಬುನಾದಿಯ ಮೇಲೆ ಅಲ್ಲ ಎನ್ನುವುದನ್ನು ಸಾಬೀತುಪಡಿಸಲು ಇಷ್ಟು ಸಾಕು . ಇದರ ಬೋಧನೆಗಳು ಯಾವುದೇ ಜಾತಿಸಹಿತ ಅಥವಾ ಜಾತಿರಹಿತ ಸಮಾಜಕ್ಕೆ ಅನ್ವಯಿಸುವಷ್ಟು ಸಾಮಾನ್ಯ ಗುಣಗಳನ್ನು ಹೊಂದಿದೆ. ವಿಶೇಷವಾಗಿ ಕರ್ಮಯೋಗದ ಬೋಧನೆಗಳು ಸಾವಿರಾರು ವರ್ಷಗಳ ಹಿಂದೆ ಹೇಗೊ ಹಾಗೆಯೇ ಇಂದಿನ ದಿನಮಾನಕ್ಕೂ ಪ್ರಸ್ತುತವೂ.

## ಕರ್ಮಯೋಗಕ್ಕೆ ಬೇಕಾದ ಬಹಳ ಮುಖ್ಯವಾದ ಪ್ರಮುಖ ನಡತೆ

ಕರ್ಮಯೋಗವು ಪ್ರಸ್ತುತಪಡಿಸಿದ ನಡತೆಯ ಸಾಮಾನ್ಯ ನಿಯಮಗಳನ್ನು ಈಗಾಗಲೇ ಪ್ರಸ್ತಾಪಿಸಿದ್ದರೂ ಈಗ ಇವುಗಳಲ್ಲಿ ಅತಿಮುಖ್ಯವಾದವುಗಳನ್ನು ಸಂಕ್ಷಿಪ್ತವಾಗಿ ಹೇಳುವೆವು. "ಯಜ್ಞಾರ್ಥಾತ್ ಕರ್ಮಣೋऽನ್ಯತ್ರ ಲೋಕೋऽಯಂ ಕರ್ಮಬಂಧನಃ;ತದರ್ಥಂ ಕರ್ಮ ಕೌನ್ತೇಯ ಮುಕ್ತ ಸಂಙ್ಗ ಸಮಾಚರ"3:9. ಯಜ್ಞಾರ್ಥವಾಗಿ ಮಾಡುವ ಕರ್ಮವನ್ನು ಬಿಟ್ಟರೆ ಮಿಕ್ಕ ಕಡೆಯಲ್ಲಿ ಲೋಕವು ಕರ್ಮಬಂಧನವಾಗಿರುತ್ತದೆ. ಎಲೈ ಕೌಂತೇಯ ಅದಕ್ಕಾಗಿ ಕರ್ಮವನ್ನು ಸಂಗ ರಹಿತನಾಗಿ ಮಾಡು. ಇದು ಕರ್ಮದಲ್ಲಿ ಅಳವಡಿಸಿಕೊಳ್ಳಬೇಕಾದ ಅಗ್ರಗಣ್ಯ ನಿಯಮ. ಯಾವುದೇ ಕರ್ಮವನ್ನು ಯಜ್ಞವಾಗಿ ಮಾಡದಿದ್ದರೆ ನಾವು ಕರ್ಮಬಂಧನರಾಗುತ್ತೇವೆ. ಯಜ್ಞವೆಂದರೆ ಏನು? ಗೀತೆಯು ನಾಲ್ಕನೆಯ ಅಧ್ಯಾಯದಲ್ಲಿ ಅನೇಕ ವಿಧವಾದ ಯಜ್ಞಗಳನ್ನು ಹೇಳಿರುತ್ತದೆ. ದೈವಯಜ್ಞ, ಬ್ರಹ್ಮಯಜ್ಞ, ತಪೋಯಜ್ಞ, ಜ್ಞಾನಯಜ್ಞ, ಧ್ಯಾನಯಜ್ಞ. ಈ ಎಲ್ಲದರಲ್ಲಿಯೂ ಸ್ವಾರ್ಥತೆಯನ್ನು ತೊರೆಯುವುದು ಎಂಬುದು ಸರ್ವವ್ಯಾಪಿಯಾಗಿದೆ. ನಮ್ಮ ಜೀವನವನ್ನು ಕಲುಷಿತಗೊಳಿಸುವ" ನಾನು ನನ್ನದು" ಎಂಬುದನ್ನು ತೊರೆಯಬೇಕು. ಯಾವ ಕರ್ಮಗಳು ಎಲ್ಲ ಸಮಯದಲ್ಲೂ ಯೋಗ್ಯವಾದದ್ದು ಎನ್ನುವುದನ್ನು ಪಟ್ಟಿ ಮಾಡುವುದು ಬಹುಕಷ್ಟ. ಆದರೆ ಯಾವುದು ನಮ್ಮನ್ನು ನಿಃಸ್ವಾರ್ಥಕ್ಕೆ ಒಯ್ಯುವುದೋ ಅದು ಯೋಗ್ಯವೆಂದು, ಯಾವುದು ನಮ್ಮನ್ನು ಸ್ವಾರ್ಥಿಯಾಗಿಸುತ್ತದೋ ಅದು ಅಯೋಗ್ಯವೆಂದೂ ಸಾಮಾನ್ಯ ನಿಯಮವಾಗಿ ಹೇಳಬಹುದು. ಕರ್ಮಗಳು ನಮ್ಮನ್ನು ಪ್ರಪಂಚಕ್ಕೆ ಬಂಧಿಸುತ್ತದೆಯಾದರೂ, ಸ್ವಾರ್ಥತ್ಯಾಗವು ಕರ್ಮ ಬಂಧನಗಳನ್ನು ಕತ್ತರಿಸುತ್ತದೆ. ಸ್ವಾರ್ಥ ತ್ಯಾಗದಿಂದ ಯಾವುದೇ ಕರ್ಮದಿಂದ ಉಂಟಾಗಬಹುದಾದ ದುಷ್ಪ್ರಭಾವವನ್ನು ತೊಲಗಿಸಿ, ಕರ್ಮವೂ ನಿಷ್ಕರ್ಮವೆನಿಸುವುದು. "ಯಜ್ಞಾಯಾಚರತಃ ಕರ್ಮ ಸಮಗ್ರಂ ಪ್ರವಿಲೀಯತೆ" ಯಜ್ಞಕ್ಕೋಸ್ಕರವಾಗಿ ಕರ್ಮವನ್ನು ಮಾಡುತ್ತಿರುವವನಿಗೆ ಕರ್ಮವು ಸಮಗ್ರವಾಗಿ ಅಡಗಿ ಹೋಗುವುದು. ಸ್ವಾರ್ಥ ತ್ಯಾಗವೇ ನಡತೆಯ ಮೊತ್ತ ಮೊದ ಲನೆಯ ಮುಖ್ಯ ನಿಯಮ.

ಎರಡನೆಯ ಮುಖ್ಯ ನಿಯಮ ಪ್ರಸನ್ನ ಚಿತ್ತದಿಂದಿರುವುದು . ಇಂದ್ರಿಯಸ್ಯೇನ್ದ್ರಿಯಸ್ಯಾರ್ಥೇ ರಾಗದ್ವೇಷೌ ವ್ಯವಸ್ಥಿತೌ; ತಯೋರ್ನ ವಶಮಾಗಚ್ಛೇತ್ ತೌ ಹ್ಯಸ್ಯ ಪರಿಪನ್ಥಿನೌ". 03:34. ಇಂದ್ರಿಯದಲ್ಲಿ ಇಂದ್ರಿಯದಅರ್ಥದಲ್ಲಿ ರಾಗದ್ವೇಷಗಳು ವ್ಯವಸ್ಥಿತವಾಗಿ ಇರುವವು. ಇವೆರಡಕ್ಕೂ ವಶರಾಗಬಾರದು. ಏಕೆಂದರೆ ಇವೆ ಇವನಿಗೆ ಶತ್ರುಗಳು. ಈ ವಿಷಯದ ಬಗೆಗೆ ನಾವು ಈಗಾಗಲೇ ವಿವರವಾಗಿ ತಿಳಿಸಿರುವೆವು. ಒಬ್ಬ ವ್ಯಕ್ತಿಯು ತನ್ನ ಕರ್ಮಗಳನ್ನು ನಡೆಸುವಲ್ಲಿ ತನ್ನ ತೀವ್ರವಾದ ಭಾವನೆಗಳಿಂದ ಪ್ರೇರೇಪಿತನಾಗಬಾರದು. ಏಕೆಂದರೆ ಅವನು ತನ್ನ

ಭಾವನೆಗಳ ಹೊಡೆತದಿಂದ ಎಷ್ಟು ಅಸಂಗನಾಗುವನೋ ಮತ್ತು ಎಷ್ಟು ಸಮಚಿತ್ತವನ್ನು ಹೊಂದುವನೋ ಅಷ್ಟು ಹೆಚ್ಚು ವಿಜಯವನ್ನು ಸಾಧಿಸುವನು.

ಮೂರನೆಯ ಮುಖ್ಯ ನಿಯಮವೆಂದರೆ ನಿಷ್ಠೆಯಿಂದ ಕರ್ತವ್ಯವೆಸಗಬೇಕು. "ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್; ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ" ಸ್ವಧರ್ಮವು ವಿಗುಣವಾಗಿದ್ದರು ಚೆನ್ನಾಗಿ ಅನುಷ್ಠಾನ ಮಾಡಿದ ಪರ ಧರ್ಮಕ್ಕಿಂತ ಒಳ್ಳೆಯದು. ಸ್ವಧರ್ಮದಲ್ಲಿ ನಿಧನವಾದರೂ ಲೇಸು, ಪರ ಧರ್ಮವು ಭಯಾವಹವಾಗಿರುವುದು. ಗೀತೆಯು ನೈತಿಕ ನಿಯಮಗಳನ್ನು ಜಾತಿಗೆ ಅನ್ವಯಿಸುತ್ತದೆಂದು ಈಗಾಗಲೇ ತಿಳಿಸಲಾಗಿದೆ. ಅರ್ಜುನನು ತನ್ನ ಕ್ಷಾತ್ರಧರ್ಮವನ್ನು ಬಿಡುವ ವಿಚಾರ ಮಾಡುವುದು ತಪ್ಪು ಎಂದು ತಿಳಿಸುವುದು ಶ್ರೀಕೃಷ್ಣನ ಉದ್ದೇಶಗಳಲ್ಲಿ ಒಂದು. ಗೀತೆಯು ಮಿಕ್ಕೆಲ್ಲ ಧರ್ಮಗಳಿಗಿಂತ ಜಾತಿಪದ್ಧತಿಯ ಧರ್ಮವನ್ನು ಎತ್ತಿ ಹಿಡಿಯುತ್ತದೆಂದು ಕೆಲವರು ತಪ್ಪಾಗಿ ಅರ್ಥೈಸಿರುತ್ತಾರೆ. ಯಾರು ಸಂದರ್ಭವನ್ನು ಸ್ನೇಹಪೂರ್ವಕವಾಗಿ ಪರಿಗಣಿಸಲು ಇಚ್ಚಿಸುತ್ತಾರೋ ಅವರು ಇಲ್ಲಿ ಜಾತಿಯ ಪದ್ಧತಿಯು ನಿಜವಾದ ವಿಷಯವಲ್ಲ ,ಆದರೆ ಹುಟ್ಟಿನಿಂದ ಹಾಗು ಜೀವನದಲ್ಲಿನ ಸ್ಥಾನದಿಂದ ಇರುವ ಕರ್ತವ್ಯವೇ ಮುಖ್ಯ ವಿಷಯ ಎಂದು ತಿಳಿಯಬಲ್ಲರು. ನಾವುಗಳು ನಮ್ಮ ದೃಷ್ಟಿಗಳಿಂದ ಮತ್ತು ಅಭಿಪ್ರಾಯಗಳಿಂದ ಎಲ್ಲ ಪದ್ಧತಿಗಳನ್ನು  ನಿರ್ಣಯಿಸುವ ಪ್ರವೃತ್ತಿಯವರು ಆಗಿರುತ್ತೇವೆ. ಕರ್ತವ್ಯದ ಬಗೆಗೆ ಈ ಅಭಿಪ್ರಾಯವು ತಪ್ಪಾದದ್ದು ಎಂಬುದನ್ನು  ಗೀತೆಯು ಬೋಧಿಸುವುದು. ಕರ್ತವ್ಯವೆಂದರೆ ಏನು ಎಂಬುದರ ಬಗೆಗೆ ನಮಗೆಲ್ಲರಿಗೂ ಒಂದು ಸಾಮಾನ್ಯ ತಿಳುವಳಿಕೆ ಇದ್ದರೂಸಹ ಜೀವನದ ಪರಿಸ್ಥಿತಿ ಬದಲಾದ ಹಾಗೆಲ್ಲ ಕರ್ಮದ ಅವತರಣಿಕೆಗಳೂ ಬದಲಾಗುತ್ತದೆ. ನಮ್ಮ ಹುಟ್ಟಿನಿಂದ ಬಂದ ಹಾಗೂ  ಜೀವನದಲ್ಲಿನ  ಸ್ಥಿತಿಯಿಂದ ಬಂದ ಕರ್ಮಗಳನ್ನು ಸಂತೋಷದಿಂದ ನಿರ್ವಹಿಸಬೇಕೆಂದು ಕರ್ಮಯೋಗವು ವಿಧಿಸುತ್ತದೆ. ಯಾರು ತಮ್ಮ ಕರ್ತವ್ಯವು,   ಅದು ಎಷ್ಟೇ ಸಣ್ಣದಿರಲಿ, ಅದನ್ನು ಸಮರ್ಪಕವಾಗಿ ನಿರ್ವಹಿಸುತ್ತಾರೋ, ಅವರನ್ನು ಪ್ರಕೃತಿಯು ಹೆಚ್ಚಿನ  ಉನ್ನತ ಕರ್ತವ್ಯಗಳಿಗೆ ಯೋಜಿಸುತ್ತದೆ. ಮತ್ತೆ ಯಾವುದೋ ಒಂದು ಕರ್ತವ್ಯವನ್ನು ನಿರ್ವಹಿಸಲು ನಮಗೆ ಹೆಚ್ಚಿನ ಅರ್ಹತೆಯಿದೆ ಎಂದು ಊಹಿಸಿಕೊಳ್ಳುತ್ತಾ ನಾವು ನಮ್ಮ ಕರ್ತವ್ಯವನ್ನು ಕಡೆಗಣಿಸಬಾರದು. ನಮಗೆ ಒದಗಿ ಬಂದ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಇನ್ನೂ ಹೆಚ್ಚಿನ ಕರ್ತವ್ಯ ನಿರ್ವಹಿಸಲು ನಮಗೆ ಇರುವ ಯೋಗ್ಯತೆಯನ್ನು ನಿರೂಪಿಸಬೇಕು.

ನಾವು ಪ್ರಕೃತಿಯ ತ್ರಿಗುಣಗಳಿಂದ ವಂಚಿತರಾಗದಂತೆ ಕಾಪಾಡಿಕೊಳ್ಳುವಲ್ಲಿ ಸರ್ವದಾ ಎಚ್ಚರವಾಗಿರಲು ಸಾಕಷ್ಟು ಜ್ಞಾನವನ್ನು ಉದ್ದೀಪನಗೊಳಿಸಿಕೊಳ್ಳಬೇಕು ಎಂಬುದು ಕರ್ಮಯೋಗದ ನಾಲ್ಕನೆಯ ಮುಖ್ಯ ಬೋಧನೆ." ತತ್ವ ವಿತ್ತು ಮಹಾಬಾಹೋ ಗುಣ-ಕರ್ಮ ವಿಭಾಗ ಯೋ ಗುಣಾ ಗುಣೇಷು ವರ್ತನ್ತೆ ಇತಿ ಮತ್ವಾ ನ ಸಜ್ಜತೇ "( 3.28). " ಎಲೈ ಮಹಾಬಾಹೋ, ಗುಣಕರ್ಮಗಳ ವಿಭಾಗಗಳ ತತ್ವಜ್ಞಾನಿಯಾದರೆ ಗುಣಗಳು ಗುಣಗಳಲ್ಲಿ ಪ್ರವರ್ತಿಸುತ್ತಿರುತ್ತವೆ ಎಂದು ತಿಳಿದು ಅನಾಸಕ್ತನಾಗಿ ಇರುತ್ತಾನೆ." ಗುಣಗಳ ಬಗೆಗೆ ಈಗಾಗಲೇ ವಿವರಿಸಲಾಗಿದೆ. ಅವುಗಳು ವಿವಿಧ ರೀತಿಯಲ್ಲಿ ತಮ್ಮ ಕೆಲಸಗಳಲ್ಲಿ ಹೇಗೆ ತೊಡಗಿಕೊಳ್ಳುತ್ತದೆ ಎಂಬುದರ ಬಗೆಗೆ ಸರಿಯಾದ ಜ್ಞಾನವು ನಮ್ಮನ್ನು ಅವುಗಳು ಒಡ್ಡುವ ಆತಂಕದಿಂದ ಹೊರಬರಲು ಸಹಾಯ ಮಾಡುತ್ತದೆ. ಕಳ್ಳರು ಅರಕ್ಷಿತವಾದ ಮನೆಗಷ್ಟೇ ಕನ್ನ ಹಾಕುತ್ತಾರೆ. ಸತ್ಯದ ಬೆಳಕಿನಲ್ಲಿ ನಾವು ನಿಂತಾಗ ಗುಣಗಳು ನಮ್ಮನ್ನು ಸೆಳೆದುಕೊಳ್ಳಲಾರದು. ಆದ್ದರಿಂದ ಅರ್ಜುನನಿಗೆ ಶ್ರೀಕೃಷ್ಣನು ಈ ರೀತಿ ಬೋಧಿಸಿದನು." ತ್ರೈಗುಣ್ಯ ವಿಷಯ ವೇದ ನಿಸ್ತ್ರೈಗುಣ್ಯೋ ಭವಾರ್ಜುನ/ ನಿರ್ದ್ವಂದ್ವೋ ನಿತ್ಯಸತ್ವಸ್ಥೋ ನಿರ್ಯೋಗಕ್ಷೇಮ ಆತ್ಮವಾನ್//( 2:45) " ವೇದಗಳು ತ್ರೈಗುಣ್ಯದ ವಿಷಯವಾದವುಗಳು. ಅರ್ಜುನನೇ ನೀನು ನಿಸ್ತ್ರೈಗುಣ್ಯನಾಗು. ನಿರ್ದ್ವಂದ್ವನೂ ನಿತ್ಯ ಸತ್ತ್ವಸ್ತನಾಗಿಯೂ ನಿರ್ಯೋಗಕ್ಷೇಮನಾಗಿಯೂ ಆತ್ಮ ವಂತನಾಗಿಯೂ ಇರು." ಮೂರು ಗುಣಗಳಲ್ಲಿ ತಮೋಗುಣವನ್ನು ರಜೋಗುಣದಿಂದ , ರಜಸ್ಸನ್ನು ಸತ್ವಗುಣದ ಸಹಾಯದಿಂದ ಹೊಡೆದು ಹಾಕಬೇಕು, ಯಾವುದೇ ಒಂದು ಗುಣವೂ ಪ್ರಮುಖವಾದಾಗ, ಮಿಕ್ಕೆರಡು ಖಂಡಿತವಾಗಿ ಬಲಹೀನವಾಗುತ್ತದೆ.( 14:10). ರಜ ಮತ್ತು ತಮೋಗುಣಗಳಿಂದ ಬೇರಕೆಯಾದ ಸತ್ವಕ್ಕಿಂತ ಶುದ್ಧ ಸತ್ವವು ಬೇರೆಯದೇ ಆಗಿರುತ್ತದೆ ಮತ್ತು ಯಾವಾಗಲೂ ಸತ್ವದಲ್ಲೇ ಇರುವ ಅಭ್ಯಾಸವಾದವನು ಕಾಲಕ್ರಮದಲ್ಲಿ ಮೂರುಗುಣಗಳನ್ನು ಮೀರುತ್ತಾನೆ. ಈ ಕಾರಣದಿಂದಾಗಿ, ಯಾವಗಲೂ ಶುದ್ಧ ಸತ್ವದಲ್ಲಿಯೇ ಒಡನಾಡುವವನನ್ನು ( ಯಾರು ಮೂರು ಗುಣಗಳ ಪ್ರಭಾವದಿಂದ ಆಚೆ ಇರುವವರೋ) ತ್ರಿಗುಣಾತೀತ ಎನ್ನುತ್ತಾರೆ. ಗೀತೆಯ ಹದಿನಾಲ್ಕನೇ ಅಧ್ಯಾಯದಲ್ಲಿ ಇಂತಹ ಆದರ್ಶ ಪುರುಷರ ಬಗೆಗೆ ವಿವರಿಸಲಾಗಿದೆ..

ಮೂರು ಗುಣಗಳನ್ನು ಮೀರಿ ನಂತರ ಸತ್ವದಲ್ಲಿ ನೆಲೆನಿಲ್ಲಲು ಹೇಳಿದ್ದರಿಂದ ಮತ್ತೊಂದು ಪ್ರಮುಖ ವಿಷಯವು ಹೊರಡುತ್ತದೆ ಎಂಬುದನ್ನು ಇಲ್ಲಿಗಮನಿಸಬೇಕು. ಮೇಲೆ ತಿಳಿಸಿದಂತೆ, ತಮಸ್ಸು ರಜಸ್ಸು ಗಳನ್ನು ಕೊಡವಿಕೊಂಡ ಶುದ್ಧ ಸತ್ವವನ್ನು ಸಾಧಿಸಲಾಗುತ್ತದೆ. ಕಾಮ ಕ್ರೋಧ ಮುಂತಾದ ಕು ಕರ್ಮಗಳ

ಮೂಲವು ರಜಸ್ಸಿನಿಂದ ಹೊರಟಿದ್ದಾಗುತ್ತದೆ (೬-೩೭). ಇದರ ತಾತ್ಪರ್ಯವೆಂದರೆ ನಾವು ಒಳ್ಳೆಯದನ್ನು ಮಾಡಲು ಅಶಕ್ತರಾದರೂ, ಕೆಟ್ಟ ಕರ್ಮಗಳನ್ನು ಬಿಡುವುದು ನಮ್ಮ ಆದ್ಯ ಕರ್ತವ್ಯವಾಗಿರುತ್ತದೆ." ಅಕುರ್ವನ್ನಪಿ ವಿಧ್ಯುಕ್ತಂ ನಿಷಿದ್ಧಂ ಪರಿವರ್ಜಯೇತ್"( ಶಾಸ್ತ್ರದಲ್ಲಿ ವಿಧಿಸಿದ ಕರ್ಮಗಳನ್ನು ಮಾಡಲಾಗದಿದ್ದರೂ, ನಿಷಿದ್ಧ ಕರ್ಮಗಳನ್ನು ವರ್ಜಿಸಬೇಕು).. ಎಂದು ಸೂತ ಸಂಹಿತೆಯಲ್ಲಿ ಸ್ಪಷ್ಟವಾಗಿ ಹೇಳಿದೆ." ತಸ್ಮಾತ್ ಸ್ವಮಿಂದ್ರಿಯಾಣ್ಯಾದೌ ನಿಯಮ್ಯ ಭರತರ್ಷಭ/ ಪಾಪ್ಮಾನಂ ಪ್ರಜಹಿಹ್ಯೇನಂ ಜ್ಞಾನವಿಜ್ಞಾನ ನಾಶನಂ//"( 03:41). ( ಆದ್ದರಿಂದ, ಎಲೆ ಭರತರ್ಷಭನೆ, ನೀನು ಮೊದಲು ಇಂದ್ರಿಯಗಳನ್ನು ಬಿಗಿಹಿಡಿದು ಜ್ಞಾನ ವಿಜ್ಞಾನಗಳನ್ನು ನಾಶಗೊಳಿಸುವ ಪಾಪಿಯನ್ನು ಕಿತ್ತೊಗೆದು ಬಿಡು). ಈ ಸೂತ್ರದ ಅಳವಡಿಕೆಯು ಬಹಳ ಸುಲಭ. ಉದಾಹರಣೆಗೆ ಒಬ್ಬ ಬಡ ಭಿಕ್ಷುಕನಿಗೆ ದಾನವನ್ನು ಮಾಡದಿದ್ದರೂ, ಅವನನ್ನು ಅವಾಚ್ಯ ಶಬ್ದಗಳಿಂದ ನಿಂದಿಸದಿದ್ದರೆ ಆಯಿತು.

ಕರ್ಮಯೋಗದ ಮುಂದಿನ ಮುಖ್ಯ ಬೋಧನೆಯು ನಮ್ರತೆ(ಅಹಂಕಾರವಿಲ್ಲದ ಸೌಮ್ಯತೆ). " ಕಾಯೇನ ಮನಸಾ ಬುದ್ಧ್ಯಾ ಕೈವಲ್ಯೈರಿಂದ್ರಿಯೈರಪಿ/ಯೋಗಿನ ಕರ್ಮ್ ಕುರ್ವಂತಿ ಸಂಗಮ್ ತ್ಯಕ್ತ್ವ ಆತ್ಮಶುದ್ಧಯೇ"/( 5.11)." ಕಾಯದಿಂದಲೂ ,ಮನಸ್ಸಿನಿಂದಲೂ, ಬುದ್ಧಿಯಿಂದಲೂ, ಕೇವಲ ಇಂದ್ರಿಯಗಳಿಂದಲೂ ಯೋಗಿಗಳು ಸಂಗವನ್ನು ಬಿಟ್ಟು ಆತ್ಮಶುದ್ಧಿಗಾಗಿ ಕರ್ಮವನ್ನು ಮಾಡುತ್ತಿರುವರು". ಪ್ರಪಂಚವು ನಿನ್ನಿಂದ ಸಹಾಯ ಬಯಸುತ್ತಿದೆ ಎಂದು ಯೋಚಿಸುವುದು ಆಧ್ಯಾತ್ಮಿಕವಾಗಿ ಅತ್ಯಂತ ಅಪಾಯಕಾರಿ. ನಾವು ನಮ್ಮ ಕೆಲಸ ಮಾಡಿದ್ದಾಗ್ಯೂಕೂಡ ಜಗತ್ತು ಯಾವಾಗಲೂ ತಾನಿದ್ದಂತೆಯೇ ಇರುವುದು. ಪ್ರಪಂಚವು ಎಣೆಯಿಲ್ಲದಷ್ಟು ಮುಂದುವರೆಯುವುದೂ ಇಲ್ಲ ಅಥವಾ ಘೋರ ಪತನಕ್ಕೂ ಇಳಿಯುವುದಿಲ್ಲ. ನಾವಿರಲಿ ಇಲ್ಲದಿರಲಿ ಅದು ಇದ್ದಂತೆಯೇ ಇರುವುದು. ಪ್ರಪಂಚವು ಕೆಟ್ಟ ಸ್ಥಿತಿಯಲ್ಲಿದೆ ಎಂದೂ, ನಮ್ಮ ಸಹಾಯಕ್ಕಾಗಿ ಕಾಯುತ್ತಿದೆ ಎಂದು ಯೋಚಿಸುವುದು ಹಾಸ್ಯಾಸ್ಪದ. ಜಗನ್ನಿಯಾಮಕನು ಜಗತ್ತನ್ನುಯಾವಉದ್ದೇಶಕ್ಕಾಗಿ ಸೃಷ್ಟಿಸಿರುವನೋ ಆ ಉದ್ದೇಶವನ್ನು ನಿಭಾಯಿಸುವಲ್ಲಿ ಅದು ಸಮರ್ಥವಾಗಿದೆ. ಅದು ಯಾವರೀತಿಯಿಂದಲೂ ನಮಗಾಗಿ ಕಾಯುತ್ತಾ ಇರುವುದಿಲ್ಲ. ನಮಗೆ ಇಲ್ಲಿ ಕರ್ಮಮಾಡಲು ಸಿಕ್ಕ ಅವಕಾಶವನ್ನು ಸೌಭಾಗ್ಯ ಎಂದು ಗಣಿಸಬೇಕು.ನಮ್ಮ ನಿಸ್ವಾರ್ಥ ಕರ್ಮವು ಅಂತಿಮವಾಗಿ ನಮಗೆ ಹೆಚ್ಚು ಸಹಾಯಕ ವಾಗಿರುವುದು. ಇದು ಪ್ರಪಂಚಕ್ಕೊಳಿತು ಮಾಡುವದಕ್ಕಿಂತ ನಮ್ಮ ಆತ್ಮಶುದ್ಧಿಗೆ ಸಹಾಯಕವಾಗುತ್ತದೆ. ಈ ನಮ್ರತಯು ಕರ್ಮಯೋಗದ ಒಂದು ಮುಖ್ಯ ಬೋಧನೆ.

ಕರ್ಮಯೋಗದ ಕಡೆಯದಾದ ಆದರೆ ಮಹತ್ವದ ದೃಷ್ಟಿಯಿಂದ ಹಿರಿಯದಾದ ಬೋಧನೆಯ ಬಗ್ಗೆ ಈಗ ಹೇಳುತ್ತೇವೆ. ನಾವು ನಿಸ್ವಾರ್ಥರಾಗಿರುವುದು ಹೇಗೆ? ನಾವು ಭಾವುಕತೆಯಿಂದ ಬಿಡುಗಡೆ ಹೊಂದುವುದು ಹೇಗೆ? ಅಸಂಗರಾಗಿ ನಾವು ನಮ್ಮ ಕರ್ತವ್ಯವನ್ನು ಎಸಗುವುದು ಹೇಗೆ? ಗುಣಾತೀತರಾಗುವುದು ಹೇಗೆ? ಮತ್ತು ನಾವು ಬೇರೆಯವರಿಗೆ ಸಹಾಯ ಮಾಡುತ್ತಿದ್ದೇವೆಂಬ ಅಹಂಭಾವದಿಂದ ಮೇಲೇರುವುದು ಹೇಗೆ?. ಇದೆಲ್ಲವನ್ನು ಮಾಡುವುದು ಅತಿ ದುರ್ಭರ. ಇದನ್ನು ನಡೆಸಲು ಒಂದು ಕ್ರಮಬದ್ಧ ಪದ್ಧತಿ ರೂಡಿಸಿಕೊಳ್ಳದಿದ್ದರೆ ಕರ್ಮಯೋಗವು ಕೇವಲ ಬಾಯಿ ಹರಟೆ ಯಾಗುತ್ತದೆ. ಇದೀಗ ಯಾರು ದೈವವನ್ನು ನಂಬುವುದಿಲ್ಲವೋ ಅವರನ್ನು ಅವರ ಪಾಡಿಗೆ ಬಿಟ್ಟುಬಿಡೋಣ ಅವರು ಒಂದಿಲ್ಲೊಂದು ದಿನ ಈ ಆದರ್ಶಗಳಿಗೆ ತಾವೇ ಹೇಗೋ ಬರಬೇಕಾಗುತ್ತದೆ. ಅವರು ತಮ್ಮದೇ ಮನೋಶಕ್ತಿಯಿಂದ ಎಲ್ಲ ಕರ್ಮಗಳನ್ನು ಮೆಟ್ಟಿ ತಮ್ಮ ಬಿಡುಗಡೆ ಪಡೆಯಬೇಕು. ಅವರಿಗೆ ತಮ್ಮ  ಧೃಡನಿರ್ಧಾರವಲ್ಲದೆ ಮತ್ತೆ ಯಾವುದೇ ಅವಕಾಶಗಳಿಲ್ಲ. ನಾನು ಇದೆಲ್ಲವನ್ನು ಸಾಧಿಸಲು ಏನನ್ನು ಮತ್ತು ಹೇಗೆ ಅದನ್ನು ಮಾಡಬೇಕು ಎಂದು ಪ್ರಶ್ನಿಸಿದವರು ತಮ್ಮ ಅಜ್ಞಾನವನ್ನು ತಿಳಿಯಪಡಿಸಿದ್ದಾರೆ ಮತ್ತು ತಮ್ಮನ್ನು ಶಿಕ್ಷಣಕ್ಕೂ ಹಾಗೂ ಮಾರ್ಗದರ್ಶನಕ್ಕೂ ಒಳಪಡಿಸಿಕೊಳ್ಳುವ ಕೌತುಕವನ್ನು ಪ್ರಕಟಪಡಿಸಿದ್ದಾರೆ. ಅಂತಹವರಿಗೆ ಕರ್ಮಯೋಗವು, ಕರ್ಮವನ್ನು ಭಗವಂತನಲ್ಲಿ ಸಮರ್ಪಣೆ ಮಾಡುವ ಮಾರ್ಗವನ್ನು ಬೋಧಿಸುತ್ತದೆ. ಅರ್ಜುನನಿಗೆ ಶ್ರೀ ಕೃಷ್ಣನು ಹೀಗೆಂದು ಬೋಧಿಸುತ್ತಾನೆ. "ಮಯಿ ಸರ್ವಾಣಿ ಕರ್ಮಾಣಿ ಸಂನ್ಯಸ್ಯಾಧ್ಯಾತ್ಮ ಚೇತಸಾ; ನಿರಾಶಿ ನಿರ್ಮಮೋ ಭೂತ್ವಾ ಯುಧ್ಯಸ್ವ ವಿಗತಜ್ವರಃ". ನನ್ನಲ್ಲಿ ಸರ್ವಕರ್ಮಗಳನ್ನೂ ಆಧ್ಯಾತ್ಮ ಚಿತ್ತದಿಂದ ಸಂನ್ಯಾಸ ಮಾಡಿ ನಿರಾಶಿಯಾಗಿ ನಿರ್ಮಮ ನಾಗಿ ವಿಗತಜ್ವರನಾಗಿ( ಸಂತಾಪವಿಲ್ಲದವನಾಗಿ) ಯುದ್ಧ ಮಾಡು. 3:30. ಎಲ್ಲ ಕರ್ಮಗಳನ್ನು ಭಗವಂತನಲ್ಲಿ ಅರ್ಪಣೆ ಮಾಡುವುದು ಅತ್ಯಂತ ಕ್ಷೇಮಕರ. ನಮ್ಮ ಎಲ್ಲ ಕರ್ತವ್ಯಗಳು ನಿಜವಾಗಿ ಅವನದೇ. ಭಗವಂತನ ಸಂಕಲ್ಪದಂತೆಯೇ ನಾವು ನಡೆಯುತ್ತಿದ್ದೇವೆ. ನಾವು ಕೇವಲ ಭಗವಂತನ ಸಾಧನಗಳು, ಮತ್ತು ಎಲ್ಲ ಕರ್ಮ, ಕರ್ಮಫಲಗಳು ಅವನದೇ. ನಮಗೆ ವಿಹಿತವಾದ ಕರ್ಮಗಳನ್ನು ಶ್ರದ್ಧೆಯಿಂದ ನಡೆಸುವ ಪ್ರಯತ್ನ ಮಾಡೋಣವೇ ಹೊರತು ಅದರಿಂದ ಯಾವುದೇ ಹೊಗಳಿಕೆಯನ್ನಾಗಲಿ ಪ್ರತಿಫಲ ವನ್ನಾಗಲಿ ನಿರೀಕ್ಷಿಸದೆ ಇರೋಣ .ಕಾರಣವೆಂದರೆ ಇದೆಲ್ಲವೂ ಭಗವಂತನದೇ ಆಗಿದ್ದು ಭಗವಂತನಲ್ಲಿ ನಮ್ಮ ಅಹಂತೆಯನ್ನು ಎಡಬಿಡದೆ ಸಮರ್ಪಣೆ ಮಾಡುತ್ತಾ ಮಾಡುತ್ತಾ ಮುಂದೊಂದು ದಿನ ನಮ್ಮ ಅರಿವಿಲ್ಲದೆಯೇ ಸಮರ್ಪಣೆಯು ಅಭ್ಯಾಸವಾಗಿ ಸಹಜವಾಗುತ್ತದೆ. ಸಹಜವಾಗಿ ನಾವು ಮಾಡುವ ವಾಚಿಕ ಮಾನಸಿಕ ಐಂದ್ರಿಕ ಅಥವಾ ಬೌದ್ಧಿಕ ಕೆಲಸವೆಲ್ಲವನ್ನು

ಭಗವದರ್ಪಣ ಮಾಡುವುದು ನಮ್ಮ ಉದ್ದೇಶವಾಗಬೇಕು. ಭಗವಂತನಲ್ಲಿಆತ್ಮಸಮರ್ಪಣೆಯು ನಮ್ಮನ್ನು ಬಂಧಮುಕ್ತ ರನ್ನಾಗಿಸುತ್ತದೆ. ಕರ್ಮದ ಹಂಗು ಜೀವನದ ಹೊರೆಯಾಗುವುದಿಲ್ಲ. ಅದಕ್ಕೆ ಬದಲಾಗಿ ಭಗವಂತನ ಆಜ್ಞೆಯನ್ನು ಪಾಲಿಸುವ ಸಂತೋಷದಾಯಕ ಸ್ಥಿತಿಗೆ ಕಾರಣವಾಗುತ್ತದೆ. " ಸ್ವಕರ್ಮಣಾ ತಮಭ್ಯರ್ಚ ಸಿದ್ಧಿಂ ವಿನ್ದತಿ ಮಾನವಃ". 18 :46. ಸ್ವಕರ್ಮದಿಂದ ಆತನನ್ನು  ಅಭ್ಯರ್ಚನೆ ಮಾಡಿದರೆ ಮಾನವನು ಸಿದ್ಧಿಯನ್ನು ಹೊಂದುತ್ತಾನೆ .ನಾವು ಕರ್ಮವನ್ನು ಎಸಗುವುದು ನಮ್ಮ ಕರ್ತವ್ಯವೆಂದಲ್ಲ. ಕರ್ಮವನ್ನು ಮಾಡುವುದು ನಮ್ಮ ಭಾಗ್ಯ ಎಂದು. ನಾವು ಕರ್ಮದ ಗುಲಾಮರಲ್ಲ, ಭಗವಂತನ ಸ್ವಯಂಸೇವಕರು. ಪ್ರತಿಫಲದ ಬಗೆಗಾಲಿ, ದಂಡನೆಯ ಬಗೆಗಾಗಲಿ  ಯೋಚನೆಇಲ್ಲದೆ ಭಗವಂತನ  ಅನುಜ್ಞೆಯನುಸಾರ ಕರ್ಮವನ್ನೆಸಗುತ್ತೇವೆ. ಈ ರೀತಿ ಭಗವಂತನನ್ನೇ ಸದಾ ಧ್ಯಾನಿಸುವುದೇ ನಿಸ್ಸಂಗದ ಮರ್ಮವು. "ಮಚ್ಚಿತ್ತಃ  ಸರ್ವದುರ್ಗಾಣಿ ಮತ್ಪ್ರಸಾದಾತ್ ತರಿಷ್ಯಸಿ; ಅಥ  ಚೇತ್ ತ್ವಮಹಙ್ಕಾರಾನ್ನ ಶ್ರೋಷ್ಯಸಿ ವಿನಙ್ಕ್ಷ್ಯಸಿ".  ನನ್ನಲ್ಲೇ ಚಿತ್ತವನ್ನು ಇಟ್ಟವನಾದರೆ ಸರ್ವ ದುರ್ಗಗಳನ್ನು ನನ್ನ ಪ್ರಸಾದದಿಂದಲೇ ದಾಟುವೆ. ಹಾಗಿಲ್ಲದೆ  ಹೋದರೆ ಅಹಂಕಾರದಿಂದ ನೀನು ನಾಶವಾಗುವೆ. 18 :58. ಎಂದು ಶ್ರೀ ಕೃಷ್ಣನು ಹೇಳಿರುವನು.

ಇವುಗಳು ಕರ್ಮಯೋಗದ ಸಾಮಾನ್ಯ ಬೋಧನೆಗಳು. ಜೀವನದ ಎಲ್ಲ ಕೆಡಕುಗಳನ್ನು ಈ ಯೋಗವು ನಿಸ್ವಾರ್ಥ ಸೇವೆಯ ಮುಖಾಂತರ ಪರಿಹರಿಸುತ್ತದೆ. ನಿಜವಾದ ಕರ್ಮಯೋಗಿಯು ಕರ್ಮದಿಂದ ಹಿಂಸರಿಯುವುದಿಲ್ಲ, ಯಾಕೆಂದರೆ ತೀವ್ರತರನಾದ ನಿಸ್ವಾರ್ಥ ಸೇವೆಯೇ ನಿಜವಾದ ವಿಶ್ರಾಂತಿಯೂ ಮತ್ತು ಸೋಮಾರಿತನ ವಾಗಲಿ ಅಥವಾ ಸ್ವೇಚ್ಛೆಯಿಂದ ಕರ್ಮ ತ್ಯಾಗ ಮಾಡುವುದಾಗಲಿ ನಿಜವಾಗಿ ಆತ್ಮನನ್ನು ಬಂಧಿಸುತ್ತದೆ ಎಂದು ಅರಿತಿರುತ್ತಾನೆ. ನಿಜವಾದ ವಿಶ್ರಾಂತಿಯು ಸತ್ಯವಾದ ನಿಷ್ಕರ್ಮವು ಅಂದರೆ ಅನಾಸಕ್ತನಾಗಿದ್ದು ಪ್ರಪಂಚದ ಒಳಿತಿಗಾಗಿ ಯಾವಾಗಲೂ ಕರ್ಮವನ್ನು ಎಸಗುವುದು. ವಿಶ್ರಾಂತಿಯು ಕರ್ಮವನ್ನು ಮಾಡುವುದರ ಮೇಲಾಗಲಿ ಕರ್ಮವನ್ನು ಮಾಡದಿರುವುದರ ಮೇಲಾಗಲಿ ನಿಹಿತವಾಗಿರುವುದಿಲ್ಲ. ಇದುಕೇವಲಒಂದು ಮಾನಸಿಕ ಸ್ಥಿತಿಯು. ಯಾರು ಸಮಚಿತ್ತ ಎನ್ನುವ ನಿಜವಾದ ಯೋಗದ ಸ್ಥಿತಿಯನ್ನು ತಲುಪಿರುತ್ತಾರೋ ಅವರೇ ಸರ್ವದಾ ವಿಶ್ರಾಂತಿಯನ್ನು ಪಡೆಯಬಲ್ಲರು. ಯಾರು ಯಾವಾಗಲೂ ಕರ್ಮ ನಿರತರಾಗಿಯು ಸಂಪೂರ್ಣ ವಿಶ್ರಾಂತಿಯನ್ನು ಅನುಭವಿಸಬಲ್ಲರೋ ಅವರೇ ನಿಜವಾದ ಕರ್ಮಯೋಗಿಗಳು.

# ಜ್ಞಾನಯೋಗ

ವೇದಾಂತ ತತ್ವಶಾಸ್ತ್ರದಲ್ಲಿ ಕರ್ಮ, ಭಕ್ತಿ, ಧ್ಯಾನಗಳಿಗಿಂತ ಜ್ಞಾನ ಹೆಚ್ಚಿನ ಪಾತ್ರವನ್ನು ಹೊಂದಿದೆ. ಉಪನಿಷತ್ತು ವಿದ್ಯೆಯನ್ನು ಹೊಗಳುವುದರಲ್ಲಿ ದಣಿಯುವುದೇಇಲ್ಲ, ಮತ್ತು ಇದನ್ನು ಮುಕ್ತಿಗೆ ಅನಿವಾರ್ಯವಾಗಿಸಿದೆ. ಭಗವದ್ಗೀತೆಯು ಉಪನಿಷತ್ತಿನ ಮೂಲ ಸಿದ್ಧಾಂತಗಳ ಅತ್ಯುತ್ತಮ ಸಂವಾದವಾಗಿದ್ದು ವಿದ್ಯೆಯಶ್ಲಾಘನೆಯಲ್ಲಿ ಹಿಂದಿಲ್ಲ. ನೀನು ಎಲ್ಲ ಪಾಪಗಳಿಗಿಂತಲೂ ಹೆಚ್ಚಿನ ಪಾಪವನ್ನು ಮಾಡಿದ್ದರು ಚಿಂತೆಯಿಲ್ಲ, ಅಪಾವನ್ನೆಲ್ಲವನ್ನು ಜ್ಞಾನವೆಂಬ ತೆಪ್ಪದಿಂದಲೇ ಧಾಟಿ ಬಿಡುವೆ **04:36.** ಇದನ್ನರಿತು ಮುನಿಗಳೆಲ್ಲರೂ ಇಲ್ಲಿಂದ ಪರಮ ಸಿದ್ಧಿಯನ್ನು ಹೊಂದಿದರು . **14:1** ಇದನ್ನರಿತು ನೀನು ಎಲ್ಲ ಪಾಪಗಳಿಂದಲೂ ಮುಕ್ತನಾಗುವೆ. ಇದನ್ನರಿತ ಯಾವನೂ ಅಮೃತತತ್ವವನ್ನು ಹೊಂದುವನು. ಈ ಶ್ಲೋಕಗಳು ಗೀತಕಾರನು ಜ್ಞಾನಕ್ಕೆ ಅನುಗ್ರಹಿಸಿರುವ ಅತ್ಯುನ್ನತ ಸ್ಥಾನವನ್ನು ಪ್ರಮಾಣೀಕರಿಸುತ್ತದೆ.

## ಜ್ಞಾನ ಕೇವಲ ಊಹಾಪೋಹವಲ್ಲ

ಈ ಜ್ಞಾನವೆಂಬುದೇನು? ಕೆಲವರು ಜ್ಞಾನವು ಕೇವಲ ಕಪೋಲಕಲ್ಪಿತಕ್ಕಿಂತ ಹೆಚ್ಚಿನದಲ್ಲ. ಪರಮ ಸತ್ಯವೋ ಅದೇನೇ ಇರಲಿ ಅದರೊಡನೆ ಮನುಷ್ಯನು ಹೊಂದುವ ಸಂಬಂಧ, ಇದು ನೈತಿಕತೆಗೆ ಸಂಬಂಧಪಡದ್ದು ಎಂದು ಘೋಷಿಸುತ್ತಾರೆ. ಜ್ಞಾನವನ್ನು ಕ್ಷುಲ್ಲಕವಾಗಿ ಆಮೋದಗಳಿಗೆ ಮತ್ತು ತರ್ಕದ ಊಹೆಗಳಿಗೆ ಸಮೀಕರಿಸಲಾಗಿದೆ. ಇದುಎಲ್ಲ ನೈತಿಕ ಸಹಾನುಭೂತಿ ಮತ್ತು ವಾತ್ಸಲ್ಯಗಳನ್ನು ಹೊರತಳ್ಳುತ್ತದೆ ಎಂದು ಆರೋಪಿಸಲಾಗಿದೆ. ಜ್ಞಾನಯೋಗದ ತತ್ವ ನಿರ್ಧಾರಣೆಗೆ ಬೇರೆ ಯೋಗಗಳಿಗೆ ಅವಶ್ಯವಾದಷ್ಟು ಅಥವಾ ಅದಕ್ಕಿಂತ ಹೆಚ್ಚೇ ತರ್ಕದ ಅವಶ್ಯಕತೆಯಿದೆ. ಮಾನವನ ಬುದ್ಧಿಗೆ ನಿಲುಕುವ ಉತ್ತಮ ಸಾಧನವಾದ ತರ್ಕವನ್ನು ಸತ್ಯಾನ್ವೇಷಣೆಗೆ ಬಳಸಿರುವುದು ಯೋಗದ ಹೆಗ್ಗಳಿಕೆಯಾಗಿದೆ. ಇಲ್ಲಿ ತರ್ಕ ಕೊಂಡೊಯ್ಯುವ ಎತ್ತರಕ್ಕೆ ಏರಲು ಪ್ರಗತಿಯಾಗದ ಬುದ್ಧಿಮತ್ತೆಗೆ ಅಸಾಧ್ಯ ಎಂಬುವುದನ್ನು ಒಪ್ಪಬಹುದಾಗಿದೆ. ಆದರೆ ನೈತಿಕತೆಗೆ ವಿರುದ್ಧವಾಗಿದೆ ಎಂದಾಗಲಿ ಅಥವಾ ನಿರ್ಲಕ್ಷಿಸುತ್ತದೆ ಎಂದಾಗಲಿ ಹೇಳುವುದು ಅಸತ್ಯ, ಧರ್ಮ ಮತ್ತು ನೈತಿಕತೆಗೆ ವಿರುದ್ಧವಾಗಿರುವುದು ವೇದಾಂತ ಶಾಸ್ತ್ರದಲ್ಲಿ ವಿಶೇಷವಾಗಿ ಗೀತೆಯಲ್ಲಿ ಇರುವ ಸಾಧ್ಯತೆಯೇ ಇಲ್ಲ. ಗೀತೆಯ ಜ್ಞಾನ ಬೌದ್ಧಿಕ ಸಾಮರ್ಥ್ಯವನ್ನು ಬಳಸಿಕೊಳ್ಳುವುದಕ್ಕೆ ವಿರುದ್ಧವಲ್ಲದ್ದು

ಮತ್ತು ಕೇವಲ ಕಾರಣ ಸಹಿತವಾದ ನಂಬುಗೆಯಷ್ಟೇ ಅಲ್ಲದ್ದಾಗಿದೆ. ತಿಳಿಯಲೇಬೇಕಾದ ಸತ್ಯದ ಸ್ಪಷ್ಟವಾದ ಅರಿಯುವಿಕೆಗೆ ಸಾಧನವಷ್ಟೇ ಅಲ್ಲದೇ ವ್ಯಾವಹಾರಿಕ ಜ್ಞಾನದ ಸಿದ್ಧಾಂತಕ್ಕೂ ಅಳವಟ್ಟಿದೆ.

## ಜ್ಞಾನಕ್ಕೆ ಅರ್ಹತೆ

ಅರಿವಿಗೆ ಬಂದ ವೃತ್ತಾಂತಗಳ ಸಂಗ್ರಹಣೆ ಹಾಗೂ ಮನುಷ್ಯನ ಹಿಂದಿನ ಅನುಭವಗಳ ಕ್ರೋಡಿಕರಣವೇ ಜ್ಞಾನ ಎಂದು ಸರ್ವೇಸಾಧಾರಣವಾಗಿ ತಿಳಿದಿರುತ್ತೇವೆ. ಆದರೆ ನಿಜವಾದ ಜ್ಞಾನವೆಂದರೆ ನಮ್ಮ ಬಗ್ಗೆ ಪರಾಮರ್ಶೆಯು. ಗ್ರಂಥಗಳಿಂದ, ನಿರ್ದೇಶಕರಿಂದ, ಗುರುಗಳಿಂದ ವಿಮುಖರಾಗಿ ನಮ್ಮ ಅರಿವನ್ನು ಒಳಗೆಳೆದು ನಾವೇ ನಮಗೆ ಗುರುವಾದಾಗ ಮೂಲಭೂತ ಸತ್ಯದ ಪರಿಚಯವಾಗುತ್ತದೆ. ಎಲ್ಲ ಮಹನೀಯರಿಗು, ಧಾರ್ಮಿಕ ,ತಾತ್ವಿಕ ಅಥವಾ ವೈಜ್ಞಾನಿಕ ಜ್ಞಾನವು ಗ್ರಂಥಗಳಿಂದ ಅಥವಾ ಹೊರಗಿನ ಉಪಕರಣಗಳಿಂದ ಉಂಟಾಗದೆ ಅವರ ಅಂತಃಕರಣದಲ್ಲೇ ಅರಿವಾಗುವುದು. ಆದರೆ ಪೂರ್ವಜರಿಂದ ಬಂದ ಅಗಾಧವಾದ ಜ್ಞಾನ ರಾಶಿಗೆ ಸೂಕ್ತವಾದ ಗೌರವ ಸಂದ ಬೇಕು ಮತ್ತು ಅದರ ಅಭ್ಯಾಸವನ್ನು ಮಾಡಬೇಕು. ನಿರ್ದೇಶಕರು, ಗುರುಗಳು ಮಾರ್ಗದರ್ಶಿಗಳು ಸಾಧನೆಯ ಪಥವನ್ನು ಸೂಚಿಸುವಲ್ಲಿ ಮಾತ್ರ ಅವಶ್ಯ. ಗೀತೆ ಇದನ್ನು ತನ್ನ ಈ ವಾಕ್ಯದ ಮೂಲಕ ಗುರುತಿಸುತ್ತದೆ .
"ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯ ಉಪದೇಕ್ಷನ್ತಿ ತೇ ಜ್ಞಾನಂ ಜ್ಞಾನಿನ ಸ್ತತ್ವದರ್ಶಿನಃ" **04:34.**
ಅದನ್ನು ಪ್ರಣಿಪಾತದಿಂದಲೂ , ಪರಿಪ್ರಶ್ನೆಯಿಂದಲೂ, ಸೇವೆಯಿಂದಲೂಅರಿತುಕೋ. ತತ್ವದರ್ಶಿಗಳಾದ ಜ್ಞಾನಿಗಳು ನಿನಗೆ ಜ್ಞಾನವನ್ನು ಉಪದೇಶ ಮಾಡುವರು. ಮುಮುಕ್ಷುವಾದವನು ಸೂಕ್ತವಾದ ಅಧಿಕಾರವನ್ನು ಹೊಂದಿಲ್ಲವಾದಲ್ಲಿ ಹೊರಗಿನ ಯಾವ ಸಹಾಯವೂ ಫಲಿಸದು. ಗುರುವು ಹೊರಗಿನ ತಡೆಗಳನ್ನು ನಿವಾರಿಸಿ ಮಾರ್ಗವನ್ನು ಸೂಚಿಸಬಹುದು. ಅಲ್ಲಿಗೆ ಅವನ ಕರ್ತವ್ಯ ಮುಗಿಯಿತು. ತಾನುಕಂಡ ಸುಂದರ ಚಿತ್ರದಆನಂದವನ್ನು ಇನ್ನೊಬ್ಬನೊಡನೆ ಹಂಚಿಕೊಳ್ಳಬಯಸುವವನು ಇನ್ನೊಬ್ಬನಿಗೆ ಚಿತ್ರವನ್ನು ತೋರಿಸಿ ಅದನ್ನು ಹೊಗಳಬಹುದು. ಆದರೆ ಇನ್ನೊಬ್ಬನಿಗೆ ಸೌಂದರ್ಯಪ್ರಜ್ಞೆ ಇಲ್ಲವಾದಲ್ಲಿ, ಇಲ್ಲವೇ ದೃಷ್ಟಿದೋಷವಿದ್ದಲ್ಲಿ ಏನು ಮಾಡಲಾಗುತ್ತದೆ? ಎರಡನೆಯ ಸಂದರ್ಭದಲ್ಲಿ ಒಂದು ಜೊತೆ ಕನ್ನಡಕವನ್ನು ಕೊಟ್ಟು ಸಹಾಯ ಮಾಡಬಹುದು. ಇದಕ್ಕಿಂತ ಹೆಚ್ಚೇನು ಮಾಡಲಾಗದು. ಅಂತರ್ಗತವಾದ ದೋಷ ನಿವಾರಣೆ ಮಾಡಲಾಗದು. ಹೀಗಾಗಿ ಜ್ಞಾನ ಯೋಗಕ್ಕೆ ಸೂಕ್ತ ಅಧಿಕಾರ ಅತ್ಯವಶ್ಯ. ಈ ಅರ್ಹತೆಗಳನ್ನು ಕೆಳಗಿನ ಶ್ಲೋಕದಲ್ಲಿ ವಿವರಿಸಲಾಗಿದೆ." ಶ್ರದ್ಧಾವಾನ್ ಲಭತೇ ಜ್ಞಾನಂ

ತತ್ಪರಃಸಂಯತೇಂದ್ರಿಯಃ". **04:39** ಶ್ರದ್ಧೆಯುಳ್ಳವನು ತತ್ಪರನು ಇಂದ್ರಿಯ ಸಂಯಮವುಳ್ಳವನು ಆಗಿರುವವನು ಜ್ಞಾನವನ್ನು ಹೊಂದುವನು. ಇಂತಹ  ಮುಮುಕ್ಷುವಿಗೆ ಜ್ಞಾನವು ಅವಶ್ಯವಾಗಿ ದೊರಕುತ್ತದೆ.

ಈಗ ಈ ಮೂರು ಅಧಿಕಾರಕ್ಕೆ ಬೇಕಾದ ಗುಣಗಳನ್ನು ಪರೀಕ್ಷಿಸೋಣ. ಮೊದಲಿಗೆ ಶ್ರದ್ಧೆ ಅತಿ ಅವಶ್ಯಕ. ಶ್ರದ್ಧೆ ಇಲ್ಲದೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಕಾರ್ಲೆಯ ಮಾತಿನಂತೆ ಶ್ರದ್ಧೆಯು ಅತಿ ಹೆಚ್ಚಿನದು ಮತ್ತು ಜೀವದಾಯಿನಿ. ಶ್ರದ್ಧೆಯಿರದ ಧರ್ಮ ತತ್ವಶಾಸ್ತ್ರ ಧೂಳಿನಂತೆ ಶುಷ್ಕ. ಶ್ರದ್ಧೆ ಎಂದರೆ ಕೇವಲ ಕುರುಡು ನಂಬಿಕೆಯಲ್ಲ ಅಥವಾ ಒಂದು ಸಿದ್ಧಾಂತಕ್ಕೆ ಮಾನಸಿಕವಾಗಿ ಜೋತು ಬೀಳುವುದಲ್ಲ. ಅದು ಅಂತರ್ಗತವಾದ  ಧೀಶಕ್ತಿ. ಇದನ್ನು ಕಾರ್ಯಗತಗೊಳಿಸಿ ಸತ್ಯವನ್ನು ಹೊಂದಬಹುದು. ಪ್ರಕೃತಿಯಲ್ಲಿ ಅಥವಾ ಮನಸ್ಸಿನಲ್ಲಿ ಚಮತ್ಕಾರದ ಸ್ಪಷ್ಟ ಚಿತ್ರಣ ಮೂಡಿದಾಗ  ಅದಕ್ಕಿಂತ ಗಹನವಾದ ಮತ್ತೊಂದು ಇರಬೇಕೆಂದು ಅದನ್ನು ಅರಿಯಬೇಕೆಂದು ಶ್ರದ್ಧೆ ತೋರುತ್ತೇವೆ. ಹಿಂದೆಂದೂ ನಾವು ಕಂಡರಿಯದ ಒಂದು ಯಂತ್ರದ ಉದ್ದೇಶ ಮತ್ತು ಪ್ರಯೋಜನವನ್ನರಿಯಲು ಶ್ರದ್ಧೆ ತೋರುತ್ತೇವೆ. ಪುರಾತನ ಲಿಪಿಯ ಚಿನ್ಹೆಗಳನ್ನು ಅರಿಯಲು ಶ್ರದ್ಧೆ ತೋರುತ್ತೇವೆ.  ಮುಮುಕ್ಷುವಿಗಾದರೋ ಈ ಶ್ರದ್ಧೆಯು ಅತಿಅವಶ್ಯ. ಯಾರು ಪ್ರಕೃತಿಯನ್ನು ಸಮಗ್ರವಾಗಿ ಪರಿಶೀಲಿಸುತ್ತಾರೋ, ಅದರಲ್ಲಿ ಅನಂತವಾದ ಬದಲಾವಣೆಯನ್ನು ನೋಡುತ್ತಾರೋ, ಅಂತಹವರಿಗೆ ,ಇದು ಸತ್ಯವೇ? ಇಲ್ಲವಾದಲ್ಲಿ ಸತ್ಯ ಯಾವುದು ಎನ್ನುವ ಬಲವಾದ ಪ್ರಶ್ನೆ ಏಳುತ್ತದೆ .ಈ ಎಲ್ಲ ಬದಲಾವಣೆಗಳ ಹಿಂದೆ ಬದಲಾಗದ ಯಾವುದೋ ಒಂದರ ಅಸ್ತಿತ್ವ ಅವನ ಮನಸ್ಸನ್ನು ಬಲವಾಗಿ ಆಕ್ರಮಿಸಿ ಅದರ ಅನ್ವೇಷಣೆಗೆ ಅವನನ್ನು ತೊಡಗಿಸುತ್ತದೆ. ಈ ಪ್ರಯತ್ನದಲ್ಲಿ  ತೊಡಗುವವನಿಗೆ ಮೊದಲಿಗೆ ತನ್ನಲ್ಲಿ   ನಂಬುಗೆಯಿರಬೇಕು, ತನ್ನ ಹುಡುಕುವಿಕೆಗೆ ಬೇಕಾದ ಸಾಧನ ಮತ್ತು ಯೋಗ್ಯತೆಯ ಬಗ್ಗೆ ದೃಢವಾದ ನಂಬಿಕೆ ಇರಬೇಕು. ಬದಲಾಗುತ್ತಿರುವ ಈ ಪ್ರಪಂಚದಲ್ಲಿ ಒಂದು  ತಿಳಿಯಲು ತಕ್ಕದಾದ ಸತ್ಯವಿದೆ ಎಂಬ ಖಾತರಿಯಿರಬೇಕು. ಅದನ್ನು ತಿಳಿದರೆ ಇಲ್ಲಿ ಮತ್ತೆ ತಿಳಿಯಬೇಕಾದದ್ದು ಇಲ್ಲ ಎಂಬ ತೀವ್ರವಾದ ಭರವಸೆ ಮತ್ತು ನಿಶ್ಚಯ ಇರಬೇಕು. **7:2**  ಇದೇಅವನನ್ನು ಕಾಪಾಡುವುದು. ಅಜ್ಞಶ್ಚಾಶ್ರದ್ದಧಾನಶ್ಚ ಸಂಶಯಾತ್ಮಾ ವಿನಶ್ಯತಿ. ನಾಯಂ ಲೋಕೋsಸ್ತಿ  ನ ಪರೋ ನ ಸುಖಂ  ಸಂಶಯಾತ್ಮನಃ. **04:40**. ತಿಳಿಯದವನು, ಶ್ರದ್ಧೆ ಇಲ್ಲದವನು, ಸಂಶಯಾತ್ಮನು ನಾಶ ಹೊಂದುವನು. ಸಂಶಯಾತ್ಮಾನಿಗೆ ಈ ಲೋಕವಿಲ್ಲಪರ ಲೋಕವಿಲ್ಲ, ಸುಖವಿಲ್ಲ.  ವ್ಯಕ್ತಿಗೆ ಯಾವುದೇ ವಿಷಯ( ಕೆಲಸ)ದಲ್ಲಿ  ತೊಡಗುವಮೊದಲು ಅದನ್ನು ಪರಿಶೀಲಿಸಿ ತೂಗಿ ನೋಡಿ ಸಾರಾಸಾರ

ವಿವೇಚನೆಮಾಡಿ ಸರಿ ಎನಿಸಿದಲ್ಲಿ ಮುಂದುವರೆಯುವ ಇಲ್ಲವಾದಲ್ಲಿ ಬಿಟ್ಟುಬಿಡುವ ಮಟ್ಟಿಗೆ ಸಂಶಯ ವಿರಬೇಕು. ಇದು ಆರೋಗ್ಯವಾದದ್ದೇ.

ಯಾವ ಸಂಶಯಗ್ರಸ್ತನ ಅಭಿಪ್ರಾಯದಲ್ಲಿ ನಿರಾಕರಣೆ ಸಂಶಯ ಮತ್ತು ಸಾರ್ವತ್ರಿಕ ಅಪನಂಬಿಕೆಯೇ ಧ್ಯೇಯವೋ ಆ ಸಂಶಯ ಅವನಿಗೂ ದೇಶಕ್ಕೂ ಮಾರಕ. ಅಂತಹವನಿಗೆ ವಿಷಯಸುಖವಾಗಲಿ ಆಧ್ಯಾತ್ಮಿಕ ಸುಖವಾಗಲಿ ಇಲ್ಲಾ. ಯಾವುದೇ ಬೆಳವಣಿಗೆಗೆ ತಾತ್ಕಾಲಿಕ ನಂಬಿಕೆಯಾದರೂ ಅವಶ್ಯ ಮತ್ತೆ ಧರ್ಮದಲ್ಲಂತೂ ಈ ನಂಬಿಕೆ ಅತಿ ಅವಶ್ಯ. ಕಲ್ಪನೆ ಮೂಢನಂಬಿಕೆಗಳಿಂದ ಬೇರ್ಪಡಿಸಲ್ಪಟ್ಟ ಈ ಶ್ರದ್ಧೆ( ನಂಬಿಕೆ) ಜ್ಞಾನಯೋಗದ ಮೊದಲನೆಯ ಅರ್ಹತೆ.

ಎರಡನೆಯದಾಗಿ ತತ್ಪರತೆ ಮುಮುಕ್ಷುವಿಗೆ ಅಗತ್ಯ. ಜ್ಞಾನೋದಯ ಸುಲಭವಾಗಿ ಥಟ್ಟನೆ ದೊರೆಯುವುದಲ್ಲಾ. ಸತ್ಯವನ್ನು ತಿಳಿದವರಿಂದ ಶ್ರವಣ , ಉತ್ತಮಗ್ರಂಥಗಳ ಅಭ್ಯಾಸ ಮತ್ತು ಮನನ ಇವು ಮೊದಲಹೆಜ್ಜೆ. ಬಹಳಷ್ಟು ಜನರಿಗೆ ಅಮೂರ್ತ ಚಿಂತನೆಗಳನ್ನು ಆಸ್ವಾದಿಸುವ ಒಲವಾಗಲಿ ಗ್ರಹಿಸುವ ಧಾರ್ಡ್ಯತೆಯಾಗಲಿ ಇರುವುದಿಲ್ಲ. ಕಟೋಪನಿಷತ್ ನ ಹೇಳಿಕೆಯಂತೆ ಪರಮಾತ್ಮನ ಬಗ್ಗೆ ಶ್ರವಣ ಕೂಡ ಬಹುಜನರಿಗೆ ಲಭ್ಯವಿಲ್ಲ. ಶ್ರವಣಾಯಾಪಿ ಬಹುಬಿಯೋ  ನ ಲಭ್ಯಃ. ಪ್ರಸ್ತುತ ವಸ್ತುಸ್ಥಿತಿಯ ಬಗ್ಗೆ ತೀವ್ರವಾದ ಅತೃಪ್ತಿ ಮತ್ತು ನಂಬಿಕೆಗೆ ಅರ್ಹವಾದ ಹೆಚ್ಚಿನದನ್ನು ಕಂಡುಕೊಳ್ಳಬೇಕೆಂಬ ತೀವ್ರವಾದ ಆಸಕ್ತಿ ಶ್ರವಣಕ್ಕೆ ಪೂರ್ವಭಾವಿಯಾಗಿರುತ್ತದೆ. ಸಾಮಾನ್ಯ ಮನುಷ್ಯನು, ಪ್ರಪಂಚವು ಒಳಿತು ಕೆಡಕುಗಳ ಭಯಂಕರ ಮಿಶ್ರಣ ಎಂದರಿತು ತನಗೆ ಸಾಧ್ಯವಾದಷ್ಟು ಸಂತೋಷವನ್ನು ಬಾಚಿಕೊಳ್ಳುತ್ತಾನೆ. ಪ್ರಪಂಚದಿಂದ ಅತಿಹೆಚ್ಚಿನ ಲಾಭವನ್ನು ಪಡೆಯಲು ಯತ್ನಿಸುತ್ತಾನೆ. ಈ ನಿಟ್ಟಿನಲ್ಲಿ ಪ್ರಯತ್ನಿಸುವಾಗ ಬಲವಾದ ಪೆಟ್ಟುಗಳನ್ನು ತಿಂದರೂ ಜಾಗ್ರುತಗೊಳ್ಳುವುದಿಲ್ಲ. ಬಹಳಷ್ಟು ಘಾತಗಳನ್ನು ಅನುಭವಿಸಿ ಸಂಕಟವಿಲ್ಲದೆ ಕೇವಲ ಸಂತೋಷ ಸಾಧ್ಯವಿಲ್ಲವೆಂದರಿತಾಗ ಅನಂತವಾದ ಶಾಂತಿಯನ್ನು ಪಡೆಯಲು ಇಂದ್ರಿಯ ಸುಖವನ್ನು ಮೀರಬೇಕೆಂಬ ತಿಳಿವು ಬಂದು ಶ್ರದ್ಧೆಯಿಂದ ಕಾರ್ಯ ಪ್ರವೃತ್ತನಾಗುತ್ತಾನೆ.

ಆಗ ಪ್ರಯತ್ನಪೂರ್ವಕವಾಗಿ ಸುಖ-ದುಃಖ ಮುಂತಾದ ದ್ವಂದ್ವಗಳ ಹಿಂದೆ ಯಾವುದೋ ಒಂದು ಶಾಶ್ವತವಾದದ್ದು ಇದೇ ಎಂಬ ಹೃದಯದ ಕರೆಗೆ ಓಗೊಟ್ಟು ಶ್ರದ್ಧೆಯಿಂದ ಆ ನಿಟ್ಟಿನಲ್ಲಿ ತೊಡಗುತ್ತಾನೆ ದೈವ ಮುಂತಾದುವುಗಳ ಬಗ್ಗೆ ಆಲಿಸುತ್ತಾನೆ. ಈ ಶ್ರವಣವೆ ಮೊದಲನೆಯ ಹಂತ. ಕೇಳಿದ ವಿಷಯವನ್ನು ಮನನ ಮಾಡುವುದು ಎರಡನೆಯ ಹಂತ .ಮನನವಿಲ್ಲದ ಕೇವಲ ಶ್ರವಣ ನಿಷ್ಪ್ರಯೋಜಕ . ಹಗಲು ರಾತ್ರಿಗಳೆನ್ನದೆ ಶ್ರವಣ ಮಾಡಿದ ವಿಷಯವನ್ನೇ ಅದು

ನಮಗೆ ಕರಗತವಾಗುವವರೆಗೆ ಚಿಂತನೆ ಮಾಡಬೇಕು. ಒಬ್ಬ ತತ್ವಶಾಸ್ತ್ರಜ್ಞ ಹೇಳುವಂತೆ" ಆ ಸುಪ್ತೇರಾಮೃತೆಃ ಕಾಲಂ ನಯೇದ್ವೇದಾಂತಚಿಂತೆಯ". ಮಲಗುವವರೆಗೂ, ಸಾಯುವವರೆಗೂ ವೇದಾಂತ ಚಿಂತನೆಯನ್ನು ಮಾಡಬೇಕು. ಮನನ ಜ್ಞಾನ ಯೋಗದಲ್ಲಿ ಒಂದು ಮಹತ್ವದ ಸ್ಥಾನವನ್ನು ಪಡೆದಿದೆ. ವಿವೇಕವನ್ನು ಅದರ ಕೊಟ್ಟಕೊನೆಯ ಮಿತಿಯವರೆಗೂ ಬಳಸಿ ಸಿದ್ಧಾಂತವನ್ನು ನ್ಯಾಯಸಮ್ಮತ ಗೊಳಿಸಬೇಕು. ವಿವೇಕಕ್ಕೆ ಒಂದು ವಿಷಯದ ಬಗ್ಗೆ ತೃಪ್ತಿಯಾಗದೆ ಅದನ್ನು ಒಂದು ಖಾತರಿಯಾದ ನಂಬಿಕೆಯಾಗಿಸಲು ಯಾವ ಮತ ಅಥವಾ ಮತಾಭಿಪ್ರಾಯಕ್ಕಾಗಲಿ, ಯಾವುದೇ ಗ್ರಂಥ ಅಥವಾ ಸಿದ್ಧಾಂತಕ್ಕಾಗಲಿ, ಎಷ್ಟೇ ಪ್ರಸಿದ್ಧವಾದ ಸತ್ತೆಗಾಗಲಿ ಸಾಧ್ಯವೆಂದು ಎಣಿಸಬಾರದು. ಸೂಕ್ತ ತರ್ಕವನ್ನು ಅನುಸರಿಸಿ ಅದು ಎಲ್ಲಿಗೇ ನಮ್ಮನ್ನು ಕೊಂಡೊಯ್ಯಲಿ ಅದರ ಪರಿಣಾಮವನ್ನು ಸಂತೋಷವಾಗಿ ಸ್ವೀಕರಿಸುವ ಅಂಜದ ಧೈರ್ಯದಿಂದ ಜ್ಞಾನಯೋಗದ ವಿದ್ಯಾರ್ಥಿ ಕೆಲಸ ಮಾಡಬೇಕು. ಈ ರೀತಿಯ ಚಿಂತನೆಯಿಂದ ಸತ್ಯದ ಆಳವಾದ ಧ್ಯಾನಸ್ಥಿತಿ ಏರ್ಪಡುತ್ತದೆ. ಕೇವಲ ತರ್ಕ ಉಪಯೋಗವಿಲ್ಲ , ಮತ್ತುಅದು ಮೂಢನಂಬಿಕೆ, ಅನುಮಾನಗಳನ್ನು ಉಳಿಸುತ್ತದೆ. ತರ್ಕ ನಿರ್ದೇಶಿಸುವ ಸತ್ಯವನ್ನು ಕುರಿತು ಧ್ಯಾನ ಮಾಡಿ ಅನುಭವಕ್ಕೆ ತಂದುಕೊಂಡು ವ್ಯಾವಹಾರಿಕ ಜೀವನದ ಸಾರವಾಗಿಸಿ ಕೊಳ್ಳಬೇಕು. ಸತ್ಯವೆಂದರೇನು ಎಂಬುದರ ಬಗ್ಗೆ ನಮಗೆ ನಿಶ್ಚಯವಾದಮೇಲೆ ಅದನ್ನೇ ಬದುಕಾಗಿಸಬೇಕು. ಯಥಾವತ್ತಾಗಿ ಸತ್ಯದ ಅನುಭವ ಪಡೆಯುವವರೆಗೂ ಸತ್ಯದೊಡನೆ ಏಕಾತ್ಮತೆಯನ್ನು ಹೊಂದುವವರೆಗೂ ಚಿಂತನವನ್ನು ನಡೆಸುವುದು ಜ್ಞಾನಯೋಗದ ಮೂರನೆಯ ಮತ್ತು ಕೊನೆಯ ಹಂತ. ಇಲ್ಲಿಗೆ ಜ್ಞಾನ ಪರಿಪೂರ್ಣವಾಗುತ್ತದೆ. ಅವನು ಜ್ಞಾನಯೋಗಿ ಯಾಗುತ್ತಾನೆ. ಶ್ರವಣ ಮನನ ನಿಧಿಧ್ಯಾಸನ ದಿಂದ ಅನುಭವವನ್ನು ಹೊಂದುವವರೆಗೂ ಪಟ್ಟುಬಿಡದೆ, ಎಂದರೆ ಈಕೊನೆಯ ಹಂತವನ್ನು ಧಾಟುವವರೆಗೂ ಗಟ್ಟಿಯಾಗಿನಿಲ್ಲುವ ಈ ಸ್ವ ಇಚ್ಛೆಯೇ ತತ್ಪರತೆ. ಇದು ಜ್ಞಾನಯೋಗದ ಪಥಿಕನಿಗೆ ಇರಬೇಕಾದ ೨ನೆಯ ಅರ್ಹತೆ

ಕೊನೆಯದಾಗಿ ಜ್ಞಾನಯೋಗದ ಪಥಿಕನಿಗೆ ಅತಿ ಅವಶ್ಯವಾದ ಅರ್ಹತೆ ಇಂದ್ರಿಯನಿಗ್ರಹ. ಈ ಮಾರ್ಗದಲ್ಲಿ ಅನೇಕ ಸೆಳೆತಗಳು ಬರುತ್ತವೆ ಈ ದಿಸೆಯಲ್ಲಿ ಮೊದಲನೆಯದು ಪ್ರಲೋಭನೆ, ಇಂದ್ರಿಯಗಳನ್ನು ಮೀರುವ ಪ್ರಯತ್ನವೇ ಮೂರ್ಖತನ ಎಂಬ ಆಲೋಚನೆ. ಇಂದ್ರಿಯ ಸುಖ ತಳಗುಟ್ಟುತ್ತಾ ಚಾರ್ವಾಕರಂತೆ ಆಲೋಚನೆಗೆ ನಮ್ಮನ್ನು ದಬ್ಬುತ್ತದೆ. ಧರ್ಮ ಮತ್ತು ವೇದಾಂತ ಮೂರ್ಖರ ಮತ್ತು ಮೋಸಗಾರರ ಕಟ್ಟುಕಥೆ ಎನಿಸುತ್ತದೆ. ಜೀವನದ ಸುಖವನ್ನು ಅನುಭವಿಸುತ್ತಾ ಯಾವುದರ ಬಗ್ಗೆಯೂ ತಲೆಕೆಡಿಸಿಕೊಳ್ಳದೆ ಹಾಯಾಗಿ ಇದ್ದರಾಯಿತು ಎನ್ನುವುದೇ ಮೊದಲನೆಯದಾದ ಪ್ರಲೋಭನೆ. ಐಂದ್ರಿಕತೆ ಒಂದು ರೀತಿಯ ಸಮ್ಮೋಹನತೆಯನ್ನು ಉಂಟುಮಾಡಿ, ಜೀವನ

ಎಂದಿಗೂ ಹೀಗೆ ಸುಖದ ಸುಪ್ಪತ್ತಿಗೆಯಾಗಿ ನೋವೇ ಇಲ್ಲದ ತಿಂದುಂಡು ಓಲಾಡುವ, ಎಲ್ಲ ಒಳ್ಳೆಯದಾದ, ಕೆಟ್ಟದ್ದೇ ಇಲ್ಲದ ಬರೀ ಆನಂದವೇ, ಕಷ್ಟಕಾರ್ಪಣ್ಯಗಳೇ ಇಲ್ಲ ವಾದದ್ದು ಎಂಬ ಒಂದು ಭವಿಷ್ಯಕಾಲದ ಕಲ್ಪನೆಯಲ್ಲಿ ಮುಳುಗಿಸುತ್ತದೆ. ಆದರೆ ವಸ್ತುಸ್ಥಿತಿ ಹೀಗಿಲ್ಲವೆಂಬುದನ್ನು ಜ್ಞಾನಯೋಗದ ಪಥಿಕ ಅರಿತಿರಬೇಕು. ಇಂದ್ರಿಯ ಸುಖದ ಪೊಳ್ಳುತನ ಹಾಗೂ ನಾಶವಾಗುವ ಸ್ವಭಾವದ ಪರಿಚಯ ಸ್ಪಷ್ಟವಾಗಿರಬೇಕು. ಇಂದ್ರಿಯ ಭೋಗಕ್ಕಾಗಿ ಅವಶ್ಯವಾದ ಸಾಧನಗಳನ್ನು ಸಾಕಷ್ಟು ಸಂಗ್ರಹಿಸಬಹುದು ಇದಕ್ಕೆ ರಾಜಾಶ್ರಯ ಅಥವಾ ದೈವೀಸಹಾಯವು ದೊರೆಯಬಹುದು. ಆದರೆ ಅಂತ್ಯಪರಿಣಾಮ ದುಃಖದಾಯಕವೇ ಸರಿ." ತೇ ತಂ ಭುಕ್ತ್ವಾ ವಾ ಸ್ವರ್ಗಲೋಕಂ ವಿಶಾಲಂ ಕ್ಷೀಣೇ ಪುಣ್ಯೇ ಮರ್ತ್ಯ ಲೋಕಂವಿಶನ್ತಿ. **09:21.** ಅವರು ಆ ವಿಶಾಲವಾದ ಲೋಕವನ್ನು ಅನುಭವಿಸಿ ಪುಣ್ಯ ಕ್ಷೀಣವಾಗಲು ಮರ್ತ್ಯ ಲೋಕವನ್ನು ಪ್ರವೇಶಿಸುವರು .ಇಂದ್ರಿಯ ತೃಪ್ತಿಪಡಿಸುವಿಕೆ ಮೃತ್ಯುವಿನಲ್ಲು ವಿನಾಶದಲ್ಲೂ ಕೊನೆಗೊಳ್ಳುತ್ತದೆ. ಅದೇ ಇಂದ್ರಿಯ ನಿಗ್ರಹ ಪರಮಾತ್ಮನೆಡೆಗೆ ಒಯ್ಯುತ್ತದೆ. ಇದನ್ನು ಅರಿತವನು ಇಂದ್ರಿಯನಿಗ್ರಹವನ್ನು ಸತತವಾಗಿ ಮಾಡಬೇಕು. ಇದೇ ಜ್ಞಾನಯೋಗದ ಮೂರನೆಯ ಅರ್ಹತೆ.

ಕ್ಷೇತ್ರ ಮತ್ತು ಕ್ಷೇತ್ರಜ್ಞರ ವಿವೇಕವೇ ವಿದ್ಯೆ ಎಂದು ಜ್ಞಾನ ಯೋಗದಲ್ಲಿ ಕರೆಯಲ್ಪಟ್ಟಿದೆ. ಮೇಲೆ ಹೇಳಿದ ಅರ್ಹತೆಗಳುಳ್ಳ ವಿದ್ಯಾರ್ಥಿಯು ಸಂಪಾದಿಸಬೇಕಾದ ಜ್ಞಾನ ಯಾವುದು? ಆತ್ಮಾನಾತ್ಮಗಳ ಅರಿವು ಮತ್ತು ಅವುಗಳ ವಿಂಗಡಣೆಯೇ ಈ ಜ್ಞಾನ. ನಮ್ಮನ್ನು ಕುರಿತಾದ ಮತ್ತು ಸುತ್ತಲಿನ ಪ್ರಕೃತಿಯೊಡನೆ ನಮ್ಮ ಸಂಬಂಧದ ಕುರಿತಾದ ಜ್ಞಾನಕ್ಕಿಂತ ಹೆಚ್ಚಿನ ಜ್ಞಾನ ಇನ್ನೊಂದಿಲ್ಲ. ಪರಮಸತ್ಯದ ಸಾರವನ್ನು ಮತ್ತು ನಮ್ಮ ಸುತ್ತಮುತ್ತ ಇರುವ ವಸ್ತುಗಳ ವಾಸ್ತವಿಕಾಂಶವನ್ನು ವಿಶ್ಲೇಷಿಸುವ ತತ್ವಶಾಸ್ತ್ರದ ಭಾಗ ಅದರ ಶಿರೋಪ್ರಾಯವಾಗಿದೆ. **13: 12** ರಲ್ಲಿ ಕ್ಷೇತ್ರ ಕ್ಷೇತ್ರಜ್ಞರ ಜ್ಞಾನವುಂಟಷ್ಟೇ ಅದೇ ಜ್ಞಾನವೆಂದು ನನ್ನ ಮತ. ತತ್ವಶಾಸ್ತ್ರದಲ್ಲಿ ಕ್ಷೇತ್ರ, ಕ್ಷೇತ್ರಜ್ಞ ಪದಕ್ಕೆ ನವೀನವ್ಯಾಖ್ಯೆ ವಿಷಯ, ವಿಷಯಿಯಾಗಿದೆ. ಇದನ್ನು ಗೀತೆಗೂ ಬಳಸಬಹುದು . ಮೊದಲಿಗೆ ಕ್ಷೇತ್ರದಬಗ್ಗೆ ಗೀತೆಯ ಉಪದೇಶವೇನು ಎಂಬುದನ್ನು ಗಮನಿಸೋಣ. **13: 5,6**ರಲ್ಲಿ " ಮಹಾಭೂತಾನ್ಯಹಙ್ಕಾರೋ ಬುದ್ಧಿರವ್ಯಕ್ತ ಮೇವಚ. ಇಂದ್ರಿಯಾಣಿ ದಶೈಕಂ ಚ ಪಞ್ಚಚೇನ್ದ್ರಿಯಗೋಚರಾಃ". ಇಚ್ಛಾ ದ್ವೇಷಃ ಸುಖಂ ಧುಃಖಂ ಸಙ್ಘಾತಶ್ಚೇತನಾ ಧೃತಿಃ. ಏತತ್ ಕ್ಷೇತ್ರಂ ಸಮಾಸೇನ ಸವಿಕಾರಮುದಾಹೃತಮ್". ಮಹಾಭೂತಗಳು, ಅಹಂಕಾರ, ಬುದ್ಧಿ, ಅವ್ಯಕ್ತ, ಇಂದ್ರಿಯಗಳು ಹತ್ತು ಮತ್ತು ಒಂದು, ಇಂದ್ರಿಯ ಗೋಚರಗಳು ಐದು, ಇಚ್ಛೆ, ದ್ವೇಷ, ಸುಖ, ದುಃಖ, ಸಂಘ್ಯಾತ, ಚೇತನ, ಧೃತಿ ಇದೇ ಕ್ಷೇತ್ರವು. ಈ ರೀತಿ ಕ್ಷೇತ್ರವನ್ನು ಸಂಕ್ಷೇಪವಾಗಿ ಆದ

ಮಾರ್ಪಾಟುಗಳೊಂದಿಗೆ ವಿವರಿಸಿದೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಇಂದ್ರಿಯಗಳು ಅವುಗಳ ವಿಷಯಗಳು ( ದೇಹದ ಒಳಗಿನವು ಅಥವಾ ಹೊರಗಿನವು), ಘನ ದ್ರವ್ಯ ಮನಸ್ಸು ಅದರ ಮಾರ್ಪಾಡುಗಳು ಎಲ್ಲವೂ ಸೂಕ್ಷ್ಮದ್ರವ್ಯ. ಎರಡೂ ರೀತಿಯ ದ್ರವ್ಯದ ಸಂಘಾತವೆ ಕ್ಷೇತ್ರ. ಭೌತಿಕ ಶರೀರ ಮತ್ತು ನಮ್ಮ ಸುತ್ತಮುತ್ತಲಿರುವ ಭೌತದ್ರವ್ಯ ಅರಿವಿಗೆ ವಿಷಯವಾಗಿರುವುದರಿಂದ ವಿಷಯಿಯಾದ ಒಬ್ಬನ ಇರುವಿಕೆ ಸ್ವಯಂ ಸಿದ್ಧವಾಗುತ್ತದೆ. ಮನಸ್ಸು ಶುದ್ಧ ಮತ್ತು ಸೂಕ್ಷ್ಮ ದ್ರವ್ಯವಾಗಿದ್ದು ವಿಷಯ ಎನಿಸಿಕೊಳ್ಳುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಕಷ್ಟ, ಆದರೆ ಸ್ವಲ್ಪ ಪರ್ಯಾಲೋಚನೆ ಮಾಡಿದರೆ ಸ್ಪಷ್ಟವಾಗುತ್ತದೆ. ಇಚ್ಛೆ- ದ್ವೇಷ, ಸುಖ-ದುಃಖ, ಮುಂತಾದ ಭಾವಗಳನ್ನು ಪ್ರದರ್ಶಿಸುವಲ್ಲಿ ,ಮನಸ್ಸು ಈ ಭಾವನೆಗಳಿಗೆ ಹುಟ್ಟು ಹೊಂದುಗಳನ್ನು ಅಳಿವು-ಉಳಿವುಗಳನ್ನು ಉಂಟುಮಾಡುತ್ತಾ ತಾನೇ ಚಂಚಲವಾಗುತ್ತದೆ. ಈ ಬದಲಾವಣೆ ದೈಹಿಕ ಬದಲಾವಣೆಗಿಂತ ಏನೂ ಕಡಿಮೆ ಇಲ್ಲ. ಈ ಎಲ್ಲ ಬದಲಾವಣೆಗಳನ್ನು ಅರಿಯಲು ಬದಲಾವಣೆ ಇಲ್ಲದ ಒಂದು ಅರಿವು ಇರಬೇಕೆಂದಾಗುತ್ತದೆ. ದೈಹಿಕ ಮತ್ತು ಮಾನಸಿಕ ಬದಲಾವಣೆಗಳು ಒಂದಕ್ಕೊಂದು ಸ್ಪಂದನ ಪ್ರತಿಸ್ಪಂದನ ಮಾಡುತ್ತದೆ, ಆದರೆ ಅರಿಯುವವನಿಗಿಂತ ಯಾವಾಗಲೂ ಬೇರೆಯಾಗಿಯೇ ನಿಲ್ಲುತ್ತದೆ. ಶರೀರ ಮತ್ತು ಮನಸ್ಸಿನ ಎಲ್ಲಾ ಸ್ಥೂಲ ಸೂಕ್ಷ್ಮ ಬದಲಾವಣೆಗಳು ಶರೀರ ಮತ್ತು ಮನಸ್ಸಿನೊಂದಿಗೆ ಸೇರಿ ಕ್ಷೇತ್ರ ಎನಿಸಿಕೊಳ್ಳುತ್ತದೆ.

## ಈಗ ಕ್ಷೇತ್ರಜ್ಞನತ್ತ ಗಮನಹರಿಸೋಣ

ಶರೀರಕ್ಕೆ ತನ್ನದೇ ಆದ ಅರಿವಿಲ್ಲ. ಹೀಗಾಗಿ ಕ್ಷೇತ್ರವನ್ನು ಅರಿಯುವವನೇ ಕ್ಷೇತ್ರಜ್ಞ ಎಂದು ವಿಷಯ ವಿಷಯಿಗಳ ಬಗ್ಗೆ ತಿಳಿದವರು ಹೇಳುತ್ತಾರೆ. ಮನಸ್ಸು ಕಾಮ, ಕ್ರೋದ, ಇಚ್ಛೆ ಕಲ್ಪನೆ, ಸ್ಮೃತಿ, ಸಂಶಯ, ಚಿಂತನೆ, ಆಲೋಚನೆ ಇನ್ನೂ ಅನೇಕ ಕಾರ್ಯಗಳನ್ನು ಮಾಡಿ ಬದಲಾವಣೆಗಳಿಗೆ ಒಳಗಾಗುವುದು ಎಂದು ಪರಿಗಣಿಸಿದರೂ, ಮನಸ್ಸಿಗೆ ಎಲ್ಲವನ್ನೂ ಅರಿಯುವುದು ಉಂಟಾದರೂ, ತನ್ನ ತಾನರಿಯದು. ಈಎಲ್ಲಾ ಕಾರ್ಯಗಳಿಗೂ ,ಬದಲಾವಣೆಗಳಿಗೂ ಇರವನ್ನು ಕೊಟ್ಟು ಸಾಕ್ಷಿಯಾಗಿ ಅರಿಯುತ್ತಿರುವ ತನ್ನಲ್ಲಿ ಯಾವ ಬದಲಾವಣೆಯನ್ನು ಹೊಂದದ ಸತ್ ವಸ್ತು ಕ್ಷೇತ್ರಜ್ಞ. ಎಲ್ಲವನ್ನು ತಾಳಿಕೊಂಡು ಇರುವ ನಮ್ಮಗಳ ಆ ಅಂಶವೇ ಆತ್ಮ ಅಥವಾ ಕ್ಷೇತ್ರಜ್ಞ.

## ಪ್ರತಿಯೊಂದು ಅರಿವಿಗೂ ಪೂರ್ವಕಲ್ಪನೆಯಾದ ವಿಷಯ ವಿಷಯಿ

ಕ್ಷೇತ್ರಜ್ಞನ ವಿವರವಾದ ಪರಿವೀಕ್ಷಣೆಯನ್ನು ಮಾಡುವ ಮೊದಲು ಎಲ್ಲ ತಿಳಿವಿಗೂ ವಿಷಯ ವಿಷಯಿ ಪೂರ್ವಭಾವಿಯಾಗಿ ಇರುತ್ತದೆ ಎಂಬುದನ್ನು ನೆನಪಿನಲ್ಲಿಡಬೇಕು. ಇದರಿಂದ ವಿಷಯ ವಿಷಯಿಯ ಕಾರಣ ಅಥವಾ ಆದಿಯನ್ನು ಗ್ರಹಿಸಲು ಸಾಧ್ಯವೇ ಇಲ್ಲ. ಕಾರಣ ಅಥವಾ ಆದಿಯ ಭಾವನೆಗೂ ಪೂರ್ವಭಾವಿಯಾಗಿ ವಿಷಯ ವಿಷಯಿ ಇರಬೇಕು. ಗೀತೆಯ **13 :19** ಪ್ರಕೃತಿಂ ಪುರುಷಂ ಚೈವ ವಿದ್ಯ್ಯನಾದೀ ಉಭಾವತಪಿ. ವಿಕಾರಾಂಶ್ಚ ಗುಣಾಂಶ್ಚೈವ ವಿದ್ಧಿ ಪ್ರಕೃತಿಸಂಭವಾನ್. ಪ್ರಕೃತಿಯನ್ನು ಪುರುಷನನ್ನು ಅನಾದಿ ಎಂದು ತಿಳಿ. ವಿಕಾರಗಳು ( ಸತ್ವ**,** ತಮಸ್**,** ರಜಸ್) ಗುಣಗಳು ಪ್ರಕೃತಿ ಸಂಭವಗಳೆಂದು ತಿಳಿ . ಕರ್ಮಯೋಗವನ್ನು ಚರ್ಚಿಸುವಾಗ ಗುಣಗಳ ಪರಾಮರ್ಶೆ ನಡೆದಿದೆ. ಪ್ರಕೃತಿಯಬಲಗಳಿಂದ ಉಂಟಾದ ವಿಕಾರಗಳು ಸ್ಥೂಲವಾಗಿರಲಿ ಸೂಕ್ಷ್ಮವಾಗಿರಲಿ ಆ ಪ್ರಕೃತಿಯಲ್ಲೇ ಎಂದರೆ ಕ್ಷೇತ್ರದಲ್ಲೇ ಇರುತ್ತದೆ. ಕ್ಷೇತ್ರಜ್ಞನನ್ನು ಪುರುಷ ಅಥವಾ ವ್ಯಕ್ತಿ ಎಂದು ಕರೆಯಲಾಗುತ್ತದೆ. "ಕಾರ್ಯಕರಣ ಕರ್ತೃತ್ವೇ ಹೇತುಃ ಪ್ರಕೃತಿರುಚ್ಯತೆ. ಪುರುಷಃ ಸುಖದುಃಖಾನಾಂ ಭೋಕ್ತೃತ್ವೇ ಹೇತುರುಚ್ಯತೇ" **13 :20.** ಪ್ರಕೃತಿಯು ಕಾರ್ಯ ಕರಣಗಳ ಕರ್ತೃತ್ವಕ್ಕೆ ಹೇತುವೆನಿಸಿರುವುದು. ಪುರುಷನು ಸುಖ ದುಃಖಗಳ ಭೋಕ್ತೃತ್ವಕ್ಕೆ ಹೇತುವೆನಿಸಿರುವನು. ಕಾರ್ಯ ಕರಣಗಳು ದೇಶ ಕಾಲಗಳಲ್ಲಿ ಮಾತ್ರ ಸಾಧ್ಯ. ವೇದಾಂತಿಗಳು ಇದನ್ನೇ" ದೇಶಕಾಲ ನಿಮಿತ್ತೇ" ಎಂದು ಶಂಕರಾಚಾರ್ಯರು ಸೂತ್ರ ಭಾಷ್ಯದ ಒಂದನೇ ಸೂತ್ರಕ್ಕೆ **1:1:2** ಬರೆದಿರುವ ಭಾಷ್ಯದಿಂದ ಉದಾಹರಿಸುತ್ತಾರೆ. ದೇಶಕಾಲ ಕಾರ್ಯ ಕಾರಣಗಳು ಕ್ಷೇತ್ರದಲ್ಲಿದೆ( ಪ್ರಕೃತಿ). ಯಾವುದು ಅರಿಯುವುದೋ ಅಥವಾ ಅನುಭವಿಸುವುದೋ ಅದು ಪುರುಷ. ಪುರುಷ -ಪ್ರಕೃತಿ**,** ಕ್ಷೇತ್ರ-ಕ್ಷೇತ್ರಜ್ಞ ಅಥವಾ ವಿಷಯ - ವಿಷಯಿ ಇವುಗಳ ಭಿನ್ನತೆ ವೈರುಧ್ಯತೆಯೇ ಮಾನವನ ಎಲ್ಲ ಅರಿವಿನ ಆಧಾರ." ಇಚ್ಛಾ ದ್ವೇಷಃ ಸುಖಂ ದುಃಖಂ ಸಂಗಾತಶ್ಚೇತನಾ ದೃತಿಃ. ಏತತ್ ಕ್ಷೇತ್ರಂ ಸಮಾಸೇನ ಸವಿಕಾರಮುದಾಹೃತಂ". ಇಚ್ಛೆ**,** ದ್ವೇಷ ಸುಖ-ದುಃಖ ಸಂಜ್ಯಾತ**,** ಚೇತನ**,** ದೃತಿ ಇದೇ ಕ್ಷೇತ್ರವು( **13: 6).**

ಆತ್ಮನ ಸಹಜ ಪರಿಶುದ್ಧತೆ ವಿಕಾರವಾಗುವುದೇ ಕ್ಷೇತ್ರದ ಸಾರವೆಂದು ಈಗಾಗಲೇ ತಿಳಿದಿದ್ದೇವೆ. ನಿರ್ವಿಕಾರನಾಗಿ ಈ ಎಲ್ಲ ವಿಕಾರಗಳನ್ನು ಅರಿಯುವವನೇ ಕ್ಷೇತ್ರಜ್ಞ.ಈ ಕ್ಷೇತ್ರಜ್ಞ ಅಥವಾ ಪುರುಷನಿಗೆ ಒಂದು ಅದ್ಭುತವಾದ ಕಲೆಇದ್ದು ಅದರಿಂದ ತನ್ನನ್ನು ಸುಖ-ದುಃಖಗಳೊಂದಿಗೆ ಅಥವಾ ಮನಸ್ಸಿನ ಮಾರ್ಪಾಡುಗಳೊಂದಿಗೆ ಗುರುತಿಸಿಕೊಳ್ಳುವುದು ( ಸಂಗ )ಇರುವಂತೆ ನಮ್ಮ ಅನುಭವದಲ್ಲಿದೆ. ಕ್ಷೇತ್ರಜ್ಞನ ಈ ದ್ವಂದ್ವದೃಷ್ಟಿಯ ಆಧಾರದಿಂದ ಜ್ಞಾನಯೋಗ ಒಂದು ಗಮನಾರ್ಹವಾದ ಉಪ ಸಿದ್ಧಾಂತವನ್ನು ತರ್ಕಿಸುತ್ತದೆ. ಆತ್ಮವು ಸ್ವಾಭಾವಿಕವಾಗಿ ಶುದ್ಧವೂ ಆನಂದವೂ ಆಗಿದ್ದರು ಪ್ರಕೃತಿ ಅಥವಾ ವಿಕಾರದೊಂದಿಗೆ

ತನ್ನನ್ನು ಗುರುತಿಸುವುದರಿಂದ ದುಃಖ ಮತ್ತು ಕಷ್ಟಗಳಿಗೆ ಗುರಿಯಾದಂತೆ ಆಗುತ್ತಾನೆ. "ಪುರುಷಃ ಪ್ರಕೃತಿಸ್ಥೋ ಹಿ ಭುಙ್ಕ್ತೇ ಪ್ರಕೃತಿಜಾನ್ ಗುಣಾನ್. ಕಾರಣಂ ಗುಣ ಸಂಙ್ಗೋSಸ್ಯ ಸದಸದ್ಯೋನಿಜನ್ಮಸು" .ಪುರುಷನು ಪ್ರಕೃತಿಸ್ಥನಾಗಿಯೇ ಪ್ರಕೃತಿಯಿಂದಾಗಿರುವ ಗುಣಗಳನ್ನು ಭೋಗಿಸುತ್ತಿರುವನು. ಗುಣಸಂಗವೇ ಇವನಿಗೆ ಸದಸದ್ಯೋನಿಗಳಲ್ಲಿ ಹುಟ್ಟುವುದಕ್ಕೆ ಕಾರಣವೂ**(13: 21).** ಪ್ರಕೃತಿಯಲ್ಲಿ ನಾನೆಂಬ ಅಭಿಮಾನವೇ ಅಜ್ಞಾನ ಮತ್ತು ಅದರ ಫಲವಾದ ಸುಖ-ದುಃಖಗಳ (ಒಂದರ ನಂತರ ಒಂದರ) ಅನುಭವಿಸುವಿಕೆಯೇ ಸಂಸಾರ. ಈ ವರ್ತುಲಾಕಾರದ ಸುಖ-ದುಃಖಾನುಭವಗಳೇ (ಸಂಸರತಿ) ಸಂಸಾರ ಎಂದು ವೇದಾಂತ ಶಾಸ್ತ್ರಜ್ಞರು ಕರೆಯುತ್ತಾರೆ.

## <u>ಅಜ್ಞಾನ</u>

**ಆತ್ಮ ಸರ್ವದಾ ಸ್ವತಂತ್ರ. ಬಂಧನ ಎಂಬುದು ಕೇವಲ ಪ್ರಕೃತಿಯಲ್ಲಿ ನಾನೆಂಬ ಅಭಿಮಾನ ಅಥವಾ ಅಜ್ಞಾನ ಜನ್ಯ ಜ್ಞಾನ. ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ 05:15. ಅಜ್ಞಾನವು ಜ್ಞಾನವನ್ನು ಆವರಿಸಿ ಮರೆ ಮಾಡಿರುವುದರಿಂದ ಜೀವರು ಅದರಲ್ಲಿ ಮೋಹ ಗೊಳ್ಳುತ್ತಾರೆ. ಇದು ಅಹಂ ಅಥವಾ ಆತ್ಮಕ್ಕೆ ಸೂಕ್ತವಾದ ವ್ಯಾಖ್ಯೆ. ಆತ್ಮವು ಒಂದೇ ಸಮಯದಲ್ಲಿ ಮುಕ್ತವಾಗಿಯೂ ಬದ್ಧವಾಗಿಯೂ ಇರುವುದು ಸಾಧ್ಯವಿಲ್ಲ.**

ಬದ್ಧವಾಗಿರುವುದು ಸ್ವಭಾವದಿಂದಲೇ ಆಗಿದ್ದಲ್ಲಿ ಬಿಡುಗಡೆಯ ಯೋಚನೆ ಮಾಡುವುದು ಸಾಧ್ಯವಿಲ್ಲ. ಮಹಾತ್ಮರಾದ ಸುರೇಶ್ವರಾಚಾರ್ಯರು ಹೇಳುವಂತೆ "ಆತ್ಮಾ ಕರ್ತಾದಿರೂಪ ಶ್ಚೇನ್ಮಾ". ಸೂರ್ಯನ ಸ್ವಭಾವವಾದ ಬಿಸಿಯನ್ನು ಹೇಗೆ ಅವನಿಂದ ಬೇರ್ಪಡಿಸಲಾಗದೋ ಅಂತೇ ಆತ್ಮನಿಗೆ ಕರ್ತೃತ್ವಾದಿಗಳು ಸ್ವಭಾವವಾಗಿದ್ದಲ್ಲಿ ಅದರಿಂದ ಮುಕ್ತಿಗಾಗಿ ಭರವಸೆಯೇ ಇಲ್ಲ. ನಮ್ಮ ಸ್ವಭಾವ ಸುಖ ದುಃಖಗಳ ಏರಿಳಿತಕ್ಕೆ ಒಳಪಡುವುದೇ ಆಗಿದ್ದಲ್ಲಿ ಅದನ್ನು ಬದಲಾಯಿಸುವ ಪ್ರಯತ್ನವಾದರೂ ಏತಕ್ಕೆ. ಇದಕ್ಕೆ ವಿರುದ್ಧವಾಗಿ ಆತ್ಮನು ಶುದ್ಧನೂ ಸ್ವತಂತ್ರನೂ ಸ್ವಭಾವದಿಂದಲೇ ಆಗಿದ್ದಲ್ಲಿ ಹೊರಗಿನ ಯಾವುದರಿಂದಲೂ ಪ್ರಭಾವಬೀರುವುದಾಗಲಿ ಬದ್ಧನನ್ನಾಗಿಸುವುದಾಗಲಿ ಸಾಧ್ಯವೇ ಇಲ್ಲ. ಆದ್ದರಿಂದ ಪ್ರಾಚೀನ ಭಾರತೀಯ ವೇದಾಂತಿಗಳು ಆತ್ಮನು ಸ್ವಭಾವದಿಂದಲೇ ಮುಕ್ತನು, ಅಜ್ಞಾನ ಒಂದೇ ನಿಜವಾದ ಬಂಧನವೂ ಎಂದು ಪ್ರತಿಪಾದಿಸಿದ್ದರು." ಪ್ರಕಾರಾಂತರಾ ಸಂಭವಾದವಿವೇಕ ಏವ ಬಂದಃ". ಬೇರೆ ಗತ್ಯಂತರವಿಲ್ಲವಾದ್ದರಿಂದ ವಿವೇಚನೆಯಿಲ್ಲದಿರುವುದೇ ಬದ್ಧತೆಗೆ ಕಾರಣ ಎಂದು ಒಪ್ಪಬೇಕಾಗುತ್ತದೆ ಎಂದು ಸಾಂಖ್ಯ ಸೂತ್ರ 6:16." ಅವಿದ್ಯಾಕ್ಷೇತ್ರ ಮುತ್ತರೇಷಾಂ

ಪ್ರಸುಪ್ತ ತನುವಿಚ್ಛಿನ್ನಾದ". ದುಃಖಸಂಘೀ ತಡೆಗಳಿಗೆ, ಆ ತಡೆಗಳು ಸುಪ್ತ ವಾಗಿರಲಿ, ಕೃಶವಾಗಿರಲಿ ,ಅಡಗಿರಲಿ ಅಥವಾ ವಿಸ್ತಾರವಾಗಿರಲಿ ಅಜ್ಞಾನವು ಫಲಭರಿತ ಕ್ಷೇತ್ರವಾಗಿದೆ. ಯೋಗಸೂತ್ರ 2:4" ದುಃಖಜನ್ಮ ಪ್ರವೃತ್ತಿದೋಷ ಮಿತ್ಯಾ ಜ್ಞಾನಾನಾಂ ಉತ್ತರೋತ್ತರಾಪಾಯೆ ತದಂತರಾಪಾಯದಪವರ್ಗ". ದುಃಖ, ಹುಟ್ಟು, ಮೋಹಯುಕ್ತವಾದಕರ್ಮ ,ಪಾಪ, ಮಿಥ್ಯಾಜ್ಞಾನ, ಇವುಗಳಲ್ಲಿ ಹಿಂದೂ ಹಿಂದಿನದನ್ನು ಕಳೆದಾಗ ಮುಂದು ಮುಂದಿನವು ತಾವೇ ಕಳೆದುಹೋಗುತ್ತವೆ. ಹಿಂದಿನದಾದ ಮಿಥ್ಯಾಜ್ಞಾನವನ್ನು ಕಳೆದರೆ ಮಿಕ್ಕವು ಒಂದರ ನಂತರ ಒಂದು ಕ್ರಮವಾಗಿ ತಾವೆ ಕಳೆಯುತ್ತವೆ. ಇದರ ಫಲ ಬಿಡುಗಡೆ ಎಂದು ನ್ಯಾಯ ಸೂತ್ರ 1-1.2.

ಅಜ್ಞಾನ ಇರುವವರೆಗೆ ಮಾತ್ರ ಪ್ರಾಪಂಚಿಕ ಸುಖ-ದುಃಖಗಳ ಅನುಭವ ಎಂಬುದು ತಿಳಿಯುತ್ತದೆ. ಬಂಧನ ಎಂಬುವುದು ಕೇವಲ ತೋರಿಕೆ, ಆತ್ಮನ ಸಹಜ ಸ್ವಭಾವ ಸದಾ ವಿನಿರ್ಮುಕ್ತಾ. ಮನುಷ್ಯನ ತೋರಿಕೆಯ ಜೀವನ ಬರೀ ಕನಸು, ದುಃಖ ಬಲಹೀನತೆ ಆತ್ಮನ ಮೂಲ ಸ್ವಭಾವವಲ್ಲ ಎಂದು ಮಹಾತ್ಮರು ಎಲ್ಲಾ ಧರ್ಮಗಳು ಉಪದೇಶಿಸುತ್ತದೆ. ಜೀವ ಮೂಲತಃ ಶುದ್ಧವೂ ಪರಿಪೂರ್ಣವೂ ಆಗಿದ್ದು ಅದನ್ನು ಮರಳಿ ಪಡೆಯಬೇಕಾಗಿದೆ ಎಂಬುದು ಇಡಿ ವಿಶ್ವದ ಅಭಿಪ್ರಾಯವಾಗಿದೆ. ಮಹಾಭಾರತವು ಹೇಳುವಂತೆ ಮೊದಲಿಗೆ ಮನುಷ್ಯರೆಲ್ಲ ಸತ್ಪಥಗಾಮಿಗಳಾಗಿದ್ದು ನಂತರದಲ್ಲಿ ಪ್ರಮಾದ ಅವರ ಮನಸ್ಸನ್ನು ಆಕ್ರಮಿಸಿಕೊಳ್ಳತೊಡಗಿತು. ಇದರಿಂದ ಅವರ ಗ್ರಹಣ ಶಕ್ತಿಗೆ ಮಂಕು ಕವಿದು ಅವರೆಲ್ಲಾ ಲೋಲುಪರಾದರು. ಈ ಲೋಲುಪತೆ ಮತ್ತಷ್ಟು ಗೊಂದಲಉಂಟುಮಾಡಿ ವೇದಗಳು ಮರೆಯಾಗುವಂತಾಯಿತು. ಸೈತಾನನ ಪ್ರಭಾವದಿಂದ ಆಡಮ್ ನ ಪತನದ ಕಥೆ ಇದೇ ಹಿನ್ನೆಲೆಯನ್ನು ಹೊಂದಿದೆ. ಜೊರಾಷ್ಟ್ರೀಯನ್ನರ ಧರ್ಮದಂತೆ ಮನುಷ್ಯನ ಅವನತಿಗೆ ಆಹ್ರಿಮಾನನ ಪ್ರಭಾವವೇ ಕಾರಣ. ಬೌದ್ಧರ ನಿರ್ವಾಣ ಸಿದ್ಧಾಂತವು ಇದನ್ನೇ ಸೂಚಿಸುತ್ತದೆ. ಮಾನವನ ಅಧಃಪತನವನ್ನು ಪರಿಗಣಿಸಿರುವ ಎಲ್ಲ ಮತಗಳು ಒಕ್ಕೊರಲಿನಿಂದ ಅವನ ಅವಿವೇಕವೇ ಅವನತಿಗೆ ಕಾರಣವೆಂದು ಘೋಷಿಸುತ್ತದೆ. ಈ ಅವಿವೇಕವೇ ಅಜ್ಞಾನ. ಅಜ್ಞಾನವಲ್ಲದೆ ಶುದ್ಧವಾದ ಆತ್ಮ ಹೇಗೆತಾನೆ ಅವನತಿ ಹೊಂದಲು ಸಾಧ್ಯ.ಈ ಅಜ್ಞಾನದಿಂದ ಬಿಡುಗಡೆಹೊಂದಿದ ಜ್ಞಾನಿಗಳು ಮಾತ್ರ ಈ ಸತ್ಯವನ್ನರಿಯಲು ಸಾಧ್ಯ. "ಜ್ಞಾನೇನಾ ತು ತದಜ್ಞಾನಂ ಯೆಷಾಂ ನಾಶಿತಮಾತ್ಮನಃ. ತೇಷಾಮಾದಿತ್ಯವಜ್ಞಾನಂ ಪ್ರಕಾಶಯತಿ ತತ್ಪ ಪರಮ್" **05:16** . ಯಾರಿಗೆ ಆತ್ಮನ ಅಜ್ಞಾನವು ಜ್ಞಾನದಿಂದ ನಾಶವಾಗಿರುವುದೋ, ಅವರಿಗೆ ಸೂರ್ಯನಂತೆ ಜ್ಞಾನವು ಆ ಪರವಸ್ತುವನ್ನು ಬೆಳಗುವುದು. ಕ್ಷೇತ್ರಜ್ಞ ಸದಾ ಸರ್ವದಾ ಬದಲಾವಣೆ ಯಿಲ್ಲದ ಬಂಧವಿಲ್ಲದ ಸ್ವಭಾವದ್ದಾಗಿರುವುದರಿಂದ ಅದೊಂದೇ ಸತ್ಯ ಎಂಬುದು ಬಲ್ಲವರಿಗೆ ಮನವರಿಕೆಯಾಗಿರುತ್ತದೆ.

# ಸತ್ಯದ ಬಗ್ಗೆ ಗೀತೆ

ಭಗವದ್ಗೀತೆಯು ಬ್ರಹ್ಮವಿದ್ಯೆ( ಸತ್ಯದ ತತ್ವಶಾಸ್ತ್ರ) ಮತ್ತು ಯೋಗಶಾಸ್ತ್ರ( ಯೋಗ ಅಥವಾ ಸಮತ್ವದ ವಿಜ್ಞಾನ) ಎಂದು ಈ ಗ್ರಂಥದ ಮೊದಲಲೇ ಉಲ್ಲೇಖಿಸಲಾಗಿದೆ. ಜ್ಞಾನ ಯೋಗದಲ್ಲಿ ಬ್ರಹ್ಮದ ( ಸತ್ಯದ) ಜ್ಞಾನ ಮತ್ತು ಈ ಜ್ಞಾನವನ್ನು ಪಡೆಯುವ ಸಾಧನ ಎರಡು ಬೆರಕೆ ಯಾಗಿರುವುದರಿಂದ, ಗೀತೆಯು ಬ್ರಹ್ಮದ ಬಗ್ಗೆ ಏನು ಹೇಳುತ್ತದೆ ಎಂಬುದನ್ನು ಗಮನಿಸುವುದು ಅವಶ್ಯ. "ನಾಸತೋ ವಿದ್ಯತೆ ಭಾವೋ ನಾಭಾವೋ ವಿದ್ಯತೆ ಸತಃ. ಉಭಯೋರಪಿ ದೃಷ್ಟೋಽನ್ತಸ್ತ್ವನಯೋಸ್ತತ್ವ ದರ್ಶಿಭಿಃ". 02:16 .ಅಸತ್ತಿಗೆ ಇರುವಿಕೆಯಿಲ್ಲ, ಸತ್ತಿಗೆ ಇಲ್ಲದಿರುವಿಕೆ ಇಲ್ಲ. ಇವೆರಡರ ನೆಲೆಯು ತತ್ವದರ್ಶಿಗಳಿಗೆ ಕಂಡುಬಂದಿರುತ್ತದೆ . ಈ ವಿವರಣೆಯಿಂದ ಕಾಲದಿಂದ ಯಾವುದು ಅನಿತ್ಯವೋ ಅದು ಸತ್ಯವಲ್ಲ, ಮತ್ತು ವಿಶ್ವಪ್ರಜ್ಞೆ ಅಥವಾ ಉಪನಿಷತ್ತುಗಳು ಹೇಳುವಂತೆ ಬ್ರಹ್ಮವನ್ನು ಹೊರತುಪಡಿಸಿ ಈ ಪ್ರಪಂಚದ ಯಾವುದೇ ವಸ್ತುವು ಈ ಪರೀಕ್ಷೆಯಲ್ಲಿ ಉತ್ತೀರ್ಣವಾಗುವುದಿಲ್ಲ.

ಉಪನಿಷತ್ತಿನ ಸಾರಸರ್ವಸ್ವವನ್ನು ಕ್ರೋಡೀಕರಿಸಿ ಗೀತೆಯು ಬ್ರಹ್ಮಕ್ಕೆ ವ್ಯಾಖ್ಯೆಯನ್ನು ಮಾಡುತ್ತದೆ. ಪರಮ ಸತ್ಯವನ್ನು ನಿರ್ದೇಶಿಸುವ ಬ್ರಹ್ಮ ಪದವಾಗಲಿ, ಅದಕ್ಕೆ ಕೊಡುವ ವಿಶೇಷಣಗಳಾಗಲಿ ನೇರವಾಗಿ ಉಪನಿಷತ್ತು ಗಳಿಂದಲೇ ತೆಗೆದುಕೊಳ್ಳಲಾಗಿದೆ. ಗೀತೆಯ ಕರ್ತೃ ಗೀತೆಯನ್ನು ಉಪನಿಷತ್ತು ಎಂದೇ ಕರೆಯುತ್ತಾನೆ. ಸಂಪ್ರದಾಯವಾಗಿ ಗೀತೆಯು ಸ್ಮೃತಿ ಎಂದು ಉಪನಿಷತ್ತುಗಳು ಶೃತಿ ಎಂದು ಪ್ರಸಿದ್ಧವಾಗಿದೆ. ಈ ಕೃತಿಯ ಪೂರ್ಣ ಹೆಸರು "ಭಗವದ್ಗೀತೋಪನಿಷತ್". ಗೀತಾಚಾರ್ಯ ಇದನ್ನು ಉಪನಿಷತ್ತಿನ ಸಾರ ಎಂದೇ ಗುರುತಿಸಲು ಉದ್ದೇಶಿಸುತ್ತಾನೆ. ಇದನ್ನು ಕೆಳಗಿನ ವಾಕ್ಯ ದೃಢಪಡಿಸುತ್ತದೆ. "ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲನಂದನಃ ಪಾರ್ಥೋ ವತ್ಸಃ ಸುಧೀರ್ಭೋಕ್ತಾ ದುಗ್ಧಃ ಗೀತಾಮೃತಂ ಮಹತ್"( ಗೀತಾ ಮಹಾತ್ಮೆ.)ಎಲ್ಲಾ ಉಪನಿಷತ್ತು ಗೋವುಗಳು, ಕೃಷ್ಣ ಗೋಪಾಲಕ, ಪಾರ್ಥ ಕರು ವಿವೇಕಿಗಳು ಗೀತಾಮೃತವಾದ ಹಾಲನ್ನು ಭೋಗಿಸುವರು.

ವಿಷಯವಾದ ಪ್ರಪಂಚ ಸತತ ಬದಲಾವಣೆಗೆ ಒಳಪಟ್ಟಿದೆ, ಹಾಗೂ ವಿಷಯಿಯಾದ ಆತ್ಮ ಬದಲಾವಣೆ ಇಲ್ಲದ ಕಾರಣ ಒಂದೇ ಸತ್ಯವಾಗಿದೆ ಎಂಬುದು ಉಪನಿಷತ್ತಿನ ಮೂಲ ಸಿದ್ಧಾಂತ. ನಾಭಾವೋ ವಿದ್ಯತೆ ಸತಃ ಎಂದು ಹೇಳುವಲ್ಲಿ ಗೀತೆಯು ಉಪನಿಷತ್ತಿನ ಈ ಮೂಲ ಸಿದ್ಧಾಂತವನ್ನು ಉಲ್ಲೇಖಿಸುತ್ತದೆ. ಜ್ಞಾನಯೋಗದ ಪ್ರಕಾರ ಈ ಸದ್ ವಸ್ತು ನಮ್ಮ ಆತ್ಮನೇ ಆಗಿರುವುದರಿಂದ ಅದರ ಅಳಿವಿನ ಬಗ್ಗೆ ಯಾವುದೇ ಭಯವಿಲ್ಲ. ಸತ್ತಿಗೆ ಬದಲಾವಣೆಯಿಲ್ಲ ಸಾವಿಲ್ಲ. ಬದಲಾವಣೆಗೆ ಸಾಕ್ಷಿಯಾಗಿರುವ ವಸ್ತು ಬದಲಾವಣೆ ಇಲ್ಲದ್ದಾಗಿ ಇರಬೇಕಾದ್ದರಿಂದ, ಯಾರು ತನ್ನ ನಿಜ ಸ್ವರೂಪವನ್ನು ಅರಿತಿರುವರೋ ಅವರಿಗೆ ದುಃಖ ಭಯ ನ್ಯೂನ್ಯತೆಗಳಿಲ್ಲ ಎಂದು ಗೀತೆ ಹೇಳುತ್ತಿದೆ. ಕ್ಷೇತ್ರಜ್ಞ ಪರಿಪೂರ್ಣನಾಗಿದ್ದರೂ ಅವಿದ್ಯೆಯಿಂದ ಅಪರಿಪೂರ್ಣನೆಂದು ತಿಳಿಯಲಾಗುತ್ತಿದೆ. ಬದಲಾವಣೆ ಇಲ್ಲದ ಸತ್ ಸ್ವರೂಪವಾದರೂ ಸಾವು ಮತ್ತು ದುಃಖಕ್ಕೆ ನಡುಗುತ್ತಿದ್ದಾನೆ. ಎಮರ್ಸನ್ನ ನ ಮಾತಿನಲ್ಲಿ ಹೇಳುವುದಾದರೆ "ಪ್ರತಿಯೊಬ್ಬ ಮನುಷ್ಯನು ದೈವ ನಿರ್ವಹಿಸುತ್ತಿರುವ ಮೂರ್ಖನ ಪಾತ್ರ". ಒಂದು ದಟ್ಟ ಅವಿದ್ಯೆಯ ಆವರಣ ನಮ್ಮನ್ನು ಆವರಿಸಿದೆ. ಮಹಾಭಾರತ ಹೇಳುವಂತೆ ಈ ದೋಷ ನಮ್ಮ ಮೇಲೆ ದಾಳಿ ಮಾಡಿದೆ. ಕ್ರಿಶ್ಚಿಯನ್ನರ ಪ್ರಕಾರ" ಆಡಮ್ ನ ಪಾಪ ನಮ್ಮ ಮೇಲೆ ಹರಿದು ಬಂದಿದೆ ". ಬೌದ್ಧರ ಪ್ರಕಾರ ಮಾರನ ಪ್ರಲೋಭನೆ ನಮ್ಮನ್ನು ಮರುಳುಮಾಡಿದೆ". ಒಂದೇ ವಿಷಯವನ್ನು ಬೇರೆ ಬೇರೆ ಭಾಷೆಗಳಲ್ಲಿ ಹೇಳಲಾಗಿದೆ. "ಅಜ್ಞಾನೇನಾವೃತಂ ಜ್ಞಾನಮ್" ಜ್ಞಾನ ಅಜ್ಞಾನದಿಂದ ಮುಚ್ಚಲ್ಪಟ್ಟಿದೆ. ಈ ಆವರಣವನ್ನು ತೊಡೆದ ಹೊರತು, ಅಜ್ಞಾನದಿಂದ ಹೊರಬಂದ ಹೊರತು ದುಃಖದಿಂದ, ಕ್ಲೇಶದಿಂದ, ಸಾವಿನಿಂದ ಬಿಡುಗಡೆಯಿಲ್ಲ. ಆತ್ಮನ ಸ್ವರೂಪವನ್ನು ಅರಿತವನು, ಎಂದೂ ದುಃಖ ಕ್ಲೇಶ ಇರಲಿಲ್ಲ, ಪ್ರಕೃತಿ ಮತ್ತು ಅದರ ಕಾರ್ಯದಲ್ಲಿ ಇದ್ದ ನಾನು ಎಂಬ ಅಭಿಮಾನವೇ ಈ ರೀತಿ ತೋರಿತು ಎಂದು ಅರಿತಿರುತ್ತಾನೆ."ಯ ಏನಂ ವೇತ್ತಿ ಹನ್ತಾರಂ ಯಶ್ಚೈನಂ ಮನ್ಯತೆ ಹತಮ್.ಉಭೌ ತೌನ ವಿಜಾನೀತೋನಾಯಂ ಹನ್ತಿ ನ ಹನ್ಯತೇ. ನ ಜಾಯತೇ ಮ್ರಿಯತೆ ವಾ ಕದಾಚಿ-ನ್ನಾಯಂಭೂತ್ವಾಽಭವಿತಾವಾ ನ ಭೂಯಃ. ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ ನಾ ಹನ್ಯತೇ ಹನ್ಯಮಾನೆ ಶರೀರೇ", ಈತನು ಕೊಲ್ಲುವವನೆಂದು. ಯಾವನು ತಿಳಿಯುತ್ತಾನೋ ಮತ್ತು ಈತನು ಕೊಲ್ಲಲ್ಪಡತಕ್ಕವನೆಂದು ಯಾವನು ತಿಳಿಯುತ್ತಾನೋ ಅವರಿಬ್ಬರೂ ಅರಿಯರು. ಇವನು ಕೊಲ್ಲುವುದೂ ಇಲ್ಲ, ಕೊಲ್ಲಲ್ಪಡುವುದು ಇಲ್ಲ. ಈತನು ಎಂದಿಗೂ ಹುಟ್ಟುವುದಿಲ್ಲ, ಸಾಯುವುದೂ ಇಲ್ಲ. ಇವನು ಅಜನು,ನಿತ್ಯನು ಶಾಶ್ವತನು, ಪುರಾಣನು; ಶರೀರವು ಹತವಾಗುತ್ತಿದ್ದರೂ ಹತನಾಗುವುದಿಲ್ಲ.( 02:19, 2.20.)

# ಜ್ಞಾನಿಯ ನೈಷ್ಕರ್ಮ್ಯತೆ ಎಂದರೇನು?

ಆತ್ಮನ ನೈಷ್ಕರ್ಮ್ಯತೆ ಮತ್ತು ಪರಿಶುದ್ಧತೆ ಅನರ್ಹವಾದ ಖಂಡನೆಗಳಿಗೆ ಒಳಪಟ್ಟಿದೆ. ಬಿಷಪ್ ಕ್ಲಾಡ್ವೆಲ್ ಗೀತೆಯ ಬಗ್ಗೆ ಹೀಗೆ ಟೀಕೆ ಮಾಡುತ್ತಾನೆ ." ಒಬ್ಬ ಕೊಲೆಯ ಆರೋಪಿ ತನ್ನ ಆರೋಪವನ್ನು ನಿರಾಕರಿಸುತ್ತಾನೆ ಮತ್ತು ಆತ್ಮರಕ್ಷಣೆಗಾಗಿ ಕೊಲೆ ಮಾಡಬೇಕಾಯಿತು ಎಂದು ಹೇಳುವುದಿಲ್ಲ ಆದರೆ ಕೃಷ್ಣನ ಭಾಷೆಯನ್ನು ಬಳಸುತ್ತಾನೆ. "ಕೊಲೆ ಎನ್ನುವುದು ಆಗುವ ಸಾಧ್ಯತೆಯೇ ಇಲ್ಲ. ಆತ್ಮ ಕೊಲ್ಲುವವನೂ ಅಲ್ಲ ಕೊಲ್ಲಿಸಿ ಕೊಳ್ಳುವವನೂ ಅಲ್ಲ. ಅದು ಶಾಶ್ವತ ಮತ್ತು ಅವಿನಾಶಿ. ಒಂದು ದೇಹದಿಂದ ಒಂದು ದೇಹಕ್ಕೆ ದೂಡಲ್ಪಡುತ್ತಾನೆ. ಜನನ ಮರಣ ಅನಿವಾರ್ಯ ಆದ್ಧರಿಂದ ಮಾನ್ಯರಾದ ನ್ಯಾಯಾಧೀಶರು ತೊಂದರೆ ತೆಗೆದುಕೊಂಡು ವೃಥಾ ನ್ಯಾಯಾಲಯದ ಸಮಯ ವ್ಯರ್ಥ ಮಾಡುವುದು ಉಚಿತವಲ್ಲ "ಎನ್ನುತ್ತಾನೆ. ನ್ಯಾಯಾಧೀಶರು ಈ ವಾದವನ್ನು ನಿರ್ಣಾಯಕವೆಂದು ಪರಿಗಣಿಸುವರೇ? ಎಂದಿಗೂ ಇಲ್ಲ. ಅಪರಾಧಿಯು ಭಗವದ್ಗೀತೆಯಿಂದ ಎಷ್ಟೇ ವಾಕ್ಯಗಳನ್ನು ಉದಾಹರಿಸಿದರೂ, ಅವನ ಆಪ್ತರಾಗಲಿ, ಪ್ರಪಂಚದ ಜನರಾಗಲಿ ಅವನ ಪ್ರತಿವಾದವನ್ನು ಒಪ್ಪದೆ , ಅವನ ಕೊಲೆಯನ್ನು ಅಪರಾಧ ಎಂದೇ ಪರಿಗಣಿಸುತ್ತಾರೆ. ನ್ಯಾಯಾಧೀಶರು ವಿನೋದ ಪ್ರಿಯರಾಗಿದ್ದರೆ ಅವನದೇ ವಾದದಿಂದ ಅವನಿಗೆ ಹೀಗೆ ಪ್ರತ್ಯುತ್ತರ ನೀಡುತ್ತಾರೆ. " ದಯವಿಟ್ಟು ಗಮನಿಸು ಆತ್ಮ ವಿಚಾರಣೆ ಮಾಡುವುದೂ ಇಲ್ಲ, ಶಿಕ್ಷೆಗೆ ಒಳಪಡಿಸುವುದೂ ಇಲ್ಲ. ಆತ್ಮ ಶಾಶ್ವತ ಮತ್ತು ಅವಿನಾಶಿಯಾಗಿರುವುದರಿಂದ ಅದು ಎಲ್ಲ ಶಿಕ್ಷೆಗಳಿಗೂ ಮೀರಿದ್ದು. ಶಿಕ್ಷೆಯಿಂದ ಯಾವ ತೊಂದರೆಯೂ ಇಲ್ಲ. ನಿನ್ನ ಮನಸ್ಸು ದೇಹಗಳು ಅದರ ಪಾವಿತ್ರತೆಯನ್ನು ಉಪೇಕ್ಷೆ ಮಾಡಿ ಗೌರವಿಸದೆಹೋದವು. ಆ ನಿನ್ನ ದೇಹ ಮತ್ತು ಮನಸ್ಸಿಗೆ ಶಿಕ್ಷೆ ಕೊಡಲೇಬೇಕು". ಕೊಲೆಗಾರನ ಅಶುದ್ಧ ಮನಸಿಗೆ ಆತ್ಮನಶುದ್ಧಿಯಬಗ್ಗೆ ಕಲ್ಪನೆಯಿಲ್ಲ. ಆತ್ಮನ ಸ್ವಾತಂತ್ರ್ಯ ಮತ್ತು ಪರಿಶುದ್ಧತೆಯ ಬಗ್ಗೆ ಪ್ರಪಂಚಕ್ಕೆ ಉಪದೇಶ ಮಾಡುವುದರಿಂದ ವ್ಯಾವಹಾರಿಕ ಜೀವನಕ್ಕೆ ತೊಂದರೆಯಾಗುವುದು ಎಂದು ಊಹೆ ಮಾಡಲು ಯಾವ ಕಾರಣವೂ ಇಲ್ಲ. ಮತ್ತು ಇದುನಿರಾಧಾರವಾಗಿದೆ. ಇದಕ್ಕೆ ಪ್ರತಿಯಾಗಿ ಈ ಉಪದೇಶವು ನೈತಿಕ ಜೀವನಕ್ಕೆ ಒಂದು ಸುಭದ್ರವಾದ ಬುನಾದಿಯನ್ನು ಹಾಕಿಕೊಡುತ್ತದೆ. ಯಾರಿಗಾದರೂ ಅವನ ಶುದ್ಧತೆ ಮತ್ತು ಅಸಂಗತೆಯನ್ನು ಮನದಟ್ಟುಮಾಡಿಕೊಟ್ಟರೆ ಮತ್ತು ಹುದುಗಿದ ಶುದ್ಧತೆ ಪ್ರಕಟವಾಗಬೇಕು ಎಂಬುದು ಅರಿವಿಗೆ ಬಂದರೆ ತಾನು ಮಾಡುವ ಕೆಟ್ಟ ಕಾರ್ಯ ತನ್ನ ಆತ್ಮೋನ್ನತಿಗೆ ಭಾದಕ ಮತ್ತು ಮಾಡುವ ಉತ್ತಮ ಕೆಲಸ ತನ್ನ ಆತ್ಮೋನ್ನತಿಗೆ ಮೈಲಿಗಲ್ಲು ಎಂದು ಚಿಂತಿಸುತ್ತಾನೆ. ಹೀಗಾಗಿ ಈ ಸಿದ್ಧಾಂತವು ವ್ಯಾವಹಾರಿಕ ಜೀವನಕ್ಕೆ ದುರಂತ ಕಾರಕ ಎಂಬುದು ನಿರಾಧಾರವಾದದ್ದು.

ಆತ್ಮನ ನೈಷ್ಕರ್ಮ್ಯತೆಯ ಸಿದ್ಧಾಂತ, ಎಂದರೆ ತಾನು ವಿಕಾರ ಉಂಟುಮಾಡುವುದಿಲ್ಲ, ತನ್ನಲ್ಲೂ ವಿಕಾರ ವಾಗುವುದಿಲ್ಲ ಎನ್ನುವುದು ಮನುಷ್ಯನನ್ನು ಸೋಮಾರಿತನಕ್ಕೆ ಉದಾಸೀನತೆಗೆ ತಳ್ಳುವುದಿಲ್ಲವೇ ಎಂಬ ಪ್ರಶ್ನೆ ಏಳುತ್ತದೆ. ಈ ಆಕ್ಷೇಪಣೆ ಉಪದೇಶವನ್ನು ಭಯಂಕರವಾಗಿ ತಪ್ಪಾಗಿ ತಿಳಿದದ್ದರಿಂದ ಉಂಟಾದದ್ದು. ಜ್ಞಾನಯೋಗದ ಪ್ರಕಾರ ಆತ್ಮನು ಕರ್ಮವನ್ನು ಮೀರಿದವನು ಮತ್ತು ಯಾವ ಕರ್ಮವು ಅವನ ಮೇಲೆ ಪ್ರಭಾವ ಬೀರುವುದಿಲ್ಲ. ಈ ದೃಷ್ಟಿಯಿಂದ ಆತ್ಮನು ಅಕರ್ತೃ **13: 31** "ಅನಾದಿತ್ವಾನ್ನಿರ್ಗುಣತ್ವಾತ್ ಪರಮಾತ್ಮಾಯಮವ್ಯಯಃ. ಶರೀರಸ್ಥೋಽಪಿ ಕೌಂತೇಯ ನ ಕರೋತಿ ನ ಲಿಪ್ಯತೇ". ಎಲೈ ಕೌಂತೇಯನೆ, ಅನಾದಿಯಾಗಿರುವುದರಿಂದಲೂ ನಿರ್ಗುಣನಾಗಿರುವುದರಿಂದಲೂ ಈ ಅವ್ಯಯನಾದ ಪರಮಾತ್ಮನು ಶರೀರದಲ್ಲಿದ್ದರೂ ಮಾಡುವುದಿಲ್ಲ, ಲೇಪವನ್ನೂ ಹೊಂದುವುದಿಲ್ಲ. ಆತ್ಮನು ತಮಸ್ಸಿನಿಂದ ಆವೃತ್ತನಾಗಿ ನಿಷ್ಕ್ರಿಯನಾಗುತ್ತಾನೆ ಎಂದರ್ಥವಲ್ಲ. ಕ್ರಿಯೆ ಇಲ್ಲದಿರುವಿಕೆ ಅಥವಾ ಉದಾಸೀನಭಾವ ಪ್ರಕೃತಿಯ ಕೆಳಸ್ತರದ ಅಭಿವ್ಯಕ್ತಿ. ಆದರೆ ಆತ್ಮವಾದರೋ ರಜಸ್ಸು ತಮಸ್ಸುಗಳನ್ನಲ್ಲದೆ ಸತ್ವವನ್ನು ಮೀರಿದ್ದು. ಸತ್ವವು ಆತ್ಮನಿಗೆ ಅತಿ ಸಮೀಪವಾಗಿದ್ದು ಸಾತ್ವಿಕ ಕರ್ಮಗಳು ವಾಸ್ತವಿಕವಾಗಿ ನಿಷ್ಕ್ರಿಯೆಯೇ.

ಜ್ಞಾನಯೋಗಿಯು ತನ್ನ ಸ್ವರೂಪವು ಕರ್ತವ್ಯಗಳನ್ನು ಮೀರಿದ್ದು ಎಂದು ಅರಿತಿರುವುದುರಿಂದ, ನಿಶ್ಚಯವಾಗಿ ಯಾವ ಅವಶ್ಯಕತೆಯು ಅವನನ್ನು ಕರ್ಮದಲ್ಲಿ ತೊಡಗಿಸುವುದಿಲ್ಲಾ. **3 :17, 18** ಯಸ್ತ್ವಾತ್ಮರತಿರೇವ ಸ್ಯಾದಾತ್ಮ ತೃಪ್ತಶ್ಚಮಾನವಃ.ಆತ್ಮನ್ಯೇವ ಚ ಸನ್ತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ.ನೈವ ತಸ್ಯ ಕೃತೇನಾರ್ಥೋ ನಾಕೃತೇನೇಹ ಕಶ್ಚನ .ನ ಚಾಸ್ಯ ಸರ್ವಭೂತೇಷು ಕಶ್ಚಿದರ್ಥವ್ಯಪಾಶ್ರಯಃ. ಯಾವ ಮಾನವನು ಆತ್ಮರತಿಯೇ ಆಗಿರುವನೋ ಆತ್ಮತೃಪ್ತನು ಆಗಿರುವನೋ ಮತ್ತುಆತ್ಮನಲ್ಲಿಯೇ ಸಂತುಷ್ಟನಾಗಿರುವನೋ ಅವನಿಗೆ ಕಾರ್ಯವು ಇರುವುದಿಲ್ಲ. ಆತನಿಗೆ ಮಾಡಿದ್ದರಿಂದ ಅರ್ಥವಿಲ್ಲ, ಮಾಡದ್ದರಿಂದಲೂ ಇಲ್ಲ ಅವನಿಗೆ ಸರ್ವಭೂತಗಳಲ್ಲಿ ಯಾವ ಅರ್ಥದ ಆಶ್ರಯವು ಇರುವುದಿಲ್ಲ. ಅವನು ನಿಸ್ವಾರ್ಥಿಯಾದ್ದರಿಂದ ಯಾವ ಸ್ವಾರ್ಥಪರ ಕರ್ಮದಲ್ಲೂ ತೊಡಗಲು ಆಗುವುದಿಲ್ಲ. ಹೀಗೆಂದಮಾತ್ರಕ್ಕೆ ಜ್ಞಾನಿಯು ಯಾವುದೇ ಕೆಲಸ ಮಾಡುವುದಕ್ಕೆ ಪ್ರತಿಬಂಧವಿಲ್ಲ. ಲೋಕಸಂಗ್ರಹಕ್ಕಾಗಿ ಸ್ವಾರ್ಥವಿಲ್ಲದೆ ಕೇವಲ ತನ್ನ ಸ್ವಭಾವವಾದ ಕಾರುಣ್ಯದಿಂದ ಕೆಲಸ ಮಾಡುತ್ತಾನೆ. **3.25** "ಸಕ್ತಾಃ ಕರ್ಮಣ್ಯವಿದ್ವಾಂಸೋ ಯಥಾಕುರ್ವನ್ತಿ ಭಾರತ.ಕುರ್ಯಾದ್ವಿದ್ವಾಂಸ್ತಥಾಸಕ್ತಶ್ಚಿಕೀರ್ಷುರ್ಲೋಕಸಙ್ಗ್ರಹಮ್" . ಭರತ ವಂಶೋತ್ಪನ್ನನೇ, ತಿಳಿಯದವರು ಹೇಗೆ ಕರ್ಮದಲ್ಲಿ ಸಕ್ತರಾಗಿ ಅದನ್ನು ಮಾಡುತ್ತಿರುವರೋ ಹಾಗೆ

ಜ್ಞಾನಿಯು ಅಸಕ್ತನಾಗಿ ಲೋಕಸಂಗ್ರಹಕ್ಕಾಗಿ ಕರ್ಮವನ್ನು ಮಾಡುತ್ತಿರಬೇಕು. ಲೋಕಸಂಗ್ರಹ ಎಂದರೆ ಹೃದಯಗಳನ್ನು ಬೆಸೆಯುವುದು. ಸಾಮರಸ್ಯವನ್ನು ಉಂಟುಮಾಡುವುದು. ಜ್ಞಾನಯೋಗಿಯ ಈ ಗುಣಧರ್ಮವೇ, ಉದಾತ್ತ ಭಾವನೆಯೇ, ಕರ್ಮವೇ ಬ್ರಹ್ಮವನ್ನು ಕಂಡುಕೊಳ್ಳುವ ಮಾರ್ಗ." ಕರ್ಮಖಲ್ವಿಹ ಕರ್ತವ್ಯಂ ಜಾನತಾಮಿತಕರ್ಷಣ ಅಕರ್ಮಣೋಹಿ ತಿಷ್ಟಂತಿ ಜಹಾ ನತು ನರಾಃಖಲು". ಇಲ್ಲಿ ವಿವೇಕವಿರುವವರು ಕೆಲಸ ಮಾಡಬೇಕು. ಓ ಶತ್ರುಹರನೆ, ನಿಷ್ಕ್ರಿಯ ವಾಗಿರುವುದು ಕೇವಲ ನಿರ್ಜೀವ ವಸ್ತುಗಳು ಮಾನವರಲ್ಲ. ಆದ್ದರಿಂದ ಓರ್ವ ಜ್ಞಾನಿ ಕರ್ಮರಹಿತ ಎಂದಲ್ಲಿ ಸೋಮಾರಿ ಜೀವನವನ್ನು ನಡೆಸುತ್ತಾನೆ ಎಂದಲ್ಲ. ಎಲ್ಲ ಮಾನವರು ತಮ್ಮ ಕೆಲಸದಲ್ಲಿ ತೊಡಗುತ್ತಾರೆ. ಸಾಮಾನ್ಯ ಮನುಷ್ಯನ "ನಾನು" ತುಂಬಾ ಮಿತಿಯುಳ್ಳದ್ದು ಆದರೆ ಜ್ಞಾನಿಯಾದರೋ ಸರ್ವಾತ್ಮಭಾವದ ನಾನುವಿಗಾಗಿ ಕೆಲಸ ಮಾಡುತ್ತಾನೆ. ಇದೇ ಲೋಕಸಂಗ್ರಹ. ಒಬ್ಬನಿಗಾಗಿ ಅಲ್ಲದೆ ಹಲವರಿಗಾಗಿ ಒಂದು ಮನಸ್ಸಿಗಲ್ಲದೆ ಹಲವಾರು ಮನಸ್ಸುಗಳಿಗಾಗಿ ಕೆಲಸಮಾಡುತ್ತಾನೆ. ಆದ್ದರಿಂದ ಅವನ ಕಾರ್ಯ ತೀವ್ರವಾಗಿರುತ್ತದೆ. ನಿಜವಾದ ಆತ್ಮನು ದೇಶ,ಕಾಲ ,ಕಾರ್ಯ, ಕಾರಣಗಳನ್ನು ಮೀರಿದವನು ಮತ್ತು ಸ್ವಾರ್ಥ ಕಾರ್ಯ ಮೂರ್ಖನ ಲಕ್ಷಣ ಎಂದು ಜ್ಞಾನಿಯು ಅರಿತಿರುತ್ತಾನೆ.

## ಕ್ಷೇತ್ರಜ್ಞನ ಸ್ವರೂಪ

ಈಗಾಗಲೇ ವಿವರಿಸಿರುವಂತೆ ಕ್ಷೇತ್ರಜ್ಞ ಶುದ್ಧ ಮತ್ತು ಪೂರ್ಣನಾಗಿದ್ದು ಕಾಲದೇಶ ಕಾರ್ಯ-ಕಾರಣಗಳ ಮಿತಿಗಳನ್ನು ಮೀರಿದವನಾಗಿದ್ದಾನೆ. ಆದ್ದರಿಂದ ಅನಂತನಾಗಿದ್ದಾನೆ. ಆದರೆ ನಾವು ಎರಡು ಅನಂತಗಳನ್ನು ಊಹಿಸುವುದು ಸಾಧ್ಯವಿಲ್ಲ. ಹೀಗಾಗಿ ಇಂದ್ರಿಯ ಗೋಚರವಾದ ಎಲ್ಲ ವಸ್ತುಗಳ ಹಿಂದೆ ಇರುವ ಸದ್ವಸ್ತು ಒಂದೇ ಆಗಿರಬೇಕು. "ಕ್ಷೇತ್ರಜ್ಞಂಚಾಪಿ ಮಾಂವಿದ್ಧಿ ಸರ್ವಕ್ಷೇತ್ರಷು ಭಾರತ".ಓ ಭರತಕುಲೋತ್ಪನ್ನನೆ ಎಲ್ಲ ಕ್ಷೇತ್ರಗಳಲ್ಲಿ ಇರುವ ಕ್ಷೇತ್ರಜ್ಞ ನಾನೆಂದುತಿಳಿ. ಇದರಿಂದ ತಿಳಿದು ಬರುವುದು ವಾಸ್ತವಿಕವಾಗಿ ಕ್ಷೇತ್ರಜ್ಞ ಬ್ರಹ್ಮವಲ್ಲದೆ ಮತ್ಯಾರು ಅಲ್ಲ. ಕೂಟಸ್ಥವಾದ ವಿಶ್ವಪ್ರಜ್ಞೆ ( ಬ್ರಹ್ಮನ್) ಎಲ್ಲ ಚೇತನಾಚೇತನ ವಸ್ತುಗಳ ಆತ್ಮನಾಗಿದ್ದು ಏಕಮೇವ ಸತ್ಯವಾಗಿದೆ.' ನಾ ಭಾವೋ ವಿದ್ಯತೆ ಸತಃ' ಸದ್ವಸ್ತುವಿಗೆ ಅಭಾವವಿಲ್ಲ ಎಂಬ ವಾಕ್ಯಕ್ಕೆ ಹೊಂದುಗೆಯಾಗುತ್ತದೆ. ಈ ಪರೀಕ್ಷೆಗೆ ಹೊಂದದ ವಿಷಯವಾದ ವಸ್ತುಗಳು ಅಸತ್ತು ಸುಳ್ಳು. ವಿಷಯವು ಸುಳ್ಳು ಎಂದಾದಲ್ಲಿ ವಿಷಯೀ ಎಂಬುದು ಇಲ್ಲ. ವಿಷಯವಿದ್ದಲ್ಲಿ ಮಾತ್ರ ವಿಷಯಿತ್ವವು ಗ್ರಹಿಸಲಾಗುತ್ತದೆ. ವೇದಾಂತದ ಅತ್ಯುಚ್ಚಮಟ್ಟದ ದೃಷ್ಟಿಕೋನದ ಪ್ರಕಾರ

ಬ್ರಹ್ಮ ಅಥವಾ ಪರಮಾತ್ಮ ವಿಷಯವೂ ಅಲ್ಲ ವಿಷಯಿಯುಅಲ್ಲ. ಆದರೆ ಅದೇ ವಿಷಯ ವಿಷಯಿಗಳ ಹಿಂದೆ ಇರುವ ಏಕಮೇವ ಸತ್ಯ. ಗೀತೆ ಕ್ಷೇತ್ರ ಕ್ಷೇತ್ರಜ್ಞ ಎರಡೂ ಪರಮಾತ್ಮನ ಅಭಿವ್ಯಕ್ತಿ ಎನ್ನುತ್ತದೆ. **8-4 ,5** "ಅಧಿಭೂತಂ ಕ್ಷರೋ ಭಾವಃ ಪುರುಷಶ್ಚಾದಿ ದೈವತಮ್ . ಅಧಿಯಜ್ಞೋsಹಮೇವಾತ್ರ ದೇಹೇ ದೇಹಭೃತಾಂವರ". ಅಧಿಭೂತವೆಂದರೆ ಕ್ಷರವಾದಭಾವವು; ಮತ್ತು ಪುರುಷನು ಅಧಿದೈವತವು. ದೇಹಧಾರಿಗಳಲ್ಲಿ ಶ್ರೇಷ್ಠ ನೇ, ಈ ದೇಹದಲ್ಲಿರುವ ಅಧಿಯಜ್ಞನು ನಾನೇ. "ಅನ್ತಕಾಲೆ ಚ ಮಾಮೇವ ಸ್ಮರನ್ ಮುಕ್ತ್ವಾ ಕಲೇವರಮ್;ಯಃ ಪ್ರಯಾತಿ ಸ ಮದ್ಭಾವಂ ಯಾತಿ ನಾಸ್ತ್ಯತ್ರ ಸಂಶಯಃ" ಕಡೆಯ ಕಾಲದಲ್ಲಿ ನನ್ನನ್ನೇ ಸ್ಮರಿಸುತ್ತ ಕಳೇಬರವನ್ನು ಬಿಟ್ಟು ಯಾವನು ಪ್ರಯಾಣ ಮಾಡುವನೋ ಅವನು ನನ್ನ ಭಾವವನ್ನು ಹೊಂದುವನು. ಇದರಲ್ಲಿ ಸಂಶಯವಿಲ್ಲ. ಈ ದೃಷ್ಟಿಕೋನದಿಂದ ಪ್ರಪಂಚದ ಎಲ್ಲಾ ಅಭಿವ್ಯಕ್ತಿಗಳೂ ಪರಮಾತ್ಮನಿಂದಲೇ ಹೊರಬಿದ್ದು ತಮ್ಮದೇ ಆದ ಸ್ವತಂತ್ರ ಅಸ್ತಿತ್ವವಿಲ್ಲದ್ದಾಗಿವೆ. ಈ ಅಭಿವ್ಯಕ್ತಿ ಅಭಿವ್ಯಕ್ತವಾದವುಗಳ ಶಾಶ್ವತ ಗುಣವಲ್ಲ. ತನ್ನಿಮಿತ್ತ ಅಭಿವ್ಯಕ್ತವಾದವುಗಳು ಯಾವಾಗಲೂ ಪರಮಾತ್ಮನಲ್ಲಿ ಇರುವುದಿಲ್ಲ. ಈ ಅಭಿಪ್ರಾಯವನ್ನು ಕೃಷ್ಣ ಪರಮಾತ್ಮ ತೋರಿಕೆಗೆ ವಿರೋಧಾಭಾಸವಾಗಿ ಕಾಣುವ ಈ ವಾಕ್ಯದಲ್ಲಿ ಹೇಳುತ್ತಾನೆ. **9-4,5"** ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನ;ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ""ನ ಚ ಮತ್ಸ್ಥಾನಿ ಭೂತಾನಿ ಪಶ್ಯಮೇ ಯೋಗಮೈಶ್ವರಮ್; ಭೂತಭೃನ್ನ ಚ ಭೂತಸ್ಥೋ ಮಮಾತ್ಮಾ ಭೂತಭಾವನಃ" ಈ ಜಗತ್ತೆಲ್ಲವು ಅವ್ಯಕ್ತ ಮೂರ್ತಿಯಾದ ನನ್ನಿಂದ ವಿತತ [ ವ್ಯಾಪ್ತ] ವಾಗಿರುತ್ತದೆ. ಸರ್ವ ಭೂತಗಳು ನನ್ನಲ್ಲಿರುವವು, ನಾನು ಅವುಗಳಲ್ಲಿಲ್ಲ. ಮತ್ತು ಭೂತಗಳು ನನ್ನಲ್ಲಿರುವುದೂ ಇಲ್ಲ. ನನ್ನ ಐಶ್ವರ ಯೋಗವನ್ನು ನೋಡು! ಭೂತ ಭಾವನನಾದ ನನ್ನ ಆತ್ಮನು ಭೂತಭೃತ್ತೂ ಇರುವನು ಭೂತಸ್ಥನೂ ಅಲ್ಲ. ವೇದಾಂತದ ದೃಷ್ಟಿಯಿಂದ ಬ್ರಹ್ಮ ( ವಿಶ್ವಾತ್ಮ) ಏಕಮೇವಾದ್ವಿತೀಯ ಸತ್ಯವಾದರೂ, ಸತ್ಯ ಎಂಬ ಪದ ಬ್ರಹ್ಮವನ್ನು ಪೂರ್ಣವಾಗಿ ವಿವರಿಸುವುದಿಲ್ಲ. ಜಾಗೃತಾವಸ್ಥೆಯಲ್ಲಿ ಶಾಶ್ವತ ಎಂದು ತೋರುವ ವಸ್ತುಗಳಿಗೂ ನಾವು ಸತ್ಯ ಎಂಬ ಪದವನ್ನು ಸಾಮಾನ್ಯವಾದ ಆಡುಮಾತಿನಲ್ಲಿ ಹೇಳುತ್ತೇವೆ. ಜಾಗೃತಾವಸ್ಥೆಯಲ್ಲಿ ತಡೆದು ಉಳಿಯುವುದು ಸತ್ಯವಾದಲ್ಲಿ , ಪ್ರಜ್ಞೆಯ ಎಲ್ಲ ಅವಸ್ಥೆಗಳಲ್ಲೂ ತಡೆದು ಉಳಿಯುವುದು ಸತ್ಯಕ್ಕಿಂ ಹೆಚ್ಚಿನದಾಗಬೇಕಾಗುತ್ತದೆ. ಅಸತ್ ಎಂಬುದು ಬ್ರಹ್ಮನಿಗೆ ಮಿತ್ಯಾನಾಮವಾಗುತ್ತದೆ. ಹಾಗೆಂದೇ ಗೀತೆಯಲ್ಲಿ" ನಸತ್ತನ್ನಾಸದುಚ್ಯತೆ". ಎಂದು **13: 13** ರಲ್ಲಿ ಹೇಳಲಾಗಿದೆ. ( ಅದು ಸತ್ತೂ ಅಲ್ಲಾ ಅಸತ್ತೂ ಅಲ್ಲ).

## <u>ಬ್ರಹ್ಮ</u>

ಕ್ಷೇತ್ರಜ್ಞನ ವಿಚಾರ ಮಾಡುವಾಗ ನಾವು ಅವಶ್ಯವಾಗಿ ಬ್ರಹ್ಮನ ವಿಚಾರಕ್ಕೂ ಎಳೆಯಲ್ಪಟ್ಟಿದ್ದೇವೆ. ಗೀತೆಯ 13 ನೇ ಅಧ್ಯಾಯದ ಐದು ಶ್ಲೋಕಗಳು ಬ್ರಹ್ಮನ ವಿವರಣೆ ಕೊಡುತ್ತದೆ. ಪೀಠಿಕೆಯಲ್ಲಿ ಇದನ್ನು ಕೇವಲ ಉಲ್ಲೇಖಿಸಲಾಗಿದೆ. ಈಗ ಅದನ್ನು ವಿಸ್ತಾರವಾಗಿ ವಿಚಾರ ಮಾಡೋಣ. ಈ ಪ್ರಕರಣದಲ್ಲಿ ಅನೇಕ, ತೋರಿಕೆಗೆ ವಿರುದ್ಧಾರ್ಥಕವಾದ ವಿಶೇಷಣಗಳ ಹೇಳಿಕೆಯಿದೆ. ಅವಶ್ಯವಾದ ವಿವರಣೆಗಳೊಂದಿಗೆ ಇದರ ಸರಳ ಅನುವಾದವನ್ನು ಕೊಡುತ್ತೇವೆ. ಯಾವ ರೂಪವು ನಿಜವಾಗಿ ಇಲ್ಲವಾದರೂ ಯಾವ ರೂಪವೂ ಅದನ್ನು ಬಿಟ್ಟು ಸ್ವತಂತ್ರವಾಗಿ ತೋರುವುದಿಲ್ಲ. ಆದ್ದರಿಂದಲೇ ಅದನ್ನು ಅನೇಕ ಕೈಕಾಲುಗಳು, ಅನೇಕ ಕಣ್ಣು ಕಿವಿಗಳು ಅನೇಕ ಮುಖಗಳು ಎಲ್ಲೆಲ್ಲೂ ಇವೆ ಎಂದು ವಿವರಿಸಲಾಗಿದೆ. ಇದನ್ನು ದೃಢೀಕರಿಸಲು ಯಾವುದರಿಂದಲೂ ಸಾಧ್ಯವಿಲ್ಲವಾದರೂ ಯಾವ ಯಾವುದು ದೃಢೀಕರಿಸಲ್ಪಟ್ಟಿರುತ್ತದೋ ಅದೆಲ್ಲವೂ ಬ್ರಹ್ಮನನ್ನು ಬಿಟ್ಟು ಅಸ್ತಿತ್ವವಿಲ್ಲದ್ದಾಗಿರುತ್ತದೆ. ಈ ದೃಷ್ಟಿಯಿಂದ ಬ್ರಹ್ಮವು ಎಲ್ಲ ಗುಣಗಳನ್ನು ಹೊಂದಿದೆ ಎಂದು ಹೇಳಬಹುದು. ಆಕಾಶವನ್ನು ಮೀರಿದ್ದಾದ್ದರಿಂದ ಯಾವುದೇ ನಿರ್ದಿಷ್ಟ ಜಾಗದಲ್ಲಿ ಗುರುತಿಸಲಾಗದು. ಆದರೆ ಆಕಾಶವು ಬ್ರಹ್ಮದಲ್ಲೇ ಇರುವುದರಿಂದ ಒಳಗೂ ಹೊರಗೂ ಏನೆಲ್ಲ ಇರುವುದೋ ಅದೆಲ್ಲವೂ ಬ್ರಹ್ಮದಲ್ಲೇಇದೆ. ಇದರಿಂದ ಅದು ಸರ್ವತ್ರವೂ ಇದೆ ಎಂದು ಹೇಳಬಹುದು. ಬ್ರಹ್ಮವು ನಮ್ಮ ಸೂಕ್ಷ್ಮಾತಿಸೂಕ್ಷ್ಮ ಅಂಶವಾಗಿದ್ದು ಅದು ತಿಳಿಯಬಲ್ಲಂಥದ್ದಲ್ಲ. ಇದು ಅಜ್ಞಾನಿಗಳ ಬುದ್ಧಿಗೆ ನಿಲುಕದ್ದಾಗಿದೆ, ಆದರೆ ನಮ್ಮ ಆತ್ಮನೇ ಆಗಿರುವುದರಿಂದ ನಮ್ಮಸಮೀಪಾತಿ ಸಮೀಪವಾಗಿದೆ. ಇದೊಂದೇ ಸತ್ಯವಾಗಿರುವ ಅಸ್ತಿತ್ವ ಎಂದು ಖಡಾಖಂಡಿತವಾಗಿ ನಿಸ್ಸಂಶಯವಾಗಿರಬಹುದು. ಎಲ್ಲಾ ಜೀವಿಗಳಲ್ಲಿರುವ ಅಖಂಡಿತವಾದ ಸತ್ ವಸ್ತುವಾಗಿದ್ದರೂ ಹೊರಗಿನ ಅಸ್ವಾಭಾವಿಕ ರೂಪಗಳಿಂದ ಅನೇಕವೂ ಭಿನ್ನವೂ ಆದಂತೆ ತೋರುತ್ತದೆ. ಬ್ರಹ್ಮವನ್ನು ಬಿಟ್ಟು ಸ್ವತಂತ್ರವಾದ ಅಸ್ತಿತ್ವವಿಲ್ಲದವು ಬ್ರಹ್ಮನಿಗೆ ಹೋಲಿಸಿದಾಗ ಅಸತ್ಯವಾಗಿ ತೋರುವುದರಿಂದ ,ವಿಶ್ವವು ಬ್ರಹ್ಮನಲ್ಲಿ ಹುಟ್ಟಿ ಬ್ರಹ್ಮನಲ್ಲೇ ತೋರಿ ಬ್ರಹ್ಮದಲ್ಲಿ ಅಡಗುತ್ತದೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ಬ್ರಹ್ಮವು ಸ್ವಯಂಪ್ರಕಾಶವಾಗಿದ್ದು, ಸೂರ್ಯಚಂದ್ರರು ನಕ್ಷತ್ರಗಳು ಬ್ರಹ್ಮದ ಬೆಳಕಿನಿಂದಲೇ ಬೆಳಗಲ್ಪಡುತ್ತವೆ. ಅದು ಎಲ್ಲ ಕತ್ತಲೆಗಳನ್ನು ಮೀರಿದ್ದು, ಕತ್ತಲೆಯು ಎಂದಾದರೂ ಸ್ವಯಂಪ್ರಭೆಯಾದ ಬ್ರಹ್ಮವನ್ನು ಸೋಂಕಬಹುದೇ? ಸತ್ಯವಾಗಿ ಅರಿಯುವ ಸಾಧನ, ಅರಿವು, ಅರಿಯಬೇಕಾದದ್ದು ಎಲ್ಲವೂ ಬ್ರಹ್ಮವೇ. ಈ ಬ್ರಹ್ಮವು ಎಲ್ಲರ ಹೃದಯದಲ್ಲಿ ಸ್ಥಿತನಾಗಿದ್ದು ಅರಿಯಬೇಕೆಂದು ಇಚ್ಛಿಸುವ ಪ್ರತಿಯೊಬ್ಬನು ಅರಿಯಬಹುದಾಗಿದೆ. ಹದಿಮೂರನೆಯ ಅಧ್ಯಾಯದಲ್ಲಿ ಬ್ರಹ್ಮನನ್ನು ಮೇಲಿನರೀತಿ ವಿವರಿಸಲಾಗಿದೆ

# ಬ್ರಹ್ಮಜ್ಞಾನದ ಪ್ರಯೋಜನ

.ಬ್ರಹ್ಮಜ್ಞಾನದ ಪ್ರಯೋಜನದ ಬಗ್ಗೆ ವಿಚಾರ ಮಾಡಿದಾಗ ಮೊದಲಿಗೆ ತೋರುವುದು ನೈತಿಕ ಮೌಲ್ಯಗಳಿಗೆ ಒಂದು ಖಚಿತವಾದ ದೃಢವಾದ ಆಧಾರ ದೊರೆಯುತ್ತದೆ. ಸರ್ವೇಸಾಮಾನ್ಯವಾಗಿ ಎಲ್ಲ ಧರ್ಮಗಳಲ್ಲೂ ನೆರೆಹೊರೆಯವರನ್ನು ನಮ್ಮಂತೆ ಪ್ರೀತಿಸಬೇಕು ಎನ್ನುವುದು ತಿಳಿಸಲ್ಪಟ್ಟಿದೆ. ಆದರೆ ಹೀಗೇಕೆ ಮಾಡಬೇಕು ಎನ್ನುವುದನ್ನು ಕೇವಲ ಜ್ಞಾನಯೋಗದಲ್ಲಿ ತಿಳಿಸಲಾಗಿದೆ. ಪ್ರಕೃತ್ಯೈವ ಚ ಕರ್ಮಾಣಿಕ್ರಿಯಮಾಣಾನಿ ಸರ್ವಶಃ;ಯಃ ಪಶ್ಯತಿತಥಾತ್ಮಾ ನಮಕರ್ತಾರಂ ಸ ಪಶ್ಯತಿ. ಸರ್ವ ಪ್ರಕಾರ ದಿಂದಲೂ ಪ್ರಕೃತಿಯಿಂದಲೇ ಕರ್ಮಗಳು ಮಾಡಲ್ಪಡುತ್ತಿರುವವೆಂದು ಯಾವನು ಕಂಡುಕೊಂಡಿರುವನೋ ಹಾಗೂ ಆತ್ಮನು ಅಕರ್ತೃವೆಂದು ಯಾವನು ಕಂಡುಕೊಂಡಿರುವನೋ ಅವನೇ ಕಂಡಿರುತ್ತಾನೆ **13: 29.** ನೆರೆಯವರನ್ನು ತನಗಿಂತ ಬೇರೆಯಲ್ಲ, ತಾನೇ ಎಂದು ತಿಳಿದಾಗ ನೆರೆಯವನನ್ನು ದ್ವೇಷಿಸುವುದಾದರೂ ಹೇಗೆ**?** ವಿದ್ಯಾ ವಿನಯ ಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ; ಶುನಿ ಚೈವ ಶ್ವಪಾಕೆ ಚ ಪಂಡಿತಾಃ ಸಮದರ್ಶಿನಃ. **05:18.** ವಿದ್ಯಾ ವಿನಯಗಳಿಂದ ಕೂಡಿದ ಬ್ರಾಹ್ಮಣನಲ್ಲಿ, ಗೋವಿನಲ್ಲಿ, ಆನೆಯಲ್ಲಿ, ನಾಯಿಯಲ್ಲಿ ಮತ್ತು ಚಂಡಾಲನಲ್ಲಿ ಪಂಡಿತರು ಸಮದರ್ಶಿಗಳಾಗಿರುವರು. ಸರ್ವ ಜೀವಗಳಲ್ಲಿ ತೋರುವ ಈ ಸಮಾನ ಪ್ರೇಮ ಜ್ಞಾನದ ನೇರ ಪ್ರಭಾವವಾಗಿದ್ದು ಸರಿ-ತಪ್ಪುಗಳ ನಿರ್ಧಾರಕ್ಕೆ ಒಂದು ಒಳ್ಳೆಯ ಒರೆಗಲ್ಲಾಗಿದೆ. ಯಾವುದು ಜೀವಿಗಳನ್ನು ಸಾಮರಸ್ಯಕ್ಕೆ ಒಗ್ಗೂಡಿಸುತ್ತದೊ ಅದು ಸರಿಯಾಗಿದ್ದು ಗೀತೆ ಅದನ್ನು ಲೋಕಸಂಗ್ರಹ ಎಂದು ಕರೆಯುತ್ತದೆ. ಯಾವುದು ಜೀವಿಗಳನ್ನು ಭೇದ ದೃಷ್ಟಿಗೆ ದೂಡಿ ಪರಸ್ಪರ ನಿರಾಕರಣೆಯನ್ನು ಉಂಟುಮಾಡುತ್ತದೋ ಅದು ತಪ್ಪು, ಮತ್ತು ಜ್ಞಾನ ಮನುಷ್ಯನನ್ನು ಎಲ್ಲ ಹೊರಗಿನ ಪ್ರಭಾವಗಳಿಗೆ ಪಳಗಿಸುತ್ತದೆ. ತ್ರಿಗುಣಾತೀತವಾದ ಪರಮ ಸತ್ಯದೊಡನೆ ತನ್ನನ್ನು ಗುರುತಿಸಿ ಕೊಳ್ಳುವುದರಿಂದ ಜ್ಞಾನಿಯು ಮೂರು ಗುಣಗಳ ಪ್ರಭಾವದಿಂದ ಸುರಕ್ಷಿತವಾಗಿರುತ್ತಾನೆ. ಸಮಾಜದೊಂದಿಗೆ ತನಗೆ ಇಚ್ಛೆ ಇದ್ದಷ್ಟು ಬೆರೆಯುತ್ತಾ ಸಮಾಜವನ್ನು ಅದರ ಕಾರ್ಯವನ್ನು ತಿರಸ್ಕರಿಸದೆ ಇರುತ್ತಾನೆ. ಎಂಥಾ ಕಷ್ಟದ ಕೆಲಸದಲ್ಲೇ ತೊಡಗಲಿ ತಾನು ಅರಿತ ತನ್ನ ನಿಜಸ್ವರೂಪವಾದ ಪರಮ ಸತ್ಯವು ದೃಷ್ಟಿಯಿಂದ ಮರೆಯಾಗುವುದಿಲ್ಲ .ಜ್ಞಾನಯೋಗಿ ಯೋಗ ಅಥವಾ ಮನಸ್ಸಿನ ಸಮತ್ವವನ್ನು ಸದಾ ಸರ್ವದಾ ಕಾಪಾಡಿಕೊಂಡಿರುವ ಕಾರಣ ಹೊರಗಿನ ಯಾವ ವಿಷಯಗಳಿಂದಲೂ ವಿಚಲಿತನಾಗುವುದಿಲ್ಲ. "ನೈವ ಕಿಂಚಿತ್ ಕರೋಮೀತಿ ಯುಕ್ತೋ

ಮನ್ಯೇತ ತತ್ವವಿತ್;ಪಶ್ಯಞ್ಶೃಣ್ವನ್ ಜಿಘ್ರನ್ನಶ್ನನ್ ಗಚ್ಛನ್ ಸ್ವಪನ್ ಶ್ವಸನ್ ಪ್ರಲಪನ್ ವಿಸೃಜನ್ ಗೃಹ್ಣನ್ನುನ್ಮಿಷನ್ ನಿಮಿಷನ್ನಪಿ;ಇನ್ದ್ರಿಯಾಣೀನ್ದ್ರಿಯಾರ್ಥೇಷು ವರ್ತನ್ತ ಇತಿ ಧಾರಯನ್ " **5:8,9.** ಯುಕ್ತನಾದ ತತ್ವಜ್ಞಾನಿಯು ತಾನು ನೋಡುವಾಗಲೂ ಕೇಳುವಾಗಲೂ ಮುಟ್ಟುವಾಗಲೂ ಮೂಸುವಾಗಲು ತಿನ್ನುವಾಗಲೂ ನಡೆಯುವಾಗಲೂ ನಿದ್ರಿಸುವಾಗಲೂ ಉಸಿರು ಬಿಡುವಾಗಲೂ ತೆಗೆದುಕೊಳ್ಳುವಾಗಲೂ ಇಂದ್ರಿಯಗಳು ಇಂದ್ರಿಯಾರ್ಥಗಳಲ್ಲಿ ತೊಡಗಿರುತ್ತವೆ, ನಾನು ಏನು ಮಾಡುತ್ತಿಲ್ಲ ಎಂದು ತಿಳಿಯಬೇಕು. ಜ್ಞಾನಯೋಗಿ ವಿಶ್ವಪ್ರಜ್ಞೆ ಯೊಡನೆ ಏಕಾತ್ಮತೆಯನ್ನು ಹೊಂದಿರುವುದರಿಂದ ಯಾವ ಸಂಗವು ಇಲ್ಲದೆ ಭಾವೋದ್ವೇಗಕ್ಕೆ ಒಳಗಾಗದೆ ಕೆಲಸವನ್ನು ಅತಿ ಅಚ್ಚುಕಟ್ಟಾಗಿ ನಿರ್ವಹಿಸಬಲ್ಲ. ತನ್ನ ನಿಜಸ್ವರೂಪ ವಾದ ಅರಿವು ಎಲ್ಲ ಕರ್ಮಗಳನ್ನು ಮೀರಿದ್ದು ಎಂದರಿತು ಸತತವಾಗಿ ಸಮಾಜದ ಐಕಮತ್ಯಕ್ಕಾಗಿ ದುಡಿಯುತ್ತಾನೆ. ಒಂದು ಮಾತಿನಲ್ಲಿ ಹೇಳುವುದಾದರೆ ಪ್ರಪಂಚದಲ್ಲೇ ಇದ್ದು ಪ್ರಪಂಚಕ್ಕೆ ಸೇರದವನಾಗಿರುತ್ತಾನೆ.

## ಜ್ಞಾನವನ್ನು ಹೊಂದುವುದಕ್ಕೆ ಧಾರ್ಮಿಕ ಆಚರಣೆಗಳ ಅವಶ್ಯಕತೆ

ಜ್ಞಾನಯೋಗವನ್ನು ಬಿಟ್ಟು ಮುಂದುವರೆಯುವ ಮುನ್ನ ಒಂದು ಎಚ್ಚರಿಕೆಯ ಮಾತು ಹೇಳುವುದು ಅವಶ್ಯ. ನಾನು ಸ್ವಭಾವದಿಂದಲೇ ಶುದ್ಧ, ಕರ್ಮ ವಿನಿರ್ಮುಕ್ತ ಎಂದು ಹೇಳುವುದು ಬಹಳ ಸುಲಭ. ಆದರೆ ವ್ಯಾವಹಾರಿಕ ಜೀವನದಲ್ಲಿ ಅನುಸರಣೆಗೆ ತರುವುದು ಬಹಳ ಕಷ್ಟ. ಗೀತೆ ಹೇಳುತ್ತದೆ **2: 29** ರಲ್ಲಿ" ಆಶ್ಚರ್ಯವತ್ ಪಶ್ಯತಿ ಕಶ್ಚಿದೇನ-ಮಾಶ್ಚರ್ಯವದ್ ವದತಿ ತಥೈವ ಚಾನ್ಯಃ; ಆಶ್ಚರ್ಯವಚ್ಚೈನಮನ್ಯಃ ಶೃಣೋತಿ ಶ್ರುತ್ವಾಪ್ಯೇನಂ ವೇದ ನ ಚೈವ ಕಶ್ಚಿತ್" ಒಬ್ಬನು ಈತನನ್ನು ಆಶ್ಚರ್ಯದಂತೆ ಕಾಣುತ್ತಾನೆ, ಮತ್ತು ಇನ್ನೊಬ್ಬನು ಹಾಗೆಯೇ ಆಶ್ಚರ್ಯದಂತೆ ಹೇಳುತ್ತಾನೆ. ಇನ್ನೊಬ್ಬನು ಆಶ್ಚರ್ಯದಂತೆಯೇ ಇವನನ್ನು ಕೇಳುತ್ತಾನೆ. ಹೀಗೆ ಕೇಳಿದರು ಯಾರೊಬ್ಬರೂ ಇವನನ್ನು ಅರಿಯುವುದೇ ಇಲ್ಲ. ಶುದ್ಧತೆ ,ಸುಖಿತ್ವ, ಕರ್ಮ ಬಂದ ವಿನಿರ್ಮುಕ್ತತೆ ನಮ್ಮ ಆಜನ್ಮಸಿದ್ಧ ಹಕ್ಕಾದರೂ ಅವು ಕತ್ತಲೆಯಿಂದ ಮಂಕಾಗಿದೆ ಇಲ್ಲವೇ ಆವರಿಸಲ್ಪಟ್ಟಿದೆ. ಆತ್ಮ ಸಮ್ಮೋಹಿನಿ ಕಾರ್ಯದ ಪರಂಪರೆಯಿಂದ ನಮ್ಮನ್ನು ಅಶುದ್ಧರೂ ದುಃಖಿಗಳು ಧರ್ಮ ಬಂಧನಕ್ಕೊಳಪಟ್ಟವರು ಆಗಿಸಿದ್ದೇವೆ. ನಮ್ಮ ನಿಜಸ್ವರೂಪದ ಶುದ್ಧತೆ. ಸ್ವಯಂ ಪ್ರಕಾಶತೆಯನ್ನು ಮರೆತು ವ್ಯರ್ಥ ಆಕಾಂಕ್ಷೆಗಳಿಂದ ಪ್ರೇರೇಪಿಸಲ್ಪಟ್ಟು ದುಃಖದಿಂದ ಕೂಡಿದ ಲೌಕಿಕರಾಗಿ ಬದಲಾಯಿಸಿದವರಾಗಿದ್ದೇವೆ. **3:38** ರಲ್ಲಿ ಗೀತೆ ಹೀಗೆ ಹೇಳುತ್ತದೆ. "ಧೂಮೇನಾವ್ರಿಯತೇ ವಹ್ನಿರ್ಯಥಾದರ್ಶೋ ಮಲೇನ ಚ;ಯಥೋಲ್ಬೇನಾವೃತೋ ಗರ್ಭಸ್ತಥಾತೇನೇದಮಾವೃತಮ್" ಹೇಗೆ ಬೆಂಕಿಯು

ಹೊಗೆಯಿಂದ ಮುಚ್ಚಿಕೊಂಡಿರುವುದೋ, ಹೇಗೆ ಕನ್ನಡಿಯು ಕೊಳೆಯಿಂದ ಮುಚ್ಚಿಕೊಂಡಿರುವುದೋ, ಹೇಗೆ ಗರ್ಭವು ಉಲ್ಬದಿಂದ ಮುಚ್ಚಿಕೊಂಡಿರುವುದೋ, ಹಾಗೆ ಇದು ಅದರಿಂದ ಮುಚ್ಚಿಕೊಂಡಿರುವುದು. ಈ ಜ್ಞಾನವು ನಮ್ಮಲ್ಲಿ ಅಂತರ್ಗತವಾಗಿದ್ದರೂ ಹೊಸದಾಗಿಯೋ ಎನ್ನುವಂತೆ ಅನ್ವೇಷಣೆ ಮಾಡಬೇಕಾಗಿದೆ. ಹೊಗೆಯ ನಿವಾರಣೆಯಾಗದೆ ಕಣ್ಣುಕೋರೈಸುವಂತಿರುವ ಜ್ಞಾನದ ಬೆಳಕು ಕಾಣುವುದಿಲ್ಲ .ಮನಸ್ಸಿನ ಕನ್ನಡಿಯ ಮೇಲೆ ಮುಸುಕಿರುವ ಕೊಳೆಯನ್ನು ತೊಡೆದಲ್ಲದೇ ಜ್ಞಾನ ಪ್ರತಿಫಲನ ತೋರದು. ಹೀಗಾಗಿ ಧಾರ್ಮಿಕ ಆಚರಣೆಗಳು ಅವಶ್ಯಕ. ಈ ಕ್ರಿಯೆಗಳು ಹೊಸದಾಗಿ ಏನನ್ನೂ ಉತ್ಪತ್ತಿ ಮಾಡುವುದಕ್ಕೆ ಅಲ್ಲದೆ ಮನಸ್ಸಿನ ಕೊಳೆಯನ್ನು ತಿಕ್ಕುವುದಕ್ಕೆ. ಕನ್ನಡಿಗೆ ಮೆರಗು ಕೊಡದೆ ಕೇವಲ ಓದುವುದರಿಂದ ಅಥವಾ ಉಪನ್ಯಾಸಗಳನ್ನು ಕೇಳುವುದರಿಂದ ಇಲ್ಲವೇ ತೀವ್ರತರ್ಕದಿಂದ ಏನೂ ಪ್ರಯೋಜನವಿಲ್ಲ. ವಿವೇಕಚೂಡಾಮಣಿ ಹೇಳುವಂತೆ "ವಾಗ್ವೈಖರಿ ಶಬ್ದಜರೀ ಶಾಸ್ತ್ರ ವ್ಯಾಖ್ಯಾನ ಚತುರೀ ವೈದುಶ್ಯ ವಿದುಷಾಂ". ವಾಗ್ವೈಖರಿ ಶಬ್ದಜಾಲ ತತ್ವಶಾಸ್ತ್ರಗಳ ಅಧ್ಯಯನ ಕೇವಲ ಆನಂದಕ್ಕಾಗಿ. ಬಿಡುಗಡೆಗಾಗಿ ಅಲ್ಲ. ಆತ್ಮಸಂಯಮ ಅಥವಾ ಸ್ವಾರ್ಥವನ್ನು ಗೆಲ್ಲುವುದೇ ಮುಕ್ತಿಗೆ ಅವಶ್ಯ." ತಸ್ಮಾತ್ ತ್ವಮಿಂದ್ರಯಾಣ್ಯಾದೌ ನಿಯಮ್ಯ ಭರತರ್ಷಭ;ಪಾಪ್ಮಾನಂ ಪ್ರಜಹಿಹ್ಯೇನಂ ಜ್ಞಾನವಿಜ್ಞಾನನಾಶನಮ್". ಎಲೈ ಭರತರ್ಷಭನೇ, ನೀನು ಮೊದಲು ಇಂದ್ರಿಯಗಳನ್ನು ಬಿಗಿಹಿಡಿದು ಜ್ಞಾನ ವಿಜ್ಞಾನಗಳನ್ನು ನಾಶಗೊಳಿಸುವ ಈ ಪಾಪಿಯನ್ನು ಕಿತ್ತೊಗೆದುಬಿಡು.

ಜ್ಞಾನ ಯೋಗವು ನಿಜವಾದ ಜ್ಞಾವಾಗಿದ್ದು ಮಿಕ್ಕಿದ್ದೆಲ್ಲ ಅಜ್ಞಾನ. ಈ ಯೋಗಕ್ಕಾಗಿ ಗೀತೆಯು ಕೆಲವು ಪೂರ್ವಭಾವಿ ಸಿದ್ಧತೆಯನ್ನು ಪರಿಗಣಿಸುತ್ತದೆ. ವಿನಯ, ಗುರುಗಳಲ್ಲಿಗೌರವ, ಶುದ್ಧತೆ, ನಿಷ್ಠೆ, ಆತ್ಮಸಂಯಮ, ಇಂದ್ರಿಯ ನಿಗ್ರಹ ,ಬಲಿದಾನ, ಹುಟ್ಟು-ಸಾವು ಆಯಸ್ಸು ಕಾಯಿಲೆ ವೇದನೆ ಇವುಗಳ ದೋಷಾನುದರ್ಶನ, ನಿಸ್ಸಂಗ, ಪತ್ನಿ ಪುತ್ರ, ವಿತ್ತಾದಿಗಳ ಮೇಲಿರುವ ವ್ಯಾಮೋಹ ನಾಶ ,ಸೌಭಾಗ್ಯ ದೌರ್ಭಾಗ್ಯಗಳಲ್ಲಿ ಪ್ರಶಾಂತ ಮನಸ್ಸು, ಪರಮಾತ್ಮನಲ್ಲಿ ಪ್ರತ್ಯೇಕವಾದ ಶ್ರದ್ಧಾಭಕ್ತಿ, ಗ್ರಾಮ್ಯ ಧರ್ಮದ ಬಗ್ಗೆ ಅಸಂತೋಷ, ಆತ್ಮ ವಿಜ್ಞಾನದ ಬಗ್ಗೆ ಅವಿರತ ಪರಿಶ್ರಮ, ಚರಮ ಸತ್ಯದ ಬಗ್ಗೆ ಚಿಂತನೆ ಇವೇ ಗೀತೆ ಹೇಳುವ ಪೂರ್ವಾವಶ್ಯಕತೆಗಳು. ಈ ಅಗತ್ಯಗಳನ್ನು ಶ್ರದ್ಧೆ, ತತ್ಪರತೆ, ಇಂದ್ರಿಯ ನಿಗ್ರಹ ಎಂಬ ಮೂರು ಗುಂಪಾಗಿ ಸಂಗ್ರಹಿಸಲಾಗಿದೆ. ಜ್ಞಾನಯೋಗದ ಪ್ರಾರಂಭದಲ್ಲೇ ವಿಸ್ತಾರವಾಗಿ ವಿವರಿಸಿದ್ದೇವೆ. ಈ ಅರ್ಹತೆಗಳನ್ನು ಕೆಲವುಸಲ **4** ತಲೆಬರಹಗಳಡಿ ವೇದಾಂತ ತತ್ವಶಾಸ್ತ್ರಜ್ಞ ರಿಂದ ವಿಭಾಗಿಸಲಾಗಿದೆ. ವಿವೇಚನೆ ತ್ಯಾಗ,ನೈತಿಕ ಜೀವನ ಮತ್ತು ಬಿಡುಗಡೆಗಾಗಿ ಜ್ವಲಿಸುವ ಆಸೆ. ಈ ನಾಲ್ಕುಗದ

ಸಾಧನೆಗಳಲ್ಲಿ ಈಗಾಗಲೇ ತ್ಯಾಗದ ಬಗ್ಗೆ ದೀರ್ಘವಾಗಿ ಇನ್ನೊಂದೆಡೆ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ. ಇನ್ನು ವಿವೇಚನೆಯಾದರೋ ಸೂಕ್ತವಾದ ತರ್ಕವನ್ನು ಬಳಸಿ ಆತ್ಮವನ್ನು ಅನಾತ್ಮದಿಂದ ವಿಂಗಡಿಸಿ ಖಚಿತಪಡಿಸಿಕೊಳ್ಳುವುದು. ಪ್ರಸ್ತುತ ಪ್ರಕರಣದ ವಿಷಯವಾದ ಕ್ಷೇತ್ರ ಕ್ಷೇತ್ರಜ್ಞ ವಿವೇಕವೇ ಈ ವಿವೇಚನೆ. ಧರ್ಮದ ಜೀವನಾಡಿಯೇ ನೈತಿಕತೆ. ಈ ಮೂರು ಅರ್ಹತೆಗಳು ಪರಸ್ಪರ ವ್ಯಾವರ್ತಕವಲ್ಲ ಮತ್ತು ಒಂದನ್ನು ಅನುಸರಿಸಲು ಇನ್ನೆರಡರ ಅವಶ್ಯಕತೆಯಿದೆ. ಇವು ಒಂದಕ್ಕೊಂದು ಪೂರಕವಾಗಿದ್ದು  ಒಂದೇ ಸಾಧನೆಯ ಬೇರೆ ಬೇರೆ ಮಗ್ಗುಲು. ಇವು ಕೇವಲ ಜ್ಞಾನ ಸಾಧನೆಯಲ್ಲ ಜ್ಞಾನ ಯೋಗಿಯನ್ನು ಗುರುತಿಸುವ ಚಿನ್ಹೆ. ಇವು ಜ್ಞಾನವನ್ನು ಪಡೆಯಲು ಇರುವ ಪ್ರಾರಂಭಿಕ ಕಠಿಣ ಪರೀಕ್ಷೆಯಲ್ಲ, ಜ್ಞಾನ ನಿಷ್ಟನ ಶಾಶ್ವತವಾದ ಗುಣಲಕ್ಷಣ.  ವಿವೇಕ ತ್ಯಾಗ ಮತ್ತು ನೈತಿಕತೆ ತಮ್ಮ ಪರಾಕಾಷ್ಠೆಯನ್ನು ಇಂಥ ಆದರ್ಶ ವ್ಯಕ್ತಿಯಲ್ಲೇ ಹೊಂದುತ್ತವೆ. ಬೇರಾರಲ್ಲೂಈ ಅನಿವಾರ್ಯ ಅಧ್ಯಾತ್ಮಿಕ ಅರ್ಹತೆಗಳು ಈ ಮಟ್ಟದಲ್ಲಿ ಇರಲು ಸಾಧ್ಯವಿಲ್ಲ. ತೀವ್ರವಾದ ಹಂಬಲವಿಲ್ಲದೆ ಈ ಮೂರು ಯಾರಿಗೂ ಒಗ್ಗೂಡುವುದಿಲ್ಲ. ಈ ತುಡಿತ ಹೃದಯದಲ್ಲಿ ಉಂಟಾಗುವ ವರೆಗೂ ದೈವನಿಷ್ಠೆ ನಮ್ಮಲ್ಲಿ ಪ್ರಾರಂಭವಾಗಿಲ್ಲ ಎಂದರ್ಥ. ವಾಸ್ತವಿಕವಾಗಿ ಪ್ರಜ್ಞೆಯ ಆರಾಧಕನಾದ ತತ್ವಶಾಸ್ತ್ರಜ್ಞನಾಗದೇ ಜ್ಞಾನಿ ಯಾಗುವುದು ಸಾಧ್ಯವಿಲ್ಲ.  **12:9** ರಲ್ಲಿ ಶ್ರೀಕೃಷ್ಣನ ಈ ಅಭಿಪ್ರಾಯ ಧ್ವನಿಸುತ್ತದೆ." ಅಥ ಚಿತ್ತಂ ಸ ಮಾಧಾತುಂ ನ ಶಕ್ನೋಷಿ ಮಯಿ ಸ್ಥಿರಮ್/ ಅಭ್ಯಾಸಯೋಗೇನ ತತೋ ಮಾಮಿಚ್ಛಾಪ್ತುಮ್  ಧನಂಜಯ // . ಆದರೆ ನನ್ನಲ್ಲಿ ಚಿತ್ತವನ್ನು ಸ್ಥಿರವಾಗಿ ಸಮಾಧಾನಗೊಳಿಸಿಕೊಳ್ಳುವದಕ್ಕೆ ಶಕ್ತನಾಗದೆ ಇದ್ದರೆ ,ಆಗ ಧನಂಜಯನೆ, ಅಭ್ಯಾಸಯೋಗದಿಂದ ನನ್ನನ್ನು ಪಡೆಯುವುದಕ್ಕೆ ಇಚ್ಛಿಸು .

ಈ ವಿಷಯವನ್ನು ಗೀತೆಯ ವಿರೋಧಾಭಾಸ ಯುಕ್ತವಾದ ಒಂದು ಉಲ್ಲೇಖದೊಂದಿಗೆ ಮುಕ್ತಾಯ ಗೊಳಿಸೋಣ."ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮಿ; ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ". **2: 69**. ಸರ್ವ ಭೂತಗಳಿಗೂ ಯಾವುದು ನಿಶೆಯೋ ಅದರಲ್ಲಿ ಸಂಯಮಿಯು ಎಚ್ಚೆತ್ತಿರುತ್ತಾನೆ. ಯಾವುದರಲ್ಲಿ ಭೂತಗಳು ಎಚ್ಚೆತ್ತಿರುತ್ತವೋ ಅದು ನೋಡುತ್ತಿರುವ ಮುನಿಗೆ  ನಿಶೆಯಾಗಿರುವುದು. ಮನುಷ್ಯರನ್ನು ಎರಡು ಗುಂಪಾಗಿ  ಲೌಕಿಕ  ಅಧ್ಯಾತ್ಮಿಕ ಎಂದು ವಿಂಗಡಿಸಿದಾಗ,ಲೌಕಿಕರಿಗೆ ಪರಮಾರ್ಥದ ಬಗ್ಗೆ  ತಿಳಿವಿಲ್ಲ ಮತ್ತು ವಸ್ತುವಿನ ಸತ್ಯತ್ವದ ಬಗ್ಗೆ ಪೂರ್ಣ ಕತ್ತಲೆಯಲ್ಲಿದ್ದಾರೆ ಎಂದು ಹೇಳಬಹುದು. ಆಧ್ಯಾತ್ಮಿಕ ವ್ಯಕ್ತಿಯಾದರೋ ಗ್ರಾಮ್ಯಧರ್ಮದ ಬಗ್ಗೆ ಸಂಪೂರ್ಣ ವಿಸ್ಮೃತಿಯಲ್ಲಿರುತ್ತಾನೆ. ಅವನ ಪ್ರಪಂಚ ಕೇವಲ ಸತ್ಯಮಯ.

ಅವನಿಗೆ ಪ್ರಾಪಂಚಿಕ ವಿಷಯಗಳ ಅರಿವಿಲ್ಲವೆಂದಲ್ಲ, ಆದರೆ ಅದರ ಪೊಳ್ಳುತನದ ಪೂರ್ಣ ಅರಿವಿರುತ್ತದೆ. ಪ್ರಾಪಂಚಿಕತೆಯನ್ನು ಮರೆಯುವುದು ಎಂದರೆ ಕಾಡಿಗೆ ಅಥವಾ ಗುಹೆಗೆ ವಿರಮಿಸುವುದು ಸಮಾಜದಿಂದ ವಿಮುಖವಾಗುವುದು ಎಂದರ್ಥವಲ್ಲ. ಜ್ಞಾನಿ ಸಮಾಜ ಮಧ್ಯದಲ್ಲೇ ಇದ್ದು ನಿರಂತರವಾಗಿ ನಡೆಯುತ್ತಿರುವ ಜಗನ್ನಿಯಾಮಕನ ನಾಟಕವನ್ನು ನೋಡುತ್ತಾನೆ .ಸಾಧ್ಯವಾದಷ್ಟು ಈ ವಿನೋದದ ಹೆಚ್ಚಳಕ್ಕೆ ಸಹಾಯಮಾಡುತ್ತಾನೆ. ಮಾಡುವುದು ನೋಡುವುದು ಏನೇ ಇದ್ದರೂ ಬ್ರಹ್ಮವಾಗಿಯೇ ಕಾಣುತ್ತಾನೆ. **04:24.** "ಬ್ರಹ್ಮಾರ್ಪಣಂ ಬ್ರಹ್ಮ ಹವಿ ರ್ಬ್ರಹ್ಮಾಗ್ನೌ ಬ್ರಹ್ಮಣಾ ಹುತಮ್; ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮ ಕರ್ಮ ಸಮಾಧಿನಾ ". ಅರ್ಪಣವು ಬ್ರಹ್ಮವು, ಹವಿಸ್ಸು ಬ್ರಹ್ಮವು, ಬ್ರಹ್ಮಾಗ್ನಿಯಲ್ಲಿ ಬ್ರಹ್ಮದಿಂದ ಹೋಮ ಮಾಡಲ್ಪಡುತ್ತದೆ. ಬ್ರಹ್ಮ ಕರ್ಮದ ಸಮಾಧಿಯಿಂದ ಆತನು ಹೋಗಿ ಪಡೆಯಬೇಕಾದದ್ದು ಬ್ರಹ್ಮವೇ. ಜ್ಞಾನಿ ಎಲ್ಲರಲ್ಲೂ ಬ್ರಹ್ಮವನ್ನು ಕಾಣುವುದಲ್ಲದೆ( ಭಾವನೆ) ಪ್ರಪಂಚದ ಸರ್ವ ವಸ್ತುಗಳಲ್ಲೂ ಅಂತರ್ಗತವಾಗಿರುವದು ಬ್ರಹ್ಮವೇ ಎಂದು ಅರಿಯುತ್ತಾನೆ ( ಅನುಭವಾತ್ಮಕವಾಗಿ). ದೈವಿಕ ಆನಂದದ ಪರಾಕಾಷ್ಠೆಯ ಕಾಣ್ಕೆಯಲ್ಲಿ ಬ್ರಹ್ಮವನ್ನು ಪ್ರತ್ಯಕ್ಷೀಕರಿಸಿಕೊಳ್ಳುತ್ತಾನೆ. ಎಲ್ಲ ಭಾವನೆಗಳಲ್ಲಿ, ಕ್ರಿಯೆಗಳಲ್ಲಿ, ವ್ಯಕ್ತಿಗಳಲ್ಲಿ, ಇನ್ನೂ ಸಂಗ್ರಹವಾಗಿ ಹೇಳಬೇಕೆಂದರೆ ಇಡೀ ಸೃಷ್ಟಿಯೇ ದೈವೀಮಯವಾಗುತ್ತದೆ. ಬ್ರಹ್ಮವನ್ನು ಬಿಟ್ಟು ಬೇರೇನನ್ನೂ ಕಾಣುವುದೇ ಇಲ್ಲ. ಇಂತಹವನಿಗೆ ಯೋಗ ಎನ್ನುವುದು ಸಾಧಿಸಿದ ವಿಷಯ ಏಕೆಂದರೆ ಸರ್ವವನ್ನು ಬ್ರಹ್ಮಮಯವಾಗಿ ನೋಡುವವನಿಗೆ ಯಾವುದು ತಾನೇ ಮನಸ್ಸಿಗೆ ಖತಿಯನ್ನುಂಟುಮಾಡುತ್ತದೆ? "ಸಮತ್ವಂ ಯೋಗ ಉಚ್ಯತೇ" ಎಂದಲ್ಲವೇ ಯೋಗದ ವ್ಯಾಖ್ಯೆ. ಪ್ರಕೃತಿಯ ಕ್ಷೋಭೆಗೊಳಿಸುವ ಎಲ್ಲವನ್ನು ಸಮಾನವಾದ ಸಮತ್ವದಿಂದ ಸ್ಥಳಾಂತರಗೊಳಿಸಿರುತ್ತಾನೆ **5:19.** "ಇಹೈವ ತೈರ್ಜಿತಃ ಸರ್ಗೋ ಯೇಷಾಂ ಸಾಮ್ಯೇ ಸ್ಥಿತಂ ಮನಃ; ನಿರ್ದೋಷಂ ಹಿ ಸಮಂ ಬ್ರಹ್ಮ ತಸ್ಮಾದ್ ಬ್ರಹ್ಮಣಿ ತೇ ಸ್ಥಿತಾಃ" ಯಾರ ಮನಸ್ಸು ಸಾಮ್ಯದಲ್ಲಿ ನಿಂತಿರುವುದೋ ಅವರಿಂದ ಇಲ್ಲಿಯೇ ಸರ್ಗವು ಜಿತವಾಗಿರುತ್ತದೆ. ಬ್ರಹ್ಮವು ನಿರ್ದೋಷವಾಗಿಯೂ ಸಮವಾಗಿಯೂ ಇರುವುದರಿಂದ ಅವರು ಬ್ರಹ್ಮದಲ್ಲಿಯೇ ಇರುವರು.

# ಭಕ್ತಿಯೋಗ ಅಥವಾ ಉಪಾಸನಾಯೋಗ

## ಮನುಷ್ಯನ ಸಂತೋಷದ ಹುಡುಕಾಟ

ಜ್ಞಾನಯೋಗವನ್ನು ಪ್ರತಿಪಾದನೆ ಮಾಡುವ ಸಂದರ್ಭದಲ್ಲಿ , ಮಾನವನ ಆತ್ಮವು ಶುದ್ಧವೂ ಬಂಧ ವಿನಿರ್ಮುಕ್ತ ವು ಧರ್ಮ ಎಂಬುದು ಈ ಸ್ವಾತಂತ್ರ್ಯವನ್ನು ಮರಳಿ ಪಡೆಯುವ ಹೋರಾಟ ಎಂದು ಹೇಳಲಾಗಿತ್ತು. ಪ್ರಸ್ತುತ ಪ್ರಕರಣದಲ್ಲಿ ಈ ಸ್ವಾತಂತ್ರ್ಯದ ಇನ್ನೊಂದು ವಿಶೇಷ ಮಗ್ಗುಲನ್ನು ಪರಿಚಯ ಮಾಡಿಕೊಳ್ಳೋಣ. ಅದೆಂದರೆ ಸಂಕಷ್ಟದಿಂದ ಬಿಡುಗಡೆ, ಇದ್ದುದೆಲ್ಲವ ಬಿಟ್ಟು ಹೆಚ್ಚಿನದರೆಡೆಗೆ ತುಡಿವುದೇ ಜೀವನ. ಇದ್ದುದರ ಬಗ್ಗೆ ಇರುವ ಅತೃಪ್ತಿ ಈ ತುಡಿತಕ್ಕೆ ಕಾರಣ. ಮಾನವನಿಗೆ ಸಂತೋಷ ಮತ್ತು ಜ್ಞಾನವನ್ನು ಹೊಂದುವಲ್ಲಿ ಇರುವ ನಿಶ್ಚಿತವಾದ ಮಿತಿಯ ಬಗ್ಗೆ ಸ್ಪಷ್ಟ ಪ್ರಜ್ಞೆ ಇದೆ. ಅತಿ ಪ್ರಾಚೀನ ಕಾಲದಿಂದ ಇಲ್ಲಿಯವರೆಗೂ ಮಾಡಿರುವ ಮಾನವನ ಅಗಾಧ ಸಾಧನೆ ಕೇವಲ ಅವನಿಗೆ ಇನ್ನೂ ಸಾಧಿಸಬೇಕಾದ ಅನಂತ ಕ್ಷೇತ್ರಗಳ ಅರಿವನ್ನು ಉಂಟು ಮಾಡುವಲ್ಲಿ ಅಂತ್ಯ ಕಾಣುತ್ತದೆ. ಶಕ್ತಿ ,ಜ್ಞಾನ ,ಆನಂದ ಇವುಗಳ ಒಡೆತನ ಒಂದು ಸಣ್ಣ ಒಳ ವೃತ್ತಕ್ಕೆ ಸೀಮಿತಗೊಂಡು ಅಂಧಕಾರ ,ಸಂಶಯ ಇವುಗಳು ಹಿರಿದಾದ ಹೊರ ವೃತ್ತದ ಸ್ವಾಮ್ಯವನ್ನು ಪಡೆದಿರುತ್ತದೆ. ಈ ಮಿತಿಯ ಅರಿವೇ ಮಾನವನಿಗೆ ಕಷ್ಟಗಳ ಮೂಲ, ಮತ್ತು ಅವನ ಪ್ರತಿಯೊಂದು ಪ್ರಯತ್ನವು ನ್ಯಾಯವಾದ ಅಥವಾ ಅನ್ಯಾಯವಾದ ಮಾರ್ಗದಿಂದ ಮಿತಿಯನ್ನು ಮೀರಲು ಮಾಡುವ ಪ್ರಜ್ಞಾಪೂರ್ವಕ ಅಥವಾ ಅಪ್ರಜ್ಞಾಪೂರ್ವಕ ಪ್ರಯತ್ನ. ಒಂದು ಮಾತಿನಲ್ಲಿ ಹೇಳುವುದಾದರೆ ಶಾಶ್ವತವಾದ ದುಃಖ ಮುಕ್ತ ಆನಂದವನ್ನು ಪಡೆಯುವುದೇ ಮಾನವನ ಅಂತಿಮಗುರಿ.

ಪರಮಾತ್ಮ ಪ್ರೀತಿ ಅಥವಾ ಭಕ್ತಿಯೇ ದುಃಖ ದೂರವಾಗುವ ಮಾರ್ಗ. ದುಃಖದ ಸಮಸ್ಯೆಗಳಿಗೆ ಎರಡು ಮಾರ್ಗಗಳಿವೆ. ಒಂದು ಮಾರ್ಗದಲ್ಲಿ ಚಿಂತಕರು" ಕೆಟ್ಟದ್ದು ಅಪರಿಹಾರ್ಯವಾಗಿದ್ದು ಪ್ರಪಂಚದಲ್ಲಿ ಇದ್ದೇ ಇರುತ್ತದೆ." ಎನ್ನುತ್ತಾರೆ ಇದ್ದದ್ದರಲ್ಲಿ ಉತ್ತಮ ಎಂದರೆ ಎಷ್ಟು ಸಾಧ್ಯವೋ ಅಷ್ಟು ಮೋಜು ಮಾಡುವುದು ಅನಂತರ ವಿಧಿಗೆ ಶರಣಾಗುವುದು. ಇದು ಚಾರ್ವಾಕ ಸಿದ್ಧಾಂತ. ಇವರ ಪ್ರಕಾರ ವೇದ ಎನ್ನುವುದು ಮೂರ್ಖರ ಮತ್ತು ಮೋಸಗಾರರ ಸಂಶೋಧನೆ. ಈಗಿನ ಕಾಲದಲ್ಲಿ ಕೂಡ ಕೆಟ್ಟದ್ದನ್ನು ಬಿಡಬೇಕು ಒಳ್ಳೆಯದನ್ನು ಮಾತ್ರ ಸ್ವೀಕರಿಸಬೇಕು ಬೇರೆ ಗತ್ಯಂತರವಿಲ್ಲ ಎಂದು ಖಂಡಿತವಾಗಿ ಹೇಳುತ್ತಾರೆ. ಆದರೆ ಇದು ಕಾರ್ಯರೂಪಕ್ಕೆ ತರಲಾಗದ ಬುದ್ಧಿವಾದ ಏಕೆಂದರೆ ನೋವು ನಲಿವುಗಳು ಅವನ್ನು ಎಷ್ಟು ಅವಜ್ಞೆ

ಮಾಡಬೇಕೆಂದು ಪ್ರಯತ್ನಿಸಿದರೂ ತಾವೇ ಅನುಭವಕ್ಕೆ ಬರುತ್ತವೆ. ಪ್ರಪಂಚವು ಸುಖದುಃಖಗಳ ಮಿಶ್ರಣ. ಆತ್ಯಂತಿಕವಾಗಿ ಕೊನೆಗಾಣದ ದುಃಖದ ಅರಿವಿದ್ದೂ ಮೋಜು ಮಾಡಬೇಕೆಂದು ಆಲೋಚಿಸುವವನು ಕಾಲ್ಪನಿಕ ಸ್ವರ್ಗದಲ್ಲಿ ಇರುತ್ತಾನೆ. ಹೀಗಾಗಿ ಮೊದಲನೆಯ ಪರಿಹಾರ ಅಷ್ಟು ಸೂಕ್ತವಲ್ಲ. ದುಃಖ ದೂರಕ್ಕೆ ಇರುವ ಇನ್ನೊಂದು ಪರಿಹಾರ ಧರ್ಮಕ್ಕೆ ಸೇರಿದ್ದು ಧರ್ಮ ಹೇಳುತ್ತದೆ "ಧೈರ್ಯದಿಂದ ಮುನ್ನುಗ್ಗು" ನಾವು ನಮ್ಮ ಸಣ್ಣ ಸಣ್ಣ ಸುಖಗಳನ್ನು, ತೊಂದರೆಗೆ ಕೃತಕ ಪರಿಹಾರಗಳನ್ನು ಮರೆಯುವುದಾದರೆ ದುಃಖವನ್ನು ಮೀರಬಹುದು ಎನ್ನುತ್ತದೆ. "ಮೂರು ರೀತಿಯ ತೊಂದರೆಗಳನ್ನು( ಆದಿಭೌತಿಕ, ಆಧ್ಯಾತ್ಮಿಕ, ಆದಿದೈವಿಕ) ಕೃತಕ ಸಾಧನಗಳಿಂದ ತೊಡೆಯಲು ಸಾಧ್ಯವಿಲ್ಲ. ಏಕೆಂದರೆ ಅದರ ನಿಗ್ರಹವಾದಮೇಲೆ ಮತ್ತೆ ಪುನರಾಗಮನವಾಗಿರುವುದು ಅನುಭವದಲ್ಲಿದೆ" ಎನ್ನುತ್ತದೆ ಸಾಂಖ್ಯ ಸೂತ್ರ 1-2. ಅದಕ್ಕೆ ಧರ್ಮವು ತೊಂದರೆಗಳನ್ನು ದಾಟಲು ಕೃತ್ರಿಮ ಸಾಧನೆಗಳಲ್ಲದೆ, ಒಬ್ಬ ಶುದ್ಧ ಬಂಧ್ಧಮುಕ್ತ ಮತ್ತು ಶಾಶ್ವತವಾದ ಆನಂದವನ್ನು ಹೊಂದಿರುವವನ ಸಹಾಯದಿಂದ ಮಾತ್ರ ಸಾಧ್ಯ ಎನ್ನುತ್ತದೆ. ಜೀವಿಗಳಲ್ಲಿ ಸುಖ-ದುಃಖ ಎಂಬೆರಡೂ ಭಾವಗಳು ಆಳವಾಗಿ ಹುಟ್ಟುಗುಣದಂತೆ ನಾಟಿಬಿಟ್ಟಿದೆ ಎಂಬುದನ್ನು ನಾವೆಲ್ಲ ನೋಡಿದ್ದೇವೆ. ಮಾನವನಿಗೆ ಅವನ ಕ್ಲೇಶ, ಸೀಮಿತವಾದ ಇರುವಿಕೆ ಸೀಮಿತವಾದ ಜ್ಞಾನ ಮತ್ತು ಸೀಮಿತವಾದ ಆನಂದ ಇವುಗಳ ಅರಿವಿದ್ದರೂ ಅಳಿಸಲಾಗದ ಶಾಶ್ವತ ಸುಖದ ಬಯಕೆ ತೀವ್ರವಾಗಿದೆ.

ಅತ್ಯಂತ ಅನಾಗರಿಕ ಬರ್ಬರ ಮನುಷ್ಯನಿಂದ ಅತ್ಯಂತ ಸುಸಂಸ್ಕೃತ ಮನುಷ್ಯನ ವರೆಗೂ ಎಲ್ಲರಿಗೂ ಯಾವುದೋ ಒಂದು ಅನಂತ ಜ್ಞಾನ, ಅನಂತ ಇರುವಿಕೆ, ಮತ್ತು ಅನಂತ ಆನಂದವನ್ನು ಹೊಂದಿರುವ ಆದರ್ಶ ವಸ್ತುವಿನಬಗ್ಗೆ ಸಂಪೂರ್ಣ ನಂಬಿಕೆಯಿದೆ. ಮಾನವನಲ್ಲಿ ಬೇರೂರಿದೆ ಈ ನಂಬಿಕೆಯನ್ನು ನಿರಾಕರಣೆ ಮಾಡಲಾಗದು.ಈ ಆದರ್ಶವೇ ಧರ್ಮದ ದೇವರು. ಜನರ ಈ ನಂಬಿಕೆಯನ್ನು ವಾದದಿಂದ ತಳ್ಳಿಹಾಕಬಹುದು ಆದರೆ ಇರುವಿಕೆಯನ್ನು ತಳ್ಳಿಹಾಕಲಾಗದು. ಜನಸಾಮಾನ್ಯರಲ್ಲಿರುವ ದೇವರ ಬಗೆಗಿನ ಈ ನಂಬಿಕೆ ಅವರಿಗೆ ಮಾತ್ರ ಸೀಮಿತವಾದ್ದೇನಲ್ಲ. ಪ್ರಖ್ಯಾತ ವೈಜ್ಞಾನಿಕ ಸಂಶೋಧಕರುಗಳೂ ದೇವರ ಮೇಲಿನ ತಮ್ಮ ನಂಬಿಕೆಯನ್ನು ದೃಢಪಡಿಸಿದ್ದಾರೆ. ಈ ನಂಬಿಕೆಯ ಗುಣಧರ್ಮಗಳನ್ನು ವಿಚಾರ ಮಾಡುವುದು ನಮ್ಮ ಉದ್ದೇಶವಲ್ಲ ಆದರೆ ಮಾನವ ಸಮುದಾಯದ ಅತಿಹೆಚ್ಚಿನ ಭಾಗ ಈ ನಂಬಿಕೆಗೆ ಒಳಪಟ್ಟಿದೆ ಎಂಬುದನ್ನು ಗುರುತಿಸುವುದು. ಕೆಲವರು ಈ ನಂಬಿಕೆಯನ್ನು ಅಂಗೀಕರಿಸದಿದ್ದರೂ ಸ್ವಯಂ ಸಿದ್ಧವಾದ ಒಂದು ವಸ್ತುವನ್ನು ಒಪ್ಪಿಕೊಂಡು ತಮಗೆ ಬೇಕಾದ ಹೆಸರುಗಳನ್ನು ಕೊಡುತ್ತಾರೆ. ಈ ರೀತಿಯ ಎಲ್ಲ ವಸ್ತುಗಳನ್ನು ದೇವರು ಎನ್ನುವ ಒಂದು ಹೆಸರಿನಿಂದ ಗುರುತಿಸೋಣ. ದೇವರು

ಎನ್ನುವ ಪದ ಬಹಳ ವ್ಯಾಪಕವಾಗಿ ಮೇಲಿನ ಎಲ್ಲ ರೀತಿಯ ಅಭಿಪ್ರಾಯಗಳನ್ನು ಪ್ರತಿಬಿಂಬಿಸುತ್ತದೆ. ಅವ್ಯಕ್ತ, ಅಕ್ಷರ, ಧರ್ಮ, ತತ್ವ, ಸತ್, ಪರ, ಸಾರ, ಏಕ ಇವೆಲ್ಲ ಪದಗಳು ಗೀತೆ ಮತ್ತು ಉಪನಿಷತ್ತುಗಳಲ್ಲಿ ಭಗವಂತನನ್ನು ಕುರಿತ ಪದಗಳಾಗಿವೆ. ಶಾಸ್ತ್ರ ಹೇಳುತ್ತದೆ ಮಾನವನ ದುಃಖನಿವೃತ್ತಿ ಕೇವಲ ಈ ಶುದ್ಧವಾದ ಪೂರ್ಣವಾದ ಪರಮಶ್ರೇಷ್ಠ ಅಸ್ತಿತ್ವದ ಸಹಾಯದಿಂದ ಮಾತ್ರ ಸಾಧ್ಯ. ಈ ಪರಮ ಅಸ್ತಿತ್ವವೇ ಪೂರ್ಣಾನಂದವಾಗಿದ್ದು ಇದರ ಭಕ್ತಿಯಿಂದಲೇ ದುಃಖ ದೂರ. ಯಾವ ಯೋಗವು ಈ ಭಕ್ತಿಯನ್ನು ಪೂರ್ಣವಾಗಿ ಬೆಳೆಸುವ ಅಭಿವೃದ್ಧಿಪಡಿಸುವ ಕಲೆಯ ನಿಯಮಗಳನ್ನು ಹಾಕಿಕೊಡುತ್ತದೋ ಅದೇ ಭಕ್ತಿಯೋಗ.

## ಭಕ್ತಿಯೋಗದ ದೇವರು

ಗೀತೆಯ ಉಪದೇಶವನ್ನು ಗಮನಿಸಿದಾಗ ತಿಳಿಯ ಬರುವ ಅಂಶವೆಂದರೆ ದೇವರೆಂಬುದು ಕೇವಲ ಕಲ್ಪನೆಯಲ್ಲ ಪರಮಸತ್ಯ. ಜ್ಞಾನಯೋಗದ ಬ್ರಹ್ಮವೇ ಭಕ್ತಿಯೋಗದ ದೇವರು. ಜ್ಞಾನ ಯೋಗದಲ್ಲಿ ನಾವು ಕಂಡಂತೆ ಬ್ರಹ್ಮವೊಂದೇ ಸತ್ಯ ಮತ್ತು ಈ ಪ್ರಪಂಚದ ಸಕಲ ಚರಾಚರ ವಸ್ತುಗಳೊಡನೆ ಪ್ರಪಂಚವೂ ಸೇರಿದಂತೆ ಎಲ್ಲವೂ ಅದರ ಅಭಿವ್ಯಕ್ತಿಯೇ. ಈ "ದೇವರು" ಆ ಬ್ರಹ್ಮದ ಅತಿ ಉಚ್ಚ ಅಭಿವ್ಯಕ್ತಿ ಮತ್ತು ಮಾನವನ ಬುದ್ಧಿಮತ್ತೆ ತಲುಪಲಾಗುವ ಬ್ರಹ್ಮದ ಅತಿ ಉತ್ತಮ ತಿಳಿವು. "ಬ್ರಾಹ್ಮಣೋಹಿ ಪ್ರತಿಷ್ಠಾಹಮ್" ವಾಸ್ತವಿಕವಾಗಿ ಬ್ರಹ್ಮದ ನಿವಾಸಸ್ಥಾನ ನಾನು ಎಂದು ಕೃಷ್ಣ ಹೇಳುತ್ತಾನೆ. ಬೇರೆಲ್ಲರೂ, ಬೇರೆಲ್ಲವೂ ಆ ಬ್ರಹ್ಮದ ಅಭಿವ್ಯಕ್ತಿಯೇ ಆದರೂ ಕನಿಷ್ಠ ಅಭಿವ್ಯಕ್ತಿಯಾಗಿದ್ದು ಅಂಶ ಮಾತ್ರವಾಗಿರುತ್ತದೆ. "ಮಮೈವಾಂಶೋ ಜೀವಲೋಕೆ ಜೀವಭೂತಃ ಸನಾತನಃ" 15: 7. ಸನಾತನವಾದ ನನ್ನದೇ ಅಂಶವು ಲೋಕದಲ್ಲಿ ಜೀವನಾಗಿದ್ದುಕೊಂಡಿದೆ. ಸ್ವಾಮಿ ವಿವೇಕಾನಂದರಿಂದ ಒಂದು ಉಪಮೆಯನ್ನು ತೆಗೆದುಕೊಳ್ಳುವುದಾದರೆ, ಮಣ್ಣಿನ ಇಲಿ ಆನೆ ಯಾಗದು ಕೇವಲ ಮಣ್ಣಾಗಿ ಇಲಿ ಆನೆ ಎಲ್ಲವೂ ಒಂದೇ. ಅಭಿವ್ಯಕ್ತವಾದ ರೂಪದಿಂದ ಇಲಿ ಆನೆ ಎಂಬ ಭೇದ. ಹೀಗಾದಲ್ಲಿ ದೇವನ ಅಭಿವ್ಯಾದ ಜ್ಞ ಜೀವರಾದ ನಾವು ದೇವನ ದಾಸರು ಆರಾಧಕರು. ಅವನ ಆರಾಧನೆಯಿಂದಲೇ ನಾವು ದುಃಖದೂರರಾಗುತ್ತೇವೆ. "ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವಮಾಂ" 9:33 . ಅನಿತ್ಯವು ಅಸುಖವು ಆದ ಲೋಕವನ್ನು ಹೊಂದಿದ ನೀನು ನನ್ನನ್ನು ಭಜಿಸು.

ಈಗ ಭಕ್ತಿಯೋಗದ ಭಗವಂತ ಜ್ಞಾನಯೋಗದ ಬ್ರಹ್ಮ ಎರಡರಲ್ಲಿ ಅಂತರವಿಲ್ಲ. ಅದೇ ಬ್ರಹ್ಮವನ್ನೇ ಭಕ್ತಿ ಎಂಬ ಕನ್ನಡಕದಿಂದ ನೋಡಿದಾಗ ಭಗವಂತನಾಗಿ ತೋರುತ್ತಾನೆ. ಬ್ರಹ್ಮದ

ಮೂಲ ಸ್ವಭಾವವು ಎಲ್ಲ ಪ್ರತಿಪಾದನೆಗಳನ್ನು ಮೀರಿದ್ದು, ಧನಾತ್ಮಕವಾಗಿ ವಿವರಿಸಲಾಗದ್ದು. ಹೀಗಾಗಿ ಜ್ಞಾನಯೋಗ ಋಣಾತ್ಮಕ ಭಾಷೆಯನ್ನು ಬಳಸುತ್ತದೆ."ನ ಸತ್ತನ್ನಾಸದುಚ್ಯತೆ".13 :12 ಅದು ಸತ್ತು ಅಲ್ಲ ಅಸತ್ತು ಅಲ್ಲ. ಆದರೆ ಭಕ್ತಿಯೋಗ ಧನಾತ್ಮಕವಾಗಿ ನಿರೂಪಿಸುತ್ತದೆ. ವಾಸ್ತವಿಕವಾಗಿ ಭಗವಂತನು ಮಾನವನಿಗೆ ಪರಿಚಯವಿರುವ ಎಲ್ಲಾ ಗುಣಧರ್ಮಗಳಿಗಿಂತ ಅನಂತವಾಗಿ ಮೇಲಿರುವವನು ಎಂದರೆ ಭಾಷೆಗೆ ನಿಲುಕದವನು. ಎಲ್ಲಾ ಗುಣಧರ್ಮವು ಅವನನ್ನು ಮಿತಿಗೆ ಒಳಪಡಿಸುತ್ತದೆ. ಮಾನವನ ಭಾಷೆಯು ಕೇವಲ ಪರಮಾರ್ಥವನ್ನು ಸೂಚಿಸಬಹುದು ಇಲ್ಲವೆ ನಿರ್ದೆಶಿಸಬಹುದು ಆದರೆ ಅದನ್ನು ಮುಟ್ಟಲು (ತಲುಪಲು) ಆರವು. ನೇರವಾಗಿ ಇದು ಎಂದೂ ತಿಳಿಸಲಾರವು. ನಮ್ಮ ಭಾಷೆಯು ಯಾವ ಹೆಚ್ಚಿನ ಗುಣಧರ್ಮಗಳ ಮೇಲೆ ತನ್ನ ಪ್ರಭುತ್ವವನ್ನು ಹೊಂದಿದೆಯೋ, ಎಂದರೆ ಭಾಷೆಯ ವ್ಯಾಪ್ತಿಯಲ್ಲಿ ಯಾವುದು ಅತಿಹೆಚ್ಚಿನ ಗುಣಲಕ್ಷಣಗಳೋ ಅವನ್ನು ಬಳಸಿ ಭಗವಂತನ ನಿರ್ದೇಶವನ್ನು ಮಾಡುವುದಕ್ಕೆ ತಡೆಯಿಲ್ಲ. ಮಾನವನ ಹೃದಯ, ನಮಗೆ ನಿಲುಕುವ ಎಲ್ಲ ಇರವು, ಅರಿವು, ಆನಂದ (ಸತ್, ಚಿತ್, ಆನಂದ) ಇವುಗಳ ತಿರುಳಾಗಿ ಒಂದು ವಸ್ತು ಇದೆ ಎಂದು ಯಾವಾಗಲೂ ದೃಢವಾಗಿ ಹೇಳುತ್ತಿದೆ. ಭಗವಂತನು ಬ್ರಹ್ಮದ ಅತ್ಯುಚ್ಚ ಮಟ್ಟದ ಅಭಿವ್ಯಕ್ತಿ ಎಂಬ ತರ್ಕವೂ ಮಾನವನ ಈ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ಭಕ್ತಿ ಯೋಗವು ನಿಸ್ಸಂಕೋಚವಾಗಿ ಸ್ಪಷ್ಟವಾದ ಭಾಷೆಯನ್ನುಬಳಸುತ್ತದೆ. " ತ್ವಮಾದಿದೇವಃ ಪುರುಷಃ ಪುರಾಣ ಸ್ತ್ವಮಸ್ಯ ವಿಶ್ವಸ್ಯ ಪರಂ ನಿಧಾನಮ್. ವೇತ್ತಾಸಿ ವೇದ್ಯಂ ಚ ಪರಂ ಚ ಧಾಮ ತ್ವಯಾ ತತಂ ವಿಶ್ವಮನನ್ತರೂಪ" 11:38. ನೀನು ಆದಿದೇವನು, ಪುರಾಣಪುರುಷನು, ನೀನು ವಿಶ್ವಕ್ಕೆ ಪರ ಆಶ್ರಯವು. ವೇತ್ತನಾಗಿರುವೆ, ವೇದ್ಯವು ಆಗಿರುವೆ, ಪರಮ ಧಾಮವು ಆಗಿರುವೆ. ಅನಂತ ರೂಪನೆ ವಿಶ್ವವು ನಿನ್ನಿಂದ ವ್ಯಾಪ್ತವಾಗಿದೆ. " ಪಿತಾಸಿಲೋಕಸ್ಯ ಚರಾಚರಸ್ಯ ತ್ವಮಸ್ಯ ಪೂಜ್ಯಶ್ಚ ಗುರುರ್ಗರೀಯಾನ್. ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ ಲೋಕತ್ರಯೇಽಪ್ಯಪ್ರತಿಮಪ್ರಭಾವ." ಈ ಚರಾಚರ ಲೋಕಕ್ಕೆ ನೀನು ತಂದೆಯಾಗಿರುವೆ, ಪೂಜ್ಯನೂ ಹೆಚ್ಚಿನ ಗುರುವಾಗಿರುವೆ. ಅಪ್ರತಿಮಪ್ರಭಾವನೇ, ಲೋಕತ್ರಯದಲ್ಲಿಯೂ ನ ಸಮ ಾದವನು ಇಲ್ಲ, ಇನ್ನು ನಿನಗಿಂತ ಹೆಚ್ಚಿನವನು ಎಲ್ಲಿದ್ದಾನು? 11:43.

## ಮಾಯೆಯನ್ನು ದಾಟುವುದು ಅಥವಾ ಅಧ್ಯಾತ್ಮಿಕ ಸಾಧನೆ.

ಭಕ್ತಿಯೋಗ ಎಂದರೆ ಪರಮಸುಖ ಅಥವಾ ಪರಮಾತ್ಮನ ಹುಡುಕಾಟ ಭಕ್ತಿಯ ಮಾರ್ಗದಿಂದ. ಎಲ್ಲ ಮಾನವರು ತಾವು ಆಶ್ರಯಿಸಬಹುದಾದಂತ, ಪ್ರೀತಿಸ ಬಹುದಾದಂತ, ಶಾಶ್ವತವಾದ ಒಂದು ವಸ್ತುವಿನ ದಣಿವರಿಯದ ಹುಡುಕಾಟದಲ್ಲಿ ನಿರತರಾಗಿದ್ದಾರೆ. ಎಲ್ಲ ಪ್ರಯತ್ನಗಳೂ ಭಂಗಗೊಂಡರೂ

ಮನುಷ್ಯ ತನ್ನ ಹುಡುಕಾಟವನ್ನು ನಿಲ್ಲಿಸಿಲ್ಲ. ಪರಮಾತ್ಮನೆಂಬ ಒಂದು ಸತ್ ವಸ್ತು ಇರುವುದಾದಲ್ಲಿ ಇಂದಲ್ಲ ನಾಳೆ ಖಚಿತವಾಗಿ ಅದನ್ನು ಕಂಡುಕೊಳ್ಳುವೆವು ಎಂಬ ಮನೋಭಾವವನ್ನು, ಎಂದರೆ ಮನುಷ್ಯನ ದುಃಖ ದೂರವಾಗುವ ಭರವಸೆ ಕೇವಲ ಕನಸಲ್ಲಾ ಎಂಬುದನ್ನು ಕೃಷ್ಣ ಈ ಹೇಳಿಕೆಯಿಂದ ಅನುಗ್ರಹಿಸುತ್ತಾನೆ. "ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ, ಮಾಮೇವ ಯೇ ಪ್ರಪದ್ಯನ್ತೇ ಮಾಯಾಮೇತಾಂ ತರನ್ತಿ ತೇ" 07:14. ಈ ಗುಣಮಯವಾದ ನನ್ನ ದೈವೀ ಮಾಯೆಯು ದಾಟಲಶಕ್ಯವು. ನನ್ನನ್ನೇ ಯಾರು ಸೇರುವರೋ ಅವರು ಈ ಮಾಯೆಯನ್ನು ದಾಟುವರು . ಇದನ್ನು ಆಲಿಸಿದ ಮನುಷ್ಯ ಪ್ರಜ್ಞಾಪೂರ್ವಕವಾಗಿ ದೈವದಲ್ಲಿ ಶರಣಾಗತಿಯನ್ನು ಹೊಂದಲು ಪರಿಶ್ರಮದಲ್ಲಿ ತೊಡಗಿದಾಗ ಅವನು ಭಕ್ತಿಯೋಗದ ಮಾರ್ಗದಲ್ಲಿ ನಡೆಯ ತೊಡಗಿದ್ದಾನೆ ಎಂದು ಅರ್ಥ. ಮೂರು ಗುಣಗಳ ಪರಸ್ಪರ ಪ್ರಭಾವದ ಅಭಿವ್ಯಕ್ತಿಯನ್ನು ಹೊಂದಿರುವ ಪ್ರಕೃತಿಯನ್ನು ಮಾಯೆಯೆಂದು ಮೇಲಿನ ಶ್ಲೋಕದಲ್ಲಿ ಉಲ್ಲೇಖಿಸಲಾಗಿದೆ. "ಮಮ ಮಾಯಾ" ಎನ್ನುವಲ್ಲಿ ಭಗವಂತ ಮೂರು ಗುಣಗಳ ಅಧಿಪತಿಯಾಗಿದ್ದು ಅವುಗಳನ್ನು ನಿಯಂತ್ರಣದಲ್ಲಿ ಇಡುವುದರಿಂದ ಮಾಯೆ ನನ್ನದು ಎನ್ನುವುದು ಯುಕ್ತವಾಗಿದೆ. ಜೀವಿಗಳಿಗೆ ಮಾಯೆ ಒಂದು ಅಪರಿಮಿತ ಸಾಗರವಾಗಿದ್ದು, ಸಹಾಯವಿಲ್ಲದೆ ದಾಟಲು ಅಸಾಧ್ಯ. ಅಂಬಿಗನಿಗೆ ನಮ್ಮನ್ನು ಸಂಪೂರ್ಣವಾಗಿ ಒಪ್ಪಿಸಿಕೊಂಡಲ್ಲಿ ಈ ಅಗಾಧವಾದ ಸಾಗರವನ್ನು ದಾಟಲು ಸಾಧ್ಯ. ಇದಕ್ಕೆ ಒಂದು ಸುಂದರವಾದ ರೂಪಕಾಲಂಕಾರ ವರ್ಣನೆ ಗೀತೆಯ 18: 61 ರಲ್ಲಿ ಇದೆ. "ಈಶ್ವರಃ ಸರ್ವಭೂತಾನಾಂ ಹೃದ್ದೇಶೇ಼ರ್ಜುನ ತಿಷ್ಠತಿ, ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ" ಅರ್ಜುನನೇ ಯಂತ್ರಾರೂಢ ವಾಗಿರುವ ಸರ್ವ ಭೂತಗಳನ್ನು ಮಾಯೆಯಿಂದ ತಿರುಗಿಸುತ್ತಾ ಈಶ್ವರನು ಸರ್ವ ಭೂತಗಳ ಹೃದಯದಲ್ಲಿಯೂ ಇದ್ದಾನೆ. ಇಲ್ಲಿ ಬಣ್ಣದ ತಿರುಗುವ ರಾಟೆಯನ್ನು ಪರಾಮರ್ಶಿಸಲಾಗಿದೆ .ಇದರಲ್ಲಿ ಬಣ್ಣ ಬಣ್ಣದ ಮರದ ಕುದುರೆಗಳು, ತೊಟ್ಟಿಲುಗಳು, ಬೇರೆ ಬೇರೆ ಪ್ರಾಣಿಗಳು ಒಂದು ಬೃಹತ್ ಛತ್ರಿಯ ಸುತ್ತ ಇಳಿಬಿದ್ದಿರುತ್ತದೆ. ಮತ್ತು ಮಧ್ಯದ ಕಂಬಕ್ಕೆ ಅಳವಡಿಸಿರುವ ಯಾಂತ್ರಿಕ ಗುಂಬದಿಂದ ತಿರುಗುತ್ತದೆ. ಮನುಷ್ಯರು ಈ ಪ್ರಾಣಿಗಳ ಅಥವಾ ತೊಟ್ಟಿಲ ಮೇಲೆ ಕುಳಿತು ಅನೇಕ ಸುತ್ತು ತಿರುಗಬಹುದು. ಗೀತೆ ಹೇಳುವಂತೆ ಈ ಪ್ರಪಂಚವೇ ಒಂದು ಮಾಯ ಯಂತ್ರ. ಪರಮಾತ್ಮನೇ ಕಾರ್ಯನಿರ್ವಾಹಕ. ನಮ್ಮ ದೇಹ ಮತ್ತು ಸ್ವತ್ತು ನಾವು ಏರುವ ಪ್ರಾಣಿಗಳು. ಯಂತ್ರ ತಿರುಗುವಾಗ ಪ್ರಾಣಿಗಳು ಗಾಳಿಯಲ್ಲಿ ಸುತ್ತುತ್ತವೆ, ವೇಗ ಜೋರಾದಂತೆ ಇನ್ನೂ ಎತ್ತರದಲ್ಲಿ ಹೆಚ್ಚಿನ ವೇಗದಿಂದ ಸುತ್ತುತ್ತವೆ. ಒಂದು ಪ್ರಾಣಿ ಮೇಲೆ ಒಂದು ಪ್ರಾಣಿ ಕೆಳಗೆ .ಈ ರೀತಿ ಆನಂದ ಅನುಭವಿಸುವಾಗ ಸರಿಯಾಗಿ ಕುಳಿತು ನಮ್ಮ ಸಮತೋಲನವನ್ನು ಕಾಯ್ದುಕೊಳ್ಳಬೇಕು. ಕೇವಲ ಆಟ ಎನ್ನುವುದನ್ನು ಮರೆತು ಪಕ್ಕದವನಿಗಿಂತ ನಾನು ಮೇಲಿದ್ದೇನೆ ಎಂಬ ಹೆಮ್ಮೆ ಅಥವಾ ಕೆಳಗಿದ್ದೇನೆ ಎಂಬ ಕೀಳರಿಮೆಗೆ ಪಕ್ಕಾಗುತ್ತಾನೆ. ಈ

ಭಾವಗಳು ನಮ್ಮ ಸಮತೋಲನವನ್ನು ಧಕ್ಕೆಗೊಳಿಸುತ್ತದೆ ನಮ್ಮ ಪತನವಾಗುತ್ತದೆ. ಈ ಬೀಳುವಿಕೆಯಿಂದ ತಪ್ಪಿಸಿಕೊಳ್ಳಲು ಪ್ರಜ್ಞಾಪೂರ್ವಕವಾಗಿ ಇದು ಕೇವಲ ಆಟ ಎಂಬ ಮನಸ್ಥಿತಿಯಿಂದ ಆಹ್ಲಾದಿಸಬೇಕು. ಈ ಸಮತೋಲನವನ್ನು ಪಡೆಯಲು ಗುರುತ್ವ ಕೇಂದ್ರವಾದ ಪರಮಾತ್ಮನಲ್ಲಿ ಸಂಪರ್ಕವನ್ನು ಹೊಂದಬೇಕು. ಈ ಜಗನ್ನಾಟಕದ ಸೂತ್ರಧಾರನಾದ ಭಗವಂತನಲ್ಲಿ ಶರಣು ಹೋದಲ್ಲಿ ನಾಟಕದ ಆನಂದವನ್ನು ಅನುಭವಿಸಬಹುದು.

ಇಲ್ಲಿ ಮಾಯೆ ಮತ್ತು ಆಟ ಎಂಬ ಅಭಿಪ್ರಾಯದ ಬಗ್ಗೆ ಕೆಲವು ಆಕ್ಷೇಪಣೆಯನ್ನು ಗಮನಿಸಬೇಕಾಗಿದೆ. ಪರಮಾತ್ಮನ ಮಾಯೆಯಲ್ಲಿ ಜೀವರು ತೊಡಕಿಕೊಳ್ಳುತ್ತಾರೆ ಎನ್ನುವುದು, ದೇವನ ಬಗ್ಗೆ ಇರುವ ಕೇವಲ ಕ್ಷುಲ್ಲಕ ಮತ್ತು ತುಚ್ಛವಾದ ಕಲ್ಪನೆ. ಈ ಅಭಿಪ್ರಾಯ ಪರಮಾತ್ಮನನ್ನು ಕೀಳುಮಾಡುತ್ತದೆ. ಅರ್ಥವಿಲ್ಲದ ಸೃಷ್ಟಿಯ ಆಟ ಎನ್ನುವಂಥ ಕ್ಷಣಿಕ ಮಾನಸಿಕ ಪ್ರಚೋದನೆಗಳಿಗೆ ಸ್ಪಂದಿಸುವವನು ಎನ್ನುವ ಅಭಿಪ್ರಾಯ ಉಂಟುಮಾಡುತ್ತದೆ. "ಬ್ರಹ್ಮನ ಒಂದು ಉದ್ದೇಶವು ಅವನನ್ನು ಸೃಷ್ಟಿಯ ಮೂಲಕ, ತನ್ನನ್ನು ತಾನು ಪ್ರಕಾಶ ಪಡಿಸುವಲ್ಲಿ ತೊಡಗಿಸುತ್ತದೆ " ಎಂಬ ಈಶ್ವರೀಯ ವಾದವನ್ನು , ಸೃಷ್ಟಿಯು ಕೇವಲ ಪರಮಾತ್ಮನ ಲೀಲೆ ಎನ್ನುವ ಅಭಿಪ್ರಾಯ . ರೋಧಿಸುತ್ತದೆ. ತಾತ್ವಿಕ ಅಭಿಪ್ರಾಯಗಳನ್ನೆಲ್ಲ ಕೆಲಸಮಯ ಪಕ್ಕಕ್ಕಿಟ್ಟು ಯೋಚಿಸಿದರೂ, ದೇವನು ವಿನೋದಕ್ಕಾಗಿ ಶಾಶ್ವತವಾದ ಲೀಲೆಯನ್ನು ರಚಿಸಿ, ಅದರಲ್ಲಿ ಜೀವರು ಆ ಆನಂದದಲ್ಲಿ ಭಾಗವಹಿಸುವುದನ್ನು ಉದ್ದೇಶಿಸುವುದು, ದೇವತ್ವಕ್ಕೆ ಹೇಗೆ ಅಗೌರವ ತರುವಂಥದ್ದಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಲಾರದವನಾಗಿದ್ದಾನೆ. ತನ್ನನ್ನು ತಾನು ಪ್ರಕಾಶ ಗೊಳಿಸಬೇಕು ಎನ್ನುವುದು ದೇವನ ಸಹಜ ಸ್ವಭಾವ ವಾಗಿದ್ದಲ್ಲೀ ಈ ಆಸೆಯೇ ಸೃಷ್ಟಿಯ ಪ್ರಚೋದಕವಾಗಿದ್ದಲ್ಲಿ, ದೇವನು ಯಾವ ರೀತಿಯಿಂದ ಪ್ರಕಟಗೊಳ್ಳಬೇಕು ಎಂದು ನಿರೀಕ್ಷಿಸಬಹುದು? ಎಲ್ಲ ಜೀವಿಗಳು ಅರ್ಥಮಾಡಿಕೊಳ್ಳಬಹುದಾದ, ಪ್ರೀತಿಸ ಬಹುದಾದ ಮತ್ತು ಆನಂದಿಸಬಹುದಾದ ರೂಪದಲ್ಲೋ ಇಲ್ಲ ಅಂಜುವಂತ, ದೂರೀಕರಿಸುವಂತ ಮತ್ತು ದ್ವೇಷಿಸುವಂತ ರೂಪದಲ್ಲೋ. ಸೃಷ್ಟಿಯನ್ನು ಆಟದ ಮೈದಾನ ಮಾಡಿಸುವುದೋ ಇಲ್ಲಾ ನರಕವಾಗಿಸುವುದೋ . ಆದ್ದರಿಂದ ಆಟದ ಮೈದಾನದಂತೆ ಸೃಷ್ಟಿಯನ್ನು ಲೀಲೆ ಎಂದು ಕರೆಯುವುದು ಪಾಪವೇನಲ್ಲ. ಆಟಗಳನ್ನುಕೂಡ ಪೂರ್ವಭಾವಿಯಾಗಿ ಯೋಜಿಸಿ ಆಚರಣೆಗೆ ತರುತ್ತಾರೆ. ನಿಯಮಾನುಸಾರ ಆಡದಿದ್ದಲ್ಲಿ ಅದು ಆಟವೇ ಅಲ್ಲ. ದೇವನು ಅನಂತವಾದ ಕರುಣೆಯಿಂದ ಈ ಲೀಲೆಯನ್ನು ನಮಗಾಗಿ ಆಡಿದ್ದಾನೆ. ಅವನು ನಮ್ಮ ವ್ಯರ್ಥವಾದ ಹೋರಾಟವನ್ನು ಆಸೆಗಳನ್ನು ಅಪಹಾಸ್ಯ ಮಾಡುತ್ತಿಲ್ಲ. ಈ ಹೋರಾಟ ಮತ್ತು ಆಸೆಗಳು ನಮ್ಮಿಂದಲೇ ಒಡ್ಡಲ್ಪಟ್ಟ ಲೀಲೆಯ ತಡೆಗಳು. ಅಣಕದ ಕುದುರೆಯೇರಿದ ನಾವು ಮೇಲಿರಲಿ ಕೆಳಗಿರಲಿ ಹಿಗ್ಗದೆ ಕುಗ್ಗದೆ ಇರಬೇಕು, ಆಟದ ಆನಂದವನ್ನು ಅನುಭವಿಸಬೇಕು .ಇಲ್ಲವಾದಲ್ಲಿ ಆಟದ

ಮೋಜನ್ನು ಈ ಭಾವಗಳು ಕೆಡಿಸುತ್ತವೆ. ಬಡತನವಿರಲಿ ಸಿರಿತನವಿರಲಿ ತೊಂದರೆಗಳಿರಲಿ ಅನುಕೂಲಗಳಿರಲಿ ಎಲ್ಲವೂ ದೇವನ ಲೀಲೆಯ ವಿನೋದವೆಂದು ತಿಳಿಯಬೇಕು. ಮಾಯೆಯೆಂಬುದು ಮಾನವ ಜೀವಿಗಳನ್ನು ಸಂಕಷ್ಟಕ್ಕೆ ಸಿಲುಕಿಸಲು ಯಾವನೋ ಒಬ್ಬ ಹೊಟ್ಟೆಕಿಚ್ಚಿನ ಮನುಷ್ಯನಿಂದ ರೂಪಿಸಲ್ಪಟ್ಟ ಇಂದ್ರಜಾಲವಲ್ಲ. ಮಾಯೆ ಎನ್ನುವುದು ತ್ರಿಗುಣಾತ್ಮಿಕವಾದ ಪ್ರಕೃತಿಯ ಇನ್ನೊಂದು ಹೆಸರು. ನಾವು ಹಿಂದೆ ನೋಡಿರುವಂತೆ ಪ್ರಕೃತಿ ಒಳ್ಳೆಯದು ಅಲ್ಲ ಕೆಟ್ಟದ್ದು ಅಲ್ಲ . ಒಳ್ಳೆಯದು-ಕೆಟ್ಟದ್ದು ಸಾಪೇಕ್ಷ ವಾಗಿದ್ದು ಪ್ರಕೃತಿಯ ಯಾವ ವಸ್ತುವೂ ಸ್ವತಹ ಒಳ್ಳೆಯದು ಅಲ್ಲ ಕೆಟ್ಟದ್ದು ಅಲ್ಲ. ಪ್ರಪಂಚವೆಂಬ ಮಾಯೆಯನ್ನು ಒಳ್ಳೆಯದು- ಕೆಟ್ಟದ್ದು ಮಾಡುವುದು ನಮ್ಮ ಕೈಯಲ್ಲೇ ಇದ್ದುದಾದ್ದರಿಂದ, ಮಾಯೆಯನ್ನು ಸ್ವಾಧೀನಪಡಿಸಿಕೊಂಡು ಪ್ರಪಂಚವನ್ನು ಆನಂದದ ಸ್ವರ್ಗ ವನ್ನಾಗಿ ಮಾಡಿಕೊಳ್ಳಬಹುದು. ಯಾರು ನನ್ನನ್ನು ಶರಣಾಗುತ್ತಾರೊ ಅವರು ಮಾಯೆಯನ್ನು ದಾಟುತ್ತಾರೆ ಎನ್ನುತ್ತಾನೆ ಕೃಷ್ಣ.

## <u>ಹೃದಯ</u> <u>ವಿದ್ಯೆಯ</u> <u>ಪ್ರಾಮುಖ್ಯತೆ</u>

ಹಿಂದೆ ಉಲ್ಲೇಖಿಸಿರುವ ಶ್ಲೋಕದಲ್ಲಿ ಪರಮಾತ್ಮನು ಎಲ್ಲರ ಹೃದಯದಲ್ಲೂ ವಾಸಿಸುತ್ತಾನೆ, ಅವನನ್ನು ಶರಣುಹೋಗಬೇಕು ಎಂದು ತಿಳಿಸಲಾಗಿದೆ ಅಧ್ಯಾತ್ಮಿಕ ತಿಳಿವಿಗೆ ಹೃದಯವನ್ನು ಸಂಸ್ಕಾರ ಗೊಳಿಸುವುದು ಅತಿಮುಖ್ಯ. ಹೃದಯ ಎಂದು ಕರೆಯಲ್ಪಡುವ ಮಾನವನ ಮನಸ್ಸಿನ ಈ ಭಾಗವನ್ನು ಹಸನುಗೊಳಿಸಲು ಸೂಕ್ತವಾದ ತರಬೇತಿ ಅವಶ್ಯ ಎಂದು ವಿಶ್ವದ ಎಲ್ಲ ಧರ್ಮಗಳು ಪ್ರತಿಪಾದಿಸುತ್ತದೆ. ನಮ್ಮ ತಿಳಿವನ್ನು ಸ್ಪಷ್ಟಗೊಳಿಸಲು ಮತ್ತು ನಂಬಿಕೆಯನ್ನು ಗಟ್ಟಿಗೊಳಿಸಲು ಭೌದ್ಧಿಕ ವಿಚಾರಣೆ ಅತಿ ಅವಶ್ಯ. ಆದರೆ ಕೇವಲ ಬೌದ್ಧಿಕತೆ ಏನನ್ನು ಸಾಧಿಸಲು ಸಾಧ್ಯವಿಲ್ಲ ಎಂಬುದನ್ನು ಮರೆಯಬಾರದು. ಕುಂಟ ಕೂತಲ್ಲಿಂದ ಮಾತನಾಡುವಂತೆ ಬುದ್ಧಿಯ ಕೆಲಸ ಕೇವಲ ದೋಷಗಳನ್ನು ತೊಡೆಯುವುದು ಮತ್ತು ತಪ್ಪು ನಂಬಿಕೆಗಳನ್ನು ಕಳೆಯುವುದು. ಮನುಷ್ಯನ ಸಂವೇದನೆಗಳು ಮನೋಭಾವನೆಗಳು ತುಂಬಾ ದಿಟ್ಟವಾಗಿದ್ದು ಯಾವುದೇ ಕ್ಷೇತ್ರದ ಪರಿಶೋಧನೆಗೂ ಕುತೂಹಲವನ್ನು ಹತ್ತಿಕ್ಕಲಾರದಾಗಿದೆ. ಕೇವಲ ಮನಸ್ಸಾದರೂ ಒಕ್ಕಣ್ಣನೊಬ್ಬ ಮೊಂಡುತನದಿಂದ ನಡೆಯುತ್ತಾ ವಾಲುತ್ತಾ ಎಣಿಕೆ ಇಲ್ಲದಷ್ಟು ಸಲ ಗುಂಡಿಯಲ್ಲಿ ಬೀಳುತ್ತಾ ತೀವ್ರವಾಗಿ ಗಾಯಗೊಳ್ಳುವ ಅಂಗವಿಕಲನಂತೆ. ಆದರೆ ಸಂವೇದನೆ ಮತ್ತು ಬುದ್ಧಿ ಸಮ್ಮಿಳಿತವಾಗಿ ಕಾರ್ಯನಿರ್ವಹಿಸಿದಲ್ಲಿ ಅತಿ ಉತ್ತಮವಾದ ಫಲವನ್ನು ಪಡೆಯಲು ಮತ್ತು ಹಳ್ಳಕೊಳ್ಳಗಳನ್ನು ದಾಟಲು ತೊಂದರೆಗಳನ್ನು ನಿವಾರಿಸಲು ಸಾಧ್ಯ. ಈ ಮಾರ್ಗದಿಂದಲೇ ಅನೇಕ ಮಹಾತ್ಮರ ಉಗಮವಾಗಿದೆ. ತಾತ್ವಿಕ ದೃಷ್ಟಿಯಿಂದ ಉತ್ತಮವಾಗಿ ವಿಕಸನ ಹೊಂದಿದ ಬುದ್ಧಿಮತ್ತೆ

ಕುಂಠಿತವಾದ ಭಾವನೆಗಿಂತ ಬೌದ್ಧಿಕತೆ ಇಲ್ಲದ ಸ್ವಲ್ಪ ಭಾವನೆಯೇ ಉತ್ತಮ. ಭಾವನೆಯಿಂದಲೇ ಭಗವಂತನನ್ನು ಕಾಣಲು ಸಾಧ್ಯ ಮತ್ತು ಭಾವನೆಯನ್ನು ಸರಿಯಾದ ದಿಶೆಯಲ್ಲಿ ಪರಿಣತಿಗೊಳಿಸುವುದೇ ಭಕ್ತಿಯೋಗದ ವಿಶೇಷ ಕ್ಷೇತ್ರ . ಹಾಗಾದಲ್ಲಿ ಭಕ್ತಿಯೋಗದ ಪಥಕ್ಕೆ ಸೇರಲು ಯಾರು ಅರ್ಹರು? ಭಾವನೆಯುಳ್ಳವರು ಮಾತ್ರ. ಭಕ್ತಿಯೋಗ ಯಾವುದೇ ನಿಬಂಧನೆಗಳನ್ನು ಎಂದರೆ ಹುಟ್ಟು ,ಲಿಂಗ, ಹುದ್ದೆ, ಐಶ್ವರ್ಯ, ಶಕ್ತಿ, ಕಲಿಕೆಗಳನ್ನು ಹೇರುವುದಿಲ್ಲ."ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಪಿ ಸ್ಯುಃ ಪಾಪಯೋನಯಃ.ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇऽಪಿ ಯಾನ್ತಿ ಪರಾಂ ಗತಿಂ" 09:32 ಪಾರ್ಥನೆ ನನ್ನನ್ನು ಆಶ್ರಯಿಸಿದರೆ ಯಾರು ಪಾಪ ಯೋನಿಗಳಾಗಿರುವರೋ ಅಂತ ಸ್ತ್ರೀಯರು ವೈಶ್ಯರು ಶೂದ್ರರು ಪರಗತಿಯನ್ನು ಹೊಂದುವರು. ಭಕ್ತಿಯನ್ನು ಹೊಂದುವುದಕ್ಕೆ ಬೇಕಾದ ಪೂರ್ವಭಾವಿ ಅವಶ್ಯಕತೆ ಎಂದರೆ ಸಂವೇದನೆ ಮತ್ತು ಅದನ್ನು ಬೆಳೆಸಿಕೊಳ್ಳಬೇಕೆಂಬ ಹಂಬಲ.

.

## ಭಕ್ತಿ ಅಥವ ದೈವಪ್ರೇಮವಾಗಿ ಸಾಮಾನ್ಯ ಪ್ರೀತಿಯ ಮಾರ್ಪಡುವಿಕೆ

ಪ್ರತಿಯೊಂದು ಜೀವಿಗೂ ಭಾವನೆಗಳು ಸಂವೇದನೆಗಳು ಇದ್ದು ಕೇವಲ ಕಡೆಗಣಿಸಿದ ಅವಿಕಸಿತ ಸ್ಥಿತಿಯಲ್ಲಿ ತಪ್ಪಾದ ದಿಕ್ಕಿನಲ್ಲಿ ಹರಿಯಲ್ಪಟ್ಟದ್ದಾಗಿದೆ. ವೇದನೆ ಎಷ್ಟೇ ಶೋಚನೀಯವಾಗಿದ್ದರೂ ಯಾರು ಹತಾಶರಾಗಬೇಕಿಲ್ಲ . "ಅಪಿ ಚೇತ್ ಸುದುರಾಚಾರೋ ಭಜತೆ ಮಾಮನನ್ಯಭಾಕ್ .ಸಾದುರೇವ ಸಮನ್ತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ" ."ಕ್ಷಿಪ್ರಂ ಭವತಿ ಧರ್ಮಾತ್ಮ ಶಶ್ವಚ್ಚಾನ್ತಿಂ ನಿಗಚ್ಚತಿ.ಕೌನ್ತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ." 9:30, 31. ದುರಾಚಾರಿಯಾದರೂ ನನ್ನನ್ನು ಅನನ್ಯವಾಗಿ ಭಜಿಸಿದರೆ ಅವನು ಸಾಧುವೆಂದೇ ತಿಳಿಯತಕ್ಕವನು ಏಕೆಂದರೆ ಅವನ್ನು ಸರಿಯಾದ ವ್ಯವಸಾಯ ಉಳ್ಳವನಾಗಿರುತ್ತಾನೆ. ಬೇಗನೆ ಧರ್ಮಾತ್ಮನಾಗುವನು. ಶಾಶ್ವತವಾಗಿ ಶಾಂತಿಯನ್ನು ಹೊಂದುವನು, ಕೌನ್ತೇಯನೆ ನನ್ನ ಭಕ್ತನು ಹಾಳಾಗುವುದಿಲ್ಲ ಇದನ್ನು ಚೆನ್ನಾಗಿ ತಿಳಿದುಕೋ. ವಾಸ್ತವಿಕವಾಗಿ ನಮ್ಮ ಸಂವೇದನೆಗಳನ್ನು ವಿಕಸಿತ ಗೊಳಿಸಿ ಸೂಕ್ತ ನಿರ್ದೇಶನದಿಂದ ವ್ಯವಸ್ಥೆಗೊಳಿಸಿದಾಗ ಭಕ್ತಿಯಾಗಿ ಮಾರ್ಪಡುತ್ತದೆ.

ಭಕ್ತಿಯೋಗ ಪ್ರಮುಖವಾಗಿ ಸಾಮಾನ್ಯ ಪ್ರೇಮವನ್ನು ಭಕ್ತಿ ಅಥವಾ ಭಗವತ್ಪ್ರೇಮವಾಗಿ ಮಾರ್ಪಡಿಸುವ ಗುರಿಯನ್ನು ಹೊಂದಿದೆ. ಮನುಷ್ಯ ಸಂಕಷ್ಟಗಳಿಗೆ ಸಿಲುಕಿದ್ದು ಸುಖವನ್ನರಸುತ್ತಿರುವುದರಿಂದ ಪ್ರೇಮದ ಮೂಲಕ ಭಗವಂತನನ್ನು ಅರಸುವುದು ಸಹಜ ಮಾರ್ಗ. ದುಃಖ ದುಮ್ಮಾನಗಳು ಆನಂದವು ಪ್ರೀತಿಪಾತ್ರವಾದ ವಸ್ತುಗಳಲ್ಲೂ ದ್ವೇಷಿಸುವ ವಸ್ತುಗಳಲ್ಲೂ

ಇರುವುದರಿಂದ ,ಅನಂತವಾದ ಸಂತೋಷವು ಪರಮ ಪ್ರೀತಿ ಸಾಧ್ಯವಾದ ಶಾಶ್ವತ ವಸ್ತುವಿನಲ್ಲಿ ಮಾತ್ರ ಇರಲು ಸಾಧ್ಯ. ಈ ದೃಷ್ಟಿಯಿಂದ ಮುಮುಕ್ಷುವಿನ ಸಮಸ್ಯೆ ಕೇವಲ ಅಂತ ಶಾಶ್ವತವಾದ ವಸ್ತುವಿನ ಹುಡುಕಾಟಕ್ಕೆ ಸೀಮಿತವಾಗುತ್ತದೆ. ಮುಕ್ತಿ ಸಾಧನಗಳಲ್ಲಿ ಪ್ರೇಮವನ್ನು ಮುಂಚೂಣಿಯಲ್ಲಿ ನಿಲ್ಲಿಸುತ್ತದೆ." ನಾಹಂ ವೇದೈರ್ನ ತಪಸಾ ನ ದಾನೇನ ನ ಚೇಜ್ಯಯಾ. ಶಕ್ಯ ಏವಂವಿಧೋ ದ್ರಷ್ಟುಂ ದೃಷ್ಟವಾನಸಿ ಮಾಂ ಯಥಾ". "ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂವಿಧೋऽರ್ಜುನ. ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ". 11.53, 54. ನನ್ನನ್ನು ನೀನು ಹೇಗೆ ನೋಡಿರುವೆಯೋ ಆ ರೀತಿಯಲ್ಲಿ ವೇದಗಳಿಂದಲೂ, ತಪಸ್ಸಿನಿಂದಲೂ ,ಯಜ್ಞದಿಂದಲೂ, ದಾನದಿಂದಲೂ ನೋಡಲು ಸಾಧ್ಯವಿಲ್ಲ. ಆದರೆ ಪರಂತಪ ಅನನ್ಯವಾದ ಭಕ್ತಿಯಿಂದ ನನ್ನನ್ನು ತತ್ವದಿಂದ ಅರಿತುಕೊಳ್ಳುವುದಕ್ಕೂ ,ಕಾಣುವುದಕ್ಕೂ, ಸೇರಿಕೊಳ್ಳುವುದಕ್ಕೂ, ಸಾಧ್ಯ. ಅಂದರೆ ಕೇವಲ ಭಕ್ತಿಯಿಂದ ಲಭ್ಯನು( ಸುಲಭಸಾಧ್ಯನು). ಪರಾಭಕ್ತಿ ಅಥವಾ ಭಗವತ್ ಪ್ರೇಮ ಮಾರ್ಗ ಬದಲಾವಣೆಗೊಂಡ ಸಾಮಾನ್ಯ ಪ್ರೇಮ (ಗೌಣೀ) ವೇ ಆಗಿದೆ. ಕೈಚಳಕ ಮತ್ತು ಸಾಮರ್ಥ್ಯದಿಂದ ಹಾನಿಕರ ಬೇಡದ ವಸ್ತುಗಳನ್ನು ಕೊಳೆಯಾದ ವಸ್ತುಗಳನ್ನು ಉಪಯುಕ್ತವಾದ ಗೊಬ್ಬರವಾಗಿ ಮಾರ್ಪಡಿಸುವಂತೆ, ಕುಶಲತೆಯಿಂದ ನಿಷ್ಪ್ರಯೋಜಕವಾದ ನಾರುತ್ತಿರುವ ಪ್ರಾಣಿಗಳ ದೇಹ ಭಾಗಗಳಿಂದ ಉಪಯುಕ್ತವಾದ ದಿನಬಳಕೆಯ ಸಾಮಾನುಗಳನ್ನು ತಯಾರಿಸುವಂತೆ, ವಿಷವನ್ನು ಸಹ ರಾಸಾಯನಿಕ ಕ್ರಿಯೆಯಿಂದ ದೋಷ ಮುಕ್ತವಾದ ಔಷಧಿಯಾಗಿ ಪರಿವರ್ತಿಸುವಂತೆ ನಮ್ಮ ಕೀಳಸ್ಥರದ ಮೋಹವನ್ನು ಪರಿಷ್ಕರಿಸಿ ಶುದ್ಧಗೊಳಿಸಿ ಮುಕ್ತಿ ಸಾಧನ-ವಾಗುವಂತೆ ಮಾಡುವ ಪ್ರಕ್ರಿಯೆಯನ್ನು ಭಕ್ತಿಯೋಗ ಒದಗಿಸುತ್ತದೆ ಇದೇ ಭಕ್ತಿಯೋಗದ ಸಹಜತೆ.

## ಕೆಳಸ್ಥರದ ಪ್ರೇಮ

ಈ ಮಾರ್ಗವು ಹೇಗೆ ಕೆಲಸ ಮಾಡುತ್ತದೆ ಎನ್ನುವುದನ್ನು ತಿಳಿಯಲು ,ಪ್ರೀತಿಯನ್ನು ಅತೀ ಕೆಳಸ್ತರದಿಂದ ಭಕ್ತಿಯಾಗಿ ಪರಿಣಮಿಸುವವರೆಗೂ ಪರೀಕ್ಷಿಸಬೇಕಾಗುತ್ತದೆ. ಅತ್ಯಂತ ಕೆಳಮಟ್ಟದಲ್ಲಿ ಪ್ರೇಮವನ್ನು ಕಾಮ ಅಥವಾ ಬಯಕೆ ಲಂಪಟತೆ ಎಂದು ಕರೆಯಲಾಗುತ್ತದೆ. ಇದು ಆಧ್ಯಾತ್ಮಿಕ ಪ್ರಗತಿಗೆ ದೊಡ್ಡ ತೊಡಕು. ಎಲ್ಲ ಧರ್ಮಗಳು ಲೋಭ ಪಾಪ ದೃಷ್ಟಿಯ ಕಾಮದ ವಿರುದ್ಧವಾಗಿ ಉಪದೇಶಿಸುತ್ತದೆ. ಗೀತೆಯಾದರೋ ಈ ಭಾವನೆಗಳನ್ನು ಪ್ರಬಲವಾಗಿ ಖಂಡಿಸುವುದರಲ್ಲಿ ಹಿಂದುಳಿದಿಲ್ಲ. ಜೀವನನ್ನು ಪಾಪ ಕಾರ್ಯಕ್ಕೆ ತಳ್ಳಿದವರಾರು ಎಂದು ಅರ್ಜುನ ಕೇಳುವಲ್ಲಿ, ಯಾವುದೋ ಅಲೌಕಿಕ ಶಕ್ತಿ ಇಲ್ಲವೇ ದೇವರು ಎನ್ನುವ ಭಾವ ಸೂಚಿತವಾಗಿದೆ. "ಅಥ ಕೇನ ಪ್ರಯುಕ್ತೋऽಯಂ ಪಾಪಂ ಚರತಿ ಪೂರುಷಃ. ಅನಿಚ್ಛನ್ನಪಿ ವಾರ್ಷ್ಣೇಯ ಬಲಾದಿವ ನಿಯೋಜಿತಃ".

03:36 ಎಲೈ ವಾರ್ಷ್ಣೇಯನೇ ಈ ಪುರುಷನು ತನಗೆ ಇಚ್ಛೆಯಿಲ್ಲದಿದ್ದರೂ ಏತರಿಂದ ಪ್ರೇರಿತನಾಗಿ ಬಲಾತ್ಕಾರದಿಂದ ಕಟ್ಟುಮಾಡಲ್ಪಟ್ಟವನಂತೆ ಪಾಪವನ್ನು ಮಾಡುತ್ತಿರುವನು?. ಇದಕ್ಕೆ ಕೃಷ್ಣ ಉತ್ತರರೂಪವಾಗಿ ಮನುಷ್ಯನನ್ನು ಯಾವುದೇ ಹೊರಗಿನ ಶಕ್ತಿ ಕೆಡಕಿಗೆ ಪ್ರೇರೇಪಿಸುತ್ತಿಲ್ಲ, ಸ್ವತಂತ್ರ ಆಯ್ಕೆಯಿದೆ ಎನ್ನುತ್ತಾನೆ. "ಕಾಮ ಏಷ ಕ್ರೋಧ ಏಷ ರಜೋಗುಣಸಮುದ್ಭವಃ. ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹ ವೈರಿಣಮ್". 03:37 ಇದೇ ಕಾಮವು, ಇದೇ ಕ್ರೋಧವು, ಇದು ರಜೋಗುಣದಿಂದ ಹುಟ್ಟಿದ್ದು; ಎಷ್ಟಾದರೂ ತಿನ್ನುವುದು, ಮಹಾಪಾಪಿಯು. ಇದೇ ಇಲ್ಲಿ ವೈರಿಯೆಂದು ತಿಳಿ. ಪಾಪ ಎಂಬುದು ಕಾಮ ಮತ್ತು ಲಂಪಟತನದ ನೇರ ಪರಿಣಾಮ. ಈ ಕೀಳು ಕಾಮನೆ ಪೂರೈಸಲಾಗದಾಗ ಕೋಪ, ಪೂರೈಸಿದಾಗ ಮೋಹದ ಅಂಟು ಜಿಪುಣತನ. ಹೀಗಾಗಿ ಗೀತೆ ಹೇಳುತ್ತದೆ, " ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ. ಕಾಮಃ ಕ್ರೋಧಸ್ತಥಾ ಲೋಭಸ್ತಸ್ಮಾದೇತತ್ ತ್ರಯಂ ತ್ಯಜೇತ್". "ಏತೈರ್ವಿಮುಕ್ತಃ ಕೌಂತೇಯ ತಮೋದ್ವಾರೈಸ್ತ್ರಿಭಿರ್ನರಃ. ಆಚರತ್ಯಾತ್ಮನಃ ಶ್ರೇಯಸ್ತತೋ ಯಾತಿ ಪರಾಂ ಗತಿಮ್". ಕಾಮ ಕ್ರೋಧ ಮತ್ತು ಲೋಭ ಎಂಬ ಮೂರು ಬಗೆಯ ನರಕದ ಬಾಗಿಲುಗಳೇ ಆತ್ಮನ ನಾಶಕ್ಕೆ ಕಾರಣವು. ಆದ್ದರಿಂದ ಈ ಮೂರನ್ನು ಬಿಡಬೇಕು. ಕೌಂತೇಯನೆ ಈ ಮೂರು ತಮೋದ್ವಾರಗಳಿಂದ ಬಿಡುಗಡೆ ಹೊಂದಿದ ನರನು ತನಗೆ ಶ್ರೇಯಸ್ಸನ್ನು ಮಾಡಿಕೊಳ್ಳುತ್ತಾನೆ, ಅದರಿಂದ ಪರಮ ಗತಿಯನ್ನು ಹೊಂದುತ್ತಾನೆ. ಗೀತೆಯ ಪ್ರಕಾರ ಜೀವಿಯ ಎಲ್ಲ ದೋಷಗಳಿಗೂ ಈ ಕೆಳಸ್ತರದ ಪ್ರೇಮ( ಕಾಮ)ವೇ ಮೂಲ ಕಾರಣ. ಈ ಕಾಮ ಹಲವಾರು ರೂಪಗಳನ್ನು ತಾಳುತ್ತದೆ. ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳುವಂತೆ, "ಕಾಮಃ ಸಂಕಲ್ಪೋ ವಿಚಿಕಿತ್ಸಾ ಶ್ರದ್ಧಾ ಅಶ್ರದ್ಧಾ ಧೃತಿರಧೃತಿ ಹ್ರೀ ಧೀರ್ ಭೀರ್ ಇತ್ಯೇತತ್ ಸರ್ವಂ ಮನಏವ" ಕಾಮ, ಸಂಕಲ್ಪ ,ಸಂದೇಹ, ಶ್ರದ್ಧೆ, ಅಶ್ರದ್ಧೆ, ಧೃತಿ, ಅಧೃತಿ, ನಾಚಿಕೆ, ಆಲೋಚನೆ, ಭಯ ಇವೆಲ್ಲ ಕೇವಲ ಮನಸ್ಸು. ಚರ್ಚಿಸುತ್ತಿರುವ ವಿಷಯದ ದೃಷ್ಟಿಯಿಂದ ಗಮನಿಸಿದಾಗ ಮನಸ್ಸಿನ ಈ ಎಲ್ಲ ಕಾರ್ಯವು ಬೆಳವಣಿಗೆಯ ಮಾರ್ಗದಲ್ಲಿರುವ ಪ್ರೀತಿಯ ವಿವಿಧ ಹಂತಗಳು. ಕೆಳಮಟ್ಟದ ಪ್ರೇಮವೇ ಬಯಕೆ ಅಥವಾ ಇಂದ್ರಿಯ ಲೋಲುಪತೆ ಕಾಮವು ಅವಜ್ಞತೆಯಿಂದ ಬಳಸಿದ ಪ್ರೇಮ ಅಥವಾ ಉದ್ದೇಶಪೂರ್ವಕ ದುರುಪಯೋಗವಾದ ಪ್ರೇಮ. ದುರುಪಯೋಗವಾದ ಪ್ರೇಮ ಮನುಷ್ಯನನ್ನು ಆಸುರೀಸಂಪತ್ತಿನವನನ್ನಾಗಿಸುತ್ತದೆ. 16ನೇ ಅಧ್ಯಾಯದಲ್ಲಿ ಗೀತೆ ಅನೇಕ ದ್ವಿಪದಿಗಳಿಂದ ಸೌದಾಹರಣವಾಗಿ ಆಸುರಿ ಸಂಪತ್ತನ್ನು ವಿವರಿಸಿದೆ.ಈ ಅಧ್ಯಾಯಪೂರ, ಪ್ರಮುಖವಾಗಿ ಅಗಾಧವಾದ ದೇಹಾಭಿಮಾನ ಸ್ವಾರ್ಥಪರವಾದ ಐಶ್ವರ್ಯಾಭಿಲಾಷೆ ಮಕ್ಕಳು ಮತ್ತು ಪತ್ನಿಯ ಬಯಕೆ ಇವುಗಳನ್ನು ವಿಶ್ಲೇಷಿಸಿದೆ. ಈ ಹಂತದ ಪ್ರೀತಿಯನ್ನು ಸಂಗ ಅಂಟು ಎಂದು ಕರೆಯಲಾಗುತ್ತದೆ. ಕಾಮ ಎನ್ನುವುದು ವಸ್ತುಗಳ ಬಯಕೆ ಸಂಗ ಎನ್ನುವುದು ಪಡೆದುಕೊಂಡ

ವಸ್ತುಗಳ ಮೇಲಿನ ಮೋಹ (ಅಂಟು). ಕಾಮ ಮತ್ತು ಸಂಗ್ಗದ ಹಂತದಲ್ಲಿ ಮನುಷ್ಯರು ಪ್ರೇಮದ ಸಹಜ ಹರವಿಗೆ ಅವಕಾಶಕೊಡದೆ ಸಾಮಾನ್ಯ ಮತ್ತು ಕ್ಷುಲ್ಲಕ ವಸ್ತುಗಳಿಗೆ ಗಮನ ಕೊಡುತ್ತಾರೆ. ಜೀವಿಯ ದುಃಖಕ್ಕೆ ಇದೇ ಕಾರಣ. ಬಹಳ ಕಷ್ಟಸಾಧ್ಯವಾದ ಅನೇಕ ವಸ್ತುಗಳನ್ನು ಪಡೆಯಬೇಕೆಂಬ ಬಯಕೆ, ಈ ರೀತಿ ಪಡೆದ ವಸ್ತುಗಳು ಶೀಘ್ರವೇ ಅಳಿದು ಹೋಗುವುದೆಂಬ ಅರಿವಿದ್ದರೂ ಬಯಕೆಯ ಗುಲಾಮನಾಗುತ್ತಾನೆ. ಈ ಬಯಕೆಯಿಂದ ಮಾನವನ ಮನಸ್ಸಿನ ಶಾಂತಿ ನಷ್ಟವಾಗಿದೆ ಮತ್ತು ನಿಜವಾದ ಸಂತೋಷದ ಅರಿವಿಲ್ಲವಾಗಿದೆ. ದೇಹ ಮತ್ತು ಸಂಗ್ರಹಿಸಿದ ವಸ್ತುವಿನ ಮೇಲಿನ ತೀವ್ರವಾದ ಸಂಗ್ಗ ಮನುಷ್ಯನ ಸ್ವಾತಂತ್ರ್ಯವನ್ನು ಕಳೆದು ಅವನನ್ನು ಅವನ ಸ್ವತ್ತಿನ ಪರಿಶಿಷ್ಟವಾಗಿ ಉಳಿಸುತ್ತದೆ. ದೇಹ ಮನುಷ್ಯನಿಗೆ ಸಂಬಂಧಿಸಿದ್ದಾಗುವ ಬದಲು ಮನುಷ್ಯ ದೇಹಕ್ಕೆ ಸಂಬಂಧಪಟ್ಟವನಾಗುತ್ತಾನೆ. ಕಾಮ ಮತ್ತು ಸಂಗ್ಗದ ಭಾವನೆಗಳಿಗೆ ಒಳಪಟ್ಟ ಮಾನವ ತನ್ನ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಶರಣಾಗತವಾಗಿಸುತ್ತಾನೆ. ಇದೇ ಮಾನವನ ನಿಜವಾದ ಬಂಧನ. ಕಾಮ ಮತ್ತು ಸಂಗ್ಗದಿಂದ ಮೇಲೇರಲು ಪ್ರಯತ್ನ ಪಡುವ ಮನುಷ್ಯನಿಗೆ ಅನಂತ ಶಾಂತಿ ಕೈವಶವಾಗುತ್ತದೆ. "ಅಪೂರ್ಯಮಾಣಮಚಲಪ್ರತಿಷ್ಠಂ ಸಮುದ್ರಮಾಪಃ ಪ್ರವಿಶನ್ತಿ ಯದ್ವತ್; ತದ್ವತ್ ಕಾಮಾಯಂ ಪ್ರವಿಶಂತಿ ಸರ್ವೇ ಸ ಶಾನ್ತಿಮಾಪ್ನೋತಿ ಕಾಮಕಾಮಿ" ನೀರಿನಿಂದ ತುಂಬಿಕೊಳ್ಳುತ್ತಿದ್ದರು ಅಲ್ಲಾಡದೆ ನಿಂತಿರುವ ಸಮುದ್ರವನ್ನು ನದಿಗಳು ಹೇಗೆ ಪ್ರವೇಶಿಸುತ್ತಿರುವವೋ ಹಾಗೆ ಕಾಮಗಳೆಲ್ಲವೂ ಯಾವಾತನನ್ನು ವಿಕಾರಗೊಳಿಸದೆ ಪ್ರವೇಶಿಸುತ್ತಿರುವವೋ ಅವನಿಗೆ ಶಾಂತಿಯು ಸಿಕ್ಕುವುದೇ ಹೊರತು ಕಾಮಗಳನ್ನು ಬಯಸುತ್ತಿರುವವನಿಗೆ ಸಿಗಲಾರದು. 02: 70. ಎಲ್ಲಿಯವರೆಗೆ ನಾವು ಕಾಮನೆ ಮತ್ತು ಅನಿಯಂತ್ರಿತ ಪ್ರೇಮವನ್ನು ಪೋಷಿಸುತ್ತಿರುವೆವೋ ಅಲ್ಲಿಯವರೆಗೆ ಆಧ್ಯಾತ್ಮಿಕ ವಿಶ್ರಾಂತಿಯ ಪರಿಚಯ ಉಂಟಾಗುವುದಿಲ್ಲ. ಸ್ವಾರ್ಥಪರರಾದ ಮನುಷ್ಯರಿಗೆ ಕೇವಲ ಕೊನೆಯಿಲ್ಲದ ದುಃಖವೇಗತಿ. ಆದ್ದರಿಂದ ಆಧ್ಯಾತ್ಮಿಕ ಆನಂದವನ್ನು ಹೊಂದಲು ಈ ರಾಕ್ಷಸೀ ಪ್ರವೃತ್ತಿಯನ್ನು ಬಿಟ್ಟು ದೈವಿ ಸಂಪತ್ತಿನ ಕುಶಲತೆಯನ್ನು ಬೆಳೆಸಿಕೊಳ್ಳುವುದು ಒಂದೇ ದಾರಿ. "ದೈವೀಸಂಪದ್ವಿಮೋಕ್ಷಾಯ ನಿಬದ್ಧಾಯಾಸುರೀ ಮತಾ". ದೈವಿ ಸಂಪತ್ತು ಮೋಕ್ಷಕ್ಕೂ ಆಸುರಿ ಸಂಪತ್ತು ಬಂಧನಕ್ಕೂ ಕಾರಣವೆಂಬುದು ಸಮ್ಮತವಾಗಿದೆ.

## ಕೆಳಸ್ತರದ ಕಾಮನೆಗಳನ್ನು ತ್ಯಾಗ ಮಾಡುವ ನಿಯಮ

ಎರಡನೇ ಸ್ವಭಾವವೋ ಎನ್ನುವಂಥಾಗಿರುವ ಈ ಸ್ವಾರ್ಥ ಅಭ್ಯಾಸವನ್ನು ಬಿಡುವುದಾದರೂ ಹೇಗೆ?. ಕಾಮವನ್ನು ಮೋಹವನ್ನು ಬಿಡು ಎನ್ನುವುದು ಬಹು ಸುಲಭ ಆದರೆ ಅದನ್ನು ಜೀವನದಲ್ಲಿ

ಅಳವಡಿಸಿಕೊಳ್ಳುವುದು ಕಡು ಕಷ್ಟದ ಕೆಲಸ. ಗೀತೆ ಕೆಳಗಿನ ಶ್ಲೋಕದ ಮೂಲಕ ಒಂದು ಉತ್ತಮವಾದ ಪರಿಹಾರವನ್ನು ಕೊಡುತ್ತದೆ." ವಿಷಯಾ ವಿನಿವರ್ತಂತೆ ನಿರಾಹಾರಸ್ಯ ದೇಹಿನಃ; ರಸವರ್ಜ್ಂ ರಸೋSಪ್ಯಸ್ಯ ಪರಮ್ ದೃಷ್ಟ್ವಾ ನಿವರ್ತತೇ." ವಿಷಯಗಳು ನಿರಾಹಾರನಾದ ದೇಹಿಯನ್ನು ಬಿಟ್ಟು ಹಿಂದಿರುಗುತ್ತವೆ, ಆದರೆ ರಸವು ಹೋಗಿರುವುದಿಲ್ಲ. ಪರವಸ್ತುವನ್ನು ಕಂಡುಕೊಂಡರೆ ಈತನ ರಸವೂ ಹೋಗಿ ಬಿಡುವುದು. ಇಂದ್ರಿಯಗಳಿಂದ ವಿಷಯವನ್ನು ಒಳಕ್ಕೆ ತೆಗೆದುಕೊಳ್ಳದವನಿಂದ ವಿಷಯಗಳು ದೂರ ಸರಿಯುತ್ತವೆ, ಆದರೆ ವಿಷಯ ವಾಸನೆ ಹೋಗಿರುವುದಿಲ್ಲ. ಒಂದು ವಿಷಯದ ಮೇಲೆ ಇಟ್ಟ ಪ್ರೇಮವನ್ನು ಇನ್ನೊಂದರ ಮೇಲೆ ಇಡುವವರೆಗೂ ಬಿಡಿಸಲಾಗುವುದಿಲ್ಲ. ಪರಮ ಪ್ರೇಮವನ್ನು ಅರಿತಾಗ ತಾವೇ ತೊಲಗುತ್ತವೆ. ನಾವೆಲ್ಲರೂ ಶಾಶ್ವತವಾದದ್ದರಲ್ಲಿ ನಮ್ಮ ಪ್ರೀತಿಯನ್ನು ಇಡಲು ಪ್ರಯತ್ನಿಸುತ್ತೇವೆ. ಆದರೆ ಯಶಸ್ವಿಯಾಗದೇ ಹೋಗುತ್ತೇವೆ. ಒಂದು ವಸ್ತುವಿನ ಬಗ್ಗೆ ನಮ್ಮಲ್ಲಿ ಕಾಮ (ಪ್ರೇಮ) ಉಂಟಾದಾಗ ಸೂಕ್ತವಲ್ಲದ ಪ್ರಾಮುಖ್ಯತೆಯನ್ನು ಅದಕ್ಕೆ ಅಂಟಿಸುತ್ತೇವೆ. ಆ ವಸ್ತು ಅಥವಾ ವಿಷಯ ಬಿಟ್ಟರೆ ನಮ್ಮ ಪ್ರೇಮಕ್ಕೆ ಅರ್ಹವಾದ ಬೇರೆ ವಸ್ತುವೇ ಇಲ್ಲವೆಂದು ಭಾವಿಸುತ್ತೇವೆ. ದೊರಕಿದ ವಸ್ತು ತಟಕ್ಕನೆ ನಮ್ಮಿಂದ ಮರೆಯಾದಾಗ ಇಲ್ಲವೇ ಇನ್ನೊಂದು ವಸ್ತು ಅಥವಾ ವಿಷಯ ಇದಕ್ಕಿಂತ ನಮ್ಮ ಪ್ರೇಮಕ್ಕೆ ಹೆಚ್ಚು ಅರ್ಹ ಎನಿಸಿದಾಗ ಪ್ರೇಮವನ್ನು (ಕಾಮ) ವಸ್ತ್ವಂತರ ಅಥವಾ ವಿಷಯಾಂತರ ಮಾಡುತ್ತೇವೆ. ಪ್ರೇಮ ಅಥವಾ ಕಾಮವನ್ನು ಹೀಗೆ ವಸ್ತುವಿನಿಂದ ವಸ್ತುವಿಗೆ ಇಲ್ಲವೇ ವಿಷಯದಿಂದ ವಿಷಯಕ್ಕೆ ಬದಲಾಯಿಸುವುದೇ ಎಲ್ಲ ಜೀವಿಗಳನ್ನೂ ಕ್ರಿಯೆಗೆ ದಬ್ಬುತ್ತಿರುವ ಪ್ರಬಲವಾದ ಶಕ್ತಿ. ಮನುವಿನ ಹೇಳಿಕೆಯಂತೆ "ಯದ್ ಯದ್ ಕುರುತೇ ಜಂತು ತತ್ ಕಾಮಸ್ಯ ಚೇಷ್ಟಿತಮ್". ಪ್ರಾಣಿಗಳು ಮಾಡುವ ಎಲ್ಲಾ ಚೇಷ್ಟೆ ಕಾಮದ ಕಾರ್ಯವೇ. ಎಲ್ಲ ಜೀವಿಗಳು ಯಾವುದೋ ಒಂದು ವಿಷಯ ಅಥವಾ ವಸ್ತುವಿನ ಮೇಲೆ ತಮ್ಮ ಕಾಮವನ್ನು ಸ್ಥಿರವಾಗಿಸುವುದಕ್ಕೋ ಎನ್ನುವಂತೆ ಕಣ್ಣಿಗೆ ಪಟ್ಟಿ ಕಟ್ಟಿಕೊಂಡವರಂತೆ ವಿವೇಚನೆಯಿಲ್ಲದೆ ಓಡುತ್ತಿದ್ದಾರೆ. ಸುಖದ ಶಾಶ್ವತತೆ ಮತ್ತು ಗುಣ ನಾವು ಕಾಮಿಸುವ ವಸ್ತು ಮತ್ತು ಕಾಮಿಸುವ ರೀತಿಯ ಮೇಲೆ ಅವಲಂಬಿತವಾಗಿರುವುದರಿಂದ ಇದರ ಅರಿವಾದರೆ ನಾವು ಕ್ಷುಲ್ಲಕ ಕಾಮನೆಗಳನ್ನು ಬಿಡುತ್ತೇವೆ. ಪ್ರಾಣಿಗಳಲ್ಲಿ ಕಾಮನೆ ಕೇವಲ ಅಸಂಸ್ಕೃತ ದೈಹಿಕ ಮಟ್ಟದಲ್ಲಿ ಕೇಂದ್ರೀಕೃತವಾಗಿದೆ. ಮಾನವ ನಾಗರೀಕನಾಗುತ್ತಾ ಬಂದಂತೆ ಅವನ ಪಶು ಸಮಾನ ಕಾಮನೆ ಕೂಡ ಹೆಚ್ಚು ಹೆಚ್ಚು ಪರಿಷ್ಕೃತ ವಾಗುತ್ತಾ ಬಂದಿದೆ. ಕೊನೆಗೂ ಮಾನವ ಪರಮ ಪ್ರೇಮವನ್ನು ಕಂಡುಕೊಂಡಿದ್ದಾನೆ. ಈಗ ಬೌದ್ಧಿಕ ಮಟ್ಟದ ಆನಂದಗಳು ಮನುಷ್ಯನನ್ನು ಸೆಳೆಯುತ್ತಿದ್ದು ಕೆಳಸ್ತರದ ಕಾಮನೆಗಳು ಆಕರ್ಷಣೆಯನ್ನು ಕಳೆದುಕೊಳ್ಳುತ್ತಿದೆ. ನೈತಿಕ ಕಾಮನೆ ಈಗಲೂ ಹೆಚ್ಚಿನ ಸ್ತರದಲ್ಲಿದೆ. ಕಾಮನೆಗಳು ಉತ್ಕೃಷ್ಟವಾದಂತೆ ಹೆಚ್ಚು ಹೆಚ್ಚು

ಆನಂದವನ್ನು ಹೊಂದಬಹುದು. ಗೀತೆ ಹೇಳುವಂತೆ ಪರಮ ಪ್ರೇಮವನ್ನು ಪಡೆದಾಗ ಮಿಕ್ಕೆಲ್ಲ ಕಾಮಗಳು ತೊರೆಯಲ್ಪಡುತ್ತವೆ.

## ದೇವರೇ ಪ್ರೇಮವು

ಪರಮ ಪ್ರೇಮಕ್ಕೆ ವಸ್ತು ಯಾವುದು? ಮನುಷ್ಯನ ಪರಮ ಸುಖವನ್ನು ಪಡೆಯಬೇಕೆಂಬ ಸ್ವಾರ್ಥ, ಸಾಧನೆಗೆ ಆಯ್ದುಕೊಳ್ಳುವ ಮಾರ್ಗ ಆ ಪರವಸ್ತುವನ್ನು ಮುಟ್ಟುವಷ್ಟರಲ್ಲಿ ಅವನ ಸ್ವಾರ್ಥವನ್ನೇ ಸಂಪೂರ್ಣ ನಿರ್ನಾಮ ಮಾಡುತ್ತದೆ ಎನ್ನುವುದೇ ಅತಿ ವಿಲಕ್ಷಣ. ಮಾನವ ಹೊರಗಿನ ವಸ್ತುಗಳನ್ನು ಪ್ರೀತಿಸುವುದಕ್ಕಿಂತ ತನ್ನನ್ನು ತಾನು ಹೆಚ್ಚು ಪ್ರೀತಿಸುತ್ತಾನೆ. ದೂರವಿರುವ ವಸ್ತುವಿಗಿಂತ ಸಮೀಪವಿರುವ ವಸ್ತುವನ್ನು ಹೆಚ್ಚು ಪ್ರೀತಿಸುತ್ತಾನೆ. ಈ ನಿಯಮವನ್ನು ಅದರ ಮಿತಿಯ ಕೊಟ್ಟ ಕೊನೆಯವರೆಗೂ ಎಳೆದಾಗ ಆತ್ಮನಲ್ಲದೇ ಯಾರು ಅತಿ ಸಮೀಪರು, ಇನ್ಯಾರು ಪ್ರಿಯತಮರಾಗಲು ಸಾಧ್ಯ?. ಈಗ ನಾವು ನೋಡಬಹುದು ಭಕ್ತಿಯ ಹುಡುಕಾಟವೂ ಜ್ಞಾನದ ಅನ್ವೇಷಣೆಯ ಮಾರ್ಗವನ್ನೇ ಹಿಡಿಯುತ್ತಿದೆ. ಹಾಗೆ ನೋಡಿದರೆ ವಸ್ತುವಿನ ಬಗ್ಗೆ ಪ್ರೇಮವಿಲ್ಲದೆ ಜ್ಞಾನ ಸಾಧ್ಯವೇ ಇಲ್ಲ. ವಸ್ತುವನ್ನು ಅರಿಯಬೇಕೆಂಬ ಪ್ರೇಮಾ ಹೆಚ್ಚಾದಷ್ಟು ವಸ್ತುವಿನ ಜ್ಞಾನ ಹೆಚ್ಚುತ್ತದೆ. ಇದನ್ನನುಸರಿಸಿ ತಿಳಿಯುವುದೇನೆಂದರೆ ಪರಮಾತ್ಮನ ಉತ್ತಮ ಜ್ಞಾನ ಬರಬೇಕಾದರೆ ನಮ್ಮ ಹೃದಯದಲ್ಲಿ ಸ್ವಾಮಿಯ ಬಗ್ಗೆ ಅತಿಯಾದ ಪ್ರೇಮ ವಿರಬೇಕು. ಜ್ಞಾನಯೋಗದಲ್ಲಿ ನಾವು ಕಂಡಂತೆ ಎಲ್ಲದರಲ್ಲೂ, ಎಲ್ಲರಲ್ಲೂ ಒಂದೇ ಪರಮ ಸತ್ಯವನ್ನು ಕಂಡಲ್ಲಿ ಜ್ಞಾನ ತನ್ನ ಶಿಖರವನ್ನು ಮುಟ್ಟುತ್ತದೆ ಎಂದು ಹೇಳಲಾಗಿದೆ. ಇದನ್ನು ಕೈವಶಮಾಡಿಕೊಳ್ಳಲು ಪ್ರೇಮವೇ ಉತ್ತಮ ಮಾರ್ಗ. ನಾವು ಯಾವ ವಸ್ತುವನ್ನು ತೀವ್ರವಾಗಿ ಪ್ರೀತಿಸುತ್ತೇವೋ ಆಸಮಯದಲ್ಲಿ ಆವಸ್ತುವಿನಲ್ಲಿ ಏಕಾತ್ಮತೆಯನ್ನು ಹೊಂದಿರುತ್ತೇವೆ. ಆದ್ದರಿಂದ ದೇಹವನ್ನು ಪ್ರೀತಿಸಿದಾಗ ದೇಹವೇ ನಾವಾಗಿ ದೇಹಕ್ಕಿಂತ ಹೆಚ್ಚಿನ ಸತ್ಯ ತೋರುವುದಿಲ್ಲ. ಹಾಗೆ ಮನಸ್ಸನ್ನು ಪ್ರೀತಿಸಿದಾಗ ಮನಸ್ಸೇ ನಾವಾಗಿ ಅದಕ್ಕಿಂತ ಹೆಚ್ಚಿನ ಸತ್ಯ ತೋರುವುದಿಲ್ಲ. "ನಾನು" ವೇ ಅತ್ಯಂತ ಪ್ರಿಯತಮವಾಗಿದ್ದು ಎಲ್ಲವೂ ಯಾವಾಗಲೂ ನನ್ನಲ್ಲಿ ಅಥವಾ ನನ್ನಿಂದ ಇರವನ್ನು ಪಡೆದಿರುತ್ತದೆ. ಈ ಸಮಯದಲ್ಲಿ ನಾವು ಯಾವುದನ್ನಾದರೂ" ನಾನು" ಎಂದು ಗುರುತಿಸಲೀ ಎಲ್ಲವೂ ನಾನುವಿಗಾಗಿಯೇ ಪ್ರಿಯವೆನಿಸುವುದು. ಪ್ರೇಮವೆಂಬುದು ಏಕತೆಯನ್ನು ತಿಳಿವಿಗೆ ಮುಟ್ಟಿಸುತ್ತದೆ. ಅನುಭವದಿಂದ ಪ್ರೇಮವು, ಯಾವುದೇ ವಸ್ತುವು ತನ್ನನ್ನು ಸಂಪೂರ್ಣ ತೃಪ್ತನಾಗಿಸಲಾರದು ಮತ್ತು ಸತ್ತ್ರವಾಗಿ ತನ್ನ ಉಪಯೋಗಕ್ಕೆ ಒದಗದು ಎಂಬುದನ್ನು ಅರಿತಾಗ, ತನ್ನನ್ನು ಮಾರ್ಪಡಿಸಿಕೊಂಡು ತನ್ನ ನಿಜಸ್ವರೂಪದೆಡೆಗೆ ಒಳಸರಿಯುತ್ತದೆ. ಈ ಹಿಂಸರಿಯುವಿಕೆ ಸುಲಭವಾದದ್ದೇನಲ್ಲ. ಆದರೆ ಒಮ್ಮೆ ಒಳಮುಖವಾದರೆ ಶಾಶ್ವತವಾದ

ಆನಂದವನ್ನು ಹೊಂದುತ್ತಾರೆ. ಆಗ ಇಡೀ ಪ್ರಪಂಚದ ನಿಜವು ಒಂದೇ ಆಗಿದ್ದು ಅದರ ಸ್ವಭಾವವು ಪರಿಪೂರ್ಣ ಪ್ರೇಮ ಎಂಬುದು ಅರಿವಿಗೆ ಬರುತ್ತದೆ. ಭಕ್ತಿಯ ಸಾರ ಮತ್ತು ನೈಜತೆ ಪ್ರೇಮವೇ ಆಗಿದ್ದು ಪ್ರೇಮಕ್ಕೂ ಭಕ್ತಿಗೂ ವೈರುಧ್ಯವಿಲ್ಲ. ಪರಮ ಪ್ರೇಮದ ಘಟ್ಟವನ್ನು ಪ್ರೇಮ ತಲುಪಿದಾಗ ದ್ವೇಷದ ಫಲವಾದ ದುಃಖ ದೂರವಾಗುತ್ತದೆ. ಮಾನವನ ಆಯಾಸಕರವಾದ ಹುಡುಕಾಟದ ಕೊನೆಯಲ್ಲಿ ತನ್ನ ಪ್ರೇಮಕ್ಕೆ, ಎಲ್ಲರ ಹೃದಯದಲ್ಲೂ ನೆಲೆನಿಂತಿರುವ ಪ್ರೇಮ ಮೂರ್ತಿಯಾದ ಸ್ವಾಮಿಯಲ್ಲದೆ ಬೇರಾರೂ ಸೂಕ್ತರಲ್ಲ ಎಂದು ಕಂಡುಕೊಂಡವನಾಗುತ್ತಾನೆ. ನಾರದ ಭಕ್ತಿ ಸೂತ್ರ "ಅನಿರ್ವಚನೀಯಂ ಪ್ರೇಮ ಸ್ವರೂಪಮ್" ನ ಯಥಾರ್ಥತೆಯ ಅರಿವು ಆಗ ಉಂಟಾಗುತ್ತದೆ. ಈ ಪರಮ ರಸವನ್ನು ಸವಿದ ಮೇಲೆ ಬೇರೆಲ್ಲ ಕಾಮಗಳು ಮೃಗ ಮರೀಚಿಕೆಯಂತೆ ಮಾಯವಾಗುತ್ತದೆ.

ಮೇಲಿನ ಕಾರಣಕ್ಕಾಗಿ ಪರಮಾತ್ಮನಿಗೆ ಪರಮ ಪ್ರೇಮ ಸ್ವರೂಪ ಎಂಬ ನಾಮವು ಹೆಚ್ಚು ಅನ್ವರ್ಥವಾಗಿದೆ. ಹಿಂದಿನ ಪ್ರಕರಣದಲ್ಲಿ ಕ್ಷೇತ್ರವನ್ನು ಅರಿಯುವವನು ಕ್ಷೇತ್ರಜ್ಞ ಎಂದು ಕ್ಷೇತ್ರಜ್ಞನ ವಿವರಣೆಯನ್ನು ನೋಡಿದ್ದೇವೆ. ಇಲ್ಲಿ ಕ್ಷೇತ್ರ ಎನ್ನುವುದು ಹೊರಗಿನ ದೇಹವಷ್ಟೇ ಅಲ್ಲದೆ ಮನಸ್ಸು ಮತ್ತು ಮನಸ್ಸಿನ ಕಾರ್ಯವಾದ ಕಾಮ ಕ್ರೋಧ ಮುಂತಾದ ಎಲ್ಲವೂ ಎಂಬುದನ್ನು ತಿಳಿದಿದ್ದೇವೆ. ಪ್ರಸ್ತುತ ಪ್ರಕರಣದಲ್ಲಿ ಮನಸ್ಸಿನ ಕಾರ್ಯವಾದ ಕಾಮ ಎಂಬುದು ಪ್ರೇಮದ ಬೇರೆಬೇರೆ ಹಂತ ಎಂದು ಪರಿಗಣಿಸಬಹುದು ಎಂಬುದನ್ನು ಗಮನಿಸಿದ್ದೇವೆ. ಮನಸ್ಸು ಆತ್ಮನಿಗೆ ಅತಿ ಸಮೀಪವಾದದ್ದು ಮತ್ತು ಅದು ಶುದ್ಧವಾಗುತ್ತ ಹೋದಂತೆ ಹಿಂದಿರುವ ಆತ್ಮವು ಹೆಚ್ಚು ಸ್ಪಷ್ಟವಾಗುತ್ತ ಹೋಗುತ್ತದೆ. ಮನಸ್ಸು ಆತ್ಮನಲ್ಲಿ ಎಷ್ಟು ಹೊಸೆದುಕೊಂಡಿದೆ ಎಂದರೆ ಸಾಮಾನ್ಯವಾಗಿ ಮನಸ್ಸನ್ನು ಆತ್ಮ (ನಾನು) ಎಂದೇ ತಿಳಿಯಲಾಗುತ್ತದೆ. ಶ್ರೀ ಶಂಕರಾಚಾರ್ಯರು ಮನಸ್ಸಿನೊಂದಿಗೆ ಆತ್ಮನ ಈ ಕಲಬೆರಕೆಯಬಗ್ಗೆ ಮಾತನಾಡುವಾಗ ಮನಸ್ಸು ಬೆಳಗಲ್ಪಟ್ಟದ್ದು ಆತ್ಮವು ಬೆಳಗುವುದು. ಬೆಳಗುವುದನ್ನು ಬೆಳಗಿಸಿಕೊಂಡದ್ದನ್ನು ವಿಂಗಡಣೆ ಮಾಡದೇ ಹೋಗುವುದು ಸಾಮಾನ್ಯ. ಬೆಳಕು ಸ್ವಚ್ಛ ದ್ರವ್ಯ ವಾಗಿದ್ದು ಬೆಳಗುವ ವಸ್ತುಸದೃಶವಾಗೇ ತೋರುತ್ತದೆ. ಕೆಂಪು ವಸ್ತುವನ್ನು ಬೆಳಗುವಾಗ ಕೆಂಪಾಗಿಯು ಹಸಿರು ವಸ್ತುವನ್ನು ಬೆಳಗುವಾಗ ಹಸಿರಾಗಿಯು ಬೇರೆ ಬೇರೆ ಬಣ್ಣದ ವಸ್ತುಗಳನ್ನು ಬೆಳಗುವಾಗ ಆಯಾ ಬಣ್ಣಗಳನ್ನು ತಳೆದಂತೆ ಕಾಣುತ್ತದೆ. ಇದರಂತೆಯೇ ಮನಸ್ಸನ್ನು ಬೆಳಗುತ್ತಿರುವ ಆತ್ಮ ಮನಸ್ಸಿನ ಮೂಲಕ ಸಂಪೂರ್ಣ ಕ್ಷೇತ್ರವನ್ನು ಬೆಳಗುತ್ತದೆ. (ಬೃ.ಭಾ). ಈ ಅಭಿಪ್ರಾಯವನ್ನು ಗೀತೆ ಈ ಶ್ಲೋಕದ ಮೂಲಕ ಅಭಿವ್ಯಕ್ತಪಡಿಸುತ್ತದೆ. "ಯಥಾ ಪ್ರಕಾಶಯತ್ಯೇಕಃ ಕೃತ್ಸ್ನಂ ಲೋಕಮಿಮಂ ರವಿಃ; ಕ್ಷೇತ್ರಂ ಕ್ಷೇತ್ರೀ ತಥಾ ಕೃತ್ಸ್ನಂ ಪ್ರಕಾಶಯತಿ ಭಾರತ" ಎಲೈ ಭಾರತನೇ ಹೇಗೆ ಸೂರ್ಯನು ಈ ಲೋಕವನ್ನೆಲ್ಲ ತಾನೊಬ್ಬನೇ ಬೆಳಗುತ್ತಿರುವನೋ, ಹಾಗೆ ಕ್ಷೇತ್ರಿಯು ಕ್ಷೇತ್ರವೆಲ್ಲವನ್ನು ಬೆಳಗುತ್ತಾನೆ. ಮನಸ್ಸು ಆತ್ಮನಿಗೆ ಅತಿ

ನಿಕಟ (ಬೇರೆಯಲ್ಲವೂ ಎನ್ನುವಷ್ಟು) ವಾಗಿರುವುದರಿಂದ ಆತ್ಮನ ಪ್ರತಿಫಲನ ಅತಿ ಉತ್ತಮವಾಗಿರುವ ಸಾಧ್ಯತೆಯಿದೆ. ಆದರೆ ಹಿಂದೆ ನಾವು ನೋಡಿರುವಂತೆ ಮನಸ್ಸು ಶುದ್ಧವಾದಷ್ಟು ಆತ್ಮ ಸ್ಪಷ್ಟವಾಗಿ ತೋರಿಕೊಳ್ಳುತ್ತಾನೆ. ಆತ್ಮ ಇರುವಂತೆಯೇ ತೋರಿ ಕೊಳ್ಳಬೇಕಾದರೆ ಮನಸ್ಸು ಅತ್ಯುನ್ನತ ಮಟ್ಟದ ಪರಿಶುದ್ಧತೆಯನ್ನು ಪಡೆಯಬೇಕೆಂದು ಆಯಿತು. ಮನಸ್ಸು ಶುದ್ಧವಾಗುವುದು ಎಂದರೆ ತನ್ನ ಎಲ್ಲ ಕೆಳಮಟ್ಟದ ಕಾಮನೆಗಳನ್ನು ದೈವಿಕ ಪ್ರೇಮ ಅಥವಾ ಭಕ್ತಿಯಾಗಿ ಮಾರ್ಪಡಿಸಿಕೊಳ್ಳುವುದು. ಪರಮ ಸತ್ಯವು ಪ್ರೇಮದ ಅತ್ಯುನ್ನತ ಮಟ್ಟದ ಮನಸ್ಸಿನಲ್ಲಿ ಮಾತ್ರ ಬೆಳಗುವುದರಿಂದ, ಅನನ್ಯವಾದ ಪ್ರೇಮ ಸ್ವರೂಪ ಎನ್ನುವ ಹೆಸರಿನಿಂದ ಅದನ್ನು ಕರೆಯುವುದು ಸೂಕ್ತವಲ್ಲವೇ?. ಉಪನಿಷತ್ ಹೇಳುತ್ತದೆ "ರಸೋವೈಸಃ ರಸಂಹೋವಾಯಂ ಲಬ್ಧ್ವಾನಂದೀಭವತಿ"ತೈ 2:7. ಅದು ರಸವೆ ರಸವನ್ನು ಪಡೆದೆ ಅಲ್ಲವೇ ಇವನು ಆನಂದಿ ಯಾಗುತ್ತಾನೆ.

## ಗೌಣ ಭಕ್ತಿ

"ನ ಮಾಂ ದುಷ್ಕೃತಿನೋ ಮೂಢಾಃ ಪ್ರಪದ್ಯಂತೆ ನರಾಧಮಾಃ, ಮಾಯಯಾಪಹೃತಜ್ಞಾನ ಆಸುರಂ ಭಾವಮಾಶ್ರಿತಾಃ". ದುಷ್ಕೃತಿಗಳು ಮೂಢರು ಆದ ನರಾಧಮರು ನನ್ನನ್ನು ಶರಣು ಹೊಂದುವುದಿಲ್ಲ. ಅವರು ಮಾಯೆಯಿಂದ ಅಪಹರಿಸಲ್ಪಟ್ಟ ಜ್ಞಾನ ಉಳ್ಳವರು, ಆಸುರಭಾವವನ್ನು ಆಶ್ರಯಿಸಿರುವವರು. ಮನಸ್ಸು ಸಂಪೂರ್ಣವಾಗಿ ಶುದ್ಧವಾಗುವವರೆಗೂ ಪರಮ ಪ್ರೇಮ ಲಭ್ಯವಿಲ್ಲವಾದ್ದರಿಂದ, ಈ ಪರಾ ಭಕ್ತಿಯನ್ನು ಪಡೆಯುವವರೆಗೂ ತಯಾರಿ (ಸಾಧನೆ) ನಡೆಸುವುದು ಅವಶ್ಯ. ಗೀತೆಯು ಭಗವಂತನನ್ನು ಅರಸುವವರನ್ನು ನಾಲ್ಕು ವಿಧವಾಗಿ ವಿಂಗಡಿಸುತ್ತದೆ. " ಚತುರ್ವಿಧಾ ಭಜಂತೇ ಮಾಂ ಜನಾಃ ಸುಕೃತಿನೋऽರ್ಜುನ, ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನಿ ಚ ಭರತರ್ಷಭ". ಅರ್ಜುನನೇ ನಾಲ್ಕು ಬಗೆಯ ಜನರು ನನ್ನನ್ನು ಭಜಿಸುವರು,, ಆರ್ತ, ಜಿಜ್ಞಾಸು, ಅರ್ಥಾರ್ಥಿ, ಜ್ಞಾನಿ. ಈ ನಾಲ್ಕು ಗುಂಪುಗಳನ್ನು ಮತ್ತೆ ಎರಡು ವಿಭಾಗವಾಗಿ ವಿಂಗಡಿಸುತ್ತದೆ. "ತೈಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ, ಪ್ರಿಯೋ ಹಿ ಜ್ಞಾನಿನೋऽತ್ಯರ್ಥಮಹಂ ಸ ಚ ಮಮ ಪ್ರಿಯಃ". "ಉದಾರಾಃ ಸರ್ವ ಏವೈತೇ ಜ್ಞಾನೀ ತ್ವಾತ್ಮೈವ ಮೇ ಮತಮ್,ಆಸ್ಥಿತಃ ಸ ಹಿ ಯುಕ್ತಾತ್ಮ ಮಾಮೇವಾನೂತ್ತಮಾಂ ಗತಿಮ ". ನಿತ್ಯ ಯುಕ್ತನಾಗಿಯೂ ಏಕಭಕ್ತಿಯಾಗಿಯೂ ಇರುವ ಜ್ಞಾನಿಯು ಹೆಚ್ಚಿನವನು, ಏಕೆಂದರೆ ನಾನು ಜ್ಞಾನಿಗೆ ಬಹಳ ಪ್ರಿಯನಾಗಿರುವೆನು, ಅವನು ನನಗೆ ಪ್ರಿಯನಾಗಿರುವನು. ಇತರ ಮೂವರು ಉದಾರರೆ, ಆದರೆ ಜ್ಞಾನಿಯು ನನ್ನ ಆತ್ಮನೇ ಎಂಬುದು

ನನ್ನ ಮತ. ಆತನು ನಾನೇ ಉತ್ತಮ ಗತಿಯೆಂದು ನನ್ನನ್ನು ಆಶ್ರಯಿಸಿರುವನು. ಇದರಿಂದ ಮೂರು ಬಗೆಯ ಭಕ್ತರು, ಜ್ಞಾನಿಯನ್ನು ಬಿಟ್ಟು ಇನ್ನೂ ಗೌಣಭಕ್ತಿಯಲ್ಲಿರುವವರೇ. ಈ ಭಕ್ತಿ ಕೂಡ ಸುಲಭಸಾಧ್ಯವಲ್ಲ. ಆದ್ದರಿಂದಲೇ ಅವರನ್ನು ಮೂಢರು ಅಸುರೀ ಸಂಪತ್ತಿನವರಿಂದ ಪ್ರತ್ಯೇಕಿಸಿ ಸುಕೃತಿಗಳು ಪುಣ್ಯವಂತರು ಎಂದು ಗುರುತಿಸಲಾಗಿದೆ.

ಗೌಣಭಕ್ತಿಯಲ್ಲಿ ತಾರತಮ್ಯವನ್ನು ಗೀತೆ ಹೇಳದಿದ್ದರೂ ನಾರದ ಭಕ್ತಿ ಸೂತ್ರದಲ್ಲಿ ಅರ್ಥಾರ್ಥಿ ಭಕ್ತಿಗಿಂತ ಜಿಜ್ಞಾಸು ಭಕ್ತಿ, ಜಿಜ್ಞಾಸು ಭಕ್ತಿಗಿಂತ ಆರ್ತ ಭಕ್ತಿ ಹೆಚ್ಚು ಶ್ರೇಯಸ್ಕರವಾದದ್ದು ಎಂದು ಹೇಳುತ್ತಾರೆ. ಆರ್ತ ಭಕ್ತನೆಂದರೆ ಪರಮ ಪ್ರೇಮ ಸ್ವರೂಪವಾದ ಭಕ್ತಿಯ ಪ್ರಾಪ್ತಿಗೆಂದು ಪ್ರಯತ್ನ ಮಾಡುವವನು. ಇವನು ಸಂಸಾರದ ಸಂಕಷ್ಟಗಳನ್ನು ಅರಿತು ಅದರಿಂದ ಶಾಶ್ವತವಾದ ಬಿಡುಗಡೆ ಬೇಕೆಂದು ಸಂಪೂರ್ಣ ಮನಸ್ಸಿನಿಂದ ಸ್ವಾಮಿಯಲ್ಲಿ ಶರಣಾದವನು. ಗೀತೆಯು ಇದಕ್ಕೆ ಪ್ರಾಮುಖ್ಯತೆ ಕೊಡುತ್ತದೆ. ನನ್ನನ್ನು ಆಶ್ರಯಿಸಿದ್ವರು ಮಾತ್ರ ಮಾಯೆಯನ್ನು ದಾಟುತ್ತಾರೆ. ಮನಸ್ಸನ್ನು ಶುದ್ಧಿಗೊಳಿಸುವ ಎಲ್ಲ ಪ್ರಯತ್ನಗಳು ಈ ಹಂತದ ಪ್ರಾರಂಭಿಕ ಮಟ್ಟವಾಗಿದೆ.

## ಮನಸ್ಸಿನ ಶುದ್ಧೀಕರಣ

ಮನಸ್ಸಿನ ಶುದ್ಧೀಕರಣ ಸಾಧನಗಳಲ್ಲಿ ಮೂರು ವಿಧ. "ಯಜ್ಞೋ ದಾನಂ ತಪಃ ಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್; ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್" ಯಜ್ಞವು, ದಾನವು, ತಪಸ್ಸು ಎಂಬ ಕರ್ಮವು ಬಿಡತಕ್ಕದ್ದಲ್ಲ, ಇವನ್ನು ತಿಳಿದವರಿಗೆ ಅವುಪಾವನಗಳಾಗಿರುತ್ತವೆ. 18 :5. ಯಜ್ಞದಲ್ಲಿ ಅನೇಕ ಬಗೆಗಳಿವೆ. ಅನೇಕ ವಸ್ತುಗಳನ್ನು ಬಳಸಿ ಮಾಡುವ ಮೂಲಭೂತವಾದ ಹೋಮ ದ್ರವ್ಯ ಯಜ್ಞದಿಂದ ಹಿಡಿದು ಭಾವದಿಂದ ಎಂದರೆ ಸೋಪಾಧಿಕನಾದ ಪರಮಾತ್ಮನನ್ನು ನಿರುಪಾದಿಕನಾಗಿ ಕಾಣುವುದು ಎಂಬ ಜ್ಞಾನಯಜ್ಞದವರೆಗೂ ಅನೇಕ ಯಜ್ಞಗಳಿವೆ. ಯಜ್ಞದ ಬಗ್ಗೆ ನಾಲ್ಕನೆಯ ಅಧ್ಯಾಯದಲ್ಲಿ ವಿಸ್ತಾರವಾಗಿ ವಿವರಿಸಲಾಗಿದೆ. ಯಾವ ಪ್ರತಿಫಲಾಪೇಕ್ಷೆಯಿಲ್ಲದೆ ಯಜ್ಞಕ್ಕಾಗಿ ಮಾಡುವ ಯಜ್ಞವು ಶ್ರೇಷ್ಠ ಎಂದು ಗೀತೆ 17 :11 ರಲ್ಲಿ ಹೇಳುತ್ತದೆ. "ಅಫಲಾಕಾಙ್ಕ್ಷಿಭಿರ್ಯಜ್ಞೋ ವಿಧಿದೃಷ್ಟೋ ಯ ಇಜ್ಯತೆ.ಯಷ್ಟವ್ಯಮೇವೇತಿ ಮನಃ ಸಮಾಧಾಯ ಸ ಸಾತ್ವಿಕಃ" ಮನಸ್ಸಮಾಧಾನದಿಂದ, ಫಲಾಕಾಂಕ್ಷೆಯಿಲ್ಲದವರಿಂದ ಶಾಸ್ತ್ರೋಕ್ತವಾದ ಯಾವ ಯಜ್ಞವು ಮಾಡಲ್ಪಡುವುದೊ ಅದು ಸಾತ್ವಿಕವು. "ದಾತವ್ಯಮಿತಿ ಯ ದ್ದಾನಂ ದೀಯತ್ಯೇನುಪಕಾರಿಣೇ; ದೇಶೇ ಕಾಲೇ ಚ ಪಾತ್ರೇ ಚ ತದ್ದಾನಂ ಸಾತ್ವಿಕಂ ಸ್ಮೃತಮ್". ಯಾವ ದಾನವನ್ನು ಯಾವ ಅಪೇಕ್ಷೆಯೂ ಇಲ್ಲದೆ ಉತ್ತಮದೇಶದಲ್ಲಿಯೂ ಸೂಕ್ತ

ಕಾಲದಲ್ಲಿಯೂ ಪಾತ್ರನಾದವನಿಗೆ ಕೊಡುವರೋ ಆ ದಾನವು ಸಾತ್ವಿಕ ವೆನಿಸುತ್ತದೆ. ಇದು ಉತ್ತಮವಾದ ದಾನ.

ತಪಸ್ಸನ್ನು ಮೂರು ಭಾಗವಾಗಿ ವಿಂಗಡಿಸುತ್ತದೆ ಕಾಯಿಕ, ವಾಚಿಕ, ಮಾನಸಿಕ. ದೇವತೆಗಳನ್ನು ಪೂಜಿಸುವುದು, ಗುರು ಹಿರಿಯರನ್ನು ಗೌರವಿಸುವುದು, ಶುಚಿಯಾಗಿರುವುದು, ಬ್ರಹ್ಮಚರ್ಯೆ ,ಸಚ್ಚಾರಿತ್ರ್ಯ, ಅಹಿಂಸೆ ಇವೆಲ್ಲಾ ಶಾರೀರಿಕ ತಪಸ್ಸು. ಯಾರಿಗೂ ನೋವನ್ನುಂಟುಮಾಡದಂತೆ ಸತ್ಯವಾಗಿಯೂ ಪ್ರಿಯವಾಗಿಯೂ ಹಿತವಾಗಿಯೂ ಇರುವ ಮಾತನ್ನಾಡುವುದು, ಶಾಸ್ತ್ರವನ್ನು ಅಭ್ಯಾಸಮಾಡುತ್ತಿರುವುದು ಇದೆಲ್ಲವೂ ವಾಚಿಕ ತಪಸ್ಸು. ಮನಸ್ಸನ್ನು ಶಾಂತವಾಗಿ ಇಟ್ಟುಕೊಂಡಿರುವುದು, ಸೌಮ್ಯವಾಗಿರುವುದು ಮನಸ್ಸನ್ನು ಬಿಗಿ ಹಿಡಿಯುವುದು, ಮೌನವಾಗಿರುವುದು ಮಾನಸಿಕ ತಪಸ್ಸು. ಇದನ್ನು 17: 14,15,16 ರಲ್ಲಿ ವಿವರಿಸಲಾಗಿದೆ. ಈ ಮುಮ್ಮುಖದ ತಪಸ್ಸಿನ ಶ್ರದ್ಧಾಪೂರ್ವಕ ಅನುಷ್ಠಾನ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಸಂಗವಿಲ್ಲದೆ ಮಾಡಿದ್ದಾದ್ದಲ್ಲಿ ನಿಜವಾದ ಸಾಧು ಆಗುತ್ತಾನೆ.

ದೈವೀ ಪ್ರೇಮವನ್ನು ಶೀಘ್ರವಾಗಿ ಹೊಂದಲು ಪೂರಕವಾಗುವ ಎಲ್ಲ ರೀತಿಯ ಪ್ರತೀಕ ಭಕ್ತಿಯನ್ನು , ಗೌಣೀ ಭಕ್ತಿಯೆಂದು ಹಿಂದಿನವರು ಕರೆದಿರುವ ಭಕ್ತಿಯಲ್ಲಿ ಧಾರಾಳವಾಗಿ ಸೇರಿಸಿಕೊಳ್ಳಬಹುದು. ಕೆಲವರು ಪ್ರತೀಕ, ಆಕಾರ, ಮೂರ್ತರೂಪ ಇವುಗಳನ್ನು ಭಕ್ತಿಗೆ ಬಳಸುವುದು ನಿಷ್ಪ್ರಯೋಜಕ, ಒಂದು ರೀತಿಯಲ್ಲಿ ಭಗವಂತನನ್ನು ಹುಡುಕುವವನಿಗೆ ತೊಡಕಾಗುತ್ತದೆ. ಅವನ ಮನಸ್ಸನ್ನು ಬೇರೆಡೆಗೆ ಸೆಳೆಯುತ್ತದೆ ಎಂದು ಯೋಚಿಸುವ ಮನಸ್ಸು ಮಾಡಿದ್ದಾರೆ. ಇವುಗಳನ್ನು ಬಳಸಲು ಸಲಹೆ ಕೊಡುವುದು ಪ್ರಜ್ಞಾಪೂರ್ವಕವಾಗಿ ಸುಳ್ಳಿನೊಡನೆ ಸಂಬಂಧವನ್ನು ಹೊಂದುವಂತೆ ಕೊಡುವ ಸಲಹೆಯಾಗುತ್ತದೆ. ಅನೃತದ ನೇರ ಸಂತಾನಾಭಿವೃದ್ಧಿಗೆ ಕಾರಣವಾಗುತ್ತದೆ ಎನ್ನುತ್ತಾರೆ. ಆದರೆ ಗೀತೆ ಈ ಅಭಿಪ್ರಾಯವನ್ನು ಮಾನ್ಯ ಮಾಡುವುದಿಲ್ಲ. ಸೂತ್ರಗಳನ್ನು ಮತ್ತು ಸಂಕೇತಗಳನ್ನು ಬಳಸುವುದರಿಂದ ಆಧುನಿಕ ವಿಜ್ಞಾನವನ್ನು ಗ್ರಹಿಸಲು ಸುಲಭವಾಗುವಂತೆ ಇಲ್ಲಿ ಕೂಡ ಪ್ರತೀಕ ಆಕಾರ ವಿಗ್ರಹ ಇವುಗಳನ್ನು ಬಳಸುವುದು ಯುವ ಮನಸ್ಸಿಗೆ ಉಪಾಸನೆಯ ನಿಜ ಸ್ವಭಾವವನ್ನು ಅರಿಯಲು ಸಹಾಯಕವಾಗುತ್ತದೆ. ಪ್ರಪಂಚದ ಎಲ್ಲ ಪ್ರಸಿದ್ಧ ಮತಗಳು ಆಕಾರವನ್ನು ಪ್ರತೀಕಗಳನ್ನು ಸ್ವಲ್ಪಮಟ್ಟಿಗಾದರೂ ಬಳಸುತ್ತದೆ. ಗೀತೆಯೊಂದೇ ಪ್ರತ್ಯೇಕವಾಗಿ ಇವುಗಳನ್ನು ಒಪ್ಪಿದೆ ಎಂಬಂತಿಲ್ಲ. "ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಚತಿ. ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಮ್ " ಯಾವ ಯಾವನು ಯಾವ ಯಾವ ದೇವತೆಯ ಮೂರ್ತಿಯನ್ನು ಭಕ್ತನಾಗಿ ಶ್ರದ್ಧೆಯಿಂದ ಆರಾಧಿಸಲು ಇಚ್ಛಿಸುತ್ತಾನೋ ಅವನಿಗೆ ಆಯಾ ಅಚಲವಾದ ಶ್ರದ್ಧೆಯನ್ನೇ ನಾನು ಉಂಟು

ಮಾಡುವೆನು. 07:21. ಕೇವಲ ಪ್ರತೀಕಕ್ಕಾಗಿ ಅಥವಾ ಆಕಾರಕ್ಕಾಗಿ ಅವುಗಳನ್ನು ಉಪಾಸಿಸುವುದಲ್ಲ, ಸ್ವಾಮಿಗಾಗಿ ಅವುಗಳನ್ನು ದ್ಯೋತಕವಾಗಿ ಬಳಸಬೇಕು. ಗೌಣ ಭಕ್ತಿಯ ಹಂತದಲ್ಲಿರುವವರಿಗೆ ಇವುಗಳನ್ನು ದೈವದ ಸೂಚನೆ ಸಲಹೆಗಳಾಗಿ ಬಳಸುವುದು ಅವಶ್ಯಕ ಮತ್ತು ಉಪಯುಕ್ತ. ರೂಪಕ್ಕಾಗಿ ರೂಪ ಪ್ರತೀಕಕ್ಕಾಗಿ ಪ್ರತೀಕ ಎಂದು ಆರಾಧಿಸಿದಾಗ ಅದು ಕೇವಲ ದೇವತೆಗಳನ್ನು ಇಲ್ಲವೇ ಮಹಾತ್ಮರನ್ನು ಪ್ರತಿನಿಧಿಸುತ್ತದೆ. ಉಪಾಸನೆಗೆ ಅದರದ್ದೇ ಆದ ಮೌಲ್ಯವಿದ್ದರೂ ಅದು ಪರಾ ಭಕ್ತಿಗೆ ಅಥವಾ ಮುಕ್ತಿಗೆ ನೇರವಾಗಿ ತಲುಪಿಸಲಾರದು. "ಅನ್ತವತ್ತು ಫಲಂ ತೇಷಾಂ ತದ್ಭವತ್ಯಲ್ಪಮೇಧಸಾಮ್" ಅವರಿಗೆ ಆಗುವ ಫಲವು ಅಂತ ಉಳ್ಳದ್ದು ಅಲ್ಪ ಮೇದಸ್ಸಿನವರಿಗೆ ಆಗುತ್ತದೆ. 07:23. ಆದರೆಈ ಅಲ್ಪ ನಾಶವಾಗುವ ಫಲವೂ ಸ್ವಾಮಿಯಿಂದಲೇ ಕೊಡಲ್ಪಡುತ್ತದೆ. "ಯೇಪ್ಯನ್ಯದೇವತಾಭಕ್ತ ಯಜನ್ತೇ ಶ್ರದ್ಧಯಾನ್ವಿತಾಃ; ತೇऽಪಿ ಮಾಮೇವ ಕೌಂತೇಯ ಯಜನ್ತ್ಯವಿಧಿಪೂರ್ವಕಮ್". ಕ್ಾಂತೇಯನೇ, ಯಾರು ಮಿಕ್ಕ ದೇವತೆಗಳ ಭಕ್ತರಾಗಿ ಶ್ರದ್ಧೆಯಿಂದ ಕೂಡಿ ಪೂಜಿಸುತ್ತಿರುವರೋ ಅವರು ನನ್ನನ್ನೇ ಅವಿಧಿಪೂರ್ವಕವಾಗಿ ಪೂಜಿಸುತ್ತಿರುತ್ತಾರೆ 09:23. ಆದ್ದರಿಂದ ಆಕಾರ ಅಥವಾ ಪ್ರತೀಕದ ಸಹಾಯದಿಂದ ಭಗವಂತನನ್ನು ಪ್ರಜ್ಞಾಪೂರ್ವಕವಾಗಿ ನಿರಂತರ ಪೂಜಿಸುವುದು ಹೆಚ್ಚು ಫಲಪ್ರದವು ಮತ್ತು ಎಲ್ಲರಿಗೂ ಸೂಚಿಸಬಹುದಾದದ್ದೂ ಆಗಿರುತ್ತದೆ. ದೇವನನ್ನು ಪ್ರತೀಕವಾಗಿ ಇಲ್ಲವೇ ಬದಲಿಗೆ ಯಾವುದಾದರೂ ರೂಪದಿಂದ ಪೂಜಿಸಬಹುದು ಎನ್ನುವುದನ್ನು ಹತ್ತನೇ ಅಧ್ಯಾಯದ ವಿಭೂತಿ ಯೋಗದಲ್ಲಿ ವಿಸ್ತಾರವಾಗಿ ವಿವರಿಸಿದೆ. "ಅಹಮಾತ್ಮ ಗುಡಾಕೇಶ ಸರ್ವಭೂತಾಶಯಸ್ಥಿತಃ; ಅಹಮಾದಿಶ್ಚ ಮಧ್ಯಂ ಚ ಭೂತಾನಾಮನ್ತ ಏವ ಚ" ಎಲೈ ಗುಡಾಕೇಶನೆ, ಸರ್ವ ಭೂತಗಳ ಆಶಯದಲ್ಲಿರುವ ಆತ್ಮನು ನಾನು. ಭೂತಗಳಿಗೆ ಆದಿಯೂ ಮಧ್ಯವೂ ಅಂತವು ನಾನೇ 10:20. ಇದು ಬಹಳ ಉದಾತ್ತ ಭಾವನೆ ಯಾಗಿರುವುದರಿಂದ ಅರ್ಥ ಮಾಡಿಕೊಳ್ಳಲಾರದವರಿಗಾಗಿ ಹೆಚ್ಚುಕಡಿಮೆ ಇದೇ ಭಾವ ಬರುವಂತೆ ಅನೇಕ ವಿವರಣೆಗಳನ್ನು ಕೊಟ್ಟು ಕೊನೆಯಲ್ಲಿ ಈ ಸಾಮಾನ್ಯ ಹೇಳಿಕೆಯನ್ನು ಕೊಡಲಾಗಿದೆ."ಯದ್ಯದ್ವಿಭೂತಿಮತ್ಸತ್ವಂ ಶ್ರೀಮದೂರ್ಜಿತಮೇವ ವಾ.ತತ್ತದೇವಾವಗಚ್ಛ ತ್ವಂ ಮಮತೇಜೋऽಂಶಸಂಭವಮ್" 10:41. ಯಾವ ಯಾವ ಸತ್ತ್ವವು ವಿಭೂತಿಯುಳ್ಳದ್ದೋ, ಶ್ರೀ ಯುಕ್ತವೋ ಅಥವಾ ಊರ್ಜಿತವಾಗಿರುವುದೋ ಅದನ್ನೇ ನೀನು ನನ್ನ ತೇಜೋಂಶ ಸಂಭವವಾಗಿರುವುದೆಂದು ಅರಿತುಕೋ. ಹೀಗಾಗಿ ಯಾವ ಯಾವುದು ಪ್ರಕೃತಿಯಲ್ಲಿ ಭಯಂಕರವಾಗಿ ಉತ್ತೇಜಿಸುವುದೋ, ಅದ್ಭುತವಾದದ್ದೋ, ಶ್ಲಾಘನಾರ್ಹವೋ, ಮತ್ತು ಯಾರು ಒಳ್ಳೆಯತನವನ್ನು ಔನ್ನತ್ಯವನ್ನು ಮತ್ತು ಪ್ರಜ್ಞೆಯನ್ನು ಹೊಂದಿರುವರೋ ಅದೆಲ್ಲವನ್ನು ಅವರೆಲ್ಲರನ್ನು ಗೌರವಿಸಬೇಕು ಆದರಿಸಬೇಕು. ಇದರ ಮೂಲಕ ಹೃದಯದ ದ್ವಾರ ಒಂದು ಶಾಶ್ವತ ಇರುವಿಕೆಯೆಡೆಗೆ ತೆರೆದುಕೊಳ್ಳಬಹುದು. ಕುತೂಹಲದಿಂದ ಅಂಜಿಕೆಗೂ, ಅಂಜಿಕೆಯಿಂದ

ಆಶ್ಚರ್ಯಕ್ಕೂ, ಆಶ್ಚರ್ಯದಿಂದ ಮೆಚ್ಚುಗೆಗೂ, ಮೆಚ್ಚುಗೆಯಿಂದ ಪೂಜ್ಯ ಭಾವನೆಗೂ ಮತ್ತು ಭಕ್ತಿಗೂ ಏರುವುದೇ ಮನುಷ್ಯನ ಆತ್ಮೋನ್ನತಿಯ ಮಾರ್ಗದಲ್ಲಿ ಏರುವ ಮೆಟ್ಟಿಲುಗಳು. ಈ ಮಾರ್ಗದ ಮುನ್ನಡೆಯ ತೀವ್ರತೆ ದೈವೀ ವಿಭೂತಿಯಿಂದ ಯಾರು ಎಷ್ಟು ಸ್ಫೂರ್ತಿಯನ್ನು ಪಡೆಯುತ್ತಾರೆ ಎನ್ನುವುದನ್ನು ಅವಲಂಬಿಸಿದೆ. ಈ ದಿಸೆಯಲ್ಲಿ ಮುಖ್ಯವಾದ ಮೂರು ವಿಭೂತಿಗಳೆಂದರೆ ವೇದಗಳು ಗುರು ಮತ್ತು ಅವತಾರಗಳು. ವಿಭೂತಿಗಳನ್ನು ಪರಿಗಣಿಸುವಲ್ಲಿ ಗೀತೆಯು ಕೇವಲ ಪರಿಚಯಾತ್ಮಕವಾಗಿದ್ದು ವ್ಯಾಪಕವಾಗಿ ವಿಶ್ಲೇಷಿಸಿಲ್ಲ. ಕೃಷ್ಣನೇ ಹೇಳುವಂತೆ "ನಾನ್ತೋऽಸ್ತಿ ಮಮ ದಿವ್ಯಾನಾಂ ವಿಭೂತಿನಾಂ ಪರನ್ತಪ.ಏಷತೋದ್ದೇಶತಃ ಪ್ರೊಕ್ತೋ ವಿಭೂತೇರ್ವಿಸ್ತರೋ ಮಯಾ" 10:40. ಎಲೈ ಪರಂತಪನೆ ನನ್ನ ದಿವ್ಯ ವಿಭೂತಿಗಳಿಗೆ ಅಂತವಿಲ್ಲ, ಆದರೆ ನಾನು ಇದರ ವಿಸ್ತಾರವನ್ನು ಹೇಳಿದ್ದು ಉದ್ದೇಶಪೂರ್ವಕವಾಗಿ.

ಗೀತೆಯು ಕೆಲವು ಗ್ರಂಥಗಳನ್ನು ಕೆಲವು ಗುರುಗಳನ್ನು ಕೆಲವು ಅವತಾರಗಳನ್ನು ಮಾತ್ರ ಉಲ್ಲೇಖಿಸಿದೆ ಎಂದರೆ ಆ ಕಾಲದಲ್ಲಿ ಪ್ರಸಿದ್ಧವಾದ ಭಾರತೀಯರಿಗೆ ಪರಿಚಯವಾದವುಗಳು ಎಂದು ಮಾತ್ರ. ಇಂದು ಕೃಷ್ಣನೇನಾದರೂ ಉಪದೇಶ ಮಾಡುವುದಾದರೆ ದಮ್ಮಪದ, ಬೈಬಲ್, ಖುರಾನ್, ಜೆಂಡಾಆವೆಸ್ತಾ ಮುಂತಾದ ಗ್ರಂಥಗಳು ಮತ್ತು ಬುದ್ಧಯೇಸು ಪೈಗಂಬರ್ ಜೋರಾಷ್ಟ್ರ ಮುಂತಾದ ಅಭಿವ್ಯಕ್ತಿಗಳು ಪೂಜಾರ್ಹ ಎಂದು ಪರಿಗಣಿಸುತ್ತಿದ್ದ. ಈ ಎಲ್ಲಾ ಗ್ರಂಥಗಳಲ್ಲಿರುವ ಉಪದೇಶಗಳ ಸಂಪೂರ್ಣ ಸರ್ವೆಸಾಮಾನ್ಯವಾದ ಗುಣಧರ್ಮಗಳು ಈ ಕಲ್ಪನೆಗೆ ಪುಷ್ಟಿ ಕೊಡುತ್ತದೆ. " ಏ ಯಥಾ ಮಾಂ ಪ್ರಪದ್ಯಂತೆ ತಾಂಸ್ತಥೈವ ಭಜಾಮ್ಯಹಮ್. ಮಮ ವರ್ತ್ಮಾನುವರ್ತನ್ತೇ ಮನುಷ್ಯಾಃ ಪಾರ್ಥ ಸರ್ವಶಃ". ಯಾರು ಹೇಗೆ ನನ್ನನ್ನು ಸೇವಿಸುವರೋ ಅವರನ್ನು ನಾನು ಹಾಗೆಯೇ ಸೇರುವೆನು. ಎಲೈ ಪಾರ್ಥನೆ, ಮನುಷ್ಯರು ಸರ್ವ ಪ್ರಕಾರದಿಂದಲೂ ನನ್ನ ಮಾರ್ಗವನ್ನೇ ಅನುವರ್ತಿಸುತ್ತಿರುವರು. 4.11. ಇದರಿಂದ ಗೀತೆಯು ಕೇವಲ ಒಂದು ಗ್ರಂಥವನ್ನೋ ಒಂದು ಅವತಾರವನ್ನೋ ಒಬ್ಬ ಗುರುವನ್ನೋ ಪ್ರತಿಪಾದಿಸುತ್ತದೆ ಎಂದು ಹೇಳುವುದು ನ್ಯಾಯಬದ್ಧ ವಾಗುವುದಿಲ್ಲ. ಸರಳವಾಗಿ ವಿಭೂತಿಗಳ ಸಾಮಾನ್ಯ ನಿಯಮವನ್ನು ಪ್ರಸ್ತಾಪಿಸಿ ನಿಲ್ಲಿಸುತ್ತದೆ. ಈಗ ಗೀತೆಯು ಈ ಮೂರು ವಿಭೂತಿಗಳ ಬಗ್ಗೆ ಏನು ಹೇಳುತ್ತದೆ ಎಂದು ನೋಡೋಣ. ಪವಿತ್ರ ಪುಸ್ತಕಗಳ ಸರಿಯಾದ ಬಳಕೆ ಧಾರ್ಮಿಕ ಭಾವನೆಗಳ ಬೆಳವಣಿಗೆಗೆ ಪೋಷಕವಾಗಿದೆ. ಕಾರ್ಯಾಕಾರ್ಯಗಳ ವ್ಯವಸ್ಥೆಯಲ್ಲಿ ಶಾಸ್ತ್ರವೇ ನಿನಗೆ ಪ್ರಮಾಣವು ಎಂದು, 16:24 ರಲ್ಲಿ ಹೇಳಲ್ಪಟ್ಟಿದೆ. ಹೀಗೆಂದ ಮಾತ್ರಕ್ಕೆ ನಮ್ಮನ್ನು ಗ್ರಂಥಗಳಿಗೆ ಕಟ್ಟಿಹಾಕಿದ್ದಾರೆ ಎಂದರ್ಥವಲ್ಲ. ಏಕೆಂದರೆ ಮುಂದಿನ ಅಧ್ಯಾಯದಲ್ಲಿ ಸ್ವಾಧ್ಯಾಯ ವೇದವೇದಾಂತಗಳ ಪರಿಚಯವಿಲ್ಲದವರೂ ಶುದ್ಧವಾದ ಶ್ರದ್ಧೆಯುಳ್ಳವರಾಗಿದ್ದಲ್ಲಿ ಸಾತ್ವಿಕರೆಂದು ಪರಿಗಣಿಸಬಹುದು. ಗೀತೆಯು ಗುರುವಿಗೆ

ಎರಡು ವಿಶೇಷಣಗಳನ್ನು ಕೊಟ್ಟಿದೆ "ಜ್ಞಾನಿನಃ, ತತ್ತ್ವದರ್ಷಿನಃ," ಜ್ಞಾನಿಗಳು ತತ್ತ್ವದರ್ಶಿಗಳು. ಇದು ಮುಂಡಕ 1:2 ,12 ಉಪನಿಷತ್ತಿನ ಶ್ರೋತ್ರೀಯ, ಬ್ರಹ್ಮನಿಷ್ಠ ಎಂಬ ಗುರುವಿನ ಅರ್ಹತೆಯ ಅನುವಾದವೇ ಆಗಿದೆ. ಶಿಷ್ಯನಲ್ಲಿ ಜ್ಞಾನಾಗ್ನಿಯ ಜಾಗ್ರತವಾಗುವಿಕೆ ಮತ್ತು ಎಲ್ಲ ಸಂಶಯಗಳ ನಿವಾರಣೆಯಾಗುವುದೇ ಗುರುವಿನ ಗುರುತ್ವದ ಪರೀಕ್ಷೆ. ಗೀತೆಯ 4: 35ರಲ್ಲಿ ಹೀಗೆ ಹೇಳಲ್ಪಟ್ಟಿದೆ. ಕಲಿಸುವಿಕೆಯು ಕಲಿಯುವವನನ್ನು, ಪಾಪಗಳನ್ನು ಮೆಟ್ಟುವಂತೆ, ದುಷ್ಟ ಪ್ರವೃತ್ತಿಗಳನ್ನು ಭಸ್ಮ ಗೊಳಿಸುವಂತೆ ಮತ್ತು ಮನಸ್ಸಿನ ಪರಿಶುದ್ಧತೆಯನ್ನು ಹೊಂದುವಂತೆ ಸಿದ್ಧಗೊಳಿಸುವುದುರಲ್ಲಿಯೇ ಸಾಫಲ್ಯವನ್ನು ಹೊಂದುತ್ತದೆ 4:36, 37. ಅವತಾರದ ಬಗ್ಗೆ ಹೇಳುತ್ತಾ ಗೀತೆ "ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ" ಮತ್ತೆ ಮತ್ತೆ ಧರ್ಮಸಂಸ್ಥಾಪನೆಗಾಗಿ ಅವತಾರವನ್ನು ತಾಳುತ್ತೇನೆ ಎನ್ನುತ್ತದೆ. ಯಾವಾಗ ಧರ್ಮದ ನಾಶವಾಗುತ್ತದೋ, ಅಧರ್ಮ ತಾಂಡವವಾಡುತ್ತದೋ ಆವಾಗೆಲ್ಲಾ ನಾನು ಅವತರಿಸುತ್ತೇನೆ 4:7. ಅವತಾರ ನೈತಿಕತೆಯ ಉದ್ಧಾರಕ್ಕಾಗಿಯಾದರೂ ಭಗವಂತನ ಸ್ವಯಂಪೂರ್ಣತೆಗೆ ಯಾವುದೇ ಮಿತಿಯ ಅನಿವಾರ್ಯತೆ ಉಂಟಾಗುವುದಿಲ್ಲ.ಅಜನು ಅವ್ಯಯಾತ್ಮನು ಆಗಿದ್ದರು, ನನ್ನ ಪ್ರಕೃತಿಯನ್ನು ಹಿಡಿತದಲ್ಲಿಟ್ಟುಕೊಂಡು ನನ್ನ ಮಾಯೆಯಿಂದ ಸಂಭವಿಸುವೆನು. 4:6. ಹೀಗಾಗಿ ಗೀತೆಯು ಯಾವುದೇ ಅವತಾರಕ್ಕೂ ಹೆಚ್ಚಿನ ಮಹತ್ತ್ವವನ್ನು ಕೊಟ್ಟಿಲ್ಲ. ಧರ್ಮಸಂಸ್ಥಾಪನೆಗಾಗಿ ಅವತಾರ ಎಂದು ಘೋಷಿಸುತ್ತದೆ. ಇದು ಗೀತೆಯು ಕೃಷ್ಣಾವತಾರವನ್ನು ಮೇಲೆತ್ತುವುದಕ್ಕೋ, ಕೃಷ್ಣನ ಆರಾಧನೆಯನ್ನು ಪ್ರತಿಪಾದಿಸಲೋ ಬಂದಿದೆ ಎಂದು ಮುಂದೊಡ್ಡಿರುವ ವಾದದ ಖಂಡನೆಯ ಪುರಾವೆ. ಗೀತೆಯಲ್ಲಿ ಎಲ್ಲೂ ಯಾವ ಬೇರೆಯ ಅವತಾರದ ಆರಾಧನೆಯನ್ನು ನಿರಾಕರಿಸುವ ವಾಕ್ಯ ಲಭ್ಯವಿಲ್ಲ. ಇದಕ್ಕೆ ಬದಲಾಗಿ ಎಲ್ಲಾ ಆಕಾರಗಳ ರೂಪಗಳ ಆರಾಧನೆಗೂ ಅಧ್ಯಾತ್ಮಮಾರ್ಗದ ಸೋಪಾನದಲ್ಲಿ ಸೂಕ್ತ ಸ್ಥಾನವನ್ನು ಕಲ್ಪಿಸಲಾಗಿದೆ. ಗೀತೆ ಕೇವಲ ಧರ್ಮದ ಭದ್ರ ಬುನಾದಿಯ ಆಸರೆಯನ್ನು ಹೊಂದಿದೆ. ಅದು ಗ್ರಂಥಗಳ ನಿಶ್ಚಯ ಅಥವಾ ವ್ಯಕ್ತಿಗಳ ಅಧಿಕಾರ ಅಥವಾ ವಿಶಿಷ್ಟವಾದ ಆಕಾರ ಮತ್ತು ಆಚರಣೆಗಳಿಗೆ ಬದ್ಧವಾಗದೆ, ಸೂಕ್ತ ವಿವೇಚನೆಯ ಅನುಸರಣೆ, ನ್ಯಾಯಬದ್ಧ ನಡತೆ, ವಿಶ್ವಶಾಂತಿ, ಆನಂದ ಮತ್ತು ಪ್ರೇಮಗಳನ್ನು ಆಧರಿಸಿದೆ. ಹಾಗೆಂದ ಮಾತ್ರಕ್ಕೆ ಗೀತೆ ಜೀವನ ಆಧ್ಯಾತ್ಮಿಕ ಮುನ್ನಡೆಗೆ ಸಾಧನವಾದ ಯಾವುದೇ ಪುಸ್ತಕ ವ್ಯಕ್ತಿ ಅಥವಾ ಆಕಾರ ಮತ್ತು ಅರ್ಚನೆಗೂ ವಿರುದ್ಧವಲ್ಲ. ಅವೆಲ್ಲವೂ ವಿಭೂತಿಗಳಾಗಿದ್ದು ಪೂಜಾರ್ಹವಾಗಿದೆ. ವಿಭೂತಿಯನ್ನು ಪರಮಾರ್ಥವೆಂದ್ಗಣಿಸದೆ ಕೇವಲ ಪರಮಾತ್ಮನು ತ್ತೋರಿಕೊಳ್ಳುವ ಕುರುಹು ಅಥವಾ ಸೂಚನೆ ಎಂದು ಸ್ವೀಕರಿಸುವುದು ಹೆಚ್ಚಿನ ಲಾಭದಾಯಕ ಎಂದು ಗೀತೆ ಎಚ್ಚರಿಕೆ ಕೊಡುತ್ತದೆ. "ಅಥವಾ ಬಹುನೈತೇನ ಕಿಂ ಜ್ಞಾತೇನ ತವಾರ್ಜುನ. ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ತಿತೋ ಜಗತ್" ಹೆಚ್ಚು ತಿಳಿದು ಏನಾಗಬೇಕು ನಾನು ಈ ಜಗತ್ತೆಲ್ಲವನ್ನು ಒಂದಂಶದಿಂದ

ಹಿಡಿದಿಟ್ಟುಕೊಂಡಿರುವೆನು. 10:42. ಆತ್ಮನನ್ನುಔನ್ನತ್ಯಕ್ಕೇರಿಸಿ ಉಪಾಸಕನ ಹೃದಯ ವೈಶಾಲ್ಯತೆಯು ಇಡೀ ಸೃಷ್ಟಿಯನ್ನು ಆವರಿಸುವವರೆಗೂ ವಿಕಸಿಸುವುದೇ ವಿಭೂತಿ ಉಪಾಸನೆಯ ಕಾರ್ಯ. ತನ್ನ ಒಂದಂಶದಿಂದ ಪ್ರಪಂಚವಾಗಿ ತೋರಿಕೊಂಡಿರುವ ಪರಮಾತ್ಮ ಪ್ರಪಂಚದ ಹೊರತಾಗಿ ಅನಂತವಾಗಿ ಹೆಚ್ಚಿನವನಾಗಿದ್ದಾನೆ ಎನ್ನುವುದನ್ನು ಪ್ರತ್ಯಕ್ಷೀಕರಿಸಿ ಕೊಂಡಲ್ಲಿಗೆ ಮುಮುಕ್ಷುವಿನ ಸಾಕ್ಷಾತ್ಕಾರ ಸಿದ್ಧವಾಗುತ್ತದೆ.

## ಸಂಕ್ಷಿಪ್ತವಾಗಿ ಭಕ್ತಿಯೋಗದ ಮಾರ್ಗಗಳು

ಮುಂದುವರೆಯುವ ಮುಂಚೆ ನಮ್ಮ ಗ್ರಹಿಕೆಯನ್ನು ಮತ್ತೊಮ್ಮೆ ಸ್ಪುಟಗೊಳಿಸಲು, ಭಕ್ತಿಯೋಗದಲ್ಲಿ ಹಿಂದಿನ ಪುಟಗಳಲ್ಲಿ ಅಲ್ಲಲ್ಲಿ ಹೇಳಿರುವ ಮಾರ್ಗಗಳನ್ನು ಸಂಕ್ಷೇಪವಾಗಿ ಸಿಂಹಾವಲೋಕನ ಮಾಡುವುದು ಅವಶ್ಯ. ಮೊದಲನೆಯದಾಗಿ ಭಕ್ತಿಯೋಗದ ವಿಶೇಷ ಗುರಿ ಆಧ್ಯಾತ್ಮಿಕ ಜಾಗೃತಿ( ಅರಿವು) ಆಗಿದ್ದು ಊಹಾಪೋಹಗಳಿಗೆ ಹೆಚ್ಚಿನ ಮಹತ್ವವನ್ನು ಕೊಡದೆ ನ್ಯಾಯಬದ್ಧವಾದ ಯುಕ್ತಿಗೆ ಅವಕಾಶ ಕೊಡುತ್ತದೆ. ಎರಡನೆಯದಾಗಿಹೃದಯ ವಿದ್ಯೆ ಇದರ ಪ್ರಮುಖ ವೃತ್ತಿ ಯಾಗಿದ್ದು ,ಇದರ ಮೂಲರಹಸ್ಯ ನಮ್ಮ ಭಾವನೆಗಳಿಗೆ ಒಂದು ಉದಾತ್ತವಾದ ಹೆಚ್ಚಿನ ದಿಕ್ಕನ್ನು ತೋರಿಸಿ ತೀವ್ರವಾದ ಆಧ್ಯಾತ್ಮಿಕ ವಿಶ್ವಪ್ರೇಮದ ಭಾವನೆಯಾಗಿ ಮಾರ್ಪಾಡು ಮಾಡುವುದಾಗಿದೆ. ಮೂರನೆಯದಾಗಿ ಗೌಣೀ ಭಕ್ತಿಯಲ್ಲಿ ಕೂಡ ಪ್ರತೀಕಗಳನ್ನು ಆಕಾರಗಳನ್ನು ಮತ್ತೆ ಬೇರೆಯಸಾಧನೆಗಳನ್ನು ಪೂಜೆಗಾಗಿ ಬಳಸಲು ಅವಕಾಶವಿದೆ. ನಾಲ್ಕನೆಯದಾಗಿ ಪ್ರಪಂಚಕ್ಕಿಂತ ಬಹಳ ಹೆಚ್ಚಿನ ಸಾರಭೂತವಾದ ಮತ್ತು ಪ್ರಪಂಚವಾಗಿ ಅಭಿವ್ಯಕ್ತವಾಗಿರುವ ಸ್ವಾಮಿಯನ್ನು ಅರಿಯಬೇಕು ಎಂಬುದಕ್ಕೆ ಸಹಾಯಕವಾಗಿಯೇ ಎಲ್ಲ ಭಕ್ತಿಯ ಸಾಧನೆಗಳನ್ನು ಅನುಸರಿಸಬೇಕು. ಕೊನೆಯದಾಗಿ ಭಕ್ತಿಯೋಗದಲ್ಲಿ ಪರಮಾತ್ಮನ ಸಗುಣ ಸಾಕಾರ ರೂಪವನ್ನು ವೈಯುಕ್ತಿಕವಾಗಿ ಆರಿಸಿಕೊಳ್ಳಬಹುದಾಗಿದೆ. ಜೀವಿಗೆ ಕ್ಲೇಶಗಳಿಂದ ಪಾರಾಗಲು ಪರಮಾತ್ಮನ ಅಥವಾ ಸಗುಣ ಸಾಕಾರ ದೇವರ ಸಹಾಯವನ್ನು ಪಡೆಯಲು ತಿಳಿಸಲಾಗಿದೆ. ನಿರ್ಗುಣ ನಿರಾಕಾರ ದೈವವನ್ನು ನಿಷೇಧಿಸದಿದ್ದರೂ ಸಗುಣ ಸಾಕಾರ ದೈವ ಪೂಜೆಗೆ ಸಹಜವಾಗಿ ಮತ್ತು ಸುಲಭವಾಗಿ ಲಭ್ಯ ಎನ್ನುವ ಕಾರಣದಿಂದ ಸಗುಣ ಸಾಕಾರ ದೈವಕ್ಕೆ ಆದ್ಯತೆ ಕೊಡಲಾಗಿದೆ. ಜ್ಞಾನಯೋಗ ಜೀವನದ ಸಮಸ್ಯೆಗಳಿಗೆ ಪರಿಹಾರವಾಗಿ ವೇದಾಂತದ ಮೂಲಕ ನಿರ್ಗುಣ ನಿರಾಕಾರ ಪರಮಾತ್ಮನ ಮಾರ್ಗವನ್ನು ಸೂಚಿಸುತ್ತದೆ. ಆದರೆ ಜನಸಾಮಾನ್ಯರು ವೇದಾಂತ ಮಾರ್ಗಾನುಸರಣೆಯನ್ನು ಮಾಡಲು ಅಸಮರ್ಥರು ಎನ್ನುವುದನ್ನು ಭಕ್ತಿಯೋಗ ಗುರುತಿಸಿದೆ. ಬಹಳಷ್ಟು ಮಂದಿ ವೇದಾಂತದ ಶಿಖರವನ್ನು ಮುಟ್ಟ ಬಲ್ಲೆ ಎಂಬ ಆತ್ಮ ವಿಶ್ವಾಸ ಉಳ್ಳವರು ಜಾರಿ

ಪತನವನ್ನು ಹೊಂದಿದ್ದಾರೆ. ಆದರೆ ಭಕ್ತಿಯೋಗವಾದರೋ ಸಹಜವಾದ ವಿನೀತವಾದ ಸಾಧುವಾದ ಮಾರ್ಗವನ್ನು ಕೊಡುತ್ತದೆ. "ಮಯ್ಯಾವೇಶ್ಯ ಮನೋ ಯೇ ಮಾಂ ನಿತ್ಯ ಯುಕ್ತಾ ಉಪಾಸತೆ, ಶ್ರದ್ಧಯ ಪರಯೋಪೇತಾಃ ತೇ ಮೇ ಯುಕ್ತತಮಾ ಮತಾಃ" ನನ್ನಲ್ಲಿಯೇಮನಸ್ಸನ್ನು ಇಟ್ಟು ಯಾರು ನಿತ್ಯಯುಕ್ತರಾಗಿ ಪರಮ ಶ್ರದ್ಧೆಯಿಂದೊಡಗೂಡಿ ಉಪಾಸನೆ ಮಾಡುತ್ತಿರುವರೋ ಅವರು ಯುಕ್ತತಮರೆಂದು ನನ್ನ ಮತ. 12: 2. ಮುಂದಿನ ಮೂರು ಶ್ಲೋಕಗಳಿಂದಲೂ ವ್ಯಕ್ತ ರೂಪದ ಪರಮಾತ್ಮನನ್ನು ಉಪಾಸನೆ ಮಾಡುವುದನ್ನು ಪ್ರತಿಪಾದಿಸುತ್ತದೆ. ಕೃಷ್ಣ ಹೇಳುತ್ತಾನೆ "ಯಾರು ಅನಿರ್ದೇಶ್ಯವೂ, ಅವ್ಯಕ್ತವೂ, ಸರ್ವಗತವೂ, ಅಚಿಂತ್ಯವೂ, ಕೂಟಸ್ಥವೂ, ನಿತ್ಯವೂ ಆಗಿರುವ ಅಕ್ಷರವನ್ನು, ಎಲ್ಲ ಇಂದ್ರಿಯ ಗ್ರಾಮಗಳನ್ನು ಸಂಯಮ ಮಾಡಿಕೊಂಡು ಸಮಬುದ್ಧಿಯ ದೃಢಚಿತ್ತ ಉಳ್ಳವರಾಗಿ ಉಪಾಸನೆ ಮಾಡುತ್ತಿರುವರೋ ಅವರು ನನ್ನನ್ನೇ ಸೇರುವರು". ಏಕೆಂದರೆ ಅವರು ಸರ್ವಹಿತದಲ್ಲಿ ರತರಾಗಿರುವರು. ಆದರೆ ಅವ್ಯಕ್ತದಲ್ಲಿ ಮನಸ್ಸನ್ನು ತೊಡಗಿಸಿರುವವರಿಗೆ ಕ್ಲೇಶವು ಅಧಿಕ. ದೇಹಿಗಳಿಗೆ ಈ ಮಾರ್ಗವನ್ನು ತುಳಿಯುವುದು ಅತಿ ಕಠಿಣ. ಈ ವಿವರಣೆಯು ನಿರ್ಗುಣ ನಿರಾಕಾರದ್ದಾದ್ದರಿಂದ, ಮೊದಲನೆಯ ವಿವರಣೆ ಸಗುಣ ಸಾಕಾರದ್ದು ಭಕ್ತಿಯೋಗದ ಭಗವಂತ. ಸಾಕಾರ ರೂಪದಲ್ಲಿ ಮಾತ್ರ ಭಕ್ತಿ ಬೆಳೆಯುತ್ತದೆ.

ಅವ್ಯಕ್ತವನ್ನು ಅರಸುವ ಮಾರ್ಗವು ಶರೀರಿಗಳಿಗೆ ಕಷ್ಟ ಎಂಬ ವಾಕ್ಯ ವಿಮರ್ಶೆಗೆ ಅವಕಾಶ ಕೊಡುತ್ತದೆ. ಎಲ್ಲ ಜೀವರೂ ದೇಹವನ್ನು ಹೊಂದಿರುವುದರಿಂದ ಯಾವ ಮನುಷ್ಯನೂ ಅವ್ಯಕ್ತವನ್ನು ಉಪಾಸನೆ ಮಾಡುವಂತಿಲ್ಲವೇ? ಈ ತೀರ್ಪು ಪ್ರತಿಕೂಲವಾಗಿರುವುದರಿಂದ ದೇಹಿ ಎನ್ನುವುದನ್ನು ದೇಹಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟಿರುವವರು ಎಂದು ಅರ್ಥೈಸಬೇಕು. ನಮ್ಮಲ್ಲಿ ಬಹಳಷ್ಟು ಜನರಿಗೆ ದೇಹದ ಕಲ್ಪನೆಯನ್ನು ತೊಲಗಿಸಿಕೊಳ್ಳುವುದು ಅಸಾಧ್ಯ. ದೇಹಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟಿರುವಂತಹ ಜನರಿಗೆ ಒಮ್ಮೆಲೆ ತೋರುತ್ತಿರುವ ಪ್ರಪಂಚ ದೇಹೇಂದ್ರಿಯ ಸಮೇತ ಸುಳ್ಳು ಅಸತ್ಯ ಎಂದು ಹೇಳುವ ವೇದಾಂತದ ಉನ್ನತ ಮಾರ್ಗಕ್ಕೆತಲುಪುವುದು ದುಃಸ್ಸಾಧ್ಯ. ಆದ್ದರಿಂದ ಸಾಮಾನ್ಯ ಜನರಿಗೆ ಸಗುಣ ಸಾಕಾರ ರೂಪವನ್ನು ಉಪಾಸನೆ ಮಾಡಿರೆಂದು ಸಲಹೆ ಕೊಡುವುದೇ ಸೂಕ್ತ.

ವ್ಯಕ್ತ ರೂಪವು ಕಡಿಮೆ ದರ್ಜೆಯದು, ಅದರ ಉಪಾಸನೆ ಸುಲಭ ಸಾಧ್ಯವಾದ್ದರಿಂದ ಕೇವಲ ಪ್ರಾರಂಭಿಕ ಹಂತದವರಿಗೆ ಎಂದು ಕಲ್ಪನೆ ಮಾಡುವುದು ಸರಿಯಲ್ಲ. ಇದು ಗೀತೆಯು ಈ ವಿಷಯಕ್ಕೆ ಮಾಡಿರುವ ಬೋಧನೆಗೆ ನಾವು ಎಸಗುವ ಅತಿ ಘೋರ ಅನ್ಯಾಯ. ಕೃಷ್ಣ ವ್ಯಕ್ತ ರೂಪವನ್ನು ಆರಾಧಿಸುವ ವ್ಯಕ್ತಿಗಳಬಗ್ಗೆ ಹೀಗೆ ಹೇಳುತ್ತಾನೆ. "ಮಹಾತ್ಮಾನಸ್ತು ಮಾಂ ಪಾರ್ಥ ದೈವೀಂ

ಪ್ರಕೃತಿಮಾಶ್ರಿತಾಃ, ಭಜನ್ತ್ಯನನ್ಯಮನಸೋ ಜ್ಞಾತ್ವಾ ಭೂತಾದಿಮವ್ಯಯಮ್". "ಸತತಂ ಕೀರ್ತಯನ್ತೋ ಮಾಂ ಯತನ್ತಶ್ಚ ದೃಢವ್ರತಾಃ, ನಮಸ್ಯಂನ್ತಶ್ಚ ಮಾಂ ಭಕ್ತ್ಯಾ ನಿತ್ಯಯುಕ್ತಾ ಉಪಾಸತೆ". ಮಹಾತ್ಮರು ದೈವೀ ಪ್ರಕೃತಿಯನ್ನು ಆಶ್ರಯಿಸಿದವರಾಗಿ ನನ್ನನ್ನು ಅವ್ಯಯನಾದ ಭೂತಾದಿಯೆಂದು ತಿಳಿದುಕೊಂಡು ಅನನ್ಯತೆಯಿಂದ ಪೂಜಿಸುವರು. ಯಾವಾಗಲೂ ನನ್ನನ್ನು ಕೀರ್ತನೆ ಮಾಡುತ್ತಲೂ ದೃಢವ್ರತರಾಗಿ ಭಕ್ತಿಯಿಂದ ನಮಸ್ಕರಿಸುತ್ತಲು ನಿತ್ಯಯುಕ್ತರಾಗಿ ಉಪಾಸನೆ ಮಾಡುತ್ತಾರೆ. 9 :13 ,14.

ಗೀತೆಯ ಕೊನೆಯಲ್ಲಿ ಎಲ್ಲ ಬೋಧನೆಗಳ ಉಪಸಂಹಾರ ಮಾಡುವಾಗ ಕೃಷ್ಣ. ಹೇಳುತ್ತಾನೆ" ಗುಹ್ಯತಮವಾದ ನನ್ನ ವಚನವನ್ನು ಪ್ರಿಯನಾದ ನಿನಗೆ ಹಿತವಾಗಲೆಂದು ಮತ್ತೊಮ್ಮೆ ಹೇಳುತ್ತೇನೆ. ನನ್ನಲ್ಲಿಯೇ ಮನಸ್ಸಿರುವವನಾಗಿರು, ನನ್ನ ಭಕ್ತನಾಗಿರು, ನನ್ನ ಯಾಗವನ್ನೇ ಮಾಡುತ್ತಿರು, ನನ್ನನ್ನು ನಮಸ್ಕರಿಸು, ನನ್ನನ್ನೇ ಸೇರುವೆ, ಸತ್ಯವಾಗಿ ಪ್ರತಿಜ್ಞೆ ಮಾಡುತ್ತೇನೆ ನನಗೆ ಪ್ರಿಯನಾಗಿರುತ್ತೀಯೆ. 8 :64, 65. ದೈವ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುವವನು ಸಗುಣ ಸಾಕಾರ ರೂಪವನ್ನು ಅತ್ಯುನ್ನತ ಗೌರವ ಭಾವದಿಂದ ಅರ್ಚಿಸಬೇಕು ಉಪಾಸಿಸಬೇಕು ಎಂಬುದಕ್ಕೆ ಗೀತೆಯು ಅತಿ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುತ್ತದೆ. ಇಲ್ಲಿ ಈ ವಿಷಯಕ್ಕೆ ಗೀತೆಯ ಇನ್ನೊಂದು ಶ್ಲೋಕವನ್ನು ಉದಾಹರಿಸುವ ನಮ್ಮ ಉತ್ಸುಕತೆಯನ್ನು ನಿಗ್ರಹಿಸಲಾಗುತ್ತಿಲ್ಲ. "ಎಲೈ ಪಾಂಡವನೇ, ನನಗಾಗಿ ಕರ್ಮವನ್ನು ಮಾಡುವವನು, ನನ್ನನ್ನೇ ಪರಮಗತಿ ಎಂದು ತಿಳಿದವನು, ನನ್ನ ಭಕ್ತನು, ಸಂಗವರ್ಜಿತನು, ಎಲ್ಲ ಭೂತಗಳಲ್ಲಿಯು ವೈರವಿಲ್ಲದವನು ನನ್ನನ್ನು ಬಂದು ಸೇರುತ್ತಾನೆ". 11: 55. ಸಂಪೂರ್ಣ ಗೀತೆಯ ಬೋಧನೆಯಾದ ಮುಕ್ತಿ ಮಾರ್ಗವನ್ನು ಇಲ್ಲಿ ಸಂಕ್ಷೇಪವಾಗಿ ಶಂಕರಾಚಾರ್ಯರು ಮೇಲಿನ ಶ್ಲೋಕದ ತಮ್ಮ ಭಾಷ್ಯದಲ್ಲಿ ಹೀಗೆ ಬರೆಯುತ್ತಾರೆ. ಮತ್ಕರ್ಮಕೃತು_ ನನಗಾಗಿ ಮಾಡುವ ಕರ್ಮವನ್ನು ಮಾಡುವವನು. ಆಳು ದಣಿಯ ಕರ್ಮವನ್ನು ಮಾಡುತ್ತಾನಾದರೂ ದಣಿಯೇ ತಾನು ಸತ್ತ ಬಳಿಕ ಸೇರಬೇಕಾದ ಪರಮಗತಿ ಎಂದು ಎಣಿಸಿರುವುದಿಲ್ಲ. ಆದರೆ ಇವನು ನನಗಾಗಿ ಕರ್ಮವನ್ನು ಮಾಡುವುದಲ್ಲದೆ ನನ್ನನ್ನೇ ಪರಮಗತಿ ಎಂದು ತಿಳಿದಿರುತ್ತಾನೆ, ಆದ್ದರಿಂದ ಮತ್ಪರಮನು. ನಾನೇ ಪರಮನು ಎಂದರೆ ಹೆಚ್ಚಿನ ಗತಿಯು ಯಾವನಿಗೋ ಅವನು ಮತ್ಪರಮನು. ನನ್ನನ್ನೇ ಎಲ್ಲ ಪ್ರಕಾರ ಗಳಿಂದಲೂ, ಸಂಪೂರ್ಣ ಮನಸ್ಸಿನಿಂದಲೂ ಸರ್ವೋತ್ಸಾಹದಿಂದಲೂ ಭಜಿಸುತ್ತಿರುವನಾದ್ದರಿಂದ ಮದ್ಭಕ್ತನು. ಧನಕನಕ, ಮಕ್ಕಳು, ಸ್ನೇಹಿತರು, ಹೆಂಡತಿ, ನೆಂಟರು, ಬಳಗ ಇವರಲ್ಲಿ ಸಂಗವಿಲ್ಲದವನು ಸಂಗವರ್ಜಿತನೂ. ನಿರ್ವೈರನು ಎಂದರೆ ಯಾವ ಪ್ರಾಣಿಗಳಲ್ಲಿಯೂ, ತನಗೆ ಅತ್ಯಂತ ಅಪಕಾರವನ್ನು ಮಾಡುವವರಲ್ಲಿಯು, ಶತ್ರುಭಾವವಿಲ್ಲದೆ

ಇರುವವನು. ಯಾರು ಇಂಥಾ ನನ್ನ ಭಕ್ತರೋ ಅವರು ನನ್ನನ್ನು ಹೊಂದುತ್ತಾರೆ. ನಾನೇ ಅವರಿಗೆ ಪರಮಗತಿಯು. ಇದೇ ನಿನಗೆ ನಾನು ಮಾಡಿರುವ ನಿನಗೆ ಬೇಕಾಗಿರುವ ಉಪದೇಶವು.

## ಭಕ್ತಿಯಿಂದ ದೊರೆಯುವ ಆಧ್ಯಾತ್ಮಿಕ ಸಾಕ್ಷಾತ್ಕಾರ

ಹೀಗೆ ಉಪಾಸನೆಯಲ್ಲಿ ತೊಡಗಿದ ಭಕ್ತನಿಗೆ ಸಾಕ್ಷಾತ್ಕಾರ ಎನ್ನುವುದು ಅತಿಸುಲಭ. " ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್, ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾನ್ತಿ ತೇ " "ತೇಷಾಮೇವಾನುಕಮ್ಪಾರ್ಥಮಹಮಜ್ಞಾನಜಂ ತಮಃ, ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ". 10:10,11 . ಸತತವಾಗಿ ಯುಕ್ತರಾಗಿ (ಸಮಾಧಾನ ಮನಸ್ಕರಾಗಿ) ಪ್ರೀತಿಪೂರ್ವಕವಾಗಿ ಭಜಿಸುತ್ತಿರುವ ಅವರಿಗೆ ಬುದ್ಧಿ ಯೋಗವನ್ನು ಕೊಡುವೆನು, ಅದರಿಂದ ಅವರು ನನ್ನನ್ನು ಸೇರುವರು.ಅವರ ಮೇಲೆ ಅನುಕಂಪೆಯನ್ನು ತೋರಿಸುವುದಕ್ಕಾಗಿ ನಾನು ಅವರ ಆತ್ಮಭಾವದಲ್ಲಿದ್ದುಕೊಂಡು, ಅಜ್ಞಾನದಿಂದ ಹುಟ್ಟಿರುವ ತಮಸ್ಸನ್ನು ಜ್ಞಾನದೀಪದಿಂದ ಬೆಳಗಿ ನಾಶಗೊಳಿಸುತ್ತೇನೆ. ಮನಸ್ಸಿಗೆ ಪರಮಾತ್ಮನ ಪರಿಚಯವಾದಾಗ ಹೃದಯ, ದಹರಾಕಾಶಸ್ಥ ತನಾದ ಸ್ವಾಮಿಯನ್ನುಹೊಂದಿ ಆನಂದಿಸುತ್ತದೆ ಎನ್ನುವ ಮಾತು ಸತ್ಯವಾಗುತ್ತದೆ. ಕೃಷ್ಣ ಹೇಳುತ್ತಾನೆ, "ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ವತಃ, ತತೋ ಮಾಂ ತತ್ವತೋ ಜ್ಞಾತ್ವಾ ವಿಶತೇ ತದನನ್ತರಮ್" 18 :55. ಭಕ್ತಿಯಿಂದ, ನಾನು ಎಷ್ಟು ಮತ್ತು ಯಾರಾಗಿರುವೆನೋ ಆ ನನ್ನನ್ನು ತತ್ವದಿಂದ ಗುರುತಿಸುತ್ತಾನೆ. ಅರಿತುಕೊಂಡ ನಂತರವೇ ನನ್ನನ್ನು ಸೇರುತ್ತಾನೆ. ಇದು ಪರಾಭಕ್ತಿ ಅಥವಾ ಪರಮ ಭಕ್ತಿಯನ್ನು ಹೊಂದಿದ ಭಕ್ತನ ಸ್ಥಿತಿ

## ಮಾನವೀಯ ಸಂಬಂಧಗಳ ರೂಪದಲ್ಲಿ ದೈವೀ ಪ್ರೇಮದ ಅಭಿವ್ಯಕ್ತಿ

ಭಕ್ತನ ಹೃದಯದಲ್ಲಿ ಜ್ವಲಿಸುತ್ತಿರುವ ದೈವೀ ಪ್ರೇಮಾಗ್ನಿಯನ್ನು ಮಾತುಗಳಿಂದ ವಿವರಿಸಲಾಗದು. ಆದರೂ ಸೂಚಕವಾಗಿ ಮನುಷ್ಯ ಸಂಬಂಧಗಳನ್ನು ಪ್ರೇಮಕ್ಕೆ ಹೋಲಿಕೆಯಾಗಿ ಕೊಡಲಾಗುತ್ತದೆ. ತಂದೇ ಮಗನನ್ನು, ಗೆಳೆಯ ತನ್ನ ಸಖನನ್ನು, ಪ್ರೇಮಿ ತನ್ನ ಪ್ರೇಮಿಕೆಯನ್ನು, ಕ್ಷಮಿಸುವಂತೆ ನನ್ನನ್ನು ಕ್ಷಮಿಸು ಓ ಸ್ವಾಮಿಯೇ ಎಂದು ಅರ್ಜುನ ಕೃಷ್ಣನನ್ನು ಪ್ರಾರ್ಥಿಸುತ್ತಾನೆ. ಎಲ್ಲ ಧರ್ಮಗಳಲ್ಲೂ ಪರಮಾತ್ಮನನ್ನು ತಂದೆ ಎಂದು ಸಂಬೋಧಿಸುವುದು ಸಾಮಾನ್ಯವಾಗಿದೆ. ಆದರೆ ಭಕ್ತನಿಗೆ ತನ್ನ ಭಗವಂತನ ಪ್ರೇಮವನ್ನು ಸೂಚಿಸಲು ಆತ್ಮೀಯ ಗೆಳೆಯನ ಪ್ರೇಮ ಕೂಡ ಕಡಿಮೆಯೆನಿಸುತ್ತದೆ. ತನ್ನ ದೈವೀ ಪ್ರೇಮವನ್ನು ಸೂಚಿಸಲು ಮಾನವ, ಮನುಷ್ಯಸಂಬಂಧದ

ಅನೇಕ ಮುಖಗಳನ್ನು ಬಳಸಿಕೊಳ್ಳುತ್ತಾನೆ. ತಂದೆ,ತಾಯಿ , ಅಜ್ಜ, ಗೆಳೆಯ, ಸ್ಥಿತಿಕರ್ತಾ, ಸೃಷ್ಟಿಕರ್ತಾ, ರಾಜ, ಸಂರಕ್ಷಕ, ಗುರು ಮುಂತಾದ ಅನೇಕ ಸಂಬಂಧಗಳಿಂದ ಭಗವಂತನ ಪ್ರೇಮವನ್ನು ಸೂಚಿಸಲಾಗಿದೆ. ಗೀತೆಯ 9 :17 ,18 ಹಾಗೂ 11:43 ರಲ್ಲಿ ಇದನ್ನು ನೋಡಬಹುದು. ಭಗವಂತನೆಡೆಗೆ ಭಕ್ತನ ತೀವ್ರ ಪ್ರೇಮವನ್ನು ವ್ಯಕ್ತಪಡಿಸಲು ಇವ್ಯಾವುವೂ ಸಂಪೂರ್ಣವಾಗಿ ಸಫಲವಾಗುವುದಿಲ್ಲ. ಈ ಸ್ಥಿತಿಯನ್ನು ಕೃಷ್ಣ ಈ ರೀತಿ ವಿವರಿಸುತ್ತಾನೆ. „ ಮಚ್ಚಿತ್ತಾ ಮದ್ಗತಪ್ರಾಣ ಬೋಧಯನ್ತಃ ಪರಸ್ಪರಮ್. ಕಥಯನ್ತಶ್ಚ ಮಾಂ ನಿತ್ಯಂ ತುಷ್ಯಂತಿ ಚ ರಮನ್ತಿ ಚ". 10:09. ನನ್ನಲ್ಲೇ ಮನಸ್ಸುಳ್ಳವರಾಗಿ ನನ್ನಲ್ಲೇ ಇಂದ್ರಿಯಗಳನ್ನು ತೊಡಗಿಸಿದವರಾಗಿ ಒಬ್ಬರಿಗೊಬ್ಬರು ಬೋಧಿಸುತ್ತಾ ನಿತ್ಯವೂ ತಿಳಿಯ ಹೇಳುತ್ತಾ ತೃಪ್ತರಾಗಿ ರಮಿಸುತ್ತಿರುವರು. ಹೀಗಾಗಿ ಸ್ವಾಮಿಗೆ ಗೌರವ , ಆದರ, ಅವನ ಉಪಸ್ಥಿತಿಯಲ್ಲಿ ಆನಂದ, ಅನುಪಸ್ಥಿತಿಯಲ್ಲಿ ದುಃಖ, ಪ್ರಾಪಂಚಿಕ ವಿಷಯೋಪಭೋಗಗಳಿಂದ ದೂರ, ಸಂಪೂರ್ಣ ಅವನ ಆಶ್ರಯದಲ್ಲಿ ಇರುವುದು, ಆತ್ಮ ಶರಣಾಗತಿ ಇವೆಲ್ಲವೂ ಭಕ್ತನ ಗುಣಲಕ್ಷಣಗಳು. ಭಕ್ತಿಯ ಪರಾಕಾಷ್ಠೆಯಲ್ಲಿ ಮನದುಂಬಿ ತಮ್ಮ ಭಾವನೆಗಳಿಗೆ ರೂಪ ನಾಮ ಕೊಡುವುದುಂಟು. ಭಗವಂತನ ಸಾಮಿಪ್ಯವನ್ನು ಬಹಳವಾಗಿ ಅನುಭವಿಸುತ್ತಾ ಸ್ವಾಮಿ, ದಣಿ, ತಂದೆ, ಸಖ ಹೆಚ್ಚೇನು ಹೇಳುವುದು ಆತ್ಮ ಎಂದು ಅವನನ್ನು ಕರೆಯುತ್ತಾರೆ. ನಾನು ನನ್ನ ದೇವರು ಒಂದೇ ಎಂದು ಬಹಳ ಆತ್ಮವಿಶ್ವಾಸದಿಂದ ಏಕತೆಯನ್ನುಅನುಭವಿಸುತ್ತಾ ಹೇಳುತ್ತಾರೆ.ಭಗವಂತನಿಂದ ಅವರು ಎಷ್ಟು ಆವರಿಸಲ್ಪಟ್ಟಿರುತ್ತಾರೆಂದರೆ ಸ್ವಲ್ಪವಾದರೂ ಅಗಲಿಕೆಯ ಬಗ್ಗೆ ಕೇಳಲಿಚ್ಛಿಸುವುದಿಲ್ಲ. ಈ ಅಭಿಪ್ರಾಯವನ್ನೇ ಕೃಷ್ಣ ಕೆಳಗಿನ ಶ್ಲೋಕದಿಂದ ದೃಢಪಡಿಸುತ್ತಾನೆ. "ಸಮೋऽಹಂ ಸರ್ವಭೂತೇಷು ನ ಮೆ ದ್ವೇಷ್ಯೋऽಸ್ತಿ ನ ಪ್ರಿಯ.ಏ ಭಜನ್ತಿ ತು ಮಾಂ ಭಕ್ತ್ಯಾ ಮಯಿ ತೇ ತೇಷುಚಾಪ್ಯಹಮ್". 09:29. ನಾನು ಸರ್ವಭೂತ ಗಳಲ್ಲಿಯೂ ಸಮನಾಗಿರುವೆನು. ನನಗೆ ದ್ವೇಷ್ಯನುಇಲ್ಲ, ಪ್ರಿಯನು ಇಲ್ಲ. ಆದರೆ ಯಾರೂ ನನ್ನನ್ನು ಭಕ್ತಿಯಿಂದ ಭಜಿಸುವರೋ ಅವರು ನನ್ನಲ್ಲಿಯೂ ನಾನು ಅವರಲ್ಲಿಯೂ ಇರುವೆವು. 7:18ರಲ್ಲಿ ಪರಮಾತ್ಮನು ಜ್ಞಾನಿ ಭಕ್ತನು ನನ್ನ ಆತ್ಮನೆಂದು ಹೇಳುತ್ತಾನೆ.

## ಪರಾ ಭಕ್ತಿಯ ಉದಾತ್ತ ಭಾವನೆ

ಪರಮಾನುಗ್ರಹದ ಈ ಸ್ಥಿತಿಯನ್ನು ತಲುಪಿದಾಗ ಎಲ್ಲ ಸಂಪ್ರದಾಯಗಳು ಆಚಾರ ವಿಚಾರಗಳು ನಿಷ್ಪ್ರಯೋಜಕವಾಗುತ್ತದೆ. ಹಾಗೆಯೇ ಶಾಸ್ತ್ರಗಳ ವಾಗ್ದಾನ, ಬೆದರಿಕೆಗಳು ತಮ್ಮ ಬಲವನ್ನು ಕಳೆದುಕೊಳ್ಳುತ್ತವೆ. ಮಾಯ ಪ್ರಕೃತಿಯ ತ್ರಿಗುಣಗಳಿಂದ ಆದ ದುಃಖವು ಮರೆಯಾಗಿ

ಶಾಶ್ವತವಾದ ಅಪರಿಮಿತ ಆನಂದ ಆ ಜಾಗವನ್ನು ಆವರಿಸುತ್ತದೆ. ಭಕ್ತ ಗೀತೆಯ ಜೊತೆ ತನ್ನ ದನಿಗೂಡಿಸುತ್ತಾನೆ. "ನಾದತ್ತೇ ಕಸ್ಯಚಿತ್ ಪಾಪಂ ನ ಚೈವ ಸುಕೃತಂ ವಿಭುಃ; ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯನ್ತಿ ಜನ್ತವಃ". 05:15 ವಿಭುವು ಯಾರೊಬ್ಬರಪಾಪವನ್ನಾಗಲಿ ಪುಣ್ಯವನ್ನಾಗಲಿ ತೆಗೆದುಕೊಳ್ಳುವುದಿಲ್ಲ. ಅಜ್ಞಾನದಿಂದ ಜ್ಞಾನವು ಮುಚ್ಚಲ್ಪಟ್ಟಿರುವುದು, ಆದ್ದರಿಂದ ಜೀವರುಗಳು ಮೋಹ ಗೊಳ್ಳುತ್ತಿರುವರು. ಹೀಗೆಂದ ಮಾತ್ರಕ್ಕೆ ಅಂತ ಭಕ್ತ ಶಾಸ್ತ್ರದ ಬಗ್ಗೆ ಲಕ್ಷ್ಯವಿಲ್ಲದ ಪ್ರಮತ್ತದುರಾಚಾರಿ ಸ್ವೇಚ್ಛಾಚಾರಿ ಎಂದು ನಿರ್ಧರಿಸಬಾರದು. ಇದು ಕೇವಲ ಭಕ್ತ ಜ್ಞಾನಿ ತನ್ನೆಲ್ಲ ಸ್ವಾರ್ಥಪರವಾದ ಆಸಕ್ತಿಗಳನ್ನು ಮೀರಿರುತ್ತಾನೆ ಎಂದು ಹೇಳುವುದಕ್ಕೆ ಬಂದಿರುವುದು. ಶಾಸ್ತ್ರಗಳ ಪ್ರತಿಬಂಧಕ್ಕಾಗಿಯಾಗಲಿ, ಪ್ರತಿಫಲಾಪೇಕ್ಷೆಯಿಂದಲಾಗಲಿ, ಶಿಕ್ಷೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಲಿ ಅಲ್ಲದೆ ಕೇವಲ ಸ್ವಭಾವದಿಂದಲೇ ಒಳ್ಳೆಯದನ್ನು ಮಾಡುತ್ತಾನೆ. ಅವನು ಉತ್ತಮನಾಗುವುದೆ ಶ್ರೇಷ್ಠ ಎಂಬ ಮಾತನ್ನು ಅರ್ಥ ಮಾಡಿಕೊಂಡಿರುತ್ತಾನೆ. ಈ ವಿಷಯವನ್ನು ವಿಮರ್ಶಿಸುವಾಗ ಪ್ರಸಿದ್ಧರಾದ ಸುರೇಶ್ವರಾಚಾರ್ಯರು ಹೀಗೆಹೇಳುತ್ತಾರೆ. "ನಯ ವಿನಯ ನಿಸ್ವಾರ್ಥ ಚಟುವಟಿಕೆಗಳು, ಸ್ವಾರ್ಥಪರ ಚಟುವಟಿಕೆಗಳಂತೆ (ಎರಡೂ ಅಜ್ಞಾನದ ಕಾರ್ಯ ವಾದ್ದರಿಂದ) ಜ್ಞಾನ ವಾದ ಕೂಡಲೇ ಮಾಯವಾಗುವುದೇ? ಎಂದರೆ ನಮ್ಮ ಉತ್ತರ ಇಲ್ಲವೆಂದಾಗುತ್ತದೆ. ಇದಕ್ಕೆ ಕಾರಣವೆಂದರೆ ನಿಸ್ವಾರ್ಥವಾದ ಚಟುವಟಿಕೆಗಳ ಕಟ್ಟಳೆಗೆ ವಿರುದ್ಧವಲ್ಲದ ಸ್ವಭಾವ ಪರಮಾತ್ಮನದಾಗಿರುವುದು. ಆದರೆ ಒಳ್ಳೆಯ ಗುಣಗಳ ನಾಶವಾಗದಿರುವಿಕೆ ಕೇವಲ ಈ ಕಟ್ಟಳೆಯಿಂದಲ್ಲ. ಮತ್ತೆ ಹೇಗೆ ಎಂದರೆ ಕೇಳಿ, ಯಾರಲ್ಲಿ ಆತ್ಮಜ್ಞಾನ ಉದಯಿಸಿದೆಯೋ, ಅವನಿಗೆ ದ್ವೇಷವಿಲ್ಲದಿರುವುದು ಮುಂತಾದ ಗುಣಗಳು ಸಹಜ ಸ್ವಭಾವವಾಗಿ ಬಿಡುತ್ತವೆ. ಗೀತೆಯ 12ನೇ ಅಧ್ಯಾಯದ ಹದಿಮೂರನೇ ಶ್ಲೋಕದಿಂದ 19ನೇ ಶ್ಲೋಕದವರೆಗೆ ಭಕ್ತನ ಲಕ್ಷಣಗಳನ್ನು ವಿವರಿಸುತ್ತಾ ತಿಳಿಸುತ್ತದೆ. ಪ್ರಜ್ಞಾಪೂರ್ವಕ ಪ್ರಯತ್ನವಿಲ್ಲದೆ ಸಹಜ ಸ್ವಭಾವವಾಗಿ ಈ ಗುಣಲಕ್ಷಣಗಳು ಜ್ಞಾನಿ ಭಕ್ತನಲ್ಲಿ ಇರುತ್ತವೆ.". ಇದೇ ಆಚಾರ್ಯರ 'ನೈಷ್ಕರ್ಮ್ಯಸಿದ್ಧಿ' ಗ್ರಂಥದ 4 :69 ರಲ್ಲಿ "ಈ ರೀತಿ ಆದರ್ಶ ಭಕ್ತ ಅಂದರೆ ಯಾರಿಗೆ ಒಳ್ಳೆಯದು ಮಾಡುವುದು ಸಹಜಸ್ವಭಾವವಾಗಿರುತ್ತದೋ ಅವನಿಗೆ ಸುಖವೋ ದುಃಖವೋ ಅವನ ಜೋಳಿಗೆಗೆ ಯಾವುದು ಬೀಳುತ್ತದೊ, ಜನರು ಒಪ್ಪಿಕೊಳ್ಳುತ್ತಾರೋ ನಿಂದಿಸುತ್ತಾರೊ, ಸ್ತುತಿಸುತ್ತಾರೊ ಯಾವುದು ಗಣ್ಯವಲ್ಲ.". ಹೊರಗಿನ ಪರಿಸರದ ಯಾವುದೇ ಬದಲಾವಣೆ ಇವನ ಸಮತ್ವವನ್ನು ಕೆಡಿಸಲಾರದು ಅವನು ಶಾಶ್ವತ ಆನಂದಸ್ರೋತದಲ್ಲಿ ಸ್ಥಿತನಾಗಿರುತ್ತಾನೆ. ಎಲ್ಲ ಪ್ರೇಮದ ಸಾರವು ಆನಂದವೇ ಎಂಬ ಪ್ರೇಮದ ಉದಾತ್ತತೆಯನ್ನು ಅರಿತಿರುತ್ತಾನೆ. ಅವನ ಅಪಾರವಾದ ಪ್ರೇಮ ಸಂಪೂರ್ಣ ವಿಶ್ವವೇ ಒಂದು ಪ್ರೇಮಸಾಗರ ಎಂಬ ಸತ್ಯದ ಮನವರಿಕೆಯಾಗಿರುತ್ತದೆ. ಎಲ್ಲ ಜೀವರಾಶಿಗಳು ಈ ಆನಂದಸಾಗರದ ಹಿರಿದಾದ ಇಲ್ಲವೇ ಕಿರಿದಾದ ಅಲೆಗಳೇ ಎಂದು ಗುರುತಿಸಿರುತ್ತಾನೆ. ತೈತ್ತಿರೀಯ 3:6 "ಆನನ್ದಾದ್ಧ್ಯೇವ ಖಲ್ವಿಮಾನಿ

ಭೂತಾನಿ ಜಾಯನ್ತೇ.ಆನನ್ದೇನ ಜಾತಾನಿ ಜೀವನ್ತಿ.ಆನನ್ದಂಪ್ರಯನ್ತ್ಯಭಿಸಂವಿಶನ್ತೀತಿ ." ಯಾರು ಈ ಆನಂದಸಾಗರದೊಡನೆ ಏಕಾತ್ಮತೆ ಮಾಡಿಕೊಳ್ಳುತ್ತಾನೊ ಅವನಲ್ಲಿ ಅತೃಪ್ತಿ ತಲ್ಲಣ ಇರಲು ಹೇಗೆ ಸಾಧ್ಯ?. ಈ ಉದಾತ್ತ ಮನುಷ್ಯ ನಿಜವಾದ ಯೋಗವನ್ನು ಅರಿತಿದ್ದಾನೆ ಎಂದು ಹೇಳಬಹುದು. ಏಕೆಂದರೆ" ಸಮತ್ವಂ ಯೋಗಮುಚ್ಯತೆ" ಸಮತ್ವವೇ ಯೋಗವೆಂದು ಹೇಳಲ್ಪಟ್ಟಿದೆ .

## ಭಕ್ತಿಯೋಗ ಜ್ಞಾನಯೋಗಗಳ ಸಂಬಂಧ

ಪರಾ ಭಕ್ತಿಯ ಹಂತದಲ್ಲಿ ಭಕ್ತಿಯೋಗ ಜ್ಞಾನಯೋಗ ಒಂದು ಬಿಂದುವಿನಲ್ಲಿ ಸೇರುತ್ತವೆ. ಹೊರಗಿನಿಂದ ಎರಡು ಬೇರೆಬೇರೆ ಎಂದು ತೋರಿದರು ಎರಡು ಯೋಗಗಳು ಪರಸ್ಪರ ಹೆಣೆದುಕೊಂಡಿದೆ. ಹಿಂದ್ದೇ ಇದನ್ನು ತೋರಿಸಲಾಗಿದೆ. ಪರಾ ಭಕ್ತಿಯ ಹಂತದಲ್ಲಿ ಮಾತ್ರ ಎರಡು ಒಂದಾಗುತ್ತದೆ. ಯಾವಾಗ ಜ್ಞಾನಯೋಗಿ ಜ್ಞಾನದ ಪಕ್ವತೆಯನ್ನು ಹೊಂದುತ್ತಾನೋ ಎಂದರೆ ಜ್ಞಾನನಿಷ್ಠನಾಗುತ್ತಾನೋ ಆಗ ಅವನ ನಿಷ್ಠೆಯನ್ನು ಪರಾ ಭಕ್ತಿಯಿಂದ ಬೇರ್ಪಡಿಸಲಾಗುವುದಿಲ್ಲ. 7: 17ರಲ್ಲಿ ಕೃಷ್ಣ ಜ್ಞಾನಿಯನ್ನು ತನ್ನ ಪರಮಭಕ್ತ ಎಂದು ಕರೆಯುತ್ತಾನೆ. ಜ್ಞಾನವು ತನ್ನನ್ನು ಪಕ್ವ ಮಾಡುವ ಸಾಧನಗಳೊಡನೆ ಸೇರಿ ವಿರೋಧಿ ಪ್ರಭಾವವಿಲ್ಲದಾದಾಗ ಪರಮಾತ್ಮನ ಪರಮಜ್ಞಾನವನ್ನು ಹೊಂದುತ್ತದೆ. ಇದನ್ನೇ ಜ್ಞಾನ ನಿಷ್ಠೆಯೆಂದು ಕರೆಯುತ್ತಾರೆ. ಈ ಪೂರ್ಣ ವಿಕಸಿತ ಜ್ಞಾನವೇ ಪರಾಭಕ್ತಿ. ಈ ಭಕ್ತಿಯನ್ನೇ" ಯತಾರ್ಥ ದೀಪಿಕಾ" ಎಂಬ ಭಗವದ್ಗೀತೆಯ ವಿಮರ್ಶೆಯಾದ ತನ್ನ ಕೃತಿಯಲ್ಲಿ ವಾಮನ ಪಂಡಿತ ಎಂಬ ಮಹಾರಾಷ್ಟ್ರದ ಅತಿ ಪ್ರಸಿದ್ಧ ಮಧ್ಯಕಾಲೀನ ಸಾಧು ಕವಿ ಅತಿ ವೈಭವೀಕರಿಸಿ ಸ್ತುತಿಸಿರುವುದು. ಗೌಣೀಭಕ್ತಿ ಬ್ರಹ್ಮ ಜ್ಞಾನಕ್ಕೆ ಕೊಂಡೊಯ್ದರೆ ಪರಾಭಕ್ತಿ ಬ್ರಹ್ಮನಿಷ್ಠೆ (ಜ್ಞಾನದ ಅಂತಿಮ ಪರಾಮರ್ಶೆಗೆ) ತಲುಪಿಸುತ್ತದೆ. ಜ್ಞಾನದ ಪರಿಪೂರ್ಣತೆಯೇ ಪರಾಭಕ್ತಿಯ ಕಾರ್ಯವೆಂದಾದಾಗ ಜ್ಞಾನಯೋಗದ ನಂತರ ಭಕ್ತಿಯೋಗಕ್ಕೆ ಕೊಟ್ಟಿರುವ ಸ್ಥಾನ ಸೂಕ್ತವಾಗಿದೆ.

__________&__________&_________

# ಧ್ಯಾನ ಯೋಗ

## ಅಧ್ಯಾತ್ಮ ಯೋಗ ಎಂದರೇನು?

ಕೆಲವರು ಭಾವಾವೇಶದಲ್ಲಿ ತಮಗೆ ದೃಶ್ಯವಾದ ಅಥವಾ ಶ್ರವ್ಯವಾದ ಹಲವು ಗ್ರಹಿಕೆಗಳನ್ನೇ, ಅನುಭವಗಳನ್ನೇ ಪರಮ ಸಿದ್ಧಾಂತವೆಂದು ಆಗ್ರಹಪೂರ್ವಕವಾಗಿ ಹೇಳುವುದು ಕಂಡು ಅಂತಹ ನಂಬಿಕೆಗಳಿಗೆ ಈ ಪದವನ್ನು ತಿರಸ್ಕಾರದಿಂದ ಬಳಸುವುದುಂಟು. ಇಲ್ಲಿ ಈ ಪದವನ್ನು ಧ್ಯಾನ ಎಂಬಪದಕ್ಕೆ ಪರ್ಯಾಯ ಪದವಾಗಿಯೇ ಬಳಸಲಾಗಿದೆ. ಈ ಪ್ರಪಂಚದಲ್ಲಿ ಹಲವರು ಸದಾ ಆಲೋಚನಾಪರರಾಗಿ ತರ್ಕಬದ್ಧ ವಾದಗಳ ಮೇಲೆ ಹೆಚ್ಚುಅವಲಂಬಿತರಾಗದೆ ನೈಜಸತ್ಯದ ಬಗೆಗೆ ನಂಬಿಕೆ ಯಾಗುವವರೆಗೂ ಪದೇಪದೇ ಅದೇ ಗುಂಗಿನಲ್ಲೇ, ಮನನದಲ್ಲೇ ಮುಳುಗಿರುವರು. ಇವರೇನು ತರ್ಕವನ್ನಾಗಲಿ, ಕರ್ಮವನ್ನಾಗಲಿ, ಅಥವಾ ವಿವೇಚನಾಶಕ್ತಿ ಇಲ್ಲದವರೆಂದಾಗಲಿ, ಮತ್ತೇನನ್ನು ಮಾಡದವರೆಂದೇನೂ ಅಲ್ಲ. ಆದರೆ ಆತ್ಮ ಚಿಂತನವೇ ಅವರ ಜೀವನದಲ್ಲಿ ಪ್ರಮುಖ ಮಾರ್ಗದರ್ಶಿ. ಅವರು ತಮ್ಮಲ್ಲಿ ಏನನ್ನು ಕಾಣುತ್ತಾರೋ ಅದರ ಬಗೆಗೆ ಆತ್ಮ ವಿಮರ್ಶೆಯಲ್ಲೂ ಮತ್ತು ಧ್ಯಾನಿಸುವುದರಲ್ಲೂ ಆಸಕ್ತಿ ಉಳ್ಳವರು. ಈ ರೀತಿಯ ಸ್ವಪರೀಕ್ಷಣ ಮತ್ತು ಆಲೋಚನಾ ಪರತೆಯನ್ನು ಧ್ಯಾನಯೋಗ ಅಥವಾ ಅಧ್ಯಾತ್ಮ ಯೋಗ ಎನ್ನಲಾಗಿದೆ. ಅಧ್ಯಾತ್ಮ ವಿದ್ಯೆ ಗುಪ್ತ ವಿದ್ಯೆ ರಹಸ್ಯ ವಿದ್ಯೆ ಅಲ್ಲ ಎನ್ನುವ ಮುನ್ನೆಚ್ಚರಿಕೆ ನೀಡಲಾಗಿದೆ. ಧ್ಯಾನ ಯೋಗವು ಯಾವುದೇ ಕಾರಣಕ್ಕೂ ಯಾವುದೇ ರಹಸ್ಯಕ್ಕೆ ಸೇರಿದ್ದಲ್ಲ. ಯಾವುದೇ ದೇವದೂತರು, ಚೈತನ್ಯಗಳು, ಭೂತಗಳು, ಅಥವಾ ಪಿಶಾಚಿಗಳೊಂದಿಗೆ ರಹಸ್ಯ ಸಂವಾದಕ್ಕಾಗಲೀ, ಹೊಕ್ಕು ಬಳಕೆಯನ್ನು ಮಾಡುವುದಕ್ಕಾಗಲೀ ಅಧ್ಯಾತ್ಮ ಯೋಗಕ್ಕೂ ಏನೇನು ಸಂಬಂಧವಿಲ್ಲ.ಧ್ಯಾನ ಯೋಗವು ಇವುಗಳ ಇರುವಿಕೆಯನ್ನು, ಇಲ್ಲದಿರುವಿಕೆಯನ್ನು,ಅಥವಾ ಮನುಷ್ಯರು ಅವುಗಳೊಡನೆ ವ್ಯವಹರಿಸುವುದರ ಸಾಧ್ಯತೆಗಳನ್ನು ಪುಷ್ಟೀಕರಿಸುವದನ್ನೋ ನಿರಾಕರಿಸುವುದನ್ನೋ ಮಾಡುವುದಿಲ್ಲ. ಇವುಗಳ ಪ್ರಪಂಚವು ಧ್ಯಾನ ಯೋಗದ ಪರಾಮರ್ಶೆಯ ಪರಿಮಿತಿಗೆ ಹೊರತಾದದ್ದು. ಸತ್ಯದೊಡನೆ ನೇರ ಅನುಭವವನ್ನುಪಡೆಯುವುದು ಸಾಧ್ಯ ಎನ್ನುವ ಮನಸ್ಸು ,ಮತ್ತು ಅಂತಹ ಒಂದು ಅನುಭವ ಪಡೆಯಲು ಶ್ರಮಿಸುವುದನ್ನು ವಿದೇಶಗಳಲ್ಲಿ ಅಧ್ಯಾತ್ಮ ಜ್ಞಾನ ಎನ್ನುವ ಪದದೊಡನೆ ಜೋಡಿಸುವುದು ಕಂಡುಬಂದಿದೆ. ಈ ಒಂದು ಅರ್ಥದಲ್ಲಿಯೇ ಧ್ಯಾನಯೋಗವನ್ನು ಅಧ್ಯಾತ್ಮಯೋಗ ಎಂಬ ಹೆಸರಿನಿಂದ ಕರೆಯಲಾಗಿದೆಯೇ ಹೊರತು ಏನಾದರೂ ರಹಸ್ಯಾರ್ಥದೊಡನೆ ಸಂಬಂಧಿಸಿದ್ದಲ್ಲ. ಇನ್ನೊಂದು ಅರ್ಥದಲ್ಲಿ ಧ್ಯಾನಯೋಗವು ಆತ್ಮಶೋಧನೆಯೊಡನೆ ಸಂಬಂಧಿಸಿದ್ದು. ವಿಚಿತ್ರವೆಂದರೆ ಮಾನವನಲ್ಲಿ ಬಹಳಷ್ಟು (ಹೆಚ್ಚಿನ ಪ್ರಮಾಣದವರಿಗೆ) ಆತ್ಮಶೋಧನೆ ರಹಸ್ಯವೆನಿಸಿದೆ.

ಅನೇಕರು ಹೊರಪ್ರಪಂಚವನ್ನು ಅರಿಯಲು ಉತ್ಸುಕತೆಯನ್ನೂ ಮತ್ತು ಒಲವನ್ನೂ ತೋರಿಸುತ್ತಾರೆ, ಆದರೆ ತಮ್ಮ ಬಗೆಗೆ ಏನನ್ನೂ ಅರಿಯದವರಾಗಿ ಬಾಳುತ್ತಾರೆ. ಇಂತಹವರಿಗೆ ಜ್ಞಾನಯೋಗದ ವಿಷಯವು ಎಂದೆಂದಿಗೂ ಅತಿ ರಹಸ್ಯ ವಿಷಯ ಆಗುತ್ತದೆ( ರಾಜಗುಹ್ಯಂ). ಕೇವಲ ಹೊರಗಿನ ವಿಚಾರದಲ್ಲಷ್ಟೇ ತೃಪ್ತರಾಗದೆ, ಇನ್ನೂ ಒಳಹೊಕ್ಕು ವಿಚಾರಿಸುವವರಿಗೆ ಧ್ಯಾನ ಯೋಗವು ತೆರೆದ ರಹಸ್ಯವಾಗಿದೆ. ಇಡೀ ಗೀತೆಯಲ್ಲಿ ಯಾವ ವಿಷಯದಲ್ಲೂ ಏನೂ ರಹಸ್ಯದ ಸೂಚನೆಯು ಇರುವುದಿಲ್ಲ.

## ತರ್ಕ ಮತ್ತು ಸಿದ್ಧಿ

ಕೆಲವರು ಧ್ಯಾನಯೋಗದ ಬಗೆಗೆ ವಿಚಾರ ಮಾಡುವಾಗ ಮೊತ್ತ ಮೊದಲಲ್ಲೇ ತೀವ್ರ ಕಷ್ಟವನ್ನು ಎದುರಿಸುತ್ತಾರೆ. ಎಲ್ಲ ತಿಳಿವು ತರ್ಕದ ಆಧಾರದ ಮೇಲೆ ನೆಲೆ ನಿಂತಿರುತ್ತದೆ ಎಂಬ ನಂಬಿಕೆಯಲ್ಲೇ ಬೆಳೆದುಬಂದ ಕೆಲವರು "ನಾನು ಈ ರೀತಿ ನಂಬಬಹುದು ಅಥವಾ ಯಾವುದೋ ಒಂದು ಸ್ಥಿತಿಯಲ್ಲಿ ಏನಾದರೊಂದು ಸಿದ್ಧಿಸಿಕೊಳ್ಳಬಹುದು , ಆದರೆ ನನ್ನ ಅನುಭವವೇ ಸತ್ಯ ಎನ್ನುವುದಕ್ಕೆ ಸಾಕ್ಷ್ಯವೇನು" ಎಂದು ತಮ್ಮನ್ನೇ ತಾವು ಪ್ರಶ್ನಿಸಿ ಕೊಳ್ಳುತ್ತಾರೆ. ಇದು ಒಂದು ಮುಖ್ಯ ವಿಷಯ ಮತ್ತು ಇದನ್ನು ನಿಶ್ಚಿತವಾಗಿ ನಿರ್ಧರಿಸಬೇಕು. ತಾರ್ಕಿಕರಿಗೂ ಮತ್ತು ಅಧ್ಯಾತ್ಮ ದರ್ಶನಕಾರರಿಗೂ ಈ ವಿಷಯದಲ್ಲಿ ಭಿನ್ನಾಭಿಪ್ರಾಯ ಇರುವುದು. ಯೋಗಿಗಳು ಯಾವುದೇ ಸಾಕ್ಷ್ಯವೂ ಇಲ್ಲದೆ ಕೇವಲ ಅನಿಸಿಕೆಗಳ ಮೇಲೆ ಅವಲಂಬಿಸಿ ದರ್ಶನ ಪಡೆಯುವರು, ಆದ್ದರಿಂದ ಸಾಕ್ಷ್ಯವು ಸಾಬೀತಾಗದ್ದರಿಂದ ಅದು ಕೇವಲ ಒಂದು ಅನಿಸಿಕೆ ಮಾತ್ರ ಎಂದು ಯೋಚಿಸುತ್ತಾರೆ. ಆದರೆ ಕೇವಲ ತರ್ಕದ ಆಧಾರವೇ ಸರಿ ಎಂದು ತಾರ್ಕಿಕರು ಹೇಳುವುದು ಎಷ್ಟು ಸರಿ ಎಂದು ಯೋಗಿಗಳು ಅನುಮಾನಿಸುತ್ತಾರೆ. ಈ ಒಂದು ವ್ಯತ್ಯಾಸವನ್ನು ನಿವಾರಿಸಲು ಕೆಳಗಿನದನ್ನು ಗಮನಿಸಬೇಕು. ಎಲ್ಲ ತರ್ಕವು ಹಿಂದಿನ ಅನುಭವದ ಮೇಲೆ ನಿಲ್ಲುತ್ತದೆ. ಯಾಕೆಂದರೆ ಈಗಾಗಲೇ ಸತ್ಯವೆಂದು ಸಿದ್ಧಪಡಿಸಲಾದ ವಿಷಯದ ಆಧಾರವಿಲ್ಲದೆ ತರ್ಕವು ಮುಂದುವರಿಯಲಾರದು ಮತ್ತು ತರ್ಕದ ಆಧಾರವು ಈಗಾಗಲೇ ಅನುಭವದ ಆಧಾರದ ಮೇಲೆ ಸತ್ಯವೆಂದು ಸಿದ್ಧಪಡಿಸಲಾದ ಅಥವಾ ಬೇರೆಯ ಆದಾರಗಳ ಮೇಲೆ ಸಿದ್ಧಪಡಿಸಲಾದವುಗಳ ಮೇಲೆ ಅವಲಂಬಿತವಾಗಿದೆ. ಆದ್ದರಿಂದ, ಮೊದಲು ವಿಷಯ ಭೋದೆಯಾಗಿ ನಂತರ ಕಾರಣಗಳು ಹೊಳೆಯುತ್ತದೆ ಎನ್ನುವುದನ್ನು ತಾರ್ಕಿಕರೂ ಒಪ್ಪಬೇಕು. ಯೋಗಿಗಳು ತಮ್ಮ ದರ್ಶನವನ್ನು ಮಿಕ್ಕವರೆಲ್ಲ ಒಪ್ಪಲೇಬೇಕೆಂದು ಆಗ್ರಹಿಸುವುದಕ್ಕೆ ಆಗುವುದಿಲ್ಲ. ಬೇರೆಯವರನ್ನು ಒಪ್ಪಿಸಬೇಕೆಂದರೆ , ಬೇರೆಯವರು ವಿಚಾರಿಸಿದಾಗ ಅವರಿಗೆ ಸೂಕ್ತ ಕಾರಣಗಳನ್ನು ಕೊಡುವುದು ಯೋಗಿಗೂ ಸಹಾ ಅಗತ್ಯ. ಕಾರಣವೆಂದರೆ, ಎಂತಹ ಸಿದ್ಧಿಯು ತರ್ಕವನ್ನು ವಿರೋಧಿಸಲಾರದು. ಸತ್ಯವನ್ನು ಸ್ಥಾಪಿಸಲು ಎಲ್ಲರೂ ಈ ಒಂದು

ಮಾರ್ಗವನ್ನೇ ಅವಲಂಭಿಸಿರುತ್ತಾರೆ. ಚಿತ್ತೈಕಾಗ್ರತೆಯಿಂದ, ಅವರು ಕಂಡ ಸತ್ಯದ ಅನುಭವವನ್ನು ಬೇರೆಯವರಿಗೆ ಒಪ್ಪಿಸಬೇಕಾದಲ್ಲಿ, ಅವರು ವಾದದಿಂದಲೋ ಅಥವಾ ಬೇರೆಯವರು ಒಪ್ಪುವಂತೆ ಹಲವು ರೀತಿಯಲ್ಲಿ ಸಲಹೆ ನೀಡುತ್ತಾರೆ, ಮತ್ತು ಈ ಸಲಹೆ-ಸೂಚನೆಗಳನ್ನು ಅನುಸರಿಸಿ ಇತರರು ಸತ್ಯದರ್ಶನ ಮಾಡುತ್ತಾರೆ. ಈ ಮಾರ್ಗದಲ್ಲಿ ಸತ್ಯದರ್ಶನ ಅತ್ಯುತ್ತಮ ಪುರಾವೆಯಾಗುತ್ತದೆಯೇ ಹೊರತು ಮತ್ತೊಂದಿಲ್ಲಾ, ಹಾಗಾದಮೇಲೆ ಬೇರೊಂದು ಸಾಕ್ಷ್ಯದ ಅಗತ್ಯವೂ ಇಲ್ಲ. ಆದರೆ ಸತ್ಯ ದರ್ಶನವು ತರ್ಕವನ್ನು ಮೀರಿದ್ದಲ್ಲ ಆದರೆ ತರ್ಕಕ್ಕೆ ಪೂರಕವೇ. ಅದು ತರ್ಕಕ್ಕಿಂತ ವಿಶಾಲ ಹರಹಿನದಾಗಿದ್ದು ತರ್ಕವನ್ನೂ ಒಳಗೊಂಡದ್ದಾಗಿದೆ. ನಿಜವಾದ ಸತ್ಯ ದರ್ಶನವೆಂದರೆ ಅದನ್ನು ಎಂತಹ ಸಂದರ್ಭದಲ್ಲೂ ವಿರೋಧಿಸಲಾಗದ್ದು. ಅಲ್ಲದೆ ಅದು ಸಮರ್ಥ ಹಾಗು ಇಚ್ಚೆಯುಳ್ಳ ಮತಿಯಿಂದ ಪರಾಂಬರಿಸಬಲ್ಲದ್ದು ಆಗಿರುವುದು. ಬೇರೆ ಯಾರಿಗೂ ಎಂದೆಂದಿಗೂ ಕಾಣಲಾಗದ ಸತ್ಯದರ್ಶನ ತಮಗೆ ಆಗಿದೆ ಎಂದು ಯಾರು ಘೋಷಿಸಲಾರರು. ಸತ್ಯದರ್ಶನದ ಸಿದ್ಧಾಂತವು ವಿಚಿತ್ರವೂ ಅಲ್ಲ ಅಥವಾ ವಿಲಕ್ಷಣವೂ ಅಲ್ಲ ಎನ್ನುವುದು ಸಂಕ್ಷಿಪ್ತ ಹೇಳಿಕೆ.ಎಲ್ಲಾ ಜ್ಞಾನವೂ ಕಟ್ಟಕಡೆಯದಾಗಿ ಸಾರ್ವತ್ರಿಕ ಅನುಭವದ ಆಧಾರದ ಮೇಲೆ ನಿಂತಿದೆ ಮತ್ತು ಸಾರ್ವತ್ರಿಕ ಅನುಭವವನ್ನು ವಿರೋಧಿಸುವುದು ಸತ್ಯವಲ್ಲ ಎಂದೇ ನಂಬಲಾಗಿದೆ.

## ದುಃಖದ ಮೂಲ ಕಾರಣವು ಇಂದ್ರಿಯ ಲೋಲುಪತೆ

---

ಅಂತಃಕರಣದ ಒಳಹೊಕ್ಕು ಸೂಕ್ಷ್ಮವಾಗಿ ತನ್ನನ್ನು ತಾನೇ ಪರೀಕ್ಷೆಗೆ ಒಳಪಡಿಸಿಕೊಳ್ಳುವ ಮಾನಸಿಕ ಗ್ರಹಣಶಕ್ತಿ ಸ್ಥಿತಿಯನ್ನು ಹೊಂದುವುದು ಧ್ಯಾನಯೋಗ ಎಂದು ಈಗಾಗಲೇ ತಿಳಿಸಲಾಗಿದೆ. ಈ ರೀತಿ ತನ್ನನ್ನು ತಾನು ಸ್ವಪರೀಕ್ಷಣೆಗೆ ಒಳಪಡಿಸುವ ಮುನ್ನ, ಬಹಿರ್ಮುಖರಾಗುವುದನ್ನು ನಿಲ್ಲಿಸಬೇಕು ಎನ್ನುವುದು ಸ್ಪಷ್ಟ. ಬಹಳಷ್ಟು ಜನರು ಯಾವಾಗಲೂ ಹೊರಗಿನ ವಸ್ತುಗಳಿಂದ ಆನಂದವನ್ನು ಪಡೆಯುವಲ್ಲಿ ಉದ್ಯುಕ್ತರಾಗಿರುವುದರಿಂದ ಧ್ಯಾನಯೋಗಕ್ಕೆ ಅನರ್ಹರು. ಅಂತಹವರಿಗೆ ಸಹಾಯ ಮಾಡಲು ಗೀತೆಯು ಅವರನ್ನು ಇಂದ್ರಿಯ ಲೋಲುಪತೆಯ ಬಗೆಗೆ ಹೀಗೆಂದು ಎಚ್ಚರಿಸುತ್ತದೆ."ಯೇ ಹಿ ಸಂಸ್ಪರ್ಶಜಾ ಭೋಗಾ ದುಃಖ ಯೋನಯ ಏವತೆ/ ಆದ್ಯಂತವಂತು ಕೌಂತೇಯ ನ ತೇಷು ರಮತೇ ಬುಧಃ//**V-22.**" ಎಲೆ ಕೌಂತೇಯನೆ, ಯಾವ ಭೋಗಗಳು ಸಂಸ್ಪರ್ಶದಿಂದ ಉಂಟಾಗುವವೋ ಅವು ದುಃಖ ಯೋನಿಗಳೇ ಆಗಿರುವುವು, ಆದ್ಯಂತ ಉಳ್ಳವುಗಳಾಗಿ ಇರುವುವು, ತಿಳಿದವನು ಅವುಗಳಲ್ಲಿ ರತನಾಗಿರುವುದಿಲ್ಲ.". ಇದು ಧ್ಯಾನಯೋಗದ ಬಹುದೊಡ್ಡ ಎಚ್ಚರಿಕೆ. ಹೊರಗಿನ ಪ್ರಪಂಚವು ಭವ್ಯವಾದುದು ಮತ್ತು ಆ ಭವ್ಯ ಪ್ರಪಂಚದ ವಿಷಯಗಳ ಇಂದ್ರಿಯಗಳ ಮೂಲಕವೇ ಜ್ಞಾತವಾಗಿರುವುದು. ಆದರೆ ಇಂದ್ರಿಯಗಳು ಏನನ್ನು ತಿಳಿಸುತ್ತದೆ. ಅವು ಹೊರಗಿನ ಪ್ರಪಂಚವು ಪ್ರತಿಕ್ಷಣವೂ ಬದಲಾಗುವುದನ್ನು ಮತ್ತು ಅವು ಅವಲಂಬನೆಗೆ ಅನರ್ಹವು ಎಂದು ತಿಳಿಸುತ್ತದೆ. ಇಂದ್ರಿಯಗಳು ಪ್ರಪಂಚವು

ಕೊಡಬಲ್ಲ ಎಲ್ಲ ಸುಖವನ್ನು ತಂದುಕೊಟ್ಟ ಮೇಲೆ" ನಾವು ನಿಮಗೆ ಇದಿಷ್ಟನ್ನು ಮಾತ್ರ ನೀಡಬಲ್ಲೆವು" ಎಂದು ಮುಕ್ತಾಯ ಮಾಡುವುವು. ಯಾರೊಬ್ಬರೂ, ಇಂದ್ರಿಯಗಳ ಏಕತಾನದ ಸುಖವನ್ನು ಪದೇಪದೇ ಬಯಸುವವರೂ ಸಹ ಒಂದಿಲ್ಲೊಂದು ದಿನ( ಅತಿ ಶೀಘ್ರದಲ್ಲಿ) ಅದರ ಬಗೆಗೆ ನಿರಾಸೆ ಹೊಂದುತ್ತಾರೆ .ಇಂದ್ರಿಯಗಳೇ ಎಂದಿಗೂ ತಮ್ಮ ಪಟುತ್ವದಿಂದ ಮುಂದುವರೆಯಲಾರವು. ಇಂದ್ರಿಯಗಳ ಬಲದ ಕಾಲಾವಧಿಯು ಅವುಗಳು ತಂದುಕೊಡುವ ಸುಖಕ್ಕೆ ವಿಲೋಮವಾಗಿರುತ್ತವೆ. ಸ್ವತಹ ತಾವೇ ದುರ್ಬಲಗೊಳ್ಳುವ ಇಂದ್ರಿಯಗಳಿಗೂ ಮತ್ತು ಸತತ ಬದಲಾವಣೆ ಹೊಂದುವ ಹೊರಗಿನ ವಿಷಯ ವಸ್ತುಗಳಿಗೂ ಇರುವ ಒಂದಾನೊಂದು ಸಂಬಂಧದ ಮೇಲೆ ಹೊರ ವಿಷಯಸುಖ ಅವಲಂಬಿತವಾಗಿದೆ ಎನ್ನುವುದೇ ,ಯಾವುದೇ ಬುದ್ಧಿವಂತ ಮನುಷ್ಯನು ಹೊರವಿಷಯ ಸಂತೋಷ ಪಡೆಯದೇ ಇರಲು ಸಾಕು. ಈ ರೀತಿಯಾಗಿ ಇಂದ್ರಿಯ ಸುಖವೂ ಕೇವಲ ಅಶಾಶ್ವತವಷ್ಟೇ ಅಲ್ಲ , ಅದು ನಿರಾಶಾದಾಯಕ, ಅದು ನಿಜವಾಗಿಯೂ ದುಃಖಹೇತುವಷ್ಟೇ ಅಲ್ಲದೆ ಸಂಗವನ್ನು ಉಂಟುಮಾಡುತ್ತದೆ. ಇಂದ್ರಿಯ ಸುಖದ ಪ್ರಾಪ್ತಿಯು ಆದಾಗಲೆಲ್ಲಾ ಇನ್ನಷ್ಟು ಇಂದ್ರಿಯ ಸುಖಕ್ಕೆ ಹಾತೊರೆಯುತ್ತಾ ನಮ್ಮನ್ನು ನಾವೇ ದುಃಖಕ್ಕೆ ಈಡು ಮಾಡಿಕೊಳ್ಳುವೆವು. ಸುಖಪ್ರಾಪ್ತಿಯಾಗದಿದ್ದರೆ, ಇನ್ನಷ್ಟು ಹೆಚ್ಚು ನಿರಾಶರಾಗುವೆವು. ಇಂದ್ರಿಯ ಸುಖದ ಟೊಳ್ಳುತನ ತಿಳಿದವರೂ ಮತ್ತೆ ಇಂದ್ರಿಯ ಸುಖದ ಬಗೆಗೆ ವಿವೇಕದಿಂದ ವಿಮುಖರಾದವರೂ ,ಆದರೆ ಸಂತೋಷವನ್ನು ಸದಾ ಬಯಸುವವರು ಸ್ವಾಭಾವಿಕವಾಗಿಯೇ ಅಲ್ಲಿ ಏನನ್ನು ಪಡೆಯಬಲ್ಲೆನೆಂದು ಅಂತರ್ಮುಖರಾಗಿ ಹುಡುಕುವರು." ಪರಾಂಚಿಖಾನಿ ವ್ಯತೃಣಾತ್/, ಸ್ವಯಂಭೂಸ್ತಸ್ಮಾತ್ ಪಶ್ಯಂತಿ ನಾಂತರಾತ್ಮನ್ ಕಶ್ಚಿಧೀರಃ ಷ್ವೇ ಪ್ರತ್ಯಗಾತ್ಮಾನಮೈಕ್ಷದಾವೃತ್ತ ಚಕ್ಷುಃ ಅಮೃತ ತ್ವಮಿಚ್ಛನ್// ." ಸ್ವಯಂಭುವು ಇಂದ್ರಿಗಳನ್ನು ಹೊರಮುಖವನ್ನಾಗಿ ಮಾಡಿದ್ದರಿಂದ, ಮನುಷ್ಯನು ಹೊರದೃಷ್ಟಿಯುಳ್ಳವನಾದನು, ಆದರೆ ಒಳದೃಷ್ಟಿಯವನಾಗಲಿಲ್ಲ. ಬಹಳ ಅಪರೂಪಕ್ಕೊಮ್ಮೆ ಸಿಕ್ಕುವ ಅಮೃತತ್ವವನ್ನು ಬಯಸುವ ಧೀರನು ತನ್ನ ಇಂದ್ರಿಯಗಳನ್ನು ಒಳಮುಖವಾಗಿ ತಿರುಗಿಸಿಕೊಂಡು ತನ್ನೊಳಗನ್ನು ಪರೀಕ್ಷಿಸಿಕೊಳ್ಳುವನು". ಈ ರೀತಿ ವಿವೇಕಿಯಾದ ಯಾವ ಮನುಷ್ಯನು ತನ್ನ ಆಂತರಿಕ ಸ್ವಭಾವವನ್ನು ಗಮನಿಸಿ ಅದರ ನಿಯಮಗಳನ್ನು ಸರ್ವಸಾಮಾನ್ಯಗೊಳಿಸ ಬಯಸುತ್ತಾನೋ ಅವನೇ ಧ್ಯಾನಯೋಗದ ಅನ್ವೇಷಕನಾಗಲು ಯೋಗ್ಯ.

## <u>ಆತ್ಮ ಪರೀಕ್ಷಣದ ಉಪಯೋಗ</u>

---

ಈ ರೀತಿಯ ಪರಿಶೀಲನೆ ಅಥವಾ ಅಭ್ಯಾಸದ ಉಪಯೋಗಗಳೇನು? ಪರಿಶೀಲನೆಯಿಂದ ಬರಬಹುದಾದ ಉತ್ತಮ ಪ್ರತಿಪಲ ಎಂದರೆ ಜ್ಞಾನವಾಗುವುದೊಂದೇ ಹೊರತು ಇದರ ಉಪಯೋಗದ ಬಗೆಗೆ ಯಾವುದೇ ಪ್ರಶ್ನೆಗಳಿಲ್ಲ. ಜ್ಞಾನವೆಂಬುದರ ಹೊರತು ಅಜ್ಞಾನವೆಂಬ

ನಷ್ಟವನ್ನು ಕಟ್ಟಿಕೊಡಲು ಯಾವುದೇ ಲಾಭದಿಂದ ಸಾಧ್ಯವಿಲ್ಲ. ಇದಲ್ಲದೆ ಇಲ್ಲಿ ಮತ್ತೊಂದು ಉಪಯೋಗವೂ ಇದೆ. " ಬಾಹ್ಯ ಸ್ಪರ್ಶೇಷ್ವಸಕ್ತಾತ್ಮ ವಿನ್ದತ್ಯಾತ್ಮನಿ ಯತ್ ಸುಖಂ/ ಸಬ್ರಹ್ಮ ಯೋಗಯುಕ್ತಾತ್ಮ ಸುಖಮಕ್ಷಯ್ಯಮಶ್ನುತೇ/"(5=21)." ಬಾಹ್ಯ ಸ್ಪರ್ಶಗಳಲ್ಲಿ  ಅಸಕ್ತಾತ್ಮನಾಗಿ ಸುಖವೆಂಬುದು  ಯಾವುದೊ ಅದನ್ನು  ಆತ್ಮನಲ್ಲಿಯೇ  ಪಡೆದುಕೊಳ್ಳುತ್ತಾನೆ. ಬ್ರಹ್ಮ ಯೋಗದಿಂದ ಕೂಡಿದ ಆತ್ಮವುಳ್ಳಾತನು ಅಕ್ಷಯವಾದ ಸುಖವನ್ನು ಹೊಂದುತ್ತಾನೆ". ಎಲ್ಲ ದುಃಖವು ಭಯದಿಂದಲೇ ಬಂದದ್ದು. ಇಂದ್ರಿಯಗಳ ಮೇಲೆ ಅವಲಂಬಿತರಾದಾಗ ನಮ್ಮ ಭಯಕ್ಕೆ ಕೊನೆಯಿಲ್ಲ. ಮೊತ್ತಮೊದಲನೆಯದಾಗಿ ವಿಷಯ ಸುಖವನ್ನು ಕೊಡುವ ವಸ್ತುಗಳು ತಾವೇ ಹಾಳಾಗಬಹುದು ಅಥವಾ ಅವು ಕಳೆದು ಹೋಗಬಹುದು ಅಥವಾ ಅದರ ಸ್ವಭಾವವೇ ಮಾರ್ಪಟ್ಟು ಅವು ದ್ವೇಷದ ವಸ್ತುಗಳಾಗಿ ಪರಿವರ್ತಿತವಾಗಬಲ್ಲದು  ಎಂಬ ಭಯವೇ ಇರುವುದು. ಯಾವಾಗಲೂ ಮಾರ್ಪಾಡಾಗುವ ಈ ವಿಷಯ ವಸ್ತುಗಳ ಮೇಲೆ ಅವಲಂಬನೆ ಸಾಧ್ಯವಿಲ್ಲಾ ಅದಲ್ಲದೆ, ವಿಷಯೇಂದ್ರಿಯಗಳು ತಾವೇ  ಎಷ್ಟರಮಟ್ಟಿಗೆ ಭ್ರಾಂತಿಯನ್ನುಂಟುಮಾಡಬಲ್ಲವೆಂದರೆ ಅವು ರೋಗಗ್ರಸ್ತವಾಗಿ ವಸ್ತುವಿನ ಬಗೆಗೆ ಸುಳ್ಳು ಅರಿವನ್ನುಂಟು ಮಾಡಬಲ್ಲವು ಅಥವಾ ತಮ್ಮ ಅರಿವನ್ನು ಕೊಡುವ ಶಕ್ತಿಯನ್ನು ಕಳೆದುಕೊಳ್ಳಬಹುದು. ಅಭಾವದಿಂದ  (ಇಲ್ಲದಿರುವಿಕೆಯಿಂದ)ಉಂಟಾದ ಮತ್ತು ಪ್ರಸ್ತುತ ಹಂತಕ್ಕೆ ಬೆಳವಣಿಗೆಯಾದ ಇಂದ್ರಿಯಗಳು ಆಶ್ರಯಿಸಲು, ನಂಬಲು ಅರ್ಹವಲ್ಲ ದ್ದಾಗಿದೆ. ಕಾಲಾಂತರದಲ್ಲಿ ಅವು ಅಭಾವದಲ್ಲಿ ಲೀನವಾಗುತ್ತದೆ. ಆದರೆಬುದ್ಧಿಯೋ "ಇಂದ್ರಿಯಾಣಾಂ ಹಿ ಚರತಾಂ ಯನ್ಮsನೋನುವಿಧೀಯತೆ ತದಸ್ಯ ಪ್ರಜ್ಞಾಂ ವಾಯುರ್ನಾವಮಿವಾಂಬಸಿ"೨-೬೭. ಸಂಚರಿಸುತ್ತಿರುವ ಇಂದ್ರಿಯಗಳ ಹಿಂದೆ ಮನಸ್ಸನ್ನು ಬಿಡುವುದು ಎಂಬುದಿದೆಯಲ್ಲ, ಅದು ಗಾಳಿಯು ನೀರಿನಲ್ಲಿರುವ  ಹಡಗನ್ನು ಒಯ್ಯುವಂತೆ ಈತನ ಪ್ರಜ್ಞೆಯನ್ನು ಕೊಂಡೊಯ್ಯುವುದು.

ಕ್ಷಣಭಂಗುರವಾದ ಮನಸ್ಸು, ಮಾರ್ಪಡುತ್ತಲೇ ಇರುವ ಇಂದ್ರಿಯಗಳು ಮತ್ತು ಅವುಗಳ ವಿಷಯಗಳ ಮೇಲೆ ಅವಲಂಬಿತವಾಗಿರುವುದರಿಂದ, ಇಂತಹ ಮನಸ್ಸಿನಮೇಲೆ ಅವಲಂಬಿತವಾದ ಮನಷ್ಯನ ಭೀತಿಗಳಿಗೂ  ದುಃಖಕ್ಕೂ ಕೊನೆಯೇ ಇಲ್ಲ. ಲೌಕಿಕ ಮನುಷ್ಯರು ನಿರಾಶೆ ಹಾಗೂ ಆಪತ್ತಿನ ನಿವಾರಣೆಯಷ್ಟನ್ನೇ  ಸಂತೋಷಪ್ರದ ಎಂದು ತಿಳಿಯುವರು. ಇದು ಕೇವಲ ಹುಲಿಯನ್ನು ತಪ್ಪಿಸಿಕೊಳ್ಳುವುದಕ್ಕೆ ನದಿಗೆ ಹಾರಿದಂತೆ. ಲೌಕಿಕ ಮನುಷ್ಯನು ನಿರಂತರ ಒಂದು ಕ್ಲೇಶದಿಂದ ಮತ್ತೊಂದು ಕ್ಲೇಶದೆಡೆಗೆ ಪಯಣಿಸುವಲ್ಲಿ ನಿಜವಾದ ಸಂತೋಷವನ್ನು ಅನುಭವಿಸಲು ಸಮಯವೇ ಇಲ್ಲದಾಗುತ್ತದೆ.  ನಿಜವಾದ ಸಂತೋಷವು ಏನೆಂಬುದನ್ನು ಅರಿಯಲು ಪ್ರತಿಯೊಬ್ಬನು ತನ್ನ ಆಂತರ್ಯದೆಡೆಗೆ ಮುಖ ಮಾಡಬೇಕು. ನಾವು ಸ್ವಚಿಂತನೆಯಿಂದ  ನಮ್ಮಲ್ಲೇ ಪೂರ್ಣವಾದುದು, ಅಮರವಾದುದು ಇದೆ ಎಂದು ತಿಳಿದಾಗಲೇ ಅತಿಹೆಚ್ಚಿನ ಸಂತೋಷವನ್ನು ಅನುಭವಿಸಬಲ್ಲೆವು. ಹಾಗಾದಲ್ಲಿ ಸಾವಿನ ಹೆದರಿಕೆ ಮತ್ತು ಕ್ಷುಲ್ಲಕ ಆಸೆಗಳಿಂದ ಮುಕ್ತಿ ಪಡೆಯಬಹುದು. ಹಾಗಾದಾಗಲೇ

ಜೀವನವು ಸಹನೀಯ ಮತ್ತು ಸಂತೋಷಜನಕವಾಗುವುದು. ಹೀಗೆ ಕ್ಲೇಷಗಳಿಂದ ಬಿಡುಗಡೆ ಮತ್ತು ಖಚಿತವಾಗಿ ಪರಮ ಸಂತೋಷವನ್ನು ಕಾಣಲು ದಾರಿದೀವಿಗೆಯಾಗುವುದೇ ಧ್ಯಾನಯೋಗದ ಉಪಯುಕ್ತತೆ.

## ಲೌಕಿಕ ಮನಸ್ಸಿನ ಶುದ್ಧೀಕರಣದ ಅಗತ್ಯ

ಸಾಧಾರಣ ಸ್ಥಿತಿಯ ಮನಸ್ಸು ಧ್ಯಾನಯೋಗವನ್ನು ಅಳವಡಿಸಿಕೊಳ್ಳಲು ಅಶಕ್ತವಾಗಿದೆ. ಹೊರಗಿನ ಮಾಲಿನ್ಯದಿಂದ ಚಿತ್ತದ ಶುದ್ಧಿಯು ಮಂಕಾಗಿದೆ. ಆಂತರಿಕ ಪ್ರಪಂಚದಲ್ಲಿನ ಸೂಕ್ಷ್ಮತೆಗಳು ಮಲಿನತೆಯಿಂದ ಮಂಕಾದ ಚಿತ್ತಕ್ಕೆ ಗೋಚರವಾಗುವುದಿಲ್ಲ . ಮನುಷ್ಯನು ಮುಖ್ಯವಾಗಿ ತನ್ನ ಕುಂದುಗಳಿಂದ ಮಂಕಾಗುತ್ತಾನೆ. ಲೌಕಿಕರ ಚಿತ್ತವು ಮಂಕಾಗುವ ಕ್ರಿಯೆಯನ್ನು ಯೋಗವಾಸಿಷ್ಠ ವು ಹೀಗೆಂದು ವಿವರಿಸುತ್ತದೆ." ತಾನಲ್ಲದ್ದನ್ನು ತಾನು ಎಂದು ತಿಳಿಯುವುದರಿಂದ, ಸತತವಾಗಿ ದೇಹದ ಬಗೆಯ ಚಿಂತನೆಯಿಂದ, ಹೆಂಡತಿ ಮಕ್ಕಳು ಮತ್ತು ಇತರ ಬಂಧುಗಳ ಮೇಲೆ ಮಿತಿಮೀರಿದ ಮಮತೆಯಿಂದ ಚಿತ್ತವು ಮಂಕಾಗುತ್ತದೆ, ಅಹಂಕಾರಕ್ಕೆ ಆಸ್ಪದ ನೀಡುವುದರಿಂದ, ಮಮತೆ ಎಂಬ ಕುಯೋಚನೆಗಳಿಗೆ ಕಡಿವಾಣ ಹಾಕದೆ ಇರುವುದರಿಂದ, ಮತ್ತು ವಸ್ತುಗಳ ಮೇಲೆ ತನ್ನ ಆಧಿಪತ್ಯವನ್ನು ಸಾಧಿಸುವ ಬಗೆಗೆ ಸತತ ಚಿಂತನೆ ಮಾಡುವುದರಿಂದ ಚಿತ್ತವು ಮಂಕಾಗುತ್ತದೆ. ಚಿತ್ತದ ಸ್ವಭಾವವೇ ಹೊರಹರಿವಿನದಾದ್ದರಿಂದ, ಅದು ಸುಲಭವಾಗಿ ಹೊರಗೆ ಹರಿದು ಹೊರಗಿನ ವಿಷಯಗಳ ಬಗೆಗೆ ಆಸಕ್ತಿ ತಳೆಯುವುದು ಸುಲಭ. ಆದರೆ ಅದು ಹಿಂತಿರುಗಿ ತನ್ನನ್ನು ಪರೀಕ್ಷಿಸಿಕೊಳ್ಳುವುದು ಅತ್ಯಂತ ಕ್ಲಿಷ್ಟವಾಗುತ್ತದೆ. ಅದು ಚಂಚಲವಾದ್ದರಿಂದ ತನ್ನ ಬಗೆಗೆ ಕೇಂದ್ರೀಕರಿಸುವಂತೆ ಮಾಡಲಾಗದು." ಚಂಚಲಂ ಹಿ ಮನಃ ಕೃಷ್ಣ ಪ್ರಮಾಥೀ ಬಲವದ್ ದೃಢಂ/ ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಂ//"**(6-34).**" ಕೃಷ್ಣನೇ ಮನಸ್ಸು ಚಂಚಲವಾದುದು , ಯಾತನೆಯನ್ನು ಕೊಡತಕ್ಕದ್ದು ಬಲವಾದದ್ದು ಮತ್ತು ದೃಢವಾದದ್ದು. ಅದರ ನಿಗ್ರಹವು ವಾಯುವಿನ ನಿಗ್ರಹದಂತೆ, ಬಹಳ ಕಷ್ಟದಿಂದ ಮಾಡಬೇಕಾದ್ದು ಎಂದು ನಾನು ತಿಳಿಯುತ್ತೇನೆ".ಆದ್ದರಿಂದಈ ಮನಸ್ಸನ್ನು ಸ್ವಪರೀಕ್ಷಣೆಗ ಯೋಗ್ಯಗೊಳಿಸಬೇಕಾದರೆ, ಇದನ್ನು ಸಂಪೂರ್ಣ ಶುದ್ಧೀಕರಣ ಕ್ರಿಯೆಗೆ ಒಳಪಡಿಸಬೇಕಾದದ್ದಲ್ಲದೆ ಅದರ ಕೇಂದ್ರೀಕರಿಸಬಲ್ಲ ಶಕ್ತಿಯಷ್ಟನ್ನು ತನ್ನ ಮೇಲೆ ವಿನಿಯೋಗ ಗೊಳಿಸುವಂತೆ ಮಾಡಬೇಕು. ಈ ಎರಡೂ ಕ್ರಿಯೆಗಳು ಧ್ಯಾನಯೋಗದ ಪ್ರಮುಖ ಭಾಗವಾಗುವುದು.

ಪ್ರಕೃತಿಯಲ್ಲಿ ಮಿಕ್ಕೆಲ್ಲೆಡೆ ಇದ್ದಂತೆಯೇ ಮಾನವ ಚಿತ್ತವು ಸಹ ಸತ್ವ ರಜ ಹಾಗೂ ತಮೋ ಗುಣಗಳಿಂದ ಕೂಡಿದೆ. ಮನಸ್ಸು ಸತ್ವಗುಣದಿಂದ ಆಗಿದ್ದು ರಜ ಹಾಗೂ ತಮೋಗುಣಗಳು ಕೇವಲ

ಆಕಸ್ಮಿಕ ಅಥವಾ ಊರುಗೋಲುಗಳು. ರಜೋಗುಣ ಚಿತ್ತದ ಅಸ್ಥಿರತೆಗೆ ಮೂಲವಾದರೆ, ತಮೋಗುಣವು ಕದಡುವಿಕೆಗೂ  ಮಂಕುತನಕ್ಕೂ  ಕಾರಣವು. ಹೊರಗಿನಿಂದ ಹೊರೆಸಲ್ಪಟ್ಟ ರಜೊ ಮತ್ತು ತಮೋಗುಣಗಳನ್ನು ತೆಗೆದಂತೆಲ್ಲ,  ಚಿತ್ತವು  ತನ್ನ ಸ್ವಾಭಾವಿಕವಾದ  ಪರಿಶುದ್ಧತೆಯೆಡೆಗೆ ಮರಳುತ್ತದೆ ಮತ್ತು ಅದು ಹೆಚ್ಚು ಸತ್ವಯುತವಾದಂತೆ, ಸರಿಯಾದ  ಜ್ಞಾನದಿಂದ ಬೆಳಗ ತೊಡಗುತ್ತದೆ. ಈ ರೀತಿ ರಜೊ ಮತ್ತು ತಮೋಗುಣಗಳನ್ನು ಹೊರಹಾಕುವುದನ್ನು "ಆತ್ಮ ವಿಶುದ್ಧಿ"  ಎನ್ನಲಾಗುತ್ತದೆ.

## ಶುದ್ಧಿ ಕ್ರಿಯೆಯ   ಎರಡು ಮೆಟ್ಟಿಲುಗಳು

ಈ  ಯೋಗದಲ್ಲಿ ಎರಡು  ಮೆಟ್ಟಿಲುಗಳು ಇವೆ. ಮೊತ್ತಮೊದಲನೆಯದಾಗಿ ತಮೋಗುಣವನ್ನು ಮೆಟ್ಟಬೇಕು, ತದನಂತರ ರಜೋಗುಣವನ್ನು. ಹೆಚ್ಚಿನ ಶಕ್ತಿಯಾದ  ರಜೋಗುಣವನ್ನು  ಬಳಸಿ ತಮೋಗುಣವನ್ನು ಮೆಟ್ಟಬೇಕು ಮತ್ತು ರಜೋಗುಣವನ್ನು ಸತ್ವದಿಂದ ನಿಯಂತ್ರಿಸಬೇಕು.ಈ ಯೋಗವನ್ನು ಅನುಸರಿಸುವವರು ಮೊದಲನೆಯ ಹಂತದಲ್ಲಿದ್ದಾಗ" ಆರುರುಕ್ಷಃ" ( ಮೇಲೇರಲು ಬಯಸುವವರು) ಎಂದೂ ಎರಡನೆಯ ಹಂತದಲ್ಲಿ ಇದ್ದವರನ್ನು ಆರೂಢ ಎಂದು ಕರೆಯುತ್ತಾರೆ. ಮೊದಲನೇ ಹಂತದಲ್ಲಿದ್ದಾಗ, ಚಿತ್ತವು ಕೊಳೆಯಿಂದ ತುಂಬಿದ್ದು ಇನ್ನೂ ಸ್ವಚ್ಛವಿರುವುದಿಲ್ಲ, ಅದು ಜಡವಿದ್ದು ಅದನ್ನು ಕ್ರಿಯೆಯಿಂದ ಚೇತನಗೊಳಿಸಬೇಕು. ಅದು ಚೇತನ ಯುಕ್ತವಾದ ಮೇಲೆ ಅದನ್ನು ಎರಡನೇ ಹಂತಕ್ಕೆ ಒಯ್ಯಲು ಕಾಲ ಪಕ್ವವಾಗಿರುತ್ತದೆ. ಇದು ಒಂದು ಪ್ರಶಾಂತ ಗೊಳಿಸುವ ಕ್ರಿಯೆ. " ಆರುರುಕ್ಷೋರ್ಮುನೇ ಯೋಗಂಕರ್ಮ ಕಾರಣಮುಚ್ಯತೆ/ಯೋಗಾರೂಢಸ್ಯ ತಸ್ಯೈವ  ಶಮಃ  ಕಾರಣಮುಚ್ಯತೆ//(6-3). " ಯೋಗವನ್ನು  ಏರಲು ಎಳೆಸುವ  ಮುನಿಗೆ ಕರ್ಮವು ಕಾರಣವೆನಿಸುವುದು, ಯೋಗಾರೂಢ ನಾದ ಅವನಿಗೆ ಶಮವು  ಕಾರಣವೆನಿಸುವುದು".  ಈ ಶ್ಲೋಕದಲ್ಲಿ ಕೆಲವರು ಕರ್ಮವೆಂದರೆ ಕೇವಲ ಕೆಲವು ಕ್ರಿಯೆಗಳೆಂದು ಅರ್ಥೈಸುತ್ತಾರೆ. ಆಗಲೂ ಸಹ ಇದನ್ನು  ಅರ್ಥ ಮಾಡಿಕೊಳ್ಳುವಾಗ, ಈ ಕ್ರಿಯೆಗಳು, ಜೀವವನ್ನು ಜಾಗೃತಗೊಳಿಸಲು ಮೊದಲ ಹೆಜ್ಜೆ ಗಳೆಂದು ತಿಳಿಯಬೇಕು. ನಿಜವಾಗಿ ಮಾನಸಿಕ ಶಾಂತಿ ಆದಾಗಲೇ ನಿಜವಾದ ಧರ್ಮನಿಷ್ಠೆ ಪ್ರಾರಂಭವಾಗುತ್ತದೆ. ಇದರ ಅರ್ಥ ತಮಸ್ಸನ್ನು ರಜಸ್ಸಿನಿಂದ  ಗೆಲ್ಲಬೇಕು ಎನ್ನುವುದೇ.

## ಕರ್ಮ ಅಥವಾ ಪ್ರಾಥಮಿಕ ಹಂತ

ಕರ್ಮವೆನ್ನುವ ಪ್ರಾರಂಭಿಕ ತರಬೇತಿಯ ಲಕ್ಷಣಗಳೇನು? ಇದರಲ್ಲಿ ಕೈಗೊಳ್ಳುವ ಎಲ್ಲಾ ಕ್ರಿಯೆಗಳ( ಸಾಧನೆಗಳ) ಒಂದೇ  ಗುರಿಯೆಂದರೆ ಇಂದ್ರಿಯ ನಿಗ್ರಹ. ಸರ್ವದಾ ಇಂದ್ರಿಯಗಳ

ಹಾತೊರೆಯುವಿಕೆ ಹಾಗೂ ಇಂದ್ರಿಯಗಳ ದ್ವೇಷ ಇವೆರಡನ್ನೂ ತನ್ನ ಮಿತಿಯೊಳಗೆ ಇರಿಸಲು ಸಹಾಯಕವಾಗುವ ಕ್ರಿಯೆಗಳನ್ನೇ ಆರಿಸಿಕೊಳ್ಳುವುದು ಮುಖ್ಯ ಗುರಿಯಾಗಬೇಕು. ನಾವು ಕರ್ಮಯೋಗದಲ್ಲಿ ವಿವರಿಸಿರುವ ಸಾತ್ವಿಕ ಕ್ರಿಯೆಗಳನ್ನು ನಡೆಸುವ ಪ್ರಯತ್ನವನ್ನು ಮಾಡಬೇಕು. ಕರ್ಮಯೋಗದಿಂದ ನಮ್ಮ ಇಂದ್ರಿಯಗಳಿಗೆ ತರಬೇತು ನೀಡದಿದ್ದಲ್ಲಿ, ಅವನ್ನು ನಿಯಂತ್ರಿಸುವುದು ಅಸಾಧ್ಯ .ಇಂದ್ರಿಯಗಳ ಕಾರ್ಯಗಳನ್ನೆಲ್ಲ ನಿಲ್ಲಿಸುವುದು ನಿರುಪಯೋಗಿ ಆಗುತ್ತದೆ, ಕಾರಣವೆಂದರೆ ಹೆಚ್ಚಿನ ಮಟ್ಟಕ್ಕೆ ಏರಲು ಇನ್ನೂ ಸಿದ್ಧವಿರದ ಬುದ್ಧಿಯು ಯಾವಾಗಲೂ ಇಂದ್ರಿಯ ಚಾಪಲ್ಯವನ್ನೇ ಚಿಂತಿಸುತ್ತಿರುತ್ತದೆ. "ಕರ್ಮೇಂದ್ರಿಯಾಣಿ ಸಂಯಮ್ಯ ಯ ಆಸ್ತೇ ಮನಸಾ ಸ್ಮರನ್; ಇಂದ್ರಿಯಾರ್ಥಾನ್ ವಿಮೂಢಾತ್ಮ ಮಿಥ್ಯಾಚಾರಃ ಸ ಉಚ್ಯತೆ" . "ಯಸ್ತ್ವಿನ್ದ್ರಿಯಾಣಿ ಮನಸಾ ನಿಯಮ್ಯಾರಭತೇऽರ್ಜುನ; ಕರ್ಮೇಂದ್ರಿಯೈಃ ಕರ್ಮಯೋಗಮಸಕ್ತಃ ಸ ವಿಶಿಷ್ಯತೇ". 3:6,7. ಯಾರು ಕರ್ಮೇಂದ್ರಿಯಗಳನ್ನು ಸಂಯಮ ಮಾಡಿಕೊಂಡು ಮನಸ್ಸಿನಲ್ಲಿ ಇಂದ್ರಿಯಾರ್ಥಗಳನ್ನು ಸ್ಮರಿಸುತ್ತಿರುವನೋ ಅಂತಹ ವಿಮೂಢಾತ್ಮನು ಮಿಥ್ಯಾಚಾರಿ ಎನಿಸುವನು. ಎಲೈ ಅರ್ಜುನನೇ ಯಾರು ಇಂದ್ರಿಯಗಳನ್ನು ಮನಸ್ಸಿನಿಂದ ತಡೆದುಕೊಂಡು ಕರ್ಮೇಂದ್ರಿಯಗಳಿಂದ ಕರ್ಮಯೋಗವನ್ನು ಅಸಕ್ತನಾಗಿ ಮಾಡುತ್ತಿರುವನೋ ಅವನು ಹೆಚ್ಚಿನವನು. ಈ ಒಂದು ಘಟ್ಟದಲ್ಲಿ ನಮ್ಮ ನಡೆಯು ಯಾವುದೇ ಸಂಗವಿಲ್ಲದೆ ಕರ್ಮ ನಡೆಸುವುದೇ ಆಗಿರಬೇಕು. ತಾಳ್ಮೆಯಿಂದ ಪ್ರಯತ್ನಪಡುತ್ತಾ ನಾವು ಎರಡನೇ ಹಂತವನ್ನು ತಲುಪಿದಾಗ ಇನ್ನು ಮುಂದಿನ ವಿಧಾನವನ್ನು ಅಳವಡಿಸಬಹುದು. ಈ ಹಂಬಲವುಳ್ಳ ವ್ಯಕ್ತಿಯು ತಾನುಎರಡನೆಯ ಮೆಟ್ಟಿಲಿನ ಪ್ರಯತ್ನವನ್ನು ಲಾಭಪ್ರದವಾಗಿ ನಡೆಸಬಹುದೇ ಎಂಬುದನ್ನು ತಿಳಿಯಲು ಕೆಳಗಿನ ಶ್ಲೋಕದಿಂದ ಪರೀಕ್ಷಿಸಬಹುದು."ಯದಾ ಹಿ ನೇನ್ದ್ರಿಯಾರ್ಥೇಷು ನ ಕರ್ಮಸ್ವನುಷಜ್ಯತೇ; ಸರ್ವಸಂಕಲ್ಪ ಸಂನ್ಯಾಸೀ ಯೋಗಾರೂಢಸ್ತದೋಚ್ಯತೆ". 6:4. ಯಾವಾಗ ಇಂದ್ರಿಯಾರ್ಥಗಳಲ್ಲಾಗಲಿ ಕರ್ಮಗಳಲ್ಲಾಗಲಿ ಆಸಕ್ತಿಯುಳ್ಳವನಾಗಿರುವದಿಲ್ಲವೋ, ಯಾವಾಗ ಸರ್ವಸಂಕಲ್ಪಸಂನ್ಯಾಸಿ-ಯಾಗಿರುವನೋ ಆಗ ಯೋಗಾರೂಢನೆನಿಸುವನು. ಇದು ಒಂದು ಕಠಿಣ ಹಾಗೂ ದೀರ್ಘ ಪ್ರಕ್ರಿಯೆಯು, ಆದರೆ ಯಾವನು ಇಂದ್ರಿಯ ಭೋಗಗಳನ್ನು ತುಚ್ಛೀಕರಿಸುವುದಿಲ್ಲವೋ, ಅವನಿಗೆ ಅಧ್ಯಾತ್ಮ ಜೀವನವು ಪ್ರಾರಂಭವೇ ಆಗಿಲ್ಲ. ಮನುಷ್ಯರು ಸಾಮಾನ್ಯವಾಗಿ ಆರಾಮಕರ ಧರ್ಮವನ್ನು ಅಂದರೆ ಯಾವುದಾದರೂ ಧರ್ಮದಲ್ಲಿ ಭೋಗ ಜೀವನವು ಅಧ್ಯಾತ್ಮ ಜೀವನದೊಂದಿಗೆ ರಾಜಿ ಮಾಡಿಕೊಂಡಿದೆಯೋ ಎಂದು ಮತ್ತೆ ಮತ್ತೆ ಕೇಳುವರು, ಆದರೆ ಅಂತಹ ಧರ್ಮವು ಇಲ್ಲವೆಂದು ಹೇಳುವುದೇ ಯುಕ್ತವು. ಅಧ್ಯಾತ್ಮ ಜೀವನವನ್ನು ಬಯಸುವವರು ಭೋಗಜೀವನಕ್ಕೆ ತಮ್ಮನ್ನು ಮಾರಿಕೊಳ್ಳಬಾರದೆಂದು ಎಲ್ಲ ಮಹಿಮಾನ್ವಿತ ಗುರುಗಳು ಬೋಧಿಸುತ್ತಾರೆ. ನಮ್ಮ ಅಧ್ಯಾತ್ಮಿಕ ನೆಮ್ಮದಿಯು ನಮ್ಮ ಸನ್ನಡತೆ, ಪರಿಶುದ್ಧತೆ ಮತ್ತು ಭೋಗಗಳ ಆಕರ್ಷಣೆಯಿಂದ ಬಿಡುಗಡೆ ಹೊಂದಲು ನಮಗಿರುವ ಸಾಮರ್ಥ್ಯ ಇವುಗಳ ಮೇಲೆ ನಿರ್ಭರವಾಗಿರುತ್ತದೆ.

ನಮ್ಮ ಉನ್ನತಿಗೆ ಅಥವಾ ಅವನತಿಗೆ ಬಹಳಮಟ್ಟಿಗೆ ನಾವೇ ಕಾರಣರಾಗುತ್ತೇವೆಂದು ಧ್ಯಾನ ಯೋಗವು ತಿಳಿಸುತ್ತದೆ. ಯಾವುದೋ ದುಷ್ಟ ಹಾಗೂ ಅಸೀಮ ಶಕ್ತಿಯು ನಮ್ಮ ಮೇಲೆ ನಿಯಂತ್ರಣ ಹೊಂದಿ ಮತ್ತೆ ನಮ್ಮನ್ನು ಸಂತೋಷದಲ್ಲೋ ದುಃಖದಲ್ಲೋ ಹೊಯ್ದಾಡುವಂತೆ ಮಾಡುವಲ್ಲಿ ಅದು ಸಂತೋಷ ಪಡುತ್ತದೆ ಎಂಬುದಿಲ್ಲ, ಆದರೆ ನಾವು ನಮ್ಮ ಮೂರ್ಖತನ ದಿಂದಲೇ ಕ್ಲೇಶ ಪಡುತ್ತೇವೆ." ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ / ಆತ್ಮೈವ ಹ್ಯಾತ್ಮನೋ ಬನ್ಧುರಾತ್ಮೈವ ರಿಪುರಾತ್ಮನಃ"//(6-5)." ತನ್ನಿಂದ ತನ್ನನ್ನು ಉದ್ಧಾರ ಮಾಡಿಕೊಳ್ಳಬೇಕು, ತನ್ನನ್ನು ತಗ್ಗಿಸ ಕೊಳ್ಳಬಾರದು. ಏಕೆಂದರೆ ತನಗೆ ತಾನೇ ಬಂಧು, ತನಗೆ ತಾನೇ ಶತ್ರುವು". ತನ್ನ ಮೇಲೆ ತಾನು ನಿಯಂತ್ರಣ ಸಾಧಿಸಿದವನು ತಾನೇ ಬಂಧುವು, ಇಲ್ಲದಿದ್ದಲ್ಲಿ ತನಗೆ ತಾನೇ ಶತ್ರುವು. ಆದ್ದರಿಂದ ಸ್ವಪ್ರಯತ್ನದಿಂದ ಸಾತ್ವಿಕ ಕರ್ಮಗಳನ್ನು ಅಳವಡಿಸಿಕೊಂಡು ಮುಂದುವರೆಯುವ ಪ್ರಯತ್ನವನ್ನು ಮಾಡಿದ್ದಲ್ಲಿ ನಮ್ಮ ಅಂತರಾತ್ಮನಿಗೆ ನಾವು ನ್ಯಾಯ ಒದಗಿಸಿದಂತಾಗುತ್ತದೆ. ಸಜ್ಜನರ ಸಹವಾಸ, ಒಳ್ಳೆಯ ಪುಸ್ತಕಗಳನ್ನು ಓದುವುದು, ಪ್ರವಚನಗಳ ಶ್ರವಣ ಇವು ನಮ್ಮ ಹೃದಯದಲ್ಲಿ ಆಧ್ಯಾತ್ಮಿಕ ಆಸಕ್ತಿಯನ್ನು ಬೇಗ ಹುಟ್ಟಿಸುವಲ್ಲಿ ಸಹಾಯಕವಾಗುತ್ತದೆ. ಆದರೆ ಅಧ್ಯಾತ್ಮದ ಬೆಳವಣಿಗೆಯು ಸಂಪೂರ್ಣವಾಗಿ ಆ ವ್ಯಕ್ತಿಯ ಮೇಲೆ ಅವಲಂಬಿತವಾಗಿದೆ ಎನ್ನುವ ಮನೋಭಾವವು ದೈವಿಕ ಸಹಾಯವನ್ನು ಅಲ್ಲಗಳೆಯುತ್ತದೆ ಎಂಬ ಆಕ್ಷೇಪ ಉಂಟು.

ಆದರೆ ಈ ರೀತಿ ಆಕ್ಷೇಪ ಮಾಡುವವರು ಮರೆತ ವಿಷಯವೆಂದರೆ, ದೈವಕೃಪೆಯು ಷರತ್ತುರಹಿತ ವೆಂದರೆ ಪರಮಾತ್ಮನ ಮೇಲೆ ಪಕ್ಷಪಾತದ ದೋಷ ಹೊರಿಸಿದಂತಾಗುತ್ತದೆ. ಪರಮಾತ್ಮನ ಅನುಗ್ರಹವು ಸಾಧು-ಸಂತರ ಮೇಲೂ, ಪಾಪಿಗಳ ಮೇಲೂ ಏಕೆ ಏಕರೂಪವಾಗಿರಬಾರದು? ಸತ್ಯಸಂಧತೆಯ ಮೂಲಕ್ಕೆ ಕೊಡಲಿ ಹಾಕುವ ಮಟ್ಟಕ್ಕೆ ಪರಮಾತ್ಮನ ದಯೆಯನ್ನು ತಗ್ಗಿಸ ಬಾರದು. ಜೀವಿಯ ನೈತಿಕ ಸಿದ್ಧಿಯ ಮೇಲೆ ಪರಮಾತ್ಮನ ದಯೆಯು ಸಂಪೂರ್ಣವಾಗಿ ಅವಲಂಬಿತವಾಗಿದೆ, ಪರಮಾತ್ಮನಿಗೆ ಯಾರೂ ಬಂಧುವಲ್ಲ. ಆದ್ದರಿಂದ ಪರಮಾತ್ಮನ ದಯೆಯನ್ನು ಸಮರ್ಥಿಸಲು ನಾವು ಪ್ರತಿ ಜೀವಿಯ ಸ್ವಾತಂತ್ರ್ಯವನ್ನು ಒಪ್ಪಬೇಕು, ಯಾರು ತಮ್ಮನ್ನು ತಾವು ಉದ್ಧರಿಸಿ ಕೊಳ್ಳುವವರೋ ಅವರಿಗೇ ಸ್ವರ್ಗದ ಸಹಾಯವು ದೊರೆಯುವುದು. ಧ್ಯಾನಯೋಗದಲ್ಲಿ ಬೋಧಿಸಿರುವ ಈ ಸ್ವಸಹಾಯದ ತತ್ವವು, ಎಲ್ಲ ದುರ್ಬಲತೆಗಳನ್ನು ತೆಗೆದು ಹಾಕುವ ಒಂದು ಹೆಚ್ಚಿನ ಲಾಭವನ್ನು ಹೊಂದಿದೆ. ನಾವು ನಮ್ಮ ಹಿಂದಿನ ಕರ್ಮಗಳ ಪ್ರಭಾವಕ್ಕೊಳಪಟ್ಟು ಇದ್ದೇವೆ, ಮತ್ತು ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವುದು ನಮ್ಮ ಪ್ರಯತ್ನದಿಂದಲೇ ಎಂದು ದೃಢವಾಗಿ ನಂಬಿದಾಗ ನಮ್ಮ ಅಪಜಯ ಮತ್ತು ಆಶಾಭಂಗಗಳು

ನಮ್ಮನ್ನು ಎದೆಗುಂದಿಸುವುದಿಲ್ಲ ಆದರೆ ಪ್ರತಿಬಾರಿಯೂ ಬಿದ್ದಾಗ ಮೇಲೇಳುವ ಉತ್ತಮ ಪಾಠವನ್ನು ಕಲಿಸುತ್ತದೆ.

ಆದ್ದರಿಂದ ನಮ್ಮನ್ನು ನಾವೇ ಜಯಿಸಿ, ನಮಗೆ ನಾವೇ ಸ್ನೇಹಿತರೆಂದು ಖಚಿತಪಡಿಸಿಕೊಳ್ಳಬೇಕು. ಮನುಷ್ಯನು ಸಾಧಿಸಬಹುದಾದ ಮಹತ್ವದ್ದೆಂದರೆ ಸ್ವಾತ್ಮಜಯ, ಆದರೆ ಈ ಸ್ವಾತ್ಮಜಯವು ಸೈನ್ಯದೊಡನೆ ಹೋಗಿ ಮಾನವ ರಕ್ತಪಾತದಿಂದ ಸಾಧಿಸಲಾಗದು.ಈ ನಿರುಪದ್ರವಿ ಯುದ್ಧವು ಬುದ್ಧಿ ಮತ್ತು ಮನಸ್ಸು ತನ್ನ ಕಾಮಪಿಪಾಸೆಯ ವಿರುದ್ಧ ನಡೆಸುವುದಾದದ್ದು.ಈ ಯುದ್ಧವು ನಮ್ಮ ಉತ್ತಮ ಸ್ವಭಾವವು ನಮ್ಮದೇ ಅಧಮ ಸ್ವಭಾವದ ಮೇಲೆ ನಡೆಸಲಾದದ್ದು. ನಮ್ಮಲ್ಲಿನ ಅವರ ಆತ್ಮ ನಾಶವಾದಾಗ, ನಮ್ಮಲ್ಲೇ ಹುದುಗಿದ ಪರಮಾತ್ಮನು ಪ್ರಕಟವಾಗುತ್ತಾನೆ. ವಿಚಾರಪರರಿಗೆ ಆಗಬಹುದಾದ ಅತ್ಯುತ್ತಮ ಲಾಭವೆಂದರೆ ಇದೆ." ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ/"**(6-22).** " ಯಾವ ಲಾಭವನ್ನು ಹೊಂದಿದ ಬಳಿಕ ಮಿಕ್ಕ ಲಾಭವನ್ನು ಅದಕ್ಕಿಂತ ಹೆಚ್ಚಿನದೆಂದು ಎಣಿಸುವುದಿಲ್ಲ". ಯೇಸು ಕ್ರಿಸ್ತನು ಈ ರೀತಿ ಹೇಳಿದ್ದಾನೆ," ಮಾನವನು ಇಡೀ ಪ್ರಪಂಚವನ್ನೇ ಗಳಿಸಿದರೂ ತನ್ನ ಆತ್ಮವನ್ನೇ ಕಳೆದುಕೊಂಡರೆ ಲಾಭವೇನು?

## ಎರಡನೆಯ ಘಟ್ಟ ಅಥವಾ ಶಮಾ

ಸಾತ್ವಿಕ ನಡತೆಯಿಂದ ತನ್ನ ಮೇಲೆ ತಾನು ನಿಗ್ರಹ ಸಾಧಿಸಿದ ಮೇಲೆ, ಇಂದ್ರಿಯ ಜ್ಞಾನಕ್ಕಿಂತ ಹೆಚ್ಚಿನದೊಂದು ಇರುವುದು ಎಂಬ ಅರಿವನ್ನು ಪಡೆಯಲು ಅವನು ಧ್ಯಾನಯೋಗದ ಎರಡನೆಯ ಹಂತವಾದ ಶಮಃ ಅಂದರೆ ಮನಸ್ಸನ್ನು ಪ್ರಶಾಂತಗೊಳಿಸುವುದು ಎಂಬ ಮಜಲನ್ನು ಪ್ರಾರಂಭಿಸಬಹುದು. ನಮ್ಮೆಲ್ಲರಲ್ಲೂ ಆಲೋಚನೆ ಹಾಗೂ ಕರ್ಮಗಳು ಕ್ರಿಯೆ ಮತ್ತು ಪ್ರತಿಕ್ರಿಯೆಯನ್ನು ನಡೆಸುತ್ತವೆ. ನಮ್ಮ ಆಲೋಚನೆಗಳು ನಮ್ಮ ನಡವಳಿಕೆಯ ಮೇಲೆ ಹೇಗೋ ಹಾಗೆಯೇ ನಮ್ಮ ನಡವಳಿಕೆಗಳು ನಮ್ಮ ಆಲೋಚನೆಗಳ ಮೇಲೆ ಪ್ರಭಾವ ಬೀರುತ್ತವೆ. ಇವೆರಡರ ಮಧ್ಯೆ ನಡವಳಿಕೆಗಳು ಹೆಚ್ಚು ಸ್ಥೂಲ, ಆದ್ದರಿಂದ ನಾವು ನಡವಳಿಕೆಗಳನ್ನು ನಿಯಂತ್ರಿಸುವುದರಿಂದ ಪ್ರಾರಂಭಿಸೋಣ. ಆದರೆ ಹಾಗಾಗುವಾಗ ನಮ್ಮ ಆಲೋಚನೆಯಲ್ಲೂ ಸಹ ಬದಲಾವಣೆ ಆಗುವುದು ಎನ್ನುವುದು ಒಳಗೊಂಡೇ ಇರುತ್ತದೆ. ತನ್ನ ನಡವಳಿಕೆಯನ್ನು ಗಮನಿಸುವ ಮಾನವನು ಶೀಘ್ರದಲ್ಲೇ ಆಲೋಚನೆಗಳನ್ನೂ ಗಮನಿಸಲು ಕಲಿಯುತ್ತಾನೆ. ನಡವಳಿಕೆಗಳನ್ನು ಗಮನಿಸುತ್ತಾ ಮತ್ತು ಪ್ರಜ್ಞಾಪೂರ್ವಕವಾಗಿ ಆಲೋಚನೆಗಳನ್ನು ತಿದ್ದಿಕೊಳ್ಳುವುದು ಧ್ಯಾನಯೋಗದ ಎರಡನೆಯ ಮೆಟ್ಟಿಲು. ಹಾಗಿದ್ದಲ್ಲಿಈ ಧ್ಯಾನಯೋಗದ ವಿದ್ಯಾರ್ಥಿಯು ಇಲ್ಲಿಂದ ಮುಂದೆ ತನ್ನ ಎಲ್ಲ ಕ್ರಿಯೆಗಳನ್ನು ನಿಲ್ಲಿಸಿ, ತನ್ನನ್ನು ಒಬ್ಬ ಏಕಾಂತ ಧ್ಯಾನಿಯಾಗಿ ಬದಲಾಯಿಸಿಕೊಳ್ಳುವುದು ಎಂದೇನಲ್ಲ. ಅವನು ತನ್ನ ಹೊರಗಿನ ವ್ಯವಹಾರಗಳಿಗಿಂತ ತನ್ನ ಯೋಚನೆಗಳ ಬಗೆಗೆ ಹೆಚ್ಚು ಮಹತ್ವ ನೀಡುವನು. ಒಂದು ಮಗುವು ನಡಿಗೆಯನ್ನು ಮೊದಲು ಕಲಿಯುತ್ತಾ ಮತ್ತೆ ಮತ್ತೆ ಸತತ

ಪ್ರಯತ್ನದಿಂದ ಚಲನೆಯ ಮೇಲೆ ಪ್ರಭುತ್ವ ಪಡೆಯುತ್ತದೆ. ಚೆನ್ನಾಗಿ ನಡಿಗೆಯನ್ನು ಕಲಿತ ನಂತರ ಅದೇನು ನಡಿಗೆಯನ್ನು ನಿಲ್ಲಿಸಿ ಬಿಡುವುದಿಲ್ಲ. ಅದರ ಓಡಾಟವು ಮನೋಹರವಾಗಿಯೂ, ಸಹಜವಾಗಿಯೂ ನಡೆಯುತ್ತದೆ ಮತ್ತು ತನ್ನ ನಡಿಗೆಯ ಬಗೆಗೆ ಗಮನಕೊಡದೆ ಮತ್ತೆ ಇತರ ಕೆಲಸದಲ್ಲಿ ತೊಡಗುತ್ತದೆ. ಈ ರೀತಿ, ಒಂದು ಚಿಕ್ಕಮಗೂ ನಡಿಗೆಯ ಬಗೆಗೆ ತಾನು ಬೀಳದಂತೆ ಬಹಳಷ್ಟು ಗಮನ ನೀಡಬೇಕಾಗಿದ್ದು, ಅದೇ ಮಗುವು ಹುಡುಗ ಆದನಂತರ ನಡಿಗೆಯನ್ನು ಸಮರ್ಪಕವಾಗಿ ಮಾಡುತ್ತಾ ತನ್ನ ಆಲೋಚನೆಯನ್ನು ಇನ್ನೂ ಹೆಚ್ಚಿನ ಕೆಲಸಕ್ಕಾಗಿ ಬಳಸಬಹುದು. ಅದೇ ರೀತಿ ಯಾವ ಯೋಗಿಯು ತನ್ನ ನಡವಳಿಕೆಗಳ ಮೇಲೆ ನಿಯಂತ್ರಣ ಪಡೆದು, ಅವನ್ನು ಅಪ್ರಯತ್ನದಿಂದ ನಡೆಸುವನೋ ಅವನು ಆಲೋಚನೆಗಳ ನಿಯಂತ್ರಣವೆಂಬ ಸೂಕ್ಷ್ಮ ಕ್ರಿಯೆಯನ್ನು ಸುಲಭವಾಗಿ ಮಾಡಬಲ್ಲನು.

## <u>ವೈರಾಗ್ಯ ಮತ್ತು ಅಭ್ಯಾಸ</u>

ಮನಸ್ಸನ್ನು ಹತೋಟಿಗೆ ಒಳಪಡಿಸುವುದೇ ಅತ್ಯಂತ ಕಷ್ಟದಾಯಕ ಹೆಜ್ಜೆ.ಇದೆಂದರೆ ಚಿಮ್ಮಟಿಗೆಯು ಗಿರ್ರ್‌ನೆ ಸುತ್ತಿ ತನ್ನನ್ನು ತಾನೇ ಹಿಡಿದುಕೊಳ್ಳಲು ಪ್ರಯತ್ನಿಸಿದಂತೆ. ಮೇಲ್ನೋಟಕ್ಕೆ ಕಷ್ಟಕರವಾದ ಈ ಸಾಧನೆಯನ್ನು ಮಾಡಲೇಬೇಕು. ಬುದ್ಧಿಗೆ ಅದಾಗಲೇ ತನ್ನನ್ನು ತಾನೇ ವಿಮರ್ಶಿಸಿ ಕೊಳ್ಳುವ ಸಾಮರ್ಥ್ಯವಿದೆ ಮತ್ತು ಈ ಧೀಶಕ್ತಿಯನ್ನು ತರಬೇತುಗೊಳಿಸಿ ಬೆಳೆಸಬೇಕು. ಮನಸ್ಸನ್ನು ಅಭೇದ್ಯ ಗೊಳಿಸುವುದೇ ಈ ತರಬೇತಿಯ ಮುಖ್ಯ ಗುರಿ." ಅಸಂಶಯಂ ಮಹಾಬಾಹೋ ಮನೋದುರ್ನಿಗ್ರಹಂ ಚಲಮ್/ ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೆ//**(6-35)." "** ಅರ್ಜುನನೇ, ಮನಸ್ಸು ನಿಗ್ರಹಿಸುವುದಕ್ಕೆ ಕಷ್ಟವೆಂಬುದೂ ಅದು ಚಂಚಲ ವೆಂಬುದು ನಿಸ್ಸಂಶಯವು. ಆದರೆ, ಕೌಂತೇಯನೇ, ಅಭ್ಯಾಸದಿಂದಲೂ ವೈರಾಗ್ಯದಿಂದಲೂ ಹಿಡಿತಕ್ಕೆ ಸಿಕ್ಕುತ್ತದೆ". ಮೊದಲನೆಯದಾಗಿ ಅಭ್ಯಾಸವೆನ್ನುವುದು ಅತ್ಯಗತ್ಯ. ಧಾರ್ಮಿಕತೆ ಎಂಬುದು ಕೇವಲ ಡಂಭಾಚಾರಕ್ಕಲ್ಲ, ನಮ್ಮಲ್ಲಿ ಬಹಳಷ್ಟು ಜನರು ಧಾರ್ಮಿಕತೆಯನ್ನು ಒಂದು ಸಾಧನೆ ಎಂದು ತಿಳಿಯುತ್ತೇವೆ. ನಾವು ಧಾರ್ಮಿಕತೆಯನ್ನು ಕೇವಲ ಒಂದು ಕೋರಿಕೆಯನ್ನಾಗಿಯೂ, ಕೆಲವೊಂದು ಆಚರಣೆಗಳನ್ನು ಪಾಲಿಸುವುದು ಎಂದೂ, ಸ್ತೋತ್ರ ಪಾಠ ಮಾಡುವುದೆಂದೂ, ಧಾರ್ಮಿಕ ಗ್ರಂಥಗಳ ಪಠಣ ಎಂದು, ಗಣಿಸಿ ಮಿಕ್ಕಂತೆ ಸಮಾಧಾನ ಪಡುತ್ತೇವೆ. ಆದರೆ ಧ್ಯಾನಯೋಗಿಯಾಗ ಬಯಸುವವನು ತನ್ನ ಒಳಹೊಕ್ಕು ತಾಳ್ಮೆಯಿಂದ ತನ್ನನ್ನೇ ಪರೀಕ್ಷಣೆಗೆ ಒಳಪಡಿಸಿಕೊಳ್ಳಬೇಕು. ಕೇವಲ ಕುತೂಹಲವು ಏತಕ್ಕೂ ಬಾರದು. ಆಪ್ತ ಹಾಗೂ ಸತತ ಪರಿಶ್ರಮದ ಅಗತ್ಯವಿದೆ. ತದನಂತರ ಪ್ರಾಪಂಚಿಕ ಆಸೆಗಳಿಂದ ಬಿಡುಗಡೆಯ ಅಗತ್ಯವೂ ಇದೆ. ಮನುಷ್ಯನನ್ನು ಸಾವಿರಾರು ಆಸೆಗಳು ಎಲ್ಲಾ ದಿಕ್ಕುಗಳಿಗೂ ಎಳೆದಾಡುತ್ತದೆ ಮತ್ತು ಸ್ವಪರೀಕ್ಷಣಕ್ಕೆ ಅಗತ್ಯವಾದ ಶಾಂತ ಮನಸ್ಸು ಇರುವುದೇ

ಇಲ್ಲ. ಇಂದ್ರಿಯ ಭೋಗಗಳಿಂದ ವಿಮುಖನಾದ ಹೊರತು, ಇನ್ನು ಹೆಚ್ಚಿನ ಸಂತೋಷದ ಅಭಿರುಚಿಯೇ ಬರುವುದಿಲ್ಲ.

## ತ್ಯಾಗ ಎಂದರೇನು

ತ್ಯಾಗದ ಬಗೆಗೆ ವಿವರವಾದ ಪರಿಶೀಲನೆಯನ್ನು ಮಾಡೋಣ. ಇದರ ಬಗೆಗೆ ಗೀತೆಯಲ್ಲಿ ಎರಡು ಪದಗಳನ್ನು ಬಳಸಲಾಗಿದೆ. ಅವೆಂದರೆ. ' ಸಂನ್ಯಾಸಃ' ಮತ್ತು ' ವೈರಾಗ್ಯಂ. ಸಂನ್ಯಾಸ ವೆಂದರೆ ಬಿಟ್ಟುಬಿಡುವುದು ವೈರಾಗ್ಯವೆಂದರೆ ಆಸೆ ಇಲ್ಲದಿರುವಿಕೆ. ಕೆಲವು ನಿರ್ದಿಷ್ಟ ಪಂಥಗಳಲ್ಲಿ ಯತಿಗಳನ್ನು ಲಾಕ್ಷಣಿಕವಾಗಿ ಸಂನ್ಯಾಸಿಗಳು ಎಂದು ಗುರುತಿಸಲಾಗಿದೆ ಮತ್ತು ಅವರಲ್ಲಿ ಇರುವ ಕೆಲವು ಸಂನ್ಯಾಸೋಪಾದಿಯ ಚರ್ಯೆಗಳಿಂದ ಸರ್ವೇಸಾಮಾನ್ಯವಾಗಿ ಸಂನ್ಯಾಸಕ್ಕೆ ಸಂನ್ಯಾಸೋಪಾದಿಯು ಅವಶ್ಯವೆಂದು ಕೆಲವರಿಂದ ಕಲ್ಪಿಸಲಾಗಿದೆ. ಹಾಗೆಯೇ ವಿರಕ್ತ ಎನ್ನುವ ಪದವನ್ನು ಜೀವನದ ಕಠಿಣ ಕರ್ತವ್ಯಗಳ ಬಗೆಗೆ ವಿಮುಖರಾದವರು ಎಂದು ತಪ್ಪಾಗಿ ಅರ್ಥೈಸಲಾಗಿದೆ. ಈ ಒಂದು ವೈಲಕ್ಷಣ್ಯವು ಪ್ರಾಯಶಹ ಗೀತೆಯಷ್ಟೆ ಹಳೆಯದು ಎನಿಸುತ್ತದೆ. ಹಾಗಾಗಿಯೇ ಗೀತಾಕರ್ತೃವು" ಅನಾಶ್ರಿತಃ ಕರ್ಮ ಫಲಂ ಕಾರ್ಯಂ ಕರ್ಮ ಕರೋತಿ ಯಃ/ ಸ ಸಂನ್ಯಾಸೀ ಚ ಯೋಗಿ ಚ ನ ನಿರಗ್ನಿರ್ನ ಚಾಕ್ರಿಯಃ"**//(6-1)."** ಕರ್ಮಫಲವನ್ನುಆಶ್ರಯಿಸದೆ ಮಾಡಬೇಕಾದ ಕರ್ಮವನ್ನು ಯಾವನು ಮಾಡುತ್ತಿರುವನೋ, ಅವನು ಸಂನ್ಯಾಸಿಯು ಯೋಗಿಯು ಆಗಿರುತ್ತಾನೆ, ಅಗ್ನಿ ಇಲ್ಲದವನು ಅಲ್ಲ ಕರ್ಮಗಳು ಇಲ್ಲದವನು ಅಲ್ಲ. ಸಂನ್ಯಾಸಿಗಳ ಪಂಥವನ್ನು ಈ ಶ್ಲೋಕವು ಯಾವುದೇ ರೀತಿಯಲ್ಲಿ ಅಲ್ಲಗಳೆಯುವುದಿಲ್ಲ. ಆದರೆ ಸಂನ್ಯಾಸದ ಅಥವಾ ತ್ಯಾಗದ ಮುಖ್ಯ ಭೂಮಿಕೆಯನ್ನು ಎತ್ತಿಹಿಡಿಯುತ್ತದೆ. ನಿಜವಾದ ತ್ಯಾಗವು ಯಾವುದೇ ಒಂದು ಸ್ಥಾನವನ್ನಾಗಲಿ ಅಥವಾ ಶ್ರೇಣಿಯನ್ನಾಗಲಿ ಅವಲಂಬಿಸಿಲ್ಲ, ಅದು ತಿನ್ನುವ ಆಹಾರ, ಧರಿಸುವ ವಸ್ತ್ರ ಅಥವಾ ಜೀವನದ ರೀತಿಯನ್ನು ಅವಲಂಬಿಸಿಲ್ಲ. ಅದು ಸ್ವಾರ್ಥಪರ ಕರ್ಮವನ್ನು ತ್ಯಜಿಸುವುದೇ ಹೊರತು ಮತ್ತೇನಲ್ಲ. ಆಸೆಗಳನ್ನು ತ್ಯಜಿಸುವುದೇ ವೈರಾಗ್ಯವು. ಇದನ್ನು**18: 2** ರಲ್ಲಿ ಪ್ರಸ್ತಾಪಿಸಲಾಗಿದೆ. ಮನುಷ್ಯನು , ತಮ್ಮೊಳಗೆ ಒಂದರೊಡನೊಂದು ತಾಕಲಾಡುವ ಅನೇಕ ಆಸೆಗಳಿಂದ ಕಟ್ಟಿಹಾಕಲ್ಪಟ್ಟವನಾಗಿದ್ದಾನೆ. ಅವುಗಳನ್ನು ತಮ್ಮಷ್ಟಕ್ಕೆ ಕೊಡವಿ ಮೇಲೆದ್ದಾಗ ಅವುಗಳು ನಿಧಾನವಾಗಿ ಒಂದೊಂದೇ ನಶಿಸುವುದು.

ಅನೇಕ ಸ್ಥಳಗಳಲ್ಲಿ ಇಂದ್ರಿಯ ನಿಗ್ರಹ, ಪ್ರಾಪಂಚಿಕ ವಸ್ತುಗಳ ಬಂಧನದಿಂದ ವಿಮುಕ್ತಿ ಇವುಗಳ ಬಗೆಗೆ ಹೇಳಿದ್ದೇವೆ . ಇಲ್ಲಿ ಅವುಗಳವಿವರ ಕೊಡುವ ಅವಶ್ಯಕತೆ ಇದೆ. ಧ್ಯಾನ ಯೋಗವು ನಿರಾಶಾದಾಯಕವಾದುದಲ್ಲ .ಅದು ಪ್ರಪಂಚವೊಂದು ನಿರಾಶಾದಾಯಕವಾದ ಅನಿಷ್ಟದ ಮೂಟೆ

ಎಂದು ಹೇಳುವುದಿಲ್ಲ. ಅದೇಸಮಯಕ್ಕೆ ಅದು ಆಶಾದಾಯಕವೆಂದು ಅಲ್ಲ. ಪ್ರಪಂಚವು ಈಗಿರುವ ಸ್ಥಿತಿಯಲ್ಲಿ ಪರಿಪೂರ್ಣವೆಂದೂ ಒಪ್ಪುವುದಿಲ್ಲ. ಅದರ ಪ್ರಕಾರ ಪ್ರಪಂಚವು ಒಂದು ಮನೋರಂಜಕ ಸ್ವರ್ಗವು ಅಲ್ಲ, ಭೀಕರ ನರಕವು ಅಲ್ಲ. ಅದು ಇವೆರಡರ ಸಮ್ಮಿಶ್ರಣ. ಪ್ರಪಂಚವು ಯಾವುದೆಂಬುದು ನಮ್ಮನ್ನೇ ಅವಲಂಬಿಸಿದೆ ಎಂದು ಧ್ಯಾನಯೋಗವು ಹೇಳುತ್ತದೆ. ಎಲ್ಲಿಯವರೆಗೆ ನಾವು ನಮ್ಮನ್ನು ಈ ಇಂದ್ರಿಯ ಭೋಗಗಳಿಗೆ ಒಡ್ಡಿಕೊಂಡು ಅನೇಕ ಆಸೆಗಳಿಗೆ ದಾಸರಾಗಿ ಇರುತ್ತೇವೋ ಅಲ್ಲಿಯವರೆಗೆ ಈ ಪ್ರಪಂಚದಲ್ಲಿ ನಮಗೆ ಸಂತೋಷ ಇರುವುದಿಲ್ಲ. ಆದರೆ ಇಂದ್ರಿಯ ಭೋಗಗಳಿಗೆ ದಯನೀಯ ಕೋರಿಕೆಗಳನ್ನು ಸಲ್ಲಿಸುವುದನ್ನು ಸಂಪೂರ್ಣನಿಲ್ಲಿಸಿ ನಮ್ಮ ಮೇಲೆ ನಾವು ಪ್ರಭುತ್ವವನ್ನು ಸಾಧಿಸುತ್ತೇವೋ ಆಗ ದುಃಖವೆನ್ನುವುದು ಇರಲೇ ಇಲ್ಲ ಎನ್ನುವುದನ್ನು ಕಂಡುಕೊಳ್ಳುತ್ತೇವೆ." ಕಾಮಕ್ರೋಧವಿಯುಕ್ತಾನಾಂ ಯತೀನಾಂ ಯತ ಚೇತಸಾಂ/ಅಭಿತೋ ಬ್ರಹ್ಮನಿರ್ವಾಣಂ ವರ್ತತೇ ವಿದಿತಾತ್ಮನಮ್//**(5-26)."** ಕಾಮಕ್ರೋಧ ವಿಯುಕ್ತರಾಗಿ ಯತಚಿತ್ತ ರಾಗಿರುವ ವಿಧಿತಾತ್ಮರಾದ ಯತಿಗಳಿಗೆ ಎಲ್ಲೆಲ್ಲಿಯೂ ಬ್ರಹ್ಮ ನಿರ್ವಾಣವು ಇರುತ್ತದೆ". ಇಂದ್ರಿಯ ಭೋಗಗಳನ್ನು ತ್ಯಜಿಸುವುದು ಸಂಪೂರ್ಣ ಇಂದ್ರಿಯನಿಗ್ರಹವು ಅಲ್ಲಾ ಯತಿಧರ್ಮವೂ ಅಲ್ಲ. ಪ್ರಾಪಂಚಿಕ ಸುಖವನ್ನು ತ್ಯಜಿಸುವುದು ಎಂದರೆ ನಾವು ಇಂದ್ರಿಯ ಸುಖಗಳ ದಾಸರಾಗದೆ ಉಳಿಯುವುದಷ್ಟೇ ಅಲ್ಲ ನಾವು ಎಂದಿಗೂ ಅವುಗಳ ಮೇಲೆ ಪ್ರಭುತ್ವವನ್ನು ಸ್ಥಾಪಿಸುವುದು." ವಿಷಯಗಳನ್ನು ಧ್ಯಾನಿಸುತ್ತಿರುವ ಪುರುಷನಿಗೆ ಅವುಗಳಲ್ಲಿ ಸಂಗಉಂಟಾಗುತ್ತದೆ. ಸಂಗದಿಂದ ಕಾಮವು ಉಂಟಾಗುತ್ತದೆ. ಕಾಮದಿಂದ ಕ್ರೋಧವು ಉಂಟಾಗುತ್ತದೆ ಕ್ರೋದದಿಂದ ಸಂಮೋಹ ಉಂಟಾಗುತ್ತದೆ ಸಂಮೋಹದಿಂದ ಸ್ಮೃತಿವಿಭ್ರಮವಾಗುತ್ತದೆ, ಸ್ಮೃತಿಭ್ರಂಶದಿಂದ ಬುದ್ಧಿ ನಾಶವಾಗುತ್ತದೆ, ಬುದ್ಧಿ ನಾಶದಿಂದ ಪ್ರಣಾಶವನ್ನು ಹೊಂದುತ್ತಾನೆ.**(2-62,63).** " ರಾಗದ್ವೇಷ ವಿಯುಕ್ತೈಸ್ತು ವಿಷಯಾನಿ ಇಂದ್ರಿಯೈಶ್ಚರನ್ ಆತ್ಮವಶ್ಯೈರ್ವಿಧೇಯಾತ್ಮ ಪ್ರಸಾದಮಧಿಗಚ್ಛತಿ" **(2-64)."** ರಾಗದ್ವೇಷಗಳಿಂದ ಬಿಡುಗಡೆಯಾಗಿ, ತನ್ನ ವಶದಲ್ಲಿರುವ ಇಂದ್ರಿಯಗಳಿಂದ ವಿಷಯಗಳನ್ನು ಅನುಭವಿಸುತ್ತಿರುವ ವಿಧೇಯಾತ್ಮನು ನೆಮ್ಮದಿಯನ್ನು ಪಡೆಯುತ್ತಾನೆ". ವಿಷಯ ವಸ್ತುಗಳನ್ನು ಅನುಭವಿಸುವುದೇ ಒಂದು ಪ್ರಮಾದವಲ್ಲ ಮತ್ತು ಎಲ್ಲಾ ವಿಷಯ ಭೋಗಗಳನ್ನೂ ಸಂಪೂರ್ಣವಾಗಿ ಬಿಟ್ಟುಬಿಡಲು ಹೇಳುವುದು ಯುಕ್ತವಲ್ಲ, ಕಾರಣವೆಂದರೆ ಎಲ್ಲಾ ಇಂದ್ರಿಯ ಕರ್ಮವನ್ನು ತ್ಯಜಿಸಿದವನು ಒಂದು ಮಣ್ಣಿನ ಹೆಂಟೆ ಅಥವಾ ಒಂದು ಕಲ್ಲಿನ ಬಂಡೆ ಆಗುವನು. ಅತ್ಯಗತ್ಯ ವಿಷಯವೆಂದರೆ ಅಸಂಗನಾಗುವುದು ,ಇಂದ್ರಿಯಗಳ ಹತೋಟಿ ಸಾಧಿಸುವುದು. ಈಶೋಪನಿಷತ್ತು " ತ್ಯೇನ ತ್ಯಕ್ತೇನ ಭುಂಜೀತಾಃ" "ಆದ್ದರಿಂದ ತ್ಯಾಗ ದೊಡನೆ ಅನುಭೋಗಿಸು" ಎಂದು ಹೇಳಿದ್ದು ಇದೇ ಅರ್ಥದಲ್ಲಿ. ಭಾರತೀಯ ತ್ಯಾಗದ ವಿಚಾರವು ಕೇವಲ ದುರಾಸೆಯ ಮತ್ತು ಅನಿಷ್ಟ ಅನುರಾಗವನ್ನಷ್ಟೇ ವರ್ಜಿಸಲು ಹೇಳಿದ್ದಲ್ಲ,ಹಾಗೆಯೇ ಕರ್ತವ್ಯ ಮತ್ತು ವಾತ್ಸಲ್ಯವನ್ನು ತೊರೆಯಲು ಹೇಳಿದೆ ಎಂಬ ಆರೋಪದಲ್ಲಿನ ಪೊಳ್ಳುತನ ತೋರಿಸಿದ್ದಾಯಿತು. ಉದಾಹರಣೆಗೆ ರೆವರೆಂಡ್ ಎನ್. ಮೆಕ್ಯಾನಿಕಲ್ ಅವರು ತ್ಯಾಗದ ಬಗೆಗೆ

ಈ ಅಭಿಪ್ರಾಯವನ್ನು ಹೊಂದಿದ್ದಾರೆ. ತ್ಯಾಗ ಪದ್ಧತಿಯನ್ನು ಕ್ರೈಸ್ತಮತ ದೊಂದಿಗೆ ಹೋಲಿಸುತ್ತಾ ಅವರು ಹೇಳುವುದೇನೆಂದರೆ" ಹಿಂದೂ ಪದ್ಧತಿಯ ಮುಖ್ಯ ಉದ್ದೇಶವೇ ಸಮಾಧಿ, ನಿರ್ವಾಣ, ನೈತಿಕ ಸಂಚಲನೆ ನಿಲ್ಲಿಸುವುದು, ಬ್ರಹ್ಮಎನ್ನುವ ದೊಡ್ಡ ಮೌನದ ಗೂಡನ್ನು ಹೊಕ್ಕು ಮೌನ ಹೊಂದುವುದು . ಕ್ರೈಸ್ತಮತದ ಮುಖ್ಯ ಉದ್ದೇಶವೆಂದರೆ ಜೀವನದ ಪರಿಪೂರ್ಣತೆ ಮತ್ತು ಸಾಮರಸ್ಯ ಎನ್ನುವ ಜೀವನದ ಮುಖ್ಯ ಸೆಲೆ ಯೊಡನೆ ಅನಿರ್ಬಂಧಿತ ಸಾಂಗತ್ಯದಲ್ಲಿನ ನೈತಿಕ ಚಟುವಟಿಕೆ, ಪ್ರೇಮಮಯನಾದ ಪ್ರಭುವಿನ ದೈವಿ ಕೃಪೆ ಮತ್ತು ಸ್ವಾತಂತ್ರದಲ್ಲಿ ನಡೆಸುವ ಕಾರ್ಯದಿಂದ ಸಿಗುವ ಸಂತೋಷ ಶಾಂತಿ ಮತ್ತು ಪರಿಪೂರ್ಣತೃಪ್ತಿ". ಇಲ್ಲಿ ನಿರ್ವಾಣ ಎನ್ನುವುದನ್ನು ಮೂಲತಃ ತಪ್ಪಾಗಿ ಅರ್ಥೈಸಲಾಗಿದೆ ಎನ್ನುವುದನ್ನು ತಿಳಿಸುವುದಕ್ಕೆ ನಾವು ಗೀತೆಯ ಒಂದು ಶ್ಲೋಕವನ್ನು ಗಮನಿಸಿದರೆ ಸಾಕು "ಲಭಂತೆ ಬ್ರಹ್ಮನಿರ್ವಾಣ ಮೃಷ ಯಃ ಕ್ಷೀಣಕಲ್ಮಷಾಃ/ ಛಿನ್ನದ್ವೈಧಾ ಯತಾತ್ಮಾನಃ ಸರ್ವ ಭೂತಹಿತೇ ರತಾಃ//(5-25)." ಯಾವ ಋಷಿಗಳು ದೋಷಮುಕ್ತರಾಗಿ, ಎಲ್ಲಾ ಅನುಮಾನಗಳನ್ನು ಕತ್ತರಿಸಿದಂತವರಾಗಿ, ತಮ್ಮ ಮೇಲೆ ನಿಯಂತ್ರಣ ಸಾಧಿಸಿದ್ದಾರೋ ಮತ್ತು ಸರ್ವಭೂತಹಿತ ರತರಾಗಿದ್ದಾರೋ ಅವರು ಬ್ರಹ್ಮ ನಿರ್ವಾಣವನ್ನು ಪಡೆಯುವರು". ಈ ಶ್ಲೋಕಾರ್ಥ ಸ್ಪಷ್ಟವಾಗಿದೆ. ನಿರ್ವಾಣವೆಂದರೆ ನೈತಿಕ ಚಟುವಟಿಕೆಗಳನ್ನು ಬಿಟ್ಟುಬಿಡುವುದು ಎಂದಾಗಲೀ ಅಥವಾ ವಾತ್ಸಲ್ಯ ಬಂಧವನ್ನು ಕತ್ತರಿಸಿವುದು ಎಂದಾಗಲಿ ಹೇಳಿಲ್ಲ, ನಿಜವೆಂದರೆ ಅದರ ವಿರುದ್ಧ ವನ್ನೇ ಪ್ರತಿಪಾದಿಸಿದೆ. ತ್ಯಾಗವೆನ್ನುವುದು ಸರಿಯಾದ ವಾತ್ಸಲ್ಯವನ್ನು ಕೊಲ್ಲುವ ಮಂಜುಗಡ್ಡೆಯಲ್ಲ, ಅದನ್ನು ಪೋಷಿಸುವ ಹದವಾದ ಸೂರ್ಯರಶ್ಮಿ. ತ್ಯಾಗ ವೆನ್ನುವುದು ಭ್ರಾತೃತ್ವದ ಬಂಧನಗಳನ್ನು ಕಡಿಯುವುದಿಲ್ಲ ಆದರೆ ಸ್ವಾರ್ಥಪರ ಬಂಧನಗಳನ್ನು ಮೂಲದಲ್ಲೇ ಕುಂಠಿತಗೊಳಿಸುವುದು. ಅದಕ್ಕೆ ಬದಲಾಗಿ ಅದು ಮಾನವತೆಯನ್ನು ಮೀರಿ ಸಕಲ ಸೃಷ್ಟಿಗೇ ತನ್ನ ಹೃದಯವನ್ನು ತೆರೆಯುತ್ತದೆ. ಸ್ವಾರ್ಥತ್ಯಾಗ ಮಾಡಿರುವವರಷ್ಟೇ ಭಗವಂತನ ಸೃಷ್ಟಿಯನ್ನು ನಿಷ್ಕಪಟವಾಗಿ ಪ್ರೀತಿಸಬಲ್ಲರು. ಬ್ರಹ್ಮವೆಂಬ ಗಂಭೀರ ನಿಶಬ್ದದ ತವರನ್ನು ಕೇವಲ ತ್ಯಾಗಿಯೇ ತಲುಪಬಲ್ಲನು. ನಿಜವೆಂದರೆ ಅವನೇ ಅರಿವನ್ನು ಮೀರಿದ ಶಾಂತಿಯನ್ನು ಪಡೆದವನು. ಆದರೆ ವಿವೇಚನೆಯುಳ್ಳ ಕಿವಿಗೆ ,ಅವನ ಕ್ರಿಯೆಗಳೇ ಅತ್ಯುತ್ತಮ ಶಬ್ದಗಳಾಗುವುವು. ಅವನ ಪ್ರತಿಯೊಂದು ಕ್ರಿಯೆಯು ತರ್ಕಬದ್ಧ ಮನಕ್ಕೆ ದಿವ್ಯಸತ್ತಿನ ಸ್ತುತಿಯನ್ನು ಸ್ಫುಟವಾಗಿ ಕೇಳಿಸಬಲ್ಲದು.

ಆದರೆ ಡೋಂಗಿ ತ್ಯಾಗವನ್ನು ಖಂಡಿತವಾಗಿಯೂ ಖಂಡಿಸಬೇಕು. ಅದು ಅನೇಕ ರೂಪಗಳನ್ನು ತಾಳುತ್ತದೆ ಕೆಲವರಲ್ಲಿ ಅದು ಆಲಸ್ಯವಾಗುತ್ತದೆ, ಮತ್ತು ಅವರು ಕರ್ಮತ್ಯಾಗವನ್ನೇ ತ್ಯಾಗ ಎನ್ನುತ್ತಾರೆ. ಇನ್ನು ಕೆಲವರಲ್ಲಿ ಅದು ಇಂದ್ರಿಯ ದ್ವೇಷದ ರೂಪದಲ್ಲಿರುತ್ತದೆ, ಅಂತಹವರು ಪ್ರಪಂಚವನ್ನು ಬಿಟ್ಟು ಯಾವುದೋ ಏಕಾಂತ ಸ್ಥಳಕ್ಕೆ ಹೋಗುವುದನ್ನೇ ತ್ಯಾಗ ಎನ್ನುತ್ತಾರೆ. ಮೂರನೆಯ ತರಹದ ಜನರಲ್ಲಿ ಅದು ಅತ್ಯಾಸೆ, ದುರಾಸೆಯ ರೂಪವನ್ನು ತಾಳುತ್ತದೆ.

ಅಂತಹವರು ತಮ್ಮ ಕರ್ತವ್ಯವನ್ನು ಬಿಟ್ಟು ಮತ್ತೊಂದು ಮಾಡಲೆಳಸುತ್ತಾರೆ ಮತ್ತು ತಮ್ಮ ತಪ್ಪನ್ನು ತ್ಯಾಗದ ಪರದೆಯಲ್ಲಿ ಮರೆಮಾಡುತ್ತಾರೆ. ಈ ಎಲ್ಲ ರೀತಿಯ ಮನೋಧರ್ಮವೂ ಅಜ್ಞಾನದಿಂದ ಆಗುವುದೇ ಹೊರತು ಜ್ಞಾನದಿಂದ ಅಲ್ಲ. ನಿಜವಾದ ತ್ಯಾಗವು ವಿವೇಕದಿಂದ ಹೊರಟಿದ್ದಾಗಿರುತ್ತದೆ. ಇದು ಕ್ರಿಯೆಯನ್ನು, ವಿಶೇಷವಾಗಿ ನೈತಿಕ ಕ್ರಿಯೆಯನ್ನು ವರ್ಜಿಸುವುದಿಲ್ಲ, ವಾಸನಾ ಪ್ರಪಂಚವನ್ನು ದ್ವೇಷಿಸುವುದಿಲ್ಲ, ಆದರೆ ಅದನ್ನು ಬಯಸುವುದೂ ಇಲ್ಲ. ಅದು ಕರ್ತವ್ಯವನ್ನು ಕಡೆಗಣಿಸುವುದಿಲ್ಲ. ಆದರೆ ಜೀವನದ ಯಾವುದೇ ಘಟ್ಟದಲ್ಲಿ ಒದಗಿದ ಯಾವುದೇ ಕರ್ತವ್ಯವನ್ನು ಸರಿಯಾದ ಕ್ರಮದಲ್ಲಿ, ಮತ್ತು ನಿರಾಸಕ್ತಿಯಿಂದ( ಸಂಗವಿಲ್ಲದೆ), ಪರಿ ಪಾಲಿಸುವುದರಲ್ಲಿ ಅನಂತ ಸುಖ-ಸಂತೋಷವನ್ನು ಹೊಂದುತ್ತದೆ.

## ಅಭ್ಯಾಸ

ಇದುವರೆಗೆ ವೈರಾಗ್ಯ ಮತ್ತು ತ್ಯಾಗದ ಬಗೆಗೆ ಹೇಳಿದ್ದಾಯಿತು. ಈಗ ಅಭ್ಯಾಸವೆಂದರೆ ಏನೆಂದು ನೋಡೋಣ. ಅಭ್ಯಾಸ ವೆನ್ನುವುದು ಭಾಗಶಹ ದೈಹಿಕ ಮತ್ತು ಭಾಗಶಹ ಬೌದ್ಧಿಕ. ದೈಹಿಕ ಅಭ್ಯಾಸಗಳು ಪ್ರಾಥಮಿಕ ಹಂತದವುಗಳು, ಆದರೆ ಮುಂದುವರೆದ ಮತ್ತು ಹೆಚ್ಚು ಮುಖ್ಯವಾದ ಅನುಷ್ಠಾನಗಳು ಬೌದ್ಧಿಕವೇ ಆಗಿರುತ್ತದೆ. ಧ್ಯಾನ ಯೋಗಿಯಾಗ ಬಯಸುವವರು , ಪ್ರಾರಂಭಕ್ಕೆ ಮುನ್ನವೇ ಹೊರಗಿನ ಜೀವನಾಚರಣೆಗಳನ್ನು ಕ್ರಮಗೊಳಿಸಬೇಕು ಮತ್ತು ತನ್ನ ಆಹಾರ, ವಸ್ತ್ರ ಮತ್ತು ಪದ್ದತಿಗಳನ್ನು ನಿಯಂತ್ರಿಸಬೇಕು. ಅವನು ಸಾತ್ವಿಕ ಆಹಾರವನ್ನು ತಿನ್ನಬೇಕು, ಸಾಧಾರಣ ಬಟ್ಟೆಗಳನ್ನು ಧರಿಸಬೇಕು ಮತ್ತು ತನ್ನ ವರ್ತನೆಯಲ್ಲಿ ಸಂಯಮ ತೋರಬೇಕು. ಗೀತೆಯು ಈ ವಿಷಯಗಳಿಗೆ ಹೆಚ್ಚಿನ ಮಹತ್ವ ನೀಡಿಲ್ಲ, ಕಾರಣವೆಂದರೆ ಈ ರೀತಿಯ ಸೂಕ್ಷ್ಮ ನಿಯಮಗಳು ತಮ್ಮಷ್ಟಕ್ಕೇ ಕಾರ್ಯರೂಪದಲ್ಲಿ ಉಪಯೋಗಿಯಲ್ಲ. ಅದು ಮುಖ್ಯವಾಗಿ ಹೀಗೆ ಹೇಳಿದೆ" ಯುಕ್ತಾಹಾರ ವಿಹಾರಸ್ಯ ಯುಕ್ತ ಚೇಷ್ಟಸ್ಯ ಕರ್ಮಸು/ ಯುಕ್ತ ಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ//(6, 17)." ಯುಕ್ತಾಹಾರನಾಗಿ ವಿಹಾರನಾಗಿ, ಕರ್ಮಗಳಲ್ಲಿ ಯುಕ್ತ ಚೇಷ್ಟನಾಗಿ , ಯುಕ್ತ ಸ್ವಪ್ನಾವಬೋಧನಾಗಿ ಇರುವವನಿಗೆ ದುಃಖನಾಶಕವಾದ ಯೋಗವು ಉಂಟಾಗುವುದು". ಸಾರಾಂಶವೆಂದರೆ., ಎಲ್ಲಾ ತರಹದ ಅತಿರೇಕಗಳನ್ನು ದೂರವಿಡಬೇಕು.ಈ ಪೂರ್ವಸಿದ್ದತೆಯ ನಂತರ ಯಾರೇ ಆದರೂ ಧ್ಯಾನಯೋಗದ ಅಭ್ಯಾಸಕ್ಕೆ ತೊಡಗಬಹುದು.

ಇದಕ್ಕಾಗಿ ಮೀಸಲಿಟ್ಟ ಒಂದು ಕೋಣೆಯಲ್ಲಿ ಶುಭ್ರವಾದ ಸ್ಥಳವನ್ನು ಆರಿಸಿಕೊಂಡು, ಅನುಕೂಲವಾದ ಭಂಗಿಯಲ್ಲಿ ಕುಳಿತು ಯೋಗವನ್ನು ಅಭ್ಯಸಿಸಬೇಕು. ಮೊಟ್ಟಮೊದಲು ನೇರಭಂಗಿಯಲ್ಲಿ, ಸ್ಥಿರವಾಗಿ ಕೂರುವುದನ್ನು ಕಲಿಯಬೇಕು. ನಂತರ ಉಸಿರಾಟವನ್ನು

ನಿಯಂತ್ರಿಸಬೇಕು .ದೃಷ್ಟಿ ಮತ್ತು ಇತರ ಇಂದ್ರಿಯಗಳನ್ನು ಅತ್ತಿತ್ತ ಹೋಗದಂತೆ ಸೂಕ್ತವಾಗಿ ನಿಯಂತ್ರಿಸಬೇಕು. ಇವಿಷ್ಟೇ ಯೋಗಾಭ್ಯಾಸಕ್ಕೆ ಬೇಕಾದ ದೈಹಿಕ ಅಗತ್ಯಗಳು. ಈಗ ಅಭ್ಯಾಸಿಯು ತನ್ನ ಮನಸ್ಸಿನ ಬಗೆಗೆ ಗಮನ ಹರಿಸಬಹುದು**(6-11,12,13).**

ಈಗ ಮನಸ್ಸನ್ನು ಕೇಂದ್ರೀಕರಿಸುವುದು. ಇದೇ ಅತ್ಯಂತ ಕಷ್ಟದಾಯಕವಾದ ಭಾಗ. ಒಮ್ಮೆಲೆ ಇದನ್ನು ಸಾಧಿಸಲಾಗದು" ಶನೈಃ ಶನ್ನೈರುಪ ರಮೇದ್ ಬುದ್ಧ್ಯಾ ಧೃತಿ ಗೃಹೀತಯಾ/ ಆತ್ಮ ಸಂಸ್ಥಂ ಮನಃ ಕೃತ್ವಾ ನ ಕಿಂಚಿದಪಿ ಚಿಂತಯೇತ್"/**(6-25).** ಧೃತಿಯಿಂದ ಹಿಡಿದ ಬುದ್ಧಿಯಿಂದ ಮೆಲ್ಲಮೆಲ್ಲನೆ ಹಿಂದಿರುಗಬೇಕು ಮನಸ್ಸನ್ನು ಆತ್ಮನಲ್ಲಿಯೇ ನಿಲ್ಲಿಸಿಕೊಂಡು ಏನನ್ನು ಚಿಂತಿಸದಿರಬೇಕು. ಹೊರಕ್ಕೆ ಹೋಗುವ ಮನಸ್ಸಿನ ಸ್ವಭಾವವನ್ನು ಎಡಬಿಡದೆ ನಿಗ್ರಹಿಸುತ್ತಿರಬೇಕು. ಮೊದಮೊದಲು ಹೊರಗಿನ ಪ್ರಪಂಚದ ಏನೊಂದನ್ನೂ ಯೋಚಿಸದೆ ಇರುವುದು ಬಹಳ ಕಷ್ಟ. ಮನಸ್ಸಿನಿಂದಲೂ ಮತ್ತು ಅದರ ಆಲೋಚನೆಗಳಿಂದಲೂ ತನ್ನನ್ನು ಬೇರ್ಪಡಿಸಿಕೊಳ್ಳುತ್ತಾ ಹೋಗುತ್ತಿದ್ದಂತೆ ಮನಸ್ಸೆಂಬ ಸಮುದ್ರದಿಂದ ಏಳುವ ಅಲೆಗಳು ನಿಧಾನವಾಗಿ ಶಾಂತವಾಗುತ್ತವೆ .ಮನಸ್ಸೆಂಬುದನ್ನೇ ಪದೇಪದೇ ಪರೀಕ್ಷಣೆಗೆ ಒಳಪಡಿಸಿದರೆ ಕಾಲ ಕಳೆದಂತೆ ಅದು ತನ್ನಂತೆ ಶಾಂತವಾಗುತ್ತದೆ.

## ಅಧ್ಯಾತ್ಮದ ಪರಮಸುಖ

ಚಿತ್ತವು ಶಾಂತವಾದಾಗ ನಾವು ಹೇಗಿದ್ದೇವೋ ಹಾಗೆ ನಮ್ಮನ್ನು ನಾವೇ ಕಂಡುಕೊಳ್ಳಬಹುದು. ಹಾಗಾದಾಗಲೇ ನಾವು ನಿಜವಾದ ಸಂತೋಷವನ್ನು ಅನುಭವಿಸಲು ಸಾಧ್ಯ. ಕಾರಣವೆಂದರೆ ನಿಜವಾದ ಸಂತೋಷವು ನಮ್ಮ ಒಳಗೆ ಇರತಕ್ಕದ್ದೇ ಹೊರತು ಹೊರಗಿನಿಂದ ಬರತಕ್ಕದ್ದಲ್ಲ. ಒಂದು ಅಮೂಲ್ಯವಾದ ವಜ್ರವನ್ನು ಮಂಕು ದೀಪದ ಬೆಳಕಿನಲ್ಲಿ ಪರೀಕ್ಷಿಸಿ ಬೆಲೆ ಕಟ್ಟಲಾಗುವುದಿಲ್ಲವೋ ಹಾಗೆ ಹೊಯ್ದಾಡುವ ಮನಸ್ಸು ತನ್ನಲ್ಲಿರುವ ನಿಜವಾದ ಸಂತೋಷವನ್ನು ಅಳತೆ ಮಾಡಲಾಗದು **(** ಅನುಭವಿಸಲಾಗದು**).** ಆದರೆ ಅದೇ ಮನುಷ್ಯನು ಚಿತ್ತಶಾಂತಿಯನ್ನು ಹೊಂದಿದ ಮೇಲೆ ಸಂತೋಷವೆಂದರೇನೆಂದು ತಿಳಿಯುವನು. ಆಗ ಪರಿಪೂರ್ಣ ಸಂತೋಷವು ಇಂದ್ರಿಯಗಳನ್ನು ಮೀರಿದ್ದು ಮತ್ತು ಕೇವಲ ಅಧ್ಯಾತ್ಮದಿಂದ ಶುದ್ಧವಾದ ಚಿತ್ತದಿಂದಷ್ಟೇ ಅನುಭವಿಸಲು ಆಗುವುದು ಎಂದು ಅವನು ಕಂಡುಕೊಳ್ಳುತ್ತಾನೆ **06:21.** ಇಂದ್ರಿಯ ಭೋಗಗಳಲ್ಲು ಸಹ**,** ಮನಸ್ಸೇ ಸಂತೋಷವನ್ನು ಅನುಭವಿಸಲು ಅನುವು ಮಾಡಿಕೊಡುವುದು**,** ಇಂದ್ರಿಯದಿಂದ ಮನಸ್ಸಿನ ಸಂಪರ್ಕ ಕಡಿತವಾದರೆ ಇಂದ್ರಿಯಗ್ರಹಣೆಯೇ ಇಲ್ಲವಾಗುತ್ತದೆ. ಚಿತ್ತದಲ್ಲಿ ಅನೇಕ ವಿಭಾಗಗಳು ಇವೆ ಮತ್ತು ಇವು ವಿಭಿನ್ನ ಕ್ಷೇತ್ರಗಳಲ್ಲಿ ಸಂತೋಷವನ್ನು ಹುಡುಕುವ ಕಾರ್ಯದಲ್ಲಿ ಸತತವಾಗಿ

ನಿರತವಾಗಿರುತ್ತದೆ. ಹಾಗಾಗಿ ಒಂದು ವಿಭಾಗವು ಬೌದ್ಧಿಕ ಸಂತೋಷವನ್ನು ಒದಗಿಸಿದರೆ ಮತ್ತೊಂದು ವಿಭಾಗವು ನೈತಿಕ ಸಂತೋಷವನ್ನು ಒದಗಿಸುತ್ತದೆ. ಇಂದ್ರಿಯಗಳಿಂದ ಒದಗುವ ಸುಖಕ್ಕಿಂತ ಮಾನಸಿಕವಾದ (ಆಲೋಚನೆಗಳ) ಸುಖವು ಸೂಕ್ಷ್ಮ ಮತ್ತು ನೈತಿಕ ಸಂತೋಷವೂ ಇವೆರಡಕ್ಕಿಂತ ಅಗಣಿತ ಮಾನದಲ್ಲಿ ಸೂಕ್ಷ್ಮವೂ. ಆದರೆ ಅತ್ಯುಚ್ಚ ಸ್ಥಿತಿಯನ್ನು ಪಡೆದಿರುವ ಸ್ವಕೇಂದ್ರೀಕೃತ ಚಿತ್ತೈಕಾಗ್ರತೆಯು ನಮಗೆ ಕೊಡುವ ಅನುಭವವನ್ನು ಆಹ್ಲಾದವೆಂದಾಗಲಿ, ಸುಖವೆಂದಾಗಲೀ ಕರೆಯಲಾಗುವುದಿಲ್ಲ. ಅದನ್ನು ಆಧ್ಯಾತ್ಮಿಕ ಪರಮಸುಖ ಎನ್ನಲಾಗುತ್ತದೆ. ಎಷ್ಟೇ ಸೂಕ್ಷ್ಮವಾದ ಯೋಚನೆಯು ಅಂತಹ ಪರಮಸುಖದ ಅನುಭವವನ್ನು ಕೊಡಲಾರದು ಎನ್ನುವುದು ಸ್ವತಃಸಿದ್ಧ. ಹೇಗೆ ಕಣ್ಣು ಕೇವಲ ರೂಪವನ್ನಷ್ಟೇ ಕಾಣಬಹುದೇ ಹೊರತು ಇತರ ಇಂದ್ರಿಯಗಳ ವಿಷಯಗಳನ್ನು ಗ್ರಹಿಸಲಾರದೋ ಹಾಗೆಯೇ ಬುದ್ಧಿಯು ಅಧ್ಯಾತ್ಮದ ಪರಮಸುಖದ ವಿಷಯದಲ್ಲಿ ಕ್ಷಮತೆ ಇಲ್ಲದ್ದು.

ಅಧ್ಯಾತ್ಮ ಪರಮಸುಖವು ಏನೆಂಬುದನ್ನು ತಿಳಿಸಿಕೊಡಲು ನಮ್ಮ ಬುದ್ಧಿಯಲ್ಲಿ ವಿಶೇಷ ವಿಭಾಗವಿದೆ. ನಮ್ಮ ಮನಸ್ಸು ಚಿತ್ತೈಕಾಗ್ರತೆ ಪಡೆದ ನಂತರವಷ್ಟೇ ಈ ವಿಶೇಷ ವಿಭಾಗವು ಕಾರ್ಯ ಪ್ರವೃತ್ತವಾಗುವದು. ಈ ಪರಮ ಸುಖವು ನೈಜವಾದುದೇ ಅಥವಾ ಮನೋವಿಕಲ್ಪವೇ ಎಂಬುದನ್ನು ನಾವು ಹೇಗೆ ತಿಳಿಯಬಹುದು? ಅದನ್ನು ಒಮ್ಮೆ ನಾವು ಆಸ್ವಾದಿಸುವುದನ್ನು ಪ್ರಾರಂಭಿಸಿದ ಮೇಲೆ ಅದರ ನಾಶವನ್ನು ನಾವು ಊಹಿಸಲೂ ಆರೆವೂ. ಅದರ ರುಚಿ ನೋಡಿದ ನಂತರ ಈ ಪರಮಸುಖವು ನಮ್ಮಲ್ಲೇ ಯಾವಾಗಲೂ ಇದ್ದಿದ್ದು ,ನಮ್ಮಿಂದ ಬೇರ್ಪಟ್ಟಿದ್ದೇಇಲ್ಲ ಎಂದು ನಮ್ಮ ತರ್ಕವೇ ಅದರ ನೈಜತೆಯನ್ನು ಸಿದ್ದಪಡಿಸುತ್ತದೆ.ಈ ಪರಮ ಸುಖವೂ ಈಗಾಗಲೇ ಇರದಿದ್ದರೆ, ಅಧ್ಯಾತ್ಮಿಕ ಆಚರಣೆಯಾಗಲಿ ಅಥವಾ ಬೇರಾವುದೇ ಆಚರಣೆಯಾಗಲಿ ಅದನ್ನು ಸೃಷ್ಟಿಸಲಾಗುತ್ತಿರಲಿಲ್ಲ. ಮಹಾನಂದದ ಈ ಗಣಿಯು ಎಂದೆಂದಿಗೂ ನಮ್ಮಲ್ಲೇ ಇದ್ವಿತು. ಸಂತೋಷವೆಂಬುದು ನಮ್ಮ ಆಜನ್ಮಸಿದ್ದ ಹಕ್ಕಾದರೂ ಅದನ್ನು ಹೊಂದುವ ಸದದೃಷ್ಟ ನಮ್ಮದಿರಲಿಲ್ಲ. ಮನೆಯಲ್ಲಿ ಅಪಾರ ಸಂಪತ್ತು ಕೂಡಿಟ್ಟೂ ಸಹ ನಾವು ಕಡುಬಡವರಾಗಿದ್ದು ಐದು ಇಂದ್ರಿಯಗಳ ಬಾಗಿಲಲ್ಲಿ ನಿಂತು ಭಿಕ್ಷೆ ಬೇಡಲು ಹೊರಟಿದ್ದೆವು.

ಒಬ್ಬ ಮನುಷ್ಯ ನೈಜವಾದ ಸಂತೋಷವನ್ನು ಅಥವಾ ಪರಮ ಸುಖವನ್ನು ತನ್ನಲ್ಲೇ ಕಂಡುಕೊಂಡ ನಂತರ ಸಂತೋಷವನ್ನು ಬೇರೆಲ್ಲೆಲ್ಲಿಯೂ ಕಾಣುತ್ತಾನೆ." ಅಭಿತೋ ಬ್ರಹ್ಮನಿರ್ವಾಣಂ ವರ್ತತೇ ವಿದಿತಾತ್ಮನಮ್" **05:26.** ಆತ್ಮನನ್ನು ತಿಳಿದುಕೊಂಡಿರುವವರಿಗೆ ಬ್ರಹ್ಮದ ಪರಮ ಸುಖವು ಎಲ್ಲೆಲ್ಲಿಯೂ ಇರುತ್ತದೆ. ಪ್ರತಿಯೊಬ್ಬರೂ ತಾವು ಹೇಗೆ ಇರುವರೋ ಪ್ರಪಂಚವನ್ನು ಹಾಗೆಯೇ ಕಾಣುತ್ತಾರೆ. ಪ್ರಪಂಚದ ಬಗೆಗೆ ನಮ್ಮ ಅಭಿಪ್ರಾಯಗಳು ಕಲ್ಪನೆಗಳು ನಮ್ಮ ಬುದ್ಧಿಯಿಂದಲೇ ಉಗಮವಾದದ್ದು. ಹಾಗಾಗಿ ತನ್ನಲ್ಲೇ ಸಂತೋಷವನ್ನು ಕಂಡುಕೊಂಡ ಯೋಗಿಯು ಬೇರೆ ಎಲ್ಲರಲ್ಲಿಯೂ ಸಂತೋಷವನ್ನೇ ಕಾಣುತ್ತಾನೆ. ಎಂದರೆ ಅವನು ಇಡೀ

ವಿಶ್ವವನ್ನೇ ಒಂದು ಅಪಾರ ಆನಂದದ ಸಾಗರವನ್ನಾಗಿ ಮತ್ತು ಈ ಸಾಗರದಲ್ಲಿ ಪ್ರತಿಯೊಬ್ಬರೂ ಸಣ್ಣ ಅಥವಾ ದೊಡ್ಡದಾದ ತೆರೆಗಳಂತೆಯೂ ಕಾಣುತ್ತಾನೆ. ಅನಂತ ಸುಖದ ಅಭಿವ್ಯಕ್ತಿ ಯಾವ ಮಟ್ಟದಲ್ಲಿ ಆಗಿರುತ್ತದೆಯೋ ಆ ಮಟ್ಟಕ್ಕೇ ಅವನಿಗೆ ಪ್ರತಿಯೊಂದು ವ್ಯಕ್ತಿಯು ಆ ಪರಮಸುಖದ ಪ್ರತಿನಿಧಿಯಾಗಿ ತೋರುತ್ತದೆ. ಹಾಗಾದಾಗ ದೇವರು ಎಲ್ಲ ಜೀವಿಗಳಲ್ಲೂ ವಾಸಿಸುತ್ತಾನೆನ್ನುವುದು ಆ ಯೋಗಿಗೆ ಕೇವಲ ಒಂದು ಬೌದ್ಧಿಕ ಅರುವಿಕೆ ಅಲ್ಲ, ಆದರೆ ಶಾಶ್ವತವಾಗಿ ದೈವಿ ಸಂಪರ್ಕದಲ್ಲಿದ್ದು ಎಲ್ಲೆಲ್ಲೂ ದೇವರನ್ನೇ ಕಾಣುತ್ತಾನೆ." ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ; ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ". **6:30** ನನ್ನನ್ನು ಯಾವನು ಎಲ್ಲೆಲ್ಲಿಯೂ ಕಾಣುವನೋ ಮತ್ತು ಎಲ್ಲವನ್ನೂ ನನ್ನಲ್ಲಿ ಕಾಣುವನೋ ಅವನಿಗೆ ನಾನು ಕಾಣದೆ ಹೋಗುವುದಿಲ್ಲ ಅವನೂ ನನಗೆ ಕಾಣದೇ ಹೋಗುವುದಿಲ್ಲಾ. ಇಂತಹ ಯೋಗಿಯ ಮನೋವೃತ್ತಿಯನ್ನು ಈ ಕೆಳಗಿನ ಪದ್ಯವು ವಿವರಿಸುತ್ತದೆ.

"ಸಂತೋಷವೊಂದೇನಿಜವಾಗಿ ಒಳ್ಳೆಯದು
ಸಂತೋಷವಾಗಿರಲು ಈಗಲೇ ಸುಸಮಯ
ಸಂತೋಷವಾಗಿರಲು ಇದೇ ಜಾಗವೇ ಸರಿಯಾದುದು
ಬೇರೆಯವರನ್ನು ಸಂತೋಷಪಡಿಸುವುದು ಒಂದೇ ನಮ್ಮ ಸಂತೋಷಕ್ಕೆ ಮಾರ್ಗವು."

## <u>ಏಕಾಂತ ಜೀವನ ಮತ್ತು ಮಾನವ ಸೇವೆ</u>

ಈ ಯೋಗವನ್ನು ಹೊಂದಲು ಒಂದು ಮೌಲ್ಯವನ್ನು ತೆರಬೇಕಾಗಿದೆ. ಯೋಗದ ಈ ಅಭ್ಯಾಸಕ್ಕಾಗಿ ಆಗಾಗ್ಗೆ ಮತ್ತು ಕೆಲವೊಮ್ಮೆ ದೀರ್ಘಕಾಲ ಕಲುಷಿತ ಸಮಾಜವಷ್ಟೇ ಅಲ್ಲದೆ ಸುಶಿಕ್ಷಿತ ಸಮಾಜದಿಂದಲೂ ನಿವೃತ್ತರಾಗಬೇಕಾಗುತ್ತದೆ. ಮೊತ್ತಮೊದಲು ಸತ್ಸಂಗವನ್ನು ಮಾಡುವ ಅಗತ್ಯವಿದೆ ಮತ್ತು ಯಾರ ವಿಚಾರ ಲಹರಿಗಳು ನಮ್ಮ ಮನಸ್ಸನ್ನು ಕ್ಷೋಭೆಗೆ ಒಳಪಡಿಸುತ್ತದೋ ಅಂತಹವರ ಸಹವಾಸವನ್ನು ತಪ್ಪಿಸಬೇಕು. ಹಾಗಾದಾಗ ಏಕಾಂತದಲ್ಲಿದ್ದು ಚಿಂತನೆ ಮಾಡುವುದಕ್ಕೂ ಧ್ಯಾನಪರನಾಗುವುದಕ್ಕೂ ಅನುಕೂಲವಾಗುತ್ತದೆ." ಯೋಗಿ ಯುಂಜೀತ ಸತತ ಮಾತ್ಮಾನಂ ರಹಸಿ ಸ್ಥಿತಃ/ ಏಕಾಕಿ ಯತಚಿತ್ತಾತ್ಮ ನಿರಾಶೀರಪರಿಗ್ರಹ//(6-10)." ಯೋಗಿ ಯಾದವನು ರಹಸ್ಯದಲ್ಲಿದ್ದುಕೊಂಡು ಆತ್ಮನನ್ನು ಸತತವಾಗಿ ಯೋಗದಲ್ಲಿ ಇಡಬೇಕು. ಏಕಾಕಿಯಾಗಿ ಯತಚಿತ್ತಾತ್ಮನಾಗಿ, ನಿರಾಶಿಯಾಗಿ, ಅಪರಿಗ್ರಹನಾಗಿ, ಇರಬೇಕು". ಏಕಾಂತದಲ್ಲಿ

ಅಭ್ಯಾಸ ಮಾಡಬೇಕು ಎನ್ನುವ ಇಲ್ಲಿನ ಒಂದು ಸಲಹೆಯು , ಗೀತೆಯು ಒಂದೆಡೆ ಮಾನವ ಸೇವೆ ಮತ್ತೊಂದೆಡೆ ಸಮಾಜದಿಂದ ನಿವೃತ್ತಿ ಎನ್ನುವ ಪರಸ್ಪರ ವಿರೋಧಾತ್ಮಕವಾದ ಹೇಳಿಕೆ ನೀಡಿದೆ ಎಂಬ ಆಕ್ಷೇಪಕ್ಕೆ ಕಾರಣವಾಗಿದೆ. ಇದು ಸ್ಪಷ್ಟವಾದ ತಪ್ಪು ತಿಳಿವಳಿಕೆ.ಈ ಏಕಾಂತದ ಅಭ್ಯಾಸವು ಪೂರ್ವಸಿದ್ಧತೆ ನಡೆಸುವವರಿಗೆ ಹೇಳಿದ್ದು, ಸಮಾಜಸೇವೆಯು  ನಂತರದ ಹಂತದ ಯೋಗಿಗಳಿಗೆ. ಒಬ್ಬ ವಿದ್ಯಾರ್ಥಿಯು ತನ್ನ ಭವಿಷ್ಯ ಜೀವನಕ್ಕೆ ಹೆಚ್ಚು ಸೂಕ್ತವಾಗಿ ಅಳವಡಿಸಿಕೊಳ್ಳುವುದಕ್ಕಾಗಿ ತನ್ನ ಬುದ್ಧಿಶಕ್ತಿಯನ್ನು ಬೆಳೆಸಿಕೊಳ್ಳಲು ಮುಂದುವರಿಸಿಕೊಳ್ಳಲು ಕೆಲಕಾಲ ವಿಶ್ವವಿದ್ಯಾನಿಲಯಕ್ಕೆ ಹೋಗುವಂತೆ, ಏಕಾಂತದಲ್ಲಿ ಅಭ್ಯಾಸಮಾಡುವ ಯೋಗಿಯೂ ಪ್ರಪಂಚಕ್ಕೆ ನಿರುಪಯೋಗಿ ಆಗಿರುವುದು ತಪ್ಪೆಂದು ಹೇಳಲಾಗದು. ಯೋಗಿಯು ನಿವೃತ್ತನಾಗುವುದುರಿಂದ ಆತನ ವಿಶ್ವದ ಎಲ್ಲಾ ವಿಚಾರಗಳು ಅಳಿಸಿ ಹೋಗುವುದಿಲ್ಲ, ಆದರೆ ಅದು ಚಟುವಟಿಕೆಯಿಂದಕೂಡಿದ ವಿಶ್ವಕ್ಕೆ ತನ್ನೆಲ್ಲ ಶ್ರಮದಿಂದ ಬಂದ ಒಳ್ಳೆಯ ಫಲವನ್ನು ತನ್ನ ಸಹೋದರರಿಗೆ ಕೊಡತಕ್ಕಂತಹ ಒಬ್ಬ ಜ್ಞಾನಿಯನ್ನು ಕೊಡುತ್ತದೆ.

ಯೋಗಿಯ ಅಭ್ಯಾಸದ ಮುಖ್ಯ ಉದ್ದೇಶ ಗುರಿ ಇಲ್ಲದ ವಿಚಾರವಲ್ಲ, ಆದರೆ ಉಪಯೋಗಿ ಜೀವನಕ್ಕಾಗಿ ಶಾಸ್ತ್ರೋಕ್ತ ಪೂರ್ವ ಸಿದ್ದತೆ ನಡೆಸುವುದು. ಪ್ರತಿಯೊಬ್ಬ ಆತ್ಮ ನಿರ್ಭರ ವ್ಯಕ್ತಿಯು ಮೊದಲು ಏಕಾಂಗಿಯಾಗೇ ನಡೆದವರು ಮತ್ತು ತಮಗೆ ತಾವೇ ವಿಧಿಸಿಕೊಂಡ ಉದಾತ್ತ ಆದರೆ ಕಠಿಣ ಮಾರ್ಗದಲ್ಲಿ ಬೇರೆ ಯಾರಾದರೂ ತಮಗೆ ಮಾರ್ಗದರ್ಶನ ನೀಡುತ್ತಾರೆ ಎಂದಾಗಲೀ ಸಹಯೋಗವನ್ನು  ನೀಡುತ್ತಾರೆ ಎಂದಾಗಲೀ ಬಯಸಿದವರಲ್ಲ. ತದನಂತರ ಸಮಾಜದೊಂದಿಗೆ ಸಂಪೂರ್ಣ ಬೆರೆತು ಅಂತ್ಯವಿಲ್ಲದ ಆತ್ಮಸಮರ್ಪಣೆಗೆ ಮುಡುಪಾಗುವರು. ಸತ್ಯ ವಸ್ತುವಿನೊಂದಿಗೆ ಎಡೆಬಿಡದೆ ನಿಕಟ ಸಂಪರ್ಕದಲ್ಲಿದ್ದು ,ಮಾನವ ಸಮೂಹಕ್ಕೆ ಅಂತಹುದೆ ಪರಮ ಸುಖವನ್ನು ಅನುಭವಿಸಲು ಸಹಾಯಕರಾಗುತ್ತಾರೆ.  ನಿಜವೆಂದರೆ,  ಎಲ್ಲಾ ಜೀವಿಗಳಲ್ಲೂ ಅದೇ ದೈವಿಕ ಸಂಪತ್ತು ಇರುವುದು ಎನ್ನುವ ಉದಾತ್ತ ಸತ್ಯವನ್ನು ತಮ್ಮ ಸ್ಥಿರ ಮತ್ತು  ಸತತ ಶ್ರದ್ಧೆಯಿಂದ ಅರಿತುಕೊಂಡಿರುವ ಮಾನವನೇ ನಿಷ್ಕಾಪಟ್ಯದಿಂದ ಮತ್ತು ಮನಃಪೂರ್ವಕವಾಗಿ ಮಾನವತೆಗೆ ಒಳಿತು ಮಾಡುವ ಕಾರ್ಯ ಕೈಗೊಳ್ಳಬಲ್ಲ. ಇಡೀ ಮಾನವರನ್ನು ಒಂದೇ ಬಂಧದಲ್ಲಿ ಕಾಣಲಾರದ ವ್ಯಕ್ತಿ ಎಷ್ಟೇ ಉದಾತ್ತ ವ್ಯಕ್ತಿಯಾದರೂ ಒಂದು ಸ್ವಾರ್ಥಪರತೆ ಆತನ ಹೃದಯಲ್ಲಿ ತನ್ನ ಕರಿನೆರಳನ್ನು ಹರಡುತ್ತದೆ. ಅದೇ ಜ್ಞಾನಿಯಾದರೋ ಎಲ್ಲಾ ಜೀವಿಗಳನ್ನು ಸಮಾನ ದೃಷ್ಟಿಯಿಂದ ಕಾಣಬಲ್ಲ ಸ್ಥಿತಿಯನ್ನು ಪಡೆದಿರುತ್ತಾನೆ. ಅವನು ಮನಸ್ಸಿನ ಸಮತೆಯ ಅತ್ಯುಚ್ಚ ಸ್ಥಿತಿಯನ್ನು

ಪಡೆದಿರುವನು." ಶೀತೋಷ್ಣ ಸುಖದುಃಖೇಷು ತಥಾ ಮಾನಾಪಮಾನಯೋಃ/ ಜ್ಞಾನ-ವಿಜ್ಞಾನ ತೃಪ್ತಾತ್ಮಾ ಕೂಟಸ್ಥೋ ವಿಜಿತೇಂದ್ರಿಯಃ; ಯುಕ್ತ ಇತ್ಯುಚ್ಯತೇ ಯೋಗೀ ಸಮಲೋಷ್ಟಾಶ್ಮಕಾಞ್ಚನಃ". **6:7,8.** ಶೀತೋಷ್ಣ ಸುಖ-ದುಃಖಗಳಲ್ಲಿ ಮಾನಾಪಮಾನಗಳಲ್ಲಿ ಜ್ಞಾನ-ವಿಜ್ಞಾನ ತೃಪ್ತನಾಗಿ ಕೂಟಸ್ಥನಾಗಿ ವಿಜಿತೇಂದ್ರಿಯನಾಗಿ, ಮಣ್ಣಿನ ಹೆಂಟೆ ಕಲ್ಲು ಚಿನ್ನ ಇವುಗಳಲ್ಲಿ ಸಮನಾಗಿರುವ ಯೋಗಿಯು ಯುಕ್ತ ನೆನಿಸುವನು. ಅವನು ತನ್ನ ಸ್ವಾರ್ಥವನ್ನು ಇಲ್ಲಿಯವರೆಗೂ ಗೆದ್ದಿರುವನೆಂದರೆ ಹೊರಗಿನ ಯಾವುದೂ ಅವನ ಮೇಲೆ ಪ್ರಭಾವ ಬೀರುವುದಿಲ್ಲ. ಎಲ್ಲರನ್ನೂ ಸಮನಾಗಿ ಕಾಣುವುದೇ ಆತನು ನಡೆಯುವ ನಡವಳಿಕೆಯು." ಸುಹೃನ್ಮಿತ್ರಾರ್ಯುದಾಸೀನಮಧ್ಯಸ್ಥ ದ್ವೇಷ್ಯ ಬನ್ಧುಷು; ಸಾಧುಷ್ವಪಚ ಪಾಪೇಷುಸಮಬುದ್ಧಿರ್ವಿಶಿಷ್ಯತೇ". **6:9.** ಪೋಷಕನಲ್ಲಿಯೂ, ಮಿತ್ರನಲ್ಲಿಯೂ, ಶತ್ರುವಿನಲ್ಲಿಯೂ, ಉದಾಸೀನನಲ್ಲಿಯೂ, ಮಧ್ಯಸ್ಥನಲ್ಲಿಯೂ, ಯಾರಲ್ಲಿ ದ್ವೇಷ ಮಾಡಬಹುದೋ ಅವನಲ್ಲಿಯೂ, ಬಂಧುವಿನಲ್ಲಿಯೂ, ಸಂತರಲ್ಲಿಯೂ ಮತ್ತು ಪಾಪಿಗಳಲ್ಲಿಯೂ ಯಾರು ಸಮಭಾವವನ್ನು ಇಡುವರೋ ಅವರೇ ಅತ್ಯುತ್ತಮ ಯೋಗಿ. ಯೋಗಿಯು ಹೀಗೆ ಎಲ್ಲರಲ್ಲಿಯೂ ಒಂದೇ ರೀತಿಯ ಸಂಬಂಧವನ್ನು ಆದರವನ್ನು ಇಡುವನು ಎಲ್ಲರಿಗೂ ಒಳ್ಳೆಯದನ್ನೇ ಬಯಸುತ್ತಾ ಮತ್ತು ಒಳ್ಳೆಯದನ್ನೇ ಮಾಡುತ್ತಾ ಇರುವನು. ಯೋಗಿಯು ತನ್ನ ಬಗೆಗೆ ಸಾರ್ವಜನಿಕ ಅಭಿಪ್ರಾಯ ಏನೇ ಇರಲಿ ಅಥವಾ ಅವರು ಯೋಗಿಯ ಬಗೆಗೆ ನಡೆದುಕೊಳ್ಳುವ ರೀತಿಯು ಹೇಗೆ ಇರಲಿ ಆತನು ಒಂದೇ ರೀತಿಯಲ್ಲಿ ಇರುವನು. ಯಾವಾಗಲೂ ಆತನು ತ್ಯಾಗದ ಜೀವನವನ್ನೇ ನಡೆಸುವನು. ಬರಿಯ ಉಪದೇಶವಲ್ಲದೆ ತನ್ನ ನಡತೆಯಿಂದಲೂ ಎಲ್ಲರಿಗೂ ಒಳ್ಳೆಯದನ್ನೇ ಮಾಡಬೇಕೆಂದು ಬೋಧಿಸುವನು. ತನ್ನ ಸಹಚರರೊಡನೆ ಒಂದಾಗಿ ಬೆರೆಯುವನು ಮತ್ತು ಆತನ ವಿಶ್ವ ಪ್ರೇಮದಿಂದಲೇ ಎಲ್ಲರನ್ನೂ ತನ್ನ ಕಡೆಗೆ ಆಕರ್ಷಿಸುವನು. ವ್ಯಾಧಿಯಿಂದ ಬಳಲುತ್ತಲೋ, ದುಃಖದಿಂದಲೋ ಅಥವಾ ಪಾಪಕರ್ಮಗಳಿಂದಲೋ ನರಳುತ್ತಿರುವವರನ್ನು ಕಂಡು ಆತನು ಮರುಕದಿಂದ ಇರುವನು. ಸನ್ನಡತೆಯವರ ಸಂತೋಷದಲ್ಲೂ ಮತ್ತು ಆಧ್ಯಾತ್ಮಿಕ ಜೀವನದ ತೃಪ್ತಿಯಲ್ಲೂ ಆತನು ಒಂದಾಗುವನು. ರೋಗಿಗಳಿಗೆ ಶುಶ್ರೂಷೆ ಮಾಡಲು, ಅಜ್ಞಾನಿಗಳಿಗೆ ಬೋಧಿಸಲು, ಆರ್ತರಿಗೆ ಸಹಾಯಮಾಡಲು, ಜಾಣರಿಗೆ ಮಾರ್ಗದರ್ಶನ ಮಾಡಲು ಮತ್ತು ಅಧ್ಯಾತ್ಮ ಪಿಪಾಸುಗಳಿಗೆ ಮೋಕ್ಷದೆಡೆಗೆ ಮುನ್ನಡೆಸಲು ಆತನು ಸದಾ ಸಿದ್ಧ. ಪ್ರಾಪಂಚಿಕ ಜನರಿಗೂ ಮತ್ತೆ

ಪರಮಾತ್ಮನಿಗೂ ಮಧ್ಯೆ ಆತನು ಸೇತುವೆಯಾಗುವನು. ಆದರ್ಶ ಸಮರ್ಥ ಯೋಗಿಯು ಹೀಗಿರುವನು.

ಉಪಯುಕ್ತತೆಯೇ ಜೀವನ ತತ್ವವಾದವರು ಈ ರೀತಿ ಆಕ್ಷೇಪಿಸುವರು "ಜೀವನದಲ್ಲಿ ನಾವು ಪರಿಪೂರ್ಣರಾಗದಿದ್ದರೆ ಆಗೇನು ಮಾಡುವುದು? ನಾವು ಇಕ್ಕಡೆಯಲ್ಲೂ ನಷ್ಟಹೊಂದುತ್ತೇವಲ್ಲಾ?" ಯೋಗಿಯಾಗಿ ಇಂದ್ರಿಯ ಭೋಗಗಳನ್ನು ತ್ಯಜಿಸಿದ್ದಾಯಿತು ಉತ್ತಮವಾದ ಪರಮಸುಖವು ಪ್ರಾಪ್ತಿಯಾಗಲಿಲ್ಲ ಈಗೇನು ಮಾಡುವುದು?. ಈ ಆಕ್ಷೇಪಣೆಯೂ ಇಂದ್ರಿಯ ಭೋಗಗಳು ಖಂಡಿತವಾಗಲೂ ಸತ್ಯ ಮತ್ತು ಯೋಗಿಯು ಅದನ್ನು ತ್ಯಜಿಸಿದ್ದಾನೆ ನಂತರ ಆಧ್ಯಾತ್ಮಿಕ ಪರಮಸುಖ ಸಿಗುವ ಭರವಸೆಯಿಲ್ಲ, ಆದ್ದರಿಂದ ಅದಕ್ಕಾಗಿ ಕಷ್ಟಪಡುವುದು ಅಗತ್ಯವಿಲ್ಲ ಎಂದು ಎಣಿಸುವವರದಾಗಿರುತ್ತದೆ. ಯೋಗಿಯು ಎಲ್ಲ ಇಂದ್ರಿಯ ಭೋಗಗಳನ್ನು ಸಂಪೂರ್ಣ ತ್ಯಜಿಸುವುದಿಲ್ಲ ಆದರೆ ಅವುಗಳ ಮೇಲೆ ನಿಯಂತ್ರಣ ಸಾಧಿಸಿದ್ದಾನೆ ಎಂದು ನಾವು ಈ ಹಿಂದಿನ ಪುಟಗಳಲ್ಲಿ ತಿಳಿಸಿದ್ದನ್ನು ಅರಿತವರಿಗೆ ಈ ಎರಡೂ ಭಾವನೆಗಳಲ್ಲಿನ ಪೊಳ್ಳುತನವು ಸ್ಪಷ್ಟವಾಗಿರುತ್ತದೆ. ಮಾನವ ಜೀವಿಯ ಪರಮಸುಖವು ಅನುಮಾನವಿಲ್ಲದ ಸಂಗತಿ, ಕೇವಲ ಅದನ್ನು ಕಂಡುಕೊಳ್ಳಬೇಕು ಎನ್ನುವುದನ್ನು ತಿಳಿಸಲಾಗಿದೆ. ಈ ಆಕ್ಷೇಪಣಕಾರರಿಗೆ ಅವರದೇ ದಾಟಿಯಲ್ಲಿ ಉತ್ತರವನ್ನು ಗೀತೆಯು ಈ ರೀತಿ ಹೇಳುತ್ತದೆ. "ಯೋಗ ಭ್ರಷ್ಟನಾದವನು ಕುಲೀನ ಹಾಗೂ ಶ್ರೀಮಂತ ಮನೆತನದಲ್ಲಿ ಜನಿಸುವನು, ಅಥವಾ ಇನ್ನೂ ವಿಶೇಷವೆಂದರೆ ಧೀಮಂತರಾದ ಯೋಗಿಗಳ ಕುಲದಲ್ಲಿಯೆ ಹುಟ್ಟುವನು. ಇಂಥ ಜನ್ಮವೆಂಬುದೇ ಲೋಕದಲ್ಲಿ ದುರ್ಲಭಕರವಾದುದು. ಪೂರ್ವಜನ್ಮದಲಾಗಿದ್ದ ಆ ಬುದ್ಧಿಸಂಯೋಗವನ್ನು ಪಡೆದುಕೊಳ್ಳುತ್ತಾನೆ ಮತ್ತು ಸಂಸಿದ್ಧಿಗಾಗಿ ಬಹುವಾಗಿ ಯತ್ನವನ್ನು ಮಾಡುವನು". ಅದೇ ಪೂರ್ವಾಭ್ಯಾಸ ದಿಂದ ಅವಷನಾಗಿಯೇ ಅವನು ಎಳೆಯಲ್ಪಡುತ್ತಾನೆ. ಯೋಗದ ಸಾಮಾನ್ಯ ಜಿಜ್ಞಾಸುವಾಗಿ ಪ್ರಯೋಗಾತ್ಮಕವಾಗಿ ಯೋಗವನ್ನು ಅಭ್ಯಾಸ ಮಾಡುತ್ತಿದ್ದರೂ ಕರ್ಮಫಲಕ್ಕಿಂತ ಹೆಚ್ಚಿನದನ್ನು ಪಡೆಯುವನು. ಆದರೆ ಪ್ರಯತ್ನದಿಂದ ತನ್ನ ಸರ್ವಶಕ್ತಿಯನ್ನು ಅದರಲ್ಲಿ ತೊಡಗಿಸಿ ಅಭ್ಯಾಸಮಾಡುವ ಯೋಗಿಯಾದರೋ ಶುದ್ಧನಾಗಿ ಅನೇಕ ಜನ್ಮಗಳ ನಂತರ ಪರಿಪೂರ್ಣನಾಗಿ ಮೋಕ್ಷವನ್ನು ಹೊಂದುತ್ತಾನೆ **6:41 to45.**

## ಪುನರ್ಜನ್ಮ

ಬಹಳಷ್ಟು ವಾದಗ್ರಸ್ತವಾದ ಮರುಜನ್ಮದ ವಿಷಯದ ವಿವರಣೆ ನೀಡಲು ಗೀತೆಯು ಹೆಚ್ಚಿನ ಮಹತ್ವ ಕೊಟ್ಟಿಲ್ಲ, ಆದರೆ ಕೇವಲ ಕೆಲವು ಉದಾಹರಣೆಗಳನಷ್ಟೇ ತಿಳಿಸಿದೆ . ಮನುಷ್ಯನು ಹಳೆಯ

ಬಟ್ಟೆಯನ್ನು ಬಿಸುಟು ಹೊಸ ಬಟ್ಟೆಯನ್ನು ತೊಡುವಂತೆ ಮತ್ತೆ ಬಾಲ್ಯದಿಂದ ವೃದ್ಧಾಪ್ಯದವರೆಗೆ ವಿವಿಧ ಘಟ್ಟಗಳಲ್ಲಿ ಸಾಗುವಂತೆ ಒಬ್ಬ ವ್ಯಕ್ತಿಯು ಒಂದು ದೇಹದಿಂದ ಇನ್ನೊಂದು ದೇಹಕ್ಕೆ ಸಾಗುವನು. ಆದ್ದರಿಂದ ಗೀತೆಯ ಕಾಲಕ್ಕೇ ಈಗಿರುವಂತೆಯೇ ಮರುಜನ್ಮದ ಸಿದ್ಧಾಂತವು ಹಿಂದೂಗಳಲ್ಲಿ ಒಂದು ಸಿದ್ಧವಾದ ತತ್ವವಾಗಿತ್ತೆಂಬ ನಿರ್ಧಾರಕ್ಕೆ ಬರಬಹುದು. ಹಿಂದುಗಳಲ್ಲದೆ ಅನೇಕ ಇತರ ಮತಗಳವರೂ ಈ ತತ್ವವನ್ನು ಒಪ್ಪಿರುತ್ತಾರೆ ಆದರೆ ವಿಜ್ಞಾನ ಪ್ರಪಂಚದಲ್ಲಿ ಆದರೋ ಇದಕ್ಕೆ ಸಾರ್ವತ್ರಿಕವಾದ ಒಪ್ಪಿಗೆ ಇಲ್ಲ. ಇದರ ವಿರುದ್ಧವಾಗಿ ಅನೇಕ ಹೆಸರಾಂತ ವಿಜ್ಞಾನಿಗಳು ಬರೆದಿದ್ದಾರೆ, ಆದರೆ ಅಷ್ಟೇ ಪ್ರಸಿದ್ಧರು ಇದರ ಬಗ್ಗೆ ತಮ್ಮ ನಂಬಿಕೆಯನ್ನು ಬಲವಾಗಿ ಪ್ರತಿಪಾದಿಸಿದ್ದಾರೆ. ಒಟ್ಟಾರೆ ಮರುಜನ್ಮದ ತತ್ವವು ತೀರ ಅಸಂಬಧ್ಧವೆಂದು ಹೇಳಲು ಬರುವುದಿಲ್ಲ. ಅದರ ವಿರುದ್ಧವಾಗಿ ಏನೆಲ್ಲ ಹೇಳಿದ ನಂತರವೂ ಅದರಲ್ಲಿ ಅನೇಕ ಸದಂಶವು ಇರುತ್ತದೆ. ಕೆಲವೊಂದು ಹೆಸರಾಂತ ಪಾಶ್ಚಾತ್ಯ ಬರಹಗಾರರು ಚಿಂತನಕಾರರು ಈ ತತ್ವದಲ್ಲಿನ ವಿಶೇಷ ಅಂಶಗಳನ್ನು ಹೊಗಳಿ ಹೇಳಿರುವುದರ ಸಾರವನ್ನು ಇಲ್ಲಿ ಕೊಡುತ್ತೇನೆ.

ವಿದ್ವಾಂಸರಾದ ಮ್ಯಾಕ್ಸ್ ಮುಲ್ಲರ್ ಹೀಗೆ ಹೇಳುತ್ತಾರೆ" ಪ್ರತಿಯೊಂದು ಒಳ್ಳೆಯ ಕೆಲಸವಾಗಲಿ ಅಥವಾ ಕೆಟ್ಟ ಕೆಲಸವಾಗಲಿ ಅಥವಾ ಆಲೋಚನೆಗಳಾಗಲಿ ಬೆಳೆದು ಪ್ರತಿಫಲವನ್ನು ಕೊಡುತ್ತದೆ. ಯಾರೊಬ್ಬರೂ ತಮ್ಮದೇ ಕರ್ಮ ಯಾ ಚಿಂತನೆಗಳ ಪರಿಣಾಮದಿಂದ ತಪ್ಪಿಸಿಕೊಳ್ಳುವುದು ಸಾಧ್ಯವೇಇಲ್ಲಾ, ಎಂಬ ಜನಸಾಮಾನ್ಯ ಭಾರತೀಯರ ಅಭಿಪ್ರಾಯವು ಎಂದಿಗೂ ಅನುಮಾನಾಸ್ಪದವಿಲ್ಲದ ವಿಷಯವೆಂದು ಪರಿಗಣಿಸಲ್ಪಟ್ಟಿದೆ. ಈ ಅಭಿಪ್ರಾಯವು ಸಾಧುವೋ ಅಸಾಧುವೋ ಎಂಬುದು ಪ್ರಶ್ನೆಯಲ್ಲ ಆದರೆ ಈ ನಂಬಿಕೆಯು ಪ್ರತಿಯೊಬ್ಬರಲ್ಲಿ ಒಂದು ಆಳವಾದ ಬೇರೂರಿದ ಜವಾಬ್ದಾರಿಯನ್ನು ಹೊರಿಸಿದೆ. ದೇವರನ್ನು ಅನ್ಯಾಯ ಮತ್ತು ಕ್ರೌರ್ಯದ ಬಗ್ಗೆ ದೂರುವುದರ ಬದಲು ತಮಗೆ ಬಂದೊದಗಿದ ದುರದೃಷ್ಟಗಳುಸಂಪೂರ್ಣಯಥಾ ಯೋಗ್ಯವೆಂದೂ ಹಿಂದಿನ ಕರ್ಮಗಳ ಸ್ವಾಭಾವಿಕ ಫಲವೆಂದು ಮತ್ತು ಹಿಂದಿನ ಋಣಗಳನ್ನು ತೀರಿಸುವ ಕ್ಷೇಮಮಾರ್ಗವೆಂದು ಬೋಧಿಸಲಾಗಿದೆ. ಅದೇ ಸಮಯಕ್ಕೆ ತತ್ವಶಾಸ್ತ್ರವು, ಕರ್ಮ - ಪರಿಣಾಮ ಇವುಗಳ ಜಾಲವನ್ನು ತುಂಡರಿಸಿ ಜೀವನು ತಿಳುವಳಿಕೆಯಿಂದ ಜ್ಞಾನಿಯಾಗಿ ತನ್ನ ಉಗಮ ಸ್ಥಾನಕ್ಕೆ ಹಿಂದಿರುಗಿದವನಾಗಿ ತಾನೇತಾನಾಗಿ ಇರುವನು ಎಂದು ಬೋಧಿಸಿದೆ". ಹೀಗಾದಾಗ ಮಾನವನು ಭೂಮಿಯ ಮೇಲೆ ಕ್ಷಣಕ್ಷಣಕ್ಕೂ ಬದಲಾಗುತ್ತಿರುವ ಬಂಧಗಳಿಂದ ಮತ್ತೆ ನೋವುಗಳಿಂದ ಎಂದೆಂದಿಗೂ ಪರಮಾತ್ಮನಾಗಿ( ವಿಶ್ವಾತ್ಮನಾಗಿ) ಮುಕ್ತನಾಗುತ್ತಾನೆ.( ಪುಟ **511,** ಭಾರತೀಯ ತತ್ವಶಾಸ್ತ್ರದ **6** ದರ್ಶನಗಳು).ವಿದ್ವಾಂಸ ಎ ಎ ಮ್ಯಾಕ್ ಡೋನೆಲ್ ಅಭಿಪ್ರಾಯ ಹೀಗಿದೆ:-" ಈ ಜನ್ಮದಲ್ಲಿ ಬಂದೊದಗಿದ ದುರದೃಷ್ಟಕ್ಕೆ ಅಥವಾ ಉಚ್ಚಾಯ ಸ್ಥಿತಿಗೆ, ಈ ಜನ್ಮದಲ್ಲಿ ಮಾಡಿದ ಕರ್ಮಗಳಿಗೆ ,ಬಹಳಷ್ಟು ಸಲ ಸ್ಪಷ್ಟವಾದ ಸಂಬಂಧವನ್ನು ಕಲ್ಪಿಸಲು ಆಗದಿದ್ದರೂ ಈ ವಿಚಾರಧಾರೆಯು ತೃಪ್ತಿಕರವಾದ ವಿವರಣೆಯನ್ನು ಕೊಡುವುದರಿಂದ, ಇದು ಭಾರತೀಯ ಮಾನಸದ ಮೇಲೆ ಅಚಲವಾದ ಹಿಡಿತವನ್ನು ಸಾಧಿಸಿದೆ. ನಮಗೆ ವಿಲಕ್ಷಣವೆಂದು ಕಂಡುಬರುವ

ಭಾರತೀಯ ಜನ್ಮಾಂತರದ ತತ್ವವು, ನೈತಿಕ ರಾಜ್ಯದ ನ್ಯಾಯದಾನದಲ್ಲಿ ತೃಪ್ತಿಕರ ಸಮಾಧಾನವನ್ನು ಕೊಡುವ ,ಹಾಗೂ ಅದೇ ಸಮಯಕ್ಕೆ ಪ್ರತಿಯೊಬ್ಬ ಮನುಷ್ಯನು ತನ್ನ ಪರಿಸ್ಥಿತಿಗಳ ನಿರ್ಮಾಣಕ್ಕೆ ತಾನೇ ಕಾರಣವೆಂಬ ಮೌಲ್ಯಾಧಾರಿತ ನೈತಿಕ ಸಿದ್ಧಾಂತವನ್ನು ಪ್ರತಿಪಾದಿಸುವ ದ್ವಿವಿದ ಮೌಲ್ಯವನ್ನು ಹೊಂದಿದೆ"( ಸಂಸ್ಕೃತ ಸಾಹಿತ್ಯದ ಚರಿತ್ರೆ ಪುಟ **388).**

ಶ್ರೀಮತಿ( ಕುಮಾರಿ) ಎಸ್.ಇ. ವಾಲೋ ಹೀಗೆ ಬರೆಯುತ್ತಾರೆ" ಮರುಜನ್ಮ ಮತ್ತು ಕರ್ಮ ಇವೆರಡು ಬೇರ್ಪಡಿಸಲಾಗದಷ್ಟು ಸಂಬಂಧವನ್ನು ಹೊಂದಿದೆ. ಈ ಎರಡು ಹಿರಿಯ( ಶ್ರೇಷ್ಠ) ನ್ಯಾಯದಾನವನ್ನು , ಸರಿಯಾಗಿಯೂ ಸಂಪೂರ್ಣವಾಗಿಯೂ ಅರ್ಥಮಾಡಿಕೊಂಡಾಗ ಅವು ಮನುಷ್ಯನು ತನ್ನ ಪ್ರಾರಬ್ಧಕ್ಕೆ ತಾನೇ ಹೊಣೆ ಎಂದು ತೋರಿಸುತ್ತದೆ,ಮತ್ತು ಅವನು ತನ್ನ ದುಃಖ ಕಷ್ಟಗಳಿಗೆ ಯಾವುದೋ ಕಾಣದ ಶಕ್ತಿಯನ್ನು ಹೊಣೆ ಮಾಡಲಾಗದು. ಅವನು ತನ್ನ ಪ್ರಗತಿಗೆ ತಾನೇ ಎಚ್ಚೆತ್ತುಕೊಳ್ಳಬೇಕೇ ಹೊರತು ಯಾವುದೇ ಸಂಪ್ರದಾಯವನ್ನೋ ಅಥವಾ ನಂಬಿಕೆಯನ್ನೋ ಕಾರಣ ಮಾಡಲಾಗದು ಮತ್ತು ತನ್ನ ಹಿಂದಿನ ತಪ್ಪುಗಳನ್ನು ತಿದ್ದಿಕೊಳ್ಳುತ್ತಾ ತನ್ನ ನೈಜ ರೂಪವನ್ನು( ಸ್ವಭಾವವನ್ನು) ತಿಳಿಯಬೇಕು".

ಇದೇ ರೀತಿಯ ಇನ್ನೂ ಅನೇಕ ಉಲ್ಲೇಖಗಳನ್ನು ಕೊಡುವುದು ಕಷ್ಟವಾಗಲಾರದು. ಆದರೆ ಧ್ಯಾನಯೋಗದ ಅಧ್ಯಯನಕ್ಕೆ, ಈ ವಿಚಾರ ಸರಣಿಯನ್ನು ನಾವು ಒಪ್ಪುತ್ತೇವೆಯೋ ಅಥವಾ ಇಲ್ಲವೋ ಎನ್ನುವುದು ಪ್ರಮುಖವಲ್ಲ ಎಂದು ಇಲ್ಲಿ ತಿಳಿಸುತ್ತೇವೆ .ಇದರ ಅಭ್ಯಾಸ ಮತ್ತು ಪರಿಣಾಮಗಳು ವರ್ತಮಾನದ ಜೀವನಕ್ಕೆ ಸಂಬಂಧಿಸಿದ್ದೇ ಹೊರತು ನೋಡದ ಭವಿಷ್ಯದ್ದಲ್ಲ.

ಹೊರಗಿನ ಪ್ರಭಾವಗಳ ಹೊಡೆತಕ್ಕೆ ಸಿಲುಕದೆ, ಮನುಷ್ಯನು ತನ್ನ ಮನಸ್ಸಿನ ಸಮತೋಲನವನ್ನು ಉಳಿಸಿಕೊಂಡು ಹೋಗುವುದು ಇದರ ಒಂದು ಮುಖ್ಯ ಉದ್ದೇಶ. ಇದಕ್ಕಾಗಿ ಯಾವುದೇ ಒಂದು ವಿಚಾರಧಾರೆಗೆ ನಮ್ಮ ನಂಬಿಕೆಯನ್ನು ಒಳಪಡಿಸಿಕೊಳ್ಳುವ ಅಗತ್ಯವಿಲ್ಲ. ಯೋಗದ ಒಂದೇ ಉದ್ದೇಶವೆಂದರೆ, ಇಂದ್ರಿಯ ಭೋಗದ ಆನಂದಕ್ಕಿಂತ ಇನ್ನು ಹೆಚ್ಚಿನ ರೀತಿಯ ಆನಂದವು ಇದೆ ಮತ್ತು ಆನಂದವೆನ್ನುವುದು ವಿಷಯಿತ್ವವೇ ಹೊರತು ವಿಷಯವಲ್ಲ ಎನ್ನುವುದನ್ನು ತೋರಿಸುವುದು. ಆತ್ಮನಲ್ಲಿ ಸಂಸ್ಥಿತವಾದ ಸುಯೋಗವಾದ ಪರಮಸುಖದ ಪ್ರಭಾವವನ್ನು ಪಡೆದುಕೊಳ್ಳಲು ಈ ಪರಮ ಸುಖವನ್ನು ಸಂಪಾದಿಸಿಕೊಳ್ಳಲು, ನೈತಿಕ ಜೀವನದೊಡಗೂಡಿದ ಏಕಾಗ್ರತೆಯನ್ನು ಧ್ಯಾನ ಯೋಗವು ಸೂಚಿಸುತ್ತದೆ.

## ಧ್ಯಾನಯೋಗದ ಮಹಿಮೆ

ಗೀತೆಯು ಧ್ಯಾನ ಯೋಗದ ಬಗೆಗೆ ತನ್ನ ಮೆಚ್ಚುಗೆಯನ್ನು ಈ ರೀತಿ ತಿಳಿಸಿದೆ- " ತಪಸ್ವಿಭ್ಯೋಧಿಕ ಯೋಗೀ ಜ್ಞಾನಿಭ್ಯೋಪಿಮತೋಧಿಕಃ/ ಕರ್ಮಿಭ್ಯಶ್ಚಾಧಿಕೋ ಯೋಗೀ ತಸ್ಮಾತ್ ಯೋಗಿ ಭವಾರ್ಜುನ//**(6-46)."** ತಪಸ್ವಿ ಗಳಿಗಿಂತಲೂ ಯೋಗಿಯು ಹೆಚ್ಚಿನವನು, ಜ್ಞಾನಿ ಗಳಿಗಿಂತಲೂ ಹೆಚ್ಚಿನವನು ಎಂದು ಮತವು. ಯೋಗಿಯು ಕರ್ಮಿಗಳಿಗಿಂತ ಹೆಚ್ಚಿನವನು. ಆದ್ದರಿಂದ ಎಲೈ ಅರ್ಜುನನೇ, ಯೋಗಿಯಾಗು". ಈ ಹೇಳಿಕೆಯನ್ನು ಕ್ರಮಬದ್ಧವಾಗಿ ಗಮನಿಸೋಣ. ಮೊದಲನೆಯದೆಂದರೆ, ತಪಸ್ಸಿಗಿಂತ ಯೋಗವು ಹೆಚ್ಚಿನದು. ತಪ್ಪಸ್ಸಿನ ಹೆಸರಿನಲ್ಲಿ ತನ್ನನ್ನೇ ಚಿತ್ರಹಿಂಸೆಗೆ ಒಳಪಡಿಸುವುದು ಪರಮಾರ್ಥಕ್ಕೆ ರಹದಾರಿಯಲ್ಲ. ನಿಜವೆಂದರೆ ಅದಕ್ಕೆ ವಿರುದ್ಧವಾದುದೇ ಆಗಿದೆ. ಯೋಗಿಯ ಅರ್ಹತೆಗಳನ್ನು ತಿಳಿಸುವಾಗ ದೈನಂದಿನ ಅಭ್ಯಾಸಗಳಲ್ಲಿ ಅತಿ ಕಠಿನ ಪರಿಶ್ರಮವನ್ನು ಕೈಬಿಡಬೇಕೆಂದು ತಿಳಿಸುವ ಒಂದು ಶ್ಲೋಕವನ್ನು ಈಗಾಗಲೇ ಉಲ್ಲೇಖಿಸಿದ್ದೇವೆ. ಇದನ್ನು ನೇರವಾಗಿ ಖಂಡಿಸುವ ಇನ್ನೊಂದು ಶ್ಲೋಕವು ಹೀಗಿರುತ್ತದೆ." ಅ ಶಾಸ್ತ್ರ ವಿಹಿತಂ______ ವಿದ್ಯಾಸುರ ನಿಶ್ಚಯಾನ್"**(17-5,6)."** ಯಾವ ಜನರು ಧಂಬಾಹಂಕಾರ ಕಾಮರಾಗ ಬಲಾನ್ವಿತರಾಗಿ ಸಂಯುಕ್ತರಾಗಿ ಶಾಸ್ತ್ರವಿಹಿತವಲ್ಲದ ಘೋರವಾದ ತಪಸ್ಸನ್ನು ಮಾಡುತ್ತಿರುವರೋ, ಶರೀರದಲ್ಲಿನ ಭೂತಗ್ರಾಮವನ್ನೂ ಶರೀರದೊಳಗೆ ಇರುವ ನನ್ನನ್ನೂ ಅಚೇತಸರಾಗಿ ಕೃಶಗೊಳಿಸುತ್ತಿರುವರೋ ಅವರನ್ನು ಅಸುರ ನಿಶ್ಚಯ ಉಳ್ಳವರೆಂದು ತಿಳಿದುಕೋ.ಹೋಲಿಕೆಯಿಂದ ನೋಡಿದಾಗ ತಪಸ್ಸು ಸಾಧಿಸಲು ಸುಲಭ ಸಾಧ್ಯವು. ನೈತಿಕ ಜೀವನ ಹಾಗೂ ಮನೋ - ಕೇಂದ್ರೀಕರಣಕ್ಕೆ ಹೋಲಿಸಿದಲ್ಲಿ ಅತಿ ಕಷ್ಟಕರವಾದ ತೀರ್ಥಯಾತ್ರೆಗಳೂ ಮತ್ತು ಕಠಿಣತರ ತಪಸ್ಸುಗಳೂ ಬಹಳಷ್ಟು ಸುಲಭ ಸಾಧ್ಯವು. ಹಾಗೆಯೇ ನೋಡಿದಲ್ಲಿ, ಎಲ್ಲ ಹೊರಗಿನ(ಬಾಹ್ಯ) ಧಾರ್ಮಿಕ ಅಭ್ಯಾಸಗಳು ಸಾರಾಸಗಟು ತಿರಸ್ಕಾರಕ್ಕೇನೂ ಗುರಿ ಪಡಿಸುವಂತಹುದಲ್ಲ.

ಬಾಹ್ಯ ಆಚಾರ( ವಿಧಿಗಳು), ಪ್ರತೀಕಗಳು ಮತ್ತು ಅಭ್ಯಾಸಗಳು ಬಹಳಷ್ಟು ಬಾರಿ ಅಧ್ಯಾತ್ಮಿಕ ಜೀವನದ ಶೀಘ್ರ ಹುಟ್ಟಿಗೆ ಸಹಾಯಕವಾಗುತ್ತದೆ. ಈ ಕಾರಣಕ್ಕಾಗಿಯೇ, ವಿಶ್ವದ ಹಲವು ಧರ್ಮಗಳಲ್ಲಿ ಸಂಪ್ರದಾಯಗಳು ಮತ್ತು ಧರ್ಮಾಚರಣೆಗಳು ತಮ್ಮ ಸ್ಥಾನವನ್ನು ಪಡೆದಿದೆ. ಸ್ಥೂಲವಾದುದು ಸೂಕ್ಷ್ಮವನ್ನು ಪ್ರತಿನಿಧಿಸುತ್ತದೆ ಮತ್ತು ಸೂಕ್ಷ್ಮವನ್ನು ಬೇಗ ಗ್ರಹಿಸಲು ಸಹಾಯಕವಾಗುತ್ತದೆ ಎನ್ನುವುದು ಬಹಳಷ್ಟು ಸತ್ಯ. ಎಲ್ಲಾ ಬಾಹ್ಯ ಆಚರಣೆಗಳನ್ನು ವರ್ಜಿಸಿ ಜನರು ಕೇವಲ ಅಧ್ಯಾತ್ಮ ಸೂಕ್ಷ್ಮ ವಿಷಯಗಳನ್ನಷ್ಟೇ ಹೊಂದಬೇಕು ಎಂದರೆ ತೆಂಗಿನ ಮರದಲ್ಲಿ ಹೊರಗಿನ ಗುಂಜುರಹಿತವಾದ ತೆಂಗಿನ ತಿರುಳು ಅಷ್ಟೇ ಬೆಳೆಯಬೇಕು ಎಂದು ಹೇಳಿದಂತೆ ಆಯಿತು .ಹೊರಗಿನ ಗುಂಜು ಒಳಗಿರುವ ಅಮೂಲ್ಯ ತೆಂಗಿನ ತಿರುಳನ್ನು ರಕ್ಷಿಸುವುದರಿಂದ ಅದು ಸಹ ಮುಖ್ಯವೇ. ಆದ್ದರಿಂದ ತಪಶ್ಚರ್ಯೆಯು ತನ್ನದೆ ಆದ ಮಹತ್ವವನ್ನು ಹೊಂದಿದೆ. ಆದರೆ ಯೋಗವು ಅದರ ತಿರುಳಾಗಿದೆ. ಇದಲ್ಲದೆ, ಬುದ್ಧಿವಂತಿಕೆಗಿಂತ ಯೋಗವು ಹೆಚ್ಚಿನದು. ತರ್ಕವು ಸತ್ಯ ನಿಷ್ಕರ್ಷೆಗಾಗಿ ಮಹತ್ವದ್ದಾಗಿದೆ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಆದರೆ ಸಾಧಕನು ತಾನು

ನಂಬುವ ಸತ್ಯವನ್ನು ಗ್ರಹಿಸುವುದು ಅದರ ಬಗೆಗಿನ ವಿಚಾರವಾದಕ್ಕಿಂತ ಹೆಚ್ಚಿನ ಮಹತ್ವದ್ದು. ಆ ರೀತಿಯ ಗ್ರಹಿಕೆಯು ಯೋಗಿಗೇ ಅಥವಾ ಯಾರು ತಾನು ಏನನ್ನು ತಿಳಿಯಲು ಇಚ್ಛಿಸುತ್ತಾನೊ ಅದರ ಮೇಲೆಯೇ ಮನಸನ್ನು ಕೇಂದ್ರೀಕರಿಸುವ ನಿಯಂತ್ರಣವನ್ನು ಸಾಧಿಸಿರುವನೋ ಅಂತಹವರಿಗೆ ಶೀಘ್ರವಾಗಿ ಸಾಧ್ಯವಾಗುವುದು. ಕೇವಲ ಧಾರ್ಮಿಕ ಗ್ರಂಥಗಳನ್ನು ಪಠಿಸುವುದು, ವಿಚಾರ ಭರಿತ ಪ್ರವಚನವನ್ನು ಶ್ರವಣ ಮಾಡುವುದು ಮತ್ತು ಅದರ ಬಗೆಗೆ ಮನನ ಮಾಡುವುದು, ಇವುಗಳು ತಮ್ಮಷ್ಟಕ್ಕೆ ಮೌಲಿಕವಾದರೂ, ನಾವು ಎಲ್ಲಿಯವರೆಗೆ ಮನನದ ನಿರ್ಣಯಗಳ ಕಡೆಗೆ ನಮ್ಮ ಭಾವನೆಗಳನ್ನು ಪಳಗಿಸುವುದಿಲ್ಲವೋ , ಅಲ್ಲಿಯವರೆಗೆ ಇವಿಷ್ಟೇ ಪ್ರಯೋಜನಕ್ಕೆ ಬಾರದು. ಕಟ್ಟಕಡೆಯದಾಗಿ ಹೇಳಬೇಕೆಂದರೆ ಯೋಗವು ಕರ್ಮಕ್ಕಿಂತ ಹೆಚ್ಚಿನ ದಾಗುವುದು. ಕರ್ಮ ಎನ್ನುವುದು ಒಂದು ಆಚಾರ ಎಂದರ್ಥ ಮಾಡಿದಾಗ ಈ ವಾಕ್ಯಕ್ಕೆ ಇನ್ನು ಏನು ವಿವರಣೆ ಬೇಕಿಲ್ಲ. ( ತಪಸ್ಸಿನ ಬಗೆಗೆ ಈ ಹಿಂದೆ ಹೇಳಿದ್ದನ್ನು ಗಮನಿಸಿ). ಆದರೆ ಕರ್ಮ ಪದಕ್ಕೆ ಕೆಲಸ ಎಂಬ ಅರ್ಥಮಾಡಿದಾಗ,ಒಂದು ವಿವರಣೆಯ ಅಗತ್ಯವಿದೆ. ಎಲ್ಲ ಕಾರ್ಯವು ಆಲೋಚನೆಯ ಫಲಾನುಭವವೇ, ಮತ್ತು ಮಹಾತ್ಮರ ಅತ್ಯುತ್ತಮ ಕ್ರಿಯೆಗಳೂ ಸಹ ಅವರ ಆಲೋಚನೆಗಳ ಔನ್ನತ್ಯದ ಪ್ರಾತಿನಿಧ್ಯದ ಒಂದು ಅಂಶ. ಕ್ರಿಯೆಗಳು ಚಿತ್ತದ ಹೊರಗಿನ ಪ್ರತೀಕವಷ್ಟೇ ಆದ್ದರಿಂದ ಚಿತ್ತದ ನಿಯಂತ್ರಣವು ಕ್ರಿಯೆಗಿಂತ ಬಹಳಷ್ಟು ಹೆಚ್ಚಿನ ಮಟ್ಟದ್ದು. ಪ್ರಪಂಚದ ಮಹಾತ್ಮರೆಲ್ಲರೂ ಯಾವಾಗಲೂ ಸಮಾಧಾನಚಿತ್ತರು, ಮೌನಿಗಳು ಮತ್ತು ಪ್ರಚಾರಪ್ರಿಯರಲ್ಲದವರು ( ಅಜ್ಞಾತರೂ). ಅವರು ಏನೂ ಕೆಲಸವನ್ನು ಮಾಡದೆ ಸುಮ್ಮನೆ ಇರುವಾಗಲೂ ಅವರು ಸೋಮಾರಿಗಳಲ್ಲ. ಅವರ ಆಲೋಚನೆ ತ್ವರಿತವಾಗಿ ಹರಡಿ ಸಾವಿರಾರು ಒಳ್ಳೆಯ ಜನರನ್ನು ಪ್ರಭಾವಿತಗೊಳಿಸುತ್ತದೆ ಮತ್ತು ಅವರನ್ನು ನಿರಂತರ ಕಾರ್ಯದಲ್ಲಿ ತೊಡಗಿಸುತ್ತದೆ. ಹಾಗಾಗಿ ಧ್ಯಾನಯೋಗಿಯು ತಪಸ್ವಿಗಿಂತ ,ತತ್ವಜ್ಞಾನಿಗಿಂತ, ಮತ್ತುಕರ್ಮಿಗಿಂತ ಹೆಚ್ಚಿನವನು. ತತ್ವಜ್ಞಾನಿ ಎಮರ್ಸನ್ ಹೇಳುವಂತೆ" ಸಂತರು ಎಲ್ಲ ಮನುಷ್ಯರನ್ನು ತಮ್ಮ ಆದೇಶಗಳಿಂದ ಆಳುತ್ತಾರೆ". ಅವನು ಇಡೀ ವಿಶ್ವದ ಮಾಲಿಕನು. ಆದಕಾರಣ ಯೋಗಿಯಾಗು ,ಎಂದು ಶ್ರೀಕೃಷ್ಣನು ಹುರಿದುಂಬಿಸಿದನು.

" ಸಮತ್ವಂ ಯೋಗ ಉಚ್ಯತೆ" ಸಮಚಿತ್ತವೇ ಯೋಗವು. ಕರ್ಮಯೋಗಿಯು ತನ್ನ ಆಲೋಚನಾ ಪ್ರಪಂಚವನ್ನು ಕರ್ಮಗಳಿಂದ ನಿಯಂತ್ರಿಸಲು ಪ್ರಯತ್ನಿಸುತ್ತಾನೆ. ಆದರೆ ಧ್ಯಾನಯೋಗಿಯು ತನ್ನ ಕರ್ಮಗಳನ್ನು ಆಲೋಚನೆಯಿಂದ ನಿಯಂತ್ರಿಸುತ್ತಾನೆ. ಕರ್ಮ ಮತ್ತು ಆಲೋಚನೆಗಳು ಪರಸ್ಪರ ಅಭಿನ್ನವಾದ್ದರಿಂದ ಇಬ್ಬರೂ ಸಮಾನ ಮಹಿಮಾನ್ವಿತರೇ. ನಿಜವಾಗಿ ಹೇಳಬೇಕೆಂದರೆ, ನಿಯಂತ್ರಣದ ಗುಟ್ಟನ್ನು ಅರಿಯದವರು ಪರಿಪೂರ್ಣ ಕರ್ಮಯೋಗಿ ಯಾಗಲಾರರು ಅಂತೆಯೇ ಪರಿಪೂರ್ಣ ಕರ್ಮಯೋಗಿಯಾಗದೆ ಯಾರೊಬ್ಬರೂ ತಮ್ಮ ಮನಸ್ಸಿನ ಮೇಲೆ ನಿಯಂತ್ರಣವನ್ನು ಹೊಂದಲಾರರು. ಆದ್ದರಿಂದ ಕರ್ಮವನ್ನು ಮತ್ತು ಮನಸ್ಸನ್ನು

ಸಮಾನವಾಗಿಯೇ ವೃದ್ಧಿಪಡಿಸಬೇಕು. ಈ ಎರಡರ ಧ್ಯೇಯವು ಮನಸ್ಥೈರ್ಯವೇ, ಸಮಚಿತ್ತತೆಯೇ. ಈ ಒಂದು ಸ್ಥಿತಿಗೆ ಸಂಸ್ಕೃತದಲ್ಲಿ ಸಮಾಧಿ ಎಂದು ಹೇಳುತ್ತಾರೆ . ಸಮಾಧಿ ಎಂದರೆ ಚಿತ್ತವನ್ನು ಸ್ಥಾಪಿಸುವದು(ಕೇಂದ್ರೀಕರಿಸುವುದು)ಎಂದರ್ಥ. ಎಲ್ಲ ಸಾಧಾರಣ ವ್ಯಕ್ತಿಗಳು ಪ್ರಜ್ಞಾಸ್ಥಿತಿ ಅಪ್ರಜ್ಞಾಸ್ಥಿತಿ ಎಂಬ ಎರಡು ಸ್ಥಿತಿಗಳನ್ನು ಅನುಭವಿಸುತ್ತಾರೆ. ಇದರಲ್ಲಿ ಅಪ್ರಜ್ಞಾಸ್ಥಿತಿಗಿಂತ ಪ್ರಜ್ಞಾಸ್ಥಿತಿಯು ಉತ್ತಮ. ಅಪ್ರಜ್ಞಾ ಸ್ಥಿತಿಯಲ್ಲಿ ಮನೋವೃತ್ತಿಗಳು ಸುಪ್ತವಾಗಿ ಅಥವಾ ಜಡವಾಗಿ (ಕುಂಠಿತವಾಗಿ)ಇರುತ್ತದೆ ಮತ್ತು ಪ್ರಜ್ಞಾ ಸ್ಥಿತಿಯಲ್ಲಿ ಮನೋವೃತ್ತಿಗಳು ಕಾರ್ಯಪ್ರವೃತ್ತವಾಗಿರುತ್ತವೆ. ಆಳವಾದ ಅಂತರ್ಮುಖತೆ ಮತ್ತು ಶ್ರದ್ಧೆಯಿಂದ ಯೋಗಿಯು ತನ್ನ ಚಿತ್ತವನ್ನು ಇನ್ನೂ ಎತ್ತರದ ಮಟ್ಟಕ್ಕೆ ಕೊಂಡೊಯ್ಯಲು ಅನುವಾಗಿರುತ್ತಾನೆ. ಈ ಸ್ಥಿತಿಯಲ್ಲಿ ಯೋಗಿಯ ಚಿತ್ತವೃತ್ತಿಯು ಎಷ್ಟು ಸೂಕ್ಷ್ಮವಾಗಿರುತ್ತದೆಂದರೆ ಮನಸ್ಸಿಗೆ ,ತರ್ಕದ ಅವಶ್ಯಕತೆಯಿಲ್ಲದೆ ವಿಷಯ ಗ್ರಹಿಕೆಯನ್ನೂ, ಉದ್ವೇಗ ವಿಲ್ಲದೆ ಸಂವೇದನೆಯನ್ನು ಮತ್ತು ಅಹಂಕಾರವಿಲ್ಲದೆ ನಿರ್ಣಯ ನಿರ್ಧಾರಗಳನ್ನು ಮಾಡುವುದು ಸಾಧ್ಯವಾಗುತ್ತದೆ. ಇದು ಸಮಾಧಿ .ಯಾರು ಆತ್ಮನಿಗ್ರಹದಿಂದ ಈ ಸ್ಥಿತಿಯನ್ನು ತಲುಪುವರೋ ಅವರನ್ನು ಸಮಾಹಿತ ಯುಕ್ತ ಮತ್ತು ಪರಮ ಯೋಗಿ ಎಂದು ಕರೆಯುತ್ತಾರೆ.

# ಉಪಸಂಹಾರ

ಈ ಪುಸ್ತಕದ ಪ್ರಾರಂಭದಲ್ಲಿ ಎತ್ತಿದ ಪ್ರಶ್ನೆಗೆ ನಾವು ಒಂದು ಉತ್ತರವನ್ನು ರೂಪಿಸುವುದಕ್ಕಾಗಿ ಹಿಂದಿನ ಪುಟಗಳಲ್ಲಿ ಹೇಳಿರುವ ವಿಷಯಗಳನ್ನು ಸಂಕ್ಷಿಪ್ತವಾಗಿ ನೆನಪು ಮಾಡಿಕೊಳ್ಳುತ್ತೇವೆ. ಭಗವದ್ಗೀತೆಯು, ಬ್ರಹ್ಮವಿದ್ಯೆ ಮತ್ತು ಯೋಗಶಾಸ್ತ್ರದ ಮೇಲೆ ಇರುವ ಒಂದು ಸ್ಮೃತಿ ಗ್ರಂಥ. ಬ್ರಹ್ಮವಿದ್ಯೆ ಅಥವಾ ಬ್ರಹ್ಮದ ವಿಷಯದ ಜ್ಞಾನವನ್ನು ಹೊಂದುವಲ್ಲಿ ಯೋಗವು ಒಂದು ಅನಿವಾರ್ಯವಾದ ಸ್ಥಿತಿ. ಈ ಅನಿವಾರ್ಯತೆ ಎಂಬುದು ಕೇವಲ ಗೀತೆಯಲ್ಲಿ ಬ್ರಹ್ಮ ವಿಷಯದ ಬಗೆಗೆ ತಿಳಿಸಿರುವ ಬಹಳಷ್ಟು ಅಧ್ಯಾಯಗಳಲ್ಲಿನ ವಿವರಗಳನ್ನು ಗಮನಿಸಿದಾಗ ಹೊರಹೊಮ್ಮುವುದಷ್ಟೇ ಅಲ್ಲ ಕೆಳಗಿನ ವಾಕ್ಯಗಳಿಂದಲೂ ಬ್ರಹ್ಮವನ್ನು ಪಡೆಯುವುದನ್ನು ಯೋಗವೆಂದೇ ಹೇಳಲಾಗಿದೆ." ಯತ್ರ ನಚ ವೈಃಯಂ ಸ್ತಿತಶ್ಚಲತಿ ತತ್ವಶಃ"( ಎಲ್ಲಿ ನಿಂತಾಗ ಸತ್ಯವನ್ನಲ್ಲದೆ ಮತ್ತೊಂದರತ್ತ ತಿರುಗುವುದಿಲ್ಲವೋ") ಎಂಬಲ್ಲಿಯೂ ಸಹ ಯೋಗದ ಬಗೆಗೆ ಹೇಳಲಾಗಿದೆ. ಮನಸ್ಸಿನ ಯಾವ ಸ್ಥಿತಿಯಲ್ಲಿ ಸತ್ಯದ ಅಂದರೆ ಬ್ರಹ್ಮದತ್ತ ನೆಟ್ಟ ದೃಷ್ಟಿಯು ಮತ್ತೊಂದರತ್ತ ಕದಲುವುದಿಲ್ಲವೊ ಅದನ್ನು ಯೋಗವೆಂದು ನೇರವಾಗಿ ನಮಗೆ ಹೇಳಲಾಗಿದೆ.

ಬ್ರಹ್ಮ ವಿದ್ಯೆಯನ್ನು ಪಡೆಯುವ ಸಾಧನ ವಾಗಿರುವ ಯೋಗವನ್ನು ಗೀತೆಯಲ್ಲಿ ಸಮಚಿತ್ತತೆ ಎಂದು ವ್ಯಾಖ್ಯಾನಿಸಲಾಗಿದೆ. ಪುರಾತನ ಹಾಗೂ ನೂತನ ಜಾಡಿನ ಅನೇಕ ಟೀಕೆ ಟಿಪ್ಪಣಿಗಳು ಮತ್ತು ಭಾಷ್ಯಗಳಲ್ಲಿ ಯೋಗವೆಂದರೆ ಏನೆಂದು ವಿವರಿಸುವ ಪ್ರಯತ್ನಗಳು ನಡೆದು ಗೀತೆಯ ಮೂಲ ಸಾರ ಏನೆಂಬುದನ್ನು ತಮ್ಮ ತಮ್ಮ ಮಾರ್ಗಗಳಲ್ಲಿ ತಿಳಿಸಲಾಗಿದೆ. ಅತ್ಯಂತ ಪುರಾತನ ಭಾಷ್ಯ ವಾದ ಶಂಕರಾಚಾರ್ಯರ ಭಾಷ್ಯದಲ್ಲಿ ಶ್ರೀ ಕೃಷ್ಣನು ಅರ್ಜುನನಿಗೆ ಪ್ರವೃತ್ತಿ ಮಾರ್ಗ ಮತ್ತು ನಿವೃತ್ತಿಮಾರ್ಗಗಳೆಂಬ ವಿವಿಧವೈದಿಕ ಧರ್ಮಭೋದಿಸಿದನೆಂದು ಹೇಳುತ್ತಾರೆ. ಮತ್ತು ಭಾಷ್ಯಕಾರರ ಮತದಂತೆ ಜ್ಞಾನಯೋಗದಿಂದ ಪರಮಸುಖಅಥವಾ ಮೋಕ್ಷವನ್ನು ಹೊಂದಲು ಸಾಧ್ಯ. ತದನಂತರದ ಭಾಷ್ಯ ಕಾರರಾದ ರಾಮಾನುಜಾಚಾರ್ಯರ ಪ್ರಕಾರ, ಗೀತೆಯು ಜ್ಞಾನ ಮತ್ತು ಕರ್ಮಗಳಿಂದ ಅವಲಂಬಿತವಾದ ಭಕ್ತಿಯನ್ನು ತಿಳಿಸಲು ಹೊರಟಿದೆ (ಜ್ಞಾನ ಕರ್ಮಾನು ಗೃಹೀತ ಭಕ್ತಿಯೋಗ). ನಿಂಬಾರ್ಕಚಾರ್ಯರ ಪದ್ಧತಿಯು ರಾಮಾನುಜಾಚಾರ್ಯರಿಗಿಂತ ಸ್ವಲ್ಪ ಭಿನ್ನವಾಗಿದ್ದರೂ, ಅದು ಭಕ್ತಿ ಯೋಗವನ್ನೇ ಗೀತೆಯ ಮೂಲಸಾರವೆಂದುಹೇಳುವುದೆಂದು ಗುರುತಿಸಬಹುದು. ಮದ್ವಾಚಾರ್ಯರೂ ಸಹ ಭಕ್ತಿಯನ್ನೇ ಬೋಧಿಸುತ್ತಾರಾದರೂ ಅವರ ಪ್ರಕಾರ ಜ್ಞಾನ( ಬುದ್ಧಿ)ಯೋಗವು ಯೋಗದ ಪ್ರಧಾನ( ಮೂಲ) ಅರ್ಥ ಮತ್ತು ಮೋಕ್ಷಕ್ಕೆ ಅತ್ಯಗತ್ಯ ನಿಯಮ. ರಾಮಾನುಜ ಮತ್ತು ಮಧ್ವರಂತೆ, ವೈಷ್ಣವ ಸಂಪ್ರದಾಯಕ್ಕೆ ಸೇರಿದ ಆದರೆ ಇವರಿಬ್ಬರ ಪಂಥಕ್ಕೆ ಹೊರತಾದ ಅದ್ವೈತವನ್ನು ಮಾರ್ಪಡಿಸಿ ನಿರೂಪಿಸಿದ ವಲ್ಲಭಾಚಾರ್ಯರು ಭಗವಂತನ ದಿವ್ಯ

ಅನುಗ್ರಹವನ್ನು ಸಂಪಾದಿಸುವ ಭಕ್ತಿಯನ್ನೇ ಗೀತೆಯು ಪ್ರತಿಪಾದಿಸುತ್ತದೆ ಎಂದು ಹೇಳುತ್ತಾರೆ. ಆನಂತರದ ಕಾಲದ, ಮರಾಠಿಯಲ್ಲಿ ವಿದ್ವತ್ಪೂರ್ಣ ಭಾಷ್ಯವನ್ನು ಬರೆದ ಮಹಾರಾಷ್ಟ್ರದ ಜ್ಞಾನೇಶ್ವರರು, ಬಹಳಷ್ಟು ಶಂಕರರ ಅಭಿಪ್ರಾಯವನ್ನೇ ಬಿಂಬಿಸುವ ಪ್ರಖ್ಯಾತ ಜ್ಞಾನೇಶ್ವರಿಯಲ್ಲಿ ಭಕ್ತಿಯನ್ನು  ವಿಶೇಷವಾಗಿ  ಎತ್ತಿಹಿಡಿದಿದ್ದಾರೆ.  ಇತ್ತೀಚಿನ ಬರಹಗಾರರಾದ ಡಾಕ್ಟರ್ ಥಿಬೌಟ್ ಗೀತೆಯು ಭಾಗವತ ಸಂಪ್ರದಾಯವನ್ನೇ ಮುಖ್ಯವಾಗಿ ಪ್ರತಿನಿಧಿಸುತ್ತದೆ ಎನ್ನುತ್ತಾರೆ. ಗೀತೆಯನ್ನು ನಾಸ್ತಿಕ ಪಂಥದ ಪ್ರಭಾವವನ್ನು ಎದುರಿಸಲು ಉದ್ಭವಿಸಿದ , ಒಂದು ಆಸ್ತಿಕ ಪ್ರತಿಕ್ರಿಯೆ ಎಂದು ಡಾಕ್ಟರ್ ಸರ್ ಆರ್ ಜಿ ಭಂಡಾರ್ಕರ್ ರವರು ಹೇಳಿರುತ್ತಾರೆ. ಅವರು ಯೋಗದ ಬಗೆಗೆ ಹೆಚ್ಚೇನು   ತಿಳಿಸದೆ ಇದ್ದರೂ" ಯೋಗದ ಸ್ಥಿತಿಯಲ್ಲಿರುವ ಮನಸ್ಸಿನ ಪ್ರಕಾರವು ಒಂದು ನಿರ್ಧಾರಿತ ಮನಸ್ಸು" ಎಂದು ಹೇಳಿರುತ್ತಾರೆ.

ಕೋಲ್ಕತ್ತಾದ ಪಂಡಿತ ಸೀತಾನಾಥ ತತ್ವಭೂಷಣರು, ತಮ್ಮ" ಕೃಷ್ಣ ಮತ್ತು ಗೀತೆ( ಪುಟ 177)"  ಪುಸ್ತಕದಲ್ಲಿ ಯೋಗದ ಬಗ್ಗೆ ಗೀತೆಯಲ್ಲಿ ತಿಳಿಸಿರುವ ವಿವರಣೆಯ ಬಗೆಗೆ ಹೆಚ್ಚೇನು ಪ್ರಾಮುಖ್ಯತೆಯನ್ನು ಕೊಡದೆ, ಯೋಗವೆಂದರೆ ಹೆಚ್ಚುಕಡಿಮೆ ಧ್ಯಾನಯೋಗದೊಡನೆ ಮತ್ತು ನಂತರ ಭಕ್ತಿಯೊಡನೆ ಗುರುತಿಸಿದ್ದಾರೆ. ಅವರು ಗೀತೆಯ ತತ್ವವು ಮಾಯಾವಾದಕ್ಕೆ ತೀರ ವಿರುದ್ಧವಾದ ಭೇದಾಭೇದ ವಾದವೆಂದು ಯೋಚಿಸಿದ್ದಾರೆ( ಪುಟ  249).
ಮದ್ರಾಸನ  ಪ್ರೊಫೆಸರ್ ಎಂ ರಂಗಾಚಾರ್ಯರವರು ಇತ್ತೀಚೆಗೆ ಪ್ರಕಟಪಡಿಸಿದ ತಮ್ಮ ಭಗವದ್ಗೀತೆಯ ಮೇಲಿನ  ತರಗತಿಯ ಉಪನ್ಯಾಸ ಮಾಲಿಕೆಯಲ್ಲಿ " ನಡತೆಯ ಬಗೆಗಿನ ಹಿಂದೂ ತತ್ವಶಾಸ್ತ್ರ"  ಎಂಬ ಹಿರಿಯ ಪ್ರಬಂಧದಲ್ಲಿ, ಪ್ರಬಂಧದ ಹೆಸರೇ ಸೂಚಿಸುವಂತೆ ನೈತಿಕತೆಯ ಬಗೆಗೆ ಹೆಚ್ಚಿನ  ಒತ್ತು ಕೊಟ್ಟಿದ್ದಾರೆ. ಪೂನಾದ ಶ್ರೀ ಬಾಲಗಂಗಾಧರ ತಿಲಕರು ಗೀತೆಯಲ್ಲಿ ಯೋಗವೆಂದರೆ ಕರ್ಮಯೋಗವೇ ಎಂದೆಣಿಸಿದ್ದಾರೆ. ಅವರ ಪ್ರಕಾರ ಗೀತೆಯ  ಮುಖ್ಯ ತತ್ವವೆಂದರೆ  ಜ್ಞಾನಿಯು ವಿಶ್ವದ ಒಳಿತಿಗಾಗಿ ಕರ್ಮ ಮಾಡಬೇಕು. ಅವರು ಈ ಕಾರಣಕ್ಕಾಗಿ ಗೀತೆಯನ್ನು ಕರ್ಮಯೋಗ ಶಾಸ್ತ್ರ ಎಂದು ಹೆಸರಿಸುತ್ತಾರೆ. ಈ ವಿದ್ವಾಂಸರು ಗೀತೆಯಲ್ಲಿ ಕರ್ಮದ ಸ್ಥಾನಮಾನದ ಬಗೆಗೆ ವಿವಾದಾಸ್ಪದ ಹೇಳಿಕೆಯನ್ನು ನೀಡಿರುವುದಲ್ಲದೇ ಮಿಕ್ಕ ಎಲ್ಲಾ ಭಾಷ್ಯಕಾರರಂತಲ್ಲದೆ  " ಗೀತೆಯು ಜ್ಞಾನಿಗಳಿಗಷ್ಟೇ ಮೀಸಲಾದದ್ದು ಹೊರತು ಮೋಕ್ಷದ ಹಂಬಲಿಗರಿಗಲ್ಲ " ಎನ್ನುತ್ತಾರೆ.

ಗೀತೆಯಲ್ಲಿ ಕರ್ಮದ ಸ್ಥಾನವು ಏನೆಂಬುದನ್ನು ವಿಚಾರಿಸುವುದು ನಮ್ಮ ಉದ್ದೇಶವಾಗಬೇಕಿಲ್ಲಾ. ಏಕೆಎಂದರೆ ಈ ಹಿಂದಿನ ಪುಟಗಳಲ್ಲಿ  ಗೀತೆಯಲ್ಲಿ ಯೋಗವೆಂದರೆ ಸಮಚಿತ್ತತೆ ಎಂದು ವಿವರಿಸಲಾಗಿದೆ ಮತ್ತುಈ ವ್ಯಾಖ್ಯಾನವೇ ಕರ್ಮ,  ಧ್ಯಾನ,ಜ್ಞಾನ , ಮತ್ತು ಭಕ್ತಿ ಇವೆಲ್ಲಕ್ಕೂ ಸಲ್ಲುತ್ತದೆ. ಹಾಗಾಗಿಯೇ ಶ್ರೀಕೃಷ್ಣನು ಹೇಳುತ್ತಾನೆ
"  ಧ್ಯಾನೇನಾತ್ಮನಿ  ಪಶ್ಯಂತಿ ಕೆಚಿದಾತ್ಮಾನಮಾತ್ಮನಾ/ ಅನ್ಯೇ ಸಾಂಖ್ಯೇನ ಯೋಗೇನ

ಕರ್ಮಯೋಗೇನ ಚಾಪರೇ// ಅನ್ಯೇ ತ್ವೇವಮಜಾನನ್ತಃ ಶ್ರುತ್ವಾ ನ್ಯೇಭ್ಯ ಉಪವಾಸತೇ/ ತೇಪಿಚಾತಿತರನ್ತ್ಯೇವ ಮೃತ್ಯುಂ ಶೃತಿ ಪರಾಯಣಃ//(13-24,25). " ಕೆಲವರು ಧ್ಯಾನದಿಂದ ಆತ್ಮನಲ್ಲಿ ಆತ್ಮನನ್ನು ಆತ್ಮನಿಂದ ಕಂಡುಕೊಳ್ಳುತ್ತಾರೆ. ಮತ್ತೆ ಕೆಲವರು ಸಾಂಖ್ಯ ಯೋಗದಿಂದ( ಕಂಡುಕೊಳ್ಳುವರು), ಮತ್ತು ಕೆಲವರು ಕರ್ಮಯೋಗದಿಂದ( ಕಂಡುಕೊಳ್ಳುವರು). ಆದರೆ ಬೇರೆ ಕೆಲವರು ಹೀಗೆ ತಿಳಿದುಕೊಳ್ಳದೆ ಮತ್ತೊಬ್ಬರಿಂದ ಕೇಳಿ ಉಪಾಸನೆ ಮಾಡುತ್ತಾರೆ. ಅವರೂ ಶೃತಿಪರಾಯಣರಾದ್ದರಿಂದ ಮೃತ್ಯುವನ್ನು ದಾಟಿಯೇ ತೀರುತ್ತಾರೆ. ". ಇಲ್ಲಿ ಧ್ಯಾನಯೋಗ ಮತ್ತು ಕರ್ಮಯೋಗವನ್ನು ಅದೇ ಹೆಸರಿನಿಂದ ಸ್ಪಷ್ಟವಾಗಿ ಗುರುತಿಸಲ್ಪಟ್ಟಿದೆ. ಜ್ಞಾನಯೋಗವನ್ನು ಅದರ ಇನ್ನೊಂದು ಹೆಸರಾದ ಸಾಂಖ್ಯಯೋಗ ಎನ್ನುವ ಹೆಸರಿನಿಂದ ಕರೆಯಲಾಗಿದೆ, ಕಾರಣವೆಂದರೆ ಹಿಂದಿನ ಅಧ್ಯಾಯದಲ್ಲಿ(2-39) ಅದು ಸಾಂಖ್ಯರಿಗೇ ಹೇಳಲಾದದ್ದೆಂದು ಸ್ಪಷ್ಟವಾಗಿದೆ.

ಉಪಾಸನೆ ಎಂಬ ಪದವು ಸ್ಪಷ್ಟವಾಗಿಯೇ ನಂಬಿಕೆಯೊಡನೆ ಕೂಡಿದ(ಸಹದರ್ಮಹೊಂದಿದ) ಭಕ್ತಿಗೆ ಸೇರಿದ್ದಾಗಿದೆ. ಹೀಗಾಗಿ ಈ ನಾಲ್ಕೂ ಆತ್ಮಸಾಕ್ಷಾತ್ಕಾರದೆಡೆಗೆ ಕೊಂಡೊಯ್ಯುತ್ತದೆ, ಅಂದರೆ ಬ್ರಹ್ಮವಿದ್ಯೆ ಗೆ ಮಾರ್ಗಗಳಾಗಿವೆ.ಈ ನಾಲ್ಕರಲ್ಲಿ ಪ್ರತಿಯೊಂದು ಸಮಚಿತ್ತತೆ ಎನ್ನುವ ನಿಜವಾದ ಯೋಗದೆಡೆಗೆ ಕೊಂಡೊಯ್ಯುತ್ತದೆ. ಆದ್ದರಿಂದ ಯೋಗಶಾಸ್ತ್ರ ವೆನಿಸಿದ ಗೀತೆಯಲ್ಲಿ ಯೋಗವೆಂದರೆ ಸಮಚಿತ್ತತೆ ಎಂದು ಒತ್ತಿ ಹೇಳಲಾಗಿದೆ ಎಂಬುದರಲ್ಲಿ ಸಂದೇಹವಿಲ್ಲ. ಕೆಲವೊಂದು ಆಧುನಿಕ ಬರಹಗಾರರು ಯೋಗದ ಬಗೆಗೆ ಬೇರೊಂದು ಅರ್ಥವನ್ನೇಹೇಳಿದ್ದಾರೆ." ಯೋಗಃ ಕರ್ಮಸು ಕೌಶಲಂ" ಎಂದಿರುವುದರಿಂದ ಅವರು" ಕರ್ಮದಲ್ಲಿನ ಕುಶಲತೆಯೇ ಯೋಗವೆನ್ನಿಸಿದೆ". ಎಂದು ಹೇಳಿದ್ದಾರೆ. ಆದರೆ ಈ ಅಭಿಪ್ರಾಯ ಸಾಂದರ್ಭಿಕತೆಯನ್ನೇ ಸಂಪೂರ್ಣವಾಗಿ ಕಡೆಗಣಿಸಿದೆ. ಈ ವಾಕ್ಯಾಂಶವು ಹೇಳಿರುವ ಶ್ಲೋಕವು ಹೀಗಿದೆ:- " ಯೋಗಸ್ಥಃ ಕುರು ಕರ್ಮಣಿ ಸಂಗಮ್ ತ್ಯಕ್ತ್ವ ಧನಂಜಯ/ ಸಿದ್ಧ್ಯ ಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ// ದೂರೇಣ ಹ್ಯವರಂ ಕರ್ಮ ಬುದ್ಧಿಯೋಗಾದ್ ಧನಂಜಯ/ ಬುದ್ಧೌ ಶರಣಮನ್ವಿಚ್ಛ ಕೃಪಣಾಃ ಫಲಹೇತವಃ// ಬುದ್ಧಿ ಯುಕ್ತೋ ಜಹಾತೀಹ ಉಭೇ ಸುಕೃತ ದುಷ್ಕೃತೇ/ ತಸ್ಮಾದ್ ಯೋಗಾಯ ಯುಜ್ಯಸ್ವ ಯೋಗಃ ಕರ್ಮಸು ಕೌಶಲಂ"(2-48,49,50). " ಎಲೈ ಧನಂಜಯನೇ, ಯೋಗದಲ್ಲಿ ಇದ್ದುಕೊಂಡು ಸಂಗವನ್ನು ಬಿಟ್ಟು ಸಿದ್ಧಿ, ಅಸಿದ್ಧಿ ಇವೆರಡರಲ್ಲಿಯೂ ಸಮವಾಗಿದ್ದುಕೊಂಡು ಕರ್ಮಗಳನ್ನು ಮಾಡು ಸಮತ್ವವು ಯೋಗವೆನಿಸುವುದು. ಕೀಳಾದ ಕರ್ಮವು ಬುದ್ಧಿಯೋಗಕ್ಕಿಂತಲೂ ದೂರವಾಗಿರುವುದು.ಬುದ್ಧಿಯನ್ನೇ ಶರಣುಹೊಂದು. ಫಲಹೇತುಗಳಾದವರೂ ಕೃಪಣರು. ಬುದ್ಧಿಯಿಂದ ಕೂಡಿದವನು ಸುಕೃತ ದುಷ್ಕೃತಗಳೆರಡನ್ನೂ ಇಲ್ಲಿ ಬಿಟ್ಟುಬಿಡುತ್ತಾನೆ. ಆದ್ದರಿಂದ ಯೋಗಕ್ಕೆ ಹೊಂದಿಸಿಕೊ. ಯೋಗವು ಕರ್ಮಗಳಲ್ಲಿ ಕೌಶಲವು". ಶ್ರೀಕೃಷ್ಣನು ಅರ್ಜುನನಿಗೆ ಕರ್ಮವನ್ನು

ಬೋಧಿಸಿದನೆಂದು ಮೇಲ್ನೋಟಕ್ಕೆ ತಿಳಿಯುತ್ತದೆ. ಅವನು ಅದನ್ನು ಯೋಗದೊಡನೆ ಸಮಚಿತ್ತನಾಗಿ ಜಯ ಅಥವಾ ಅಪಜಯಗಳಿಂದ ಮನಸ್ಸಿನಲ್ಲಿ ಕ್ಷೋಭೆಗೊಳಗಾಗದೆ ನಡೆಸಬೇಕು ಎಂದು ಹೇಳಿ ನಂತರ ಈ ರೀತಿಯ ಯೋಗದೊಡನೆಯ ಕರ್ಮಕ್ಕೂ, ಸ್ವಾರ್ಥಪರ ಕರ್ಮಕ್ಕೂ ಭೇದವನ್ನು ತಿಳಿಸುತ್ತಾ, ಸ್ವಾರ್ಥಪರ ಕರ್ಮವನ್ನು ಖಂಡಿಸಿ, ಯೋಗಯುಕ್ತ ಕರ್ಮವನ್ನು ಒಂದು ಮಹಾಶಕ್ತಿಯೆಂದು ಹೇಳಿರುವನು. ಬಂಧಯುಕ್ತವಾದಕರ್ಮವು ಸಹ ಸಮಚಿತ್ತತೆಯಿಂದ ನಡೆಸಿದಾಗ ತನ್ನ ಬಂಧನದ ಸ್ವಭಾವನ್ನು ಕಳೆದುಕೊಳ್ಳುತ್ತದೆ ." ಆದ್ದರಿಂದ ಯೋಗಕ್ಕೆ ಕರ್ಮವನ್ನು ಹೊಂದಿಸಿಕೋ" ಎಂಬ ವಾಕ್ಯ ದೊಡನೆ ಕರ್ಮಯೋಗವನ್ನು  ಮುಕ್ತಾಯ ಮಾಡುತ್ತಾನೆ.

ಈ ಹಿಂದಿನ ಶ್ಲೋಕದಲ್ಲಿ " ಬುದ್ಧಿ"  ಎನ್ನುವ ಪದವನ್ನು, ಹಲವರು, ಕರ್ಮಕ್ಕೆ ವಿಭಿನ್ನವಾಗಿ ಜ್ಞಾನವೆಂದು ಅರ್ಥೈಸುತ್ತಾರೆ. ಜ್ಞಾನಿಯೇ ಒಳ್ಳೆಯದು ಮತ್ತು  ಕೆಟ್ಟದ್ದು ಎಂಬ ಭೇದವನ್ನು  ತ್ಯಜಿಸಬಲ್ಲನೆಂಬುದೆ ಮೇಲ್ನೋಟಕ್ಕೆ  ವಿಧಿತ.  ಆದರೆ, ಶ್ಲೋಕಗಳ ಮುಕ್ತಾಯ  ವಾಕ್ಯದಲ್ಲಿ "  ಆದ್ದರಿಂದ ಯೋಗಕ್ಕೆ ಹೊಂದಿಸಿಕೊ" ಎಂಬ ಹೇಳಿಕೆಯು " ಬುದ್ಧಿ"  ಎಂದರೆ " ಸಮತ್ವ ಬುದ್ಧಿ"  ಎನ್ನುವುದು ಸೂಕ್ತವಾದ ಅರ್ಥವು. ಜ್ಞಾನಿಗೆ ಕರ್ಮದ ಅಂಟು ಇಲ್ಲ ಎನ್ನುವುದು ಹೌದಾದರೂ, ಇಲ್ಲಿ ನಾವು ಕರ್ಮದ ಫಲದ  ಬಗೆಗೆ ಆಸಕ್ತರು, ಏಕೆಂದರೆ ಮುಂದಿನ ಶ್ಲೋಕವು ಹೀಗೆ ಹೇಳುತ್ತದೆ "  ಬುದ್ಧಿ ಉಳ್ಳವರು ಕರ್ಮಜವಾದ ಫಲವನ್ನು ಬಿಟ್ಟು ಮನೀಷಿಗಳಾಗಿ ಜನ್ಮ ಬಂಧದಿಂದ ಬಿಡುಗಡೆ ಹೊಂದಿ ಅನಾಮಯವಾದ ಪದವನ್ನು ಪಡೆದುಕೊಳ್ಳುತ್ತಾರೆ"(2-51). ಹೇಗೆ ಇರಲಿ ಗೀತೆಯಲ್ಲಿ ಯೋಗವೆಂದರೆ " ಸಮಚಿತ್ತತೆ"ಯೇ ಎಂಬುದು ನಿಚ್ಚಳಸತ್ಯ.

ನಾಲಕ್ಕೂ ಯೋಗಗಳೂ  ಯಾವ ರೀತಿಯಲ್ಲಿ ಈ ಆದರ್ಶದ ಯೋಗಕ್ಕೆ ಒಯ್ಯುತ್ತವೆ ಮತ್ತು ನಿಜದಲ್ಲಿಅವು ಹೇಗೆ ಸಂಪೂರ್ಣ ಭಿನ್ನ ಮಾರ್ಗಗಳಲ್ಲ, ಆದರೆ ಹೇಗೆ ಪರಸ್ಪರ ಸಂಬಂಧ ಉಳ್ಳದ್ದಾಗಿದೆ ಎಂದು ಹಿಂದಿನ ಪುಟಗಳಲ್ಲಿ  ತೋರಿಸಿದ್ದೇವೆ. ಗೀತೆಯು ಒಂದು ಸ್ಥಳದಲ್ಲಿ ಜ್ಞಾನದಿಂದ ಪ್ರಾರಂಭಿಸಿ ಕರ್ಮಯೋಗವನ್ನು  ಪರಿಚಯಿಸಿ  ಕಟ್ಟಕಡೆಗೆ ಧ್ಯಾನಯೋಗದಲ್ಲಿ ಮುಕ್ತಾಯಗೊಳಿಸುತ್ತದೆ. ಮತ್ತೊಂದು ಸ್ಥಳದಲ್ಲಿ  ಕರ್ಮಯೋಗದಿಂದ ಪ್ರಾರಂಬಿಸಿ ಮತ್ತಿನ್ನೆರಡು   ಯೋಗಗಳನ್ನು ನಿರೂಪಿಸುತ್ತಾ, ಜ್ಞಾನ ಯೋಗದಲ್ಲಿ ಮುಕ್ತಾಯ ಗೊಳಿಸುತ್ತದೆ.ಈ ಪರಸ್ಪರ ಸಂಬಂಧವನ್ನು, ಬೇರೆ ಯಾವುದೇ ಸ್ಥಳದಲ್ಲಿ ತಿಳಿಸಿರುವುದಕ್ಕಿಂತ ಹೆಚ್ಚುಸ್ಪಷ್ಟವಾಗಿ ತಿಳಿಸಿರುವ ಗೀತೆಯ ಅಧ್ಯಾಯದ ಒಂದು ಭಾಗವನ್ನು ಇಲ್ಲಿ ತಿಳಿಸುತ್ತೇವೆ " ತನ್ನ ತನ್ನ ಕರ್ಮದಲ್ಲಿ  ಅಭಿರತನಾದ ನರನು  ಸಂಸಿದ್ಧಿಯನ್ನು ಹೊಂದುತ್ತಾನೆ. ಸ್ವಕರ್ಮ ನಿರತನು  ಹೇಗೆ ಸಿದ್ಧಿಯನ್ನು ಹೊಂದುತ್ತಾನೋ ಅದನ್ನು ಹೇಳುವೆನು ಕೇಳು. ಯಾವಾತನಿಂದ ಎಲ್ಲ ಭೂತಗಳು ಹುಟ್ಟುತ್ತದೆಯೋ ಯಾವಾತನಿಂದ ಇವೆಲ್ಲವೂ   ವ್ಯಾಪಿಸಲ್ಪಟ್ಟಿದೆಯೋ, ಸ್ವಕರ್ಮದಿಂದ ಆತನನ್ನು ಅಭ್ಯರ್ಚನೆ ಮಾಡಿದರೆ

ಮಾನವನು ಸಿದ್ಧಿಯನ್ನು ಹೊಂದುತ್ತಾನೆ" (18- 45,46).ಕರ್ಮಯೋಗವು ಮತ್ತು ಭಕ್ತಿ ಯೋಗವು ಹೇಗೆ ಪರಸ್ಪರ ಸಂಬಂಧಿಸಿದೆ ಎನ್ನುವುದನ್ನು ಇದು ತೋರಿಸುತ್ತದೆ. ಭಕ್ತಿಯಿಂದ ಮಾಡಿದ ಕರ್ಮವು ಪರಿಪೂರ್ಣತೆಯೆಡೆಗೆ ಹೇಗೆ ಕೊಂಡೊಯ್ಯುತ್ತದೆ ಎಂದೂ ತಿಳಿಸಿರುತ್ತದೆ. ಎಲ್ಲೆಲ್ಲಿಯೂ ಯಾರ ಮನಸ್ಸು ಎಲ್ಲದರಿಂದ ಸಂಗರಹಿತವಾಗಿದೆಯೋ, ಯಾರ ಅಹಂಕಾರವು ತಗ್ಗಿದೆಯೋ, ಯಾರು ಬಯಕೆಗಳಿಂದ ದೂರರಾಗಿರುವರೋ ಅವರು ನೈಷ್ಕರ್ಮ್ಯಸಿದ್ಧಿಯನ್ನು ಪಡೆದಿರುವರು. 18 -49. ಇಲ್ಲಿ ಕರ್ಮಯೋಗ ಹಾಗೂ ಜ್ಞಾನಯೋಗಗಳ ಸಂಬಂಧವನ್ನು ತೋರಿಸಲಾಗಿದೆ, ಹಾಗೂ ಹೇಗೆ ನಿಸ್ವಾರ್ಥ ಕರ್ಮದಿಂದ ನೈಷ್ಕರ್ಮ್ಯಸಿದ್ಧಿಯನ್ನು ಪಡೆಯಬಹುದೆಂದು ತಿಳಿಸಿದೆ. ಈಗ ಕೆಳಗಿನ ಶ್ಲೋಕಗಳನ್ನು ಗಮನಿಸಿ." ವಿಶುದ್ಧವಾದ ಬುದ್ಧಿಯಿಂದ ಯುಕ್ತನಾಗಿ, ಧೃತಿಯಿಂದ ತನ್ನನ್ನು ನಿಯಮದಲ್ಲಿಟ್ಟುಕೊಂಡು, ಶಬ್ದವೇ ಮುಂತಾದ ವಿಷಯಗಳನ್ನು ಬಿಟ್ಟು ರಾಗ ದ್ವೇಷಗಳನ್ನು ತಿರಸ್ಕರಿಸಿ, ಏಕಾಂತ ಸ್ಥಳದಲ್ಲಿ ವಾಸಮಾಡುತ್ತಾ, ಲಘುವಾದ ಆಹಾರ ಸೇವಿಸಿ ವಾಕ್ಕು ಕಾಯ ಮತ್ತು ಮನಸ್ಸನ್ನು ಬಿಗಿ ಹಿಡಿದವನು ,ಯಾವಾಗಲೂ ಧ್ಯಾನಯೋಗಪರನಾಗಿ ವೈರಾಗ್ಯವನ್ನು ಆಶ್ರಯಿಸಿ ಅಹಂಕಾರ ಬಲ ದರ್ಪ ಕಾಮ ಕ್ರೋಧ ಪರಿಗ್ರಹ ಇವನ್ನು ಬಿಟ್ಟು ನನ್ನದು ಎನ್ನುವುದನ್ನು ತ್ಯಜಿಸಿ ಶಾಂತನೂ ಆಗಿರುವವನು ಬ್ರಹ್ಮನಾಗುವುದಕ್ಕೆ ತಕ್ಕವನಾಗುತ್ತಾನೆ".18 -51, 53. ಈ ಶ್ಲೋಕಗಳಲ್ಲಿ ಹೇಗೆ ಧ್ಯಾನ ಯೋಗವು ಬ್ರಹ್ಮ ವಿದ್ಯೆಗೆ ಅಥವಾ ಬ್ರಹ್ಮನನ್ನು ಸಾಕ್ಷಾತ್ಕರಿಸಲು ಸಾಧನ ಎಂದು ಹೇಳಲಾಗಿದೆ. ಹೇಗೆ ಕರ್ಮಯೋಗವು, ಭಕ್ತಿಯೋಗ ಹಾಗೂ ಜ್ಞಾನಯೋಗವನ್ನು ಅವಶ್ಯವಾಗಿ ಒಳಗೊಳ್ಳುತ್ತದೆ ಮತ್ತು ಧ್ಯಾನಯೋಗದಿಂದ ಬ್ರಹ್ಮ ಸಾಕ್ಷಾತ್ಕಾರಕ್ಕೆ ಎಡೆಮಾಡಿಕೊಡುತ್ತದೆ ಎನ್ನುವುದನ್ನು ಗ್ರಹಿಸಬಹುದು. ಇದೇ ರೀತಿಯ ಇನ್ನೂ ಹಲವಾರು ಶ್ಲೋಕಗಳನ್ನು, ಯೋಗಗಳ ಬೇರೆಬೇರೆಯ ಕ್ರಮಾನುಗತಿಯನ್ನು ತಿಳಿಸಲು ಉದಾಹರಿಸಬಹುದು. ಆದರೆ ಗೀತೆಯು ಯೋಗಗಳನ್ನು ಪರಸ್ಪರ ಅನನ್ಯವಲ್ಲವೆಂದು ಗಣಿಸಿದೆ ಎಂದು ತೋರಿಸಲು ಇಷ್ಟು ಸಾಕುಆದರೆ ಯಾವುದಾದರೂ ಒಂದು ಕ್ರಮದ ಕಟ್ಟುಪಾಡನ್ನು ಅನುಸರಿಸುವುದು ಅಗತ್ಯ ಎಂದೂ ಸೂಚಿಸುತ್ತದೆ. ಧಾರ್ಮಿಕ ಆಸಕ್ತರ ಮನೋಧರ್ಮವನ್ನು ಅನುಸರಿಸಿ ಅವರು ಯಾವ ಮಾರ್ಗವನ್ನು ಆಯ್ದುಕೊಳ್ಳುವರೋ ಅಂತಹ ಯೋಗಿ ಎಂದು ಕರೆಯುವ ವಾಡಿಕೆ ಇರುತ್ತದೆ.

ಗೀತೆಯು ಯಾವುದೋ ಒಂದು ವಿಶಿಷ್ಟವಾದ ಯೋಗವನ್ನೇ ಅತ್ಯುತ್ತಮವಾದದ್ದು ಎಂಬ ಪೂರ್ವಾಗ್ರಹದಿಂದ ಆರಂಭಿಸಿದ ಭಾಷ್ಯಕಾರರಿಗೆಲ್ಲಾ, ಗೀತೆಯ ಈ ವಿಶೇಷತೆಯೂ ದಿಗ್ಭ್ರಮೆಗೊಳಿಸಿದೆ. ಈ ರೀತಿಯ ವಾದಗಳನ್ನು ಪರೀಕ್ಷೆ ಮಾಡಿ ಮೌಲ್ಯಮಾಪನ ಮಾಡುವುದು ಈ ಬರವಣಿಗೆಯ ಗುರಿಯಲ್ಲದೆ ಇರುವುದರಿಂದ, ಆರಂಭಿಕ ಪುಟಗಳಲ್ಲಿ ತಿಳಿಸಿರುವಂತೆ ಯಾವುದೇ ಒಂದು ಪ್ರತ್ಯೇಕ( ಅನನ್ಯ) ಯೋಗ ಎಂಬವಾದವನ್ನು ಗೀತೆಯು ಸಮರ್ಥಿಸುವುದಿಲ್ಲ ಎಂದಷ್ಟೇ ಹೇಳುವೆವು. "ಸಮಚಿತ್ತತೆಯೇ" ಉತ್ಕೃಷ್ಟವಾದ ಯೋಗ, ಮತ್ತು ಯಾವುದೆಲ್ಲ ಇದರೆಡೆಗೆ ಒಯ್ಯುತ್ತದೆಯೋ ಅದೇ ಯೋಗ ಎಂದು ಗೀತೆಯು ಸಾರುತ್ತದೆ ಎಂಬುದನ್ನು ಪುನರುಚ್ಚರಿಸುತ್ತೇವೆ.

ಈ ಬರವಣಿಗೆಯನ್ನು ಪ್ರಾರಂಭಿಸಿದಾಗ ಎತ್ತಿದ ಒಂದು ಮುಖ್ಯವಾದ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಲು ಈಗ ಸುಸಮಯ. ದೈನಂದಿನ ವ್ಯಾವಹಾರಿಕ ಜೀವನದಲ್ಲಿ ಗೀತೆಯ ಮಾರ್ಗದರ್ಶನದ ಮಹತ್ವವೇನು? ಘನಘೋರ ನ್ಯೂನ್ಯತೆಗಳಿಂದ ಕುಡಿದ ದಿನನಿತ್ಯದ ಜೀವನವನ್ನು, ಅದು ದೈನಂದಿನ ವ್ಯವಹಾರಿಕ ಜೀವನ ಎಂಬ ಅರ್ಥದಲ್ಲಿ ತೆಗೆದುಕೊಂಡಾಗ, ಗೀತೆಯು ಅದರೊಡನೆ ಹೊಂದಾಣಿಕೆ  ಮಾಡಿಕೊಳ್ಳುವಂತಹ ಬೋಧನೆಯನ್ನು ಮಾಡುತ್ತದೆ ಎಂದು ಗಣಿಸಿದಲ್ಲಿ, ಮಾರ್ಗದರ್ಶಿಯಾಗಿ ಗೀತೆಯು ಏನೇನೂ ಉಪಯೋಗವಿಲ್ಲ. ಕಾರಣವೆಂದರೆ ಗೀತೆಯ ಬೋಧನೆಗಳು ನಮ್ಮ ಜೀವನದ ಪರಿಕಲ್ಪನೆಗೆ ವಿರುದ್ದವಾಗಿದೆ. ಸಾಧಾರಣ ಆಲೋಚನಾ ಶಕ್ತಿಯ ಮನುಷ್ಯರ ಬಹಳಷ್ಟು ಆಲೋಚನೆಯೂ ಗೀತೆಯ ತತ್ವಗಳಿಗೆ ವಿರುದ್ದವಾಗಿದೆ. ಸ್ಪರ್ಧಾ ಮನೋಭಾವ,   ಬಲವೇ ಗೆಲುವು ಎನ್ನುವ ಭಾವ, ವಿಲಾಸಿ ಜೀವನವನ್ನು ಪಡೆಯುವುದು ಮನುಷ್ಯನ ಪರಮಗುರಿ ಮತ್ತು ಒಬ್ಬನ ಆಸಕ್ತಿಯು ಕರ್ತವ್ಯವು ಅಭಿನ್ನ ಎಂದು ಜನರ ನಂಬಿಕೆ. ಇದು ದಿನನಿತ್ಯದ ವ್ಯಾವಹಾರಿಕ ಜೀವನ ಎನಿಸಿದಲ್ಲಿ, ಗೀತೆಯು ಇವುಗಳಲ್ಲಿ ಔದಾಸೀನ್ಯವನ್ನು ತೋರಿದೆ. ಇಂತಹ ಜೀವನ ನಡೆಸುವಲ್ಲಿ  ಅದು ಖಂಡಿತ ಮಾರ್ಗದರ್ಶಿಯಲ್ಲ. ಗೀತೆಯ ಆದರ್ಶವನ್ನು ನಮ್ಮ ಈಗಿನ ಜೀವನಕ್ಕೆ ಹೊಂದಿಸಿಕೊಳ್ಳುವ ಬದಲು ನಾವು ನಮ್ಮ ಜೀವನವನ್ನು ಕ್ರಮಕ್ರಮವಾಗಿ, ಗೀತೆಯ ಆದರ್ಶವಾದ ಪರಿಪೂರ್ಣತೆಯತ್ತ ಕೊಂಡೊಯ್ಯುವ ಪ್ರಯತ್ನವನ್ನು ಮಾಡಬೇಕು. ಅದೆಷ್ಟೇ ಉನ್ನತವಾದ ಆದರ್ಶವಾದರೂ ಅದು ಅಸಾಧ್ಯವಾದುದು ಆಗಬಾರದು ಮತ್ತು ಅವು ಸಾದ್ಯವಾದುದಾದಲ್ಲಿ ಮಾತ್ರ ಗೀತೆಯ ಆದರ್ಶಗಳು ಪ್ರಯೋಗ ಸಾಧ್ಯ. ಬ್ರಹ್ಮ ವಿದ್ಯೆಯೇ ಗೀತೆಯ ಆದರ್ಶ. ಬ್ರಹ್ಮವು ಅಥವಾ ಪರಮಾತ್ಮ ನಮ್ಮೆಲ್ಲರ ಆತ್ಮವು ಎಂಬುದೇ ಸಾಕ್ಷಾತ್ಕಾರ. ಈ ವಿಚಾರ ವಿನಿಮಯದಲ್ಲಿ ಬೇರೊಂದೆಡೆ ಈಗಾಗಲೇ ಸೂಚಿಸಿದಂತೆ ಪ್ರತಿಯೊಬ್ಬರೂ ಪ್ರಜ್ಞಾಪೂರ್ವಕವಾಗಿಯೋ ಅಥವಾ ಅಪ್ರಜ್ಞಾಪೂರ್ವಕವಾಗಿಯೋ ಉತ್ತಮ ಮತ್ತು ಏಕಮೇವ ಸತ್ಯವಾದ ಬ್ರಹ್ಮನನ್ನೇ ಪಡೆಯಲು ಎಳೆಸುತ್ತಿದ್ದಾರೆ.ಈ ಆದರ್ಶವೂ ಏನು ಎಂಬುದರ ಸ್ಪಷ್ಟವಾದ ಅರಿವು ಇಲ್ಲದಿರುವುದೇ ನಾವೆಲ್ಲ ಇದರ ಸಾಕ್ಷಾತ್ಕಾರಕ್ಕಾಗಿ ಅನುಸರಿಸುವ ಮಾರ್ಗಗಳು ಭಿನ್ನವಾಗಿರುವುದಕ್ಕೆ ಕಾರಣವು. ಹಾಗಾಗಿ ಪ್ರತಿಯೊಬ್ಬ ಮನುಷ್ಯನು, ತಾನೇ ಆರಿಸಿಕೊಂಡ ನಡತೆಯ ಮಾರ್ಗ ಯಾವುದೇ ಆಗಿರಲಿ  ಅದು ಬ್ರಹ್ಮವನ್ನೇ ಸೇರುವ  ಪಥವಾಗಿರುತ್ತದೆ.  ಕಾಲಾನುಕ್ರಮದಲ್ಲಿ ಅವನು ಉದ್ದೇಶಪೂರ್ವಕವಾಗಿ ಬ್ರಹ್ಮ ಮಾರ್ಗವನ್ನೇ ತೆಗೆದುಕೊಳ್ಳುವ ಪೂರ್ವ ನಿರ್ಧಾರವಾಗಿರುತ್ತದೆ. ಹಾಗಾಗಿ ಬ್ರಹ್ಮ ಸಾಕ್ಷಾತ್ಕಾರವೇ ಪ್ರತಿಯೊಬ್ಬರಿಗೂ ಅಂತಿಮ ಗುರಿಯಾಗುತ್ತದೆ. ಅಥವಾ  ದೋಷರಹಿತ ಸಮಚಿತ್ತತೆಯೇ  ಅದನ್ನು ಯಥಾರ್ತ ಗೊಳಿಸಲು ಬೇಕಾದ ನಿಯಮ.

ಗೀತೆಯ ಬೋಧನೆಗಳು ನಿಸ್ಸಂಶಯವಾಗಿ ನೈತಿಕತೆಗೆ ಭದ್ರವಾದ ಬುನಾದಿಯನ್ನು ಒದಗಿಸುತ್ತದೆ ಎಂದು ಹೇಳಬೇಕಾದದ್ದೇ ಇಲ್ಲ. ಬೇರೆ ಹಲವಾರು ಧಾರ್ಮಿಕ ಗ್ರಂಥಗಳಲ್ಲಿ ನೈತಿಕತೆಯ ಸೂತ್ರಗಳನ್ನು ಅವಕ್ಕೆ ಯಾವುದೇ ತಾತ್ವಿಕ ನೆಲೆಗಟ್ಟು ಕೊಡದೆ ತಿಳಿಸಿದ್ದಾರೆ. ಗೀತೆಯಲ್ಲಾದರೋ , ಉತ್ಕೃಷ್ಟ ನೈತಿಕತೆಯು ಅದರ ಸ್ವಭಾವವಾಗಿರುವುದು ಮಾತ್ರವಲ್ಲದೆ ನೈತಿಕತೆಯನ್ನು ಬ್ರಹ್ಮ ವಿದ್ಯೆಯ ಖಚಿತವಾದ ತಳಹದಿಯ ಆಧಾರದ ಮೇಲೆ ವಿವರಿಸಲಾಗಿದೆ. ಈಗಾಗಲೇ ಜ್ಞಾನಯೋಗವನ್ನು ವಿವರಿಸುವಲ್ಲಿ ಈ ವಿಷಯವನ್ನು ಗಮನಿಸಲಾಗಿದೆ. ಡಾಕ್ಟರ್ ಪಾಲ್ ಡ್ಯುಷೇನ್ ರಂತಹ ಪಾಶ್ಚಾತ್ಯ ವಿದ್ವಾಂಸರು ಸಹ ಗೀತೆಯ ವೇದಾಂತದ ತಳಹದಿಯ ಈ ಪ್ರಮುಖ ಚರ್ಯೆಯನ್ನು ವಿಶೇಷವಾಗಿ ಹೊಗಳಿದ್ದಾರೆ. ಈ ವಿದ್ವಾಂಸರು ಹೀಗೆ ಹೇಳಿರುವರು." ವೇದಾಂತದಲ್ಲಿ ನೈತಿಕತೆಯು ಇಲ್ಲದಿರುವುದು ಒಂದು ದೋಷ ಎಂದು ಜನರು ಹೇಳುತ್ತಾರೆ. ದಿಟವಾಗಿ ತನ್ನ ಕೃತಿಗಳ ಬಗೆಗೆ ಹೇಳಿಕೊಳ್ಳುವುದಕ್ಕೆ ಭಾರತೀಯ ಅಸಾಧಾರಣ ಪ್ರತಿಭೆಯು ಆಲೋಚಿಸುತ್ತದೆ, ನಿಜವಾದ ವಿಷಯವೆಂದರೆ, ವೇದಾಂತದ ನೇರವಾದ ಫಲವೆಂದರೆ ಅತ್ಯಂತ ಉಚ್ಚ ಪರಿಶುದ್ಧನೈತಿಕತೆಯೇ ಆಗಿದೆ. 'ನಿನ್ನಂತೆಯೇ ನಿನ್ನ ನೆರೆಯವನನ್ನು ಪ್ರೀತಿಸು' ಎನ್ನುವ ನೈತಿಕತೆಯ ಉತ್ತಮ ನೀತಿಯನ್ನು ಯೇಸುವಿನ ಸುವಾರ್ತೆಗಳು ಸರಿಯಾಗಿಯೇ ಹೇಳಿರುತ್ತದೆ. ಆದರೆ ನಾನು ಯಾಕೆ ಹಾಗೆ ಮಾಡಬೇಕು ಸ್ವಾಭಾವಿಕವಾಗಿ ನನ್ನ ನೋವು-ನಲಿವುಗಳು ನನ್ನದೇ ಅನುಭವವೇ ಹೊರತು ನನ್ನ ನೆರೆಯವನದಲ್ಲ. ಈ ಪ್ರಶ್ನೆಗೆ ಬೈಬಲ್ನಲ್ಲಿ ಉತ್ತರವಿಲ್ಲ,ಆದರೆ ವೇದಗಳಲ್ಲಿ ಇದೆ. ಇದನ್ನು ಬಹು ವಿಶಿಷ್ಟ ಸೂತ್ರವಾದ ' ತತ್ ತ್ವಂ ಅಸಿ' , ಎನ್ನುವ ಕೇವಲ ಮೂರು ಪದಗಳಲ್ಲಿ ಅಧ್ಯಾತ್ಮ ವಿದ್ಯೆ ಹಾಗೂ ನೈತಿಕತೆಯನ್ನು ಒಟ್ಟಿಗೆ ತಿಳಿಸಲಾಗಿದೆ. ನೀನು ನಿನ್ನ ನೆರೆಯವನೇ ಆಗಿರುವುದರಿಂದ ನೀನು ನಿನ್ನ ನೆರೆಯವನನ್ನು ಪ್ರೀತಿಸಲೇಬೇಕು ಮತ್ತು ನೀನು ನಿನ್ನ ನೆರೆಯವನಿಗಿಂತ ಭಿನ್ನ ಎಂಬುದು ಕೇವಲ ಭ್ರಮೆ. ಭಗವದ್ಗೀತೆಯ ಮಾತುಗಳಲ್ಲಿ ಹೇಳುವುದೆಂದರೆ,ಯಾರು ಎಲ್ಲವನ್ನೂ ತನ್ನಲ್ಲೇ ಕಾಣುತ್ತಾರೋ ಮತ್ತು ಎಲ್ಲದರಲ್ಲಿಯೂ ತನ್ನನ್ನೇ ಕಾಣುತ್ತಾರೋ ಅವರು ತನಗೆ ತಾನೇ ಹಾನಿಮಾಡಿಕೊಳ್ಳುವುದಿಲ್ಲ. "ನ ಹಿಂಸತಿ ಆತ್ಮನ್ ಆತ್ಮಾನಾಂ ". ಇದು ಎಲ್ಲಾ ನೈತಿಕತೆಯ ಒಟ್ಟು ಸಾರಾಂಶ ಮತ್ತು ತಾನು ಬ್ರಹ್ಮ ಎಂದು ತಿಳಿದ ವ್ಯಕ್ತಿಯು ತೆಗೆದುಕೊಳ್ಳುವ ನಿಲುವು".

ನಾವು ಅರ್ಜುನನಿಗೆ ಗೀತೋಪದೇಶ ಆದ ಸಂದರ್ಭವನ್ನು ನೆನೆಪಿಸಿಕೊಳ್ಳೋಣ. ಯುದ್ಧ ಸಿದ್ಧನಾದ ರಾಜನಾದ ಅರ್ಜುನನಿಗೆ, ಯುದ್ಧಭೂಮಿಯಲ್ಲಿ ಈ ವಿಷಯಗಳನ್ನು ಕ್ಷತ್ರಿಯನಾದ ಶ್ರೀಕೃಷ್ಣನು ಬೋಧಿಸಿದನು. ಮತ್ತೆ ಪ್ರತಿಯೊಂದು ಹಂತದಲ್ಲಿಯೂ ತನ್ನ ಕರ್ತವ್ಯವನ್ನು ಕಡೆಗಣಿಸದಂತೆ ಅರ್ಜುನನಿಗೆ ಪ್ರೇರೇಪಿಸಲಾಯಿತು ಅದೇ ಸಮಯಕ್ಕೆ ಪ್ರಪಂಚದ ಎಲ್ಲಾ ಕೆಡಕುಗಳಿಗೆ ಸಂಜೀವಿನಿಯಾದ ಅತ್ಯುಚ್ಚ ತತ್ವ ಸಿದ್ಧಾಂತವನ್ನು ಬೋಧಿಸಲಾಯಿತು, ಇವುಗಳನ್ನು ಗಮನಿಸಿದಾಗ ಗೀತೆಯ ತಾತ್ವಿಕ

ಸಿದ್ಧಾಂತ ಹಾಗೂ ಧರ್ಮದ ಪ್ರಾಯೋಗಿಕ ಉಪಯೋಗಿಕತೆಯನ್ನು ಮನಗಾಣಬಹುದು. ಗೀತೆಯ ಅಭಿಪ್ರಾಯದಂತೆ ಪ್ರಾಯೋಗಿಕ ಜೀವನ ಮತ್ತು ಧಾರ್ಮಿಕ ಜೀವನ ಎಂದು ಎರಡು ಬೇರೆ ಪ್ರಪಂಚಗಳಿಲ್ಲ , ಇರುವುದು ಒಂದೇ ಅವಿಭಕ್ತ ಜೀವನ, ತಾತ್ವಿಕತೆಯ ಮತ್ತು ಧಾರ್ಮಿಕತೆಯ ನೈಜವನ್ನು ಇಲ್ಲೇ ಈಗಲೇ ಅನುಭವಿಸಬೇಕೇ ಹೊರತು ಬೇರೆ ಎಲ್ಲೂ ಅಲ್ಲ. " ಇಹೈವ ಅರ್ಜಿತಃ ಸರ್ಗೋ ಯೇಷಾಂ ಸಾಮ್ಯೇ ಸ್ಥಿತಂ ಮನಃ"(5-19). " ಯಾರ ಮನಸ್ಸು ಸಾಮ್ಯದಲ್ಲಿ ನಿಂತಿರುವುದೋ ಅವರಿಂದ ಸ್ವರ್ಗವು ಇಲ್ಲಿಯೇ ಗೆಲ್ಲಲ್ಪಟ್ಟಿದೆ". ಈ ಶ್ಲೋಕದ ಹಿಂದಿನ ಶ್ಲೋಕದಲ್ಲಿ" ವಿದ್ಯಾ ವಿನಯಗಳಿಂದ ಕೂಡಿದ ಬ್ರಾಹ್ಮಣನಲ್ಲಿ, ಗೋವಿನಲ್ಲಿ, ಆನೆಯಲ್ಲಿ, ನಾಯಿಯಲ್ಲಿ ಮತ್ತು ಚಂಡಾಲನಲ್ಲಿ ಪಂಡಿತರು ಸಮದರ್ಶಿಗಳಾಗಿರುವರು" ಎಂದು ಹೇಳಿರುವುದು ಸಮಚಿತ್ತತೆಯ ಯೋಗದ ಪ್ರಾಯೋಗಿಕ ಮುಖವನ್ನು ಸ್ಪಷ್ಟವಾಗಿ ತೋರಿಸುತ್ತದೆ.ಈ ಯೋಗದ ಸಮಚಿತ್ತತೆಯನ್ನು, ದೈನಂದಿನ ಗೊಂದಲದಿಂದ ದೂರಾದ ಯಾವುದೋ ಕಾಡಿನಲ್ಲಿ ಆಶ್ರಯ ಪಡೆದು ಗಳಿಸುವುದಲ್ಲ, ಹಾಗೂ ಏನೂ ಉಪಯುಕ್ತ ಕಾರ್ಯವನ್ನು ಮಾಡದೇ ಇರುವುದು ಅಲ್ಲ. ಧ್ಯಾನ ಯೋಗದಲ್ಲಿ ಹೇಳಿರುವ ವಿಷಯದ ಅನುಸರಣೆಯಾಗಿ ಏಕಾಂತ ವಾಸದ ಅಗತ್ಯವೂ ಇದೆ ಆದರೆಆ ಏಕಾಂತವಾಸವು ಗುರಿಯಿಲ್ಲದ ಅತೃಪ್ತತೆಯಿಂದಲ್ಲ, ಜೀವನದ ಮಹತ್ವದ ಪ್ರಶ್ನೆಯ ಬಗೆಗೆ ವಿಚಾರಣೆ ನಡೆಸುವ ಸ್ಪಷ್ಟ ಉದ್ದೇಶದಿಂದ. ಸಾಕ್ಷಾತ್ಕಾರದ ನಂತರ ಆದರ್ಶ ಜ್ಞಾನಿಯು ತನ್ನ ಉಳಿದ ಜೀವನವನ್ನು ಪ್ರಪಂಚದ ನಡುವೆಯೇ ಕಳೆಯಬೇಕು ಎಂದು ಈ ಹಿಂದೆ ಉದ್ದಕ್ಕೂ ತಿಳಿಸಿದ ಶ್ಲೋಕಗಳು ವಿವರಿಸಿವೆ. ಜ್ಞಾನಿಯು ಮತ್ತೊಬ್ಬ ತಾತ್ವಿಕವಾಗಿ ಸುಧಾರಣೆಗೊಂಡ ವ್ಯಕ್ತಿಯಲ್ಲೂ, ಅಥವಾ ಪ್ರಾಪಂಚಿಕ ಮನುಷ್ಯನಲ್ಲೂ, ಜೀವನದಲ್ಲಿ ಬಿಡುವಿಲ್ಲದಂತೆ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಲು ಗಮನಹರಿಸಲು ಬೇಕಾದಷ್ಟು ಮಾನಸಿಕ ದೃಢತೆಯನ್ನು ಸಾಧಿಸದ ಶುದ್ಧ ತಾಮಸಿಕ ಜೀವಗಳಲ್ಲೂ ಏಕೈಕ ಶುದ್ಧ ಬ್ರಹ್ಮ ಚೈತನ್ಯವನ್ನೇ ಕಾಣುವನು. ಅವರ ಕೇವಲ ಉಪಸ್ಥಿತಿಯೇ ಮೇಧಾವಿಯಲ್ಲದ ಜೀವಿಗಳಿಗೆ ಉತ್ತೇಜನ ನೀಡುವುದು. ಪ್ರಾಪಂಚಿಕ ಜೀವನದ ಸುಖದುಃಖದ ಅಲೆಗಳಲ್ಲಿ ಮುಳುಗೇಳುತ್ತಿರುವ ಆದರೆ ಸಮಚಿತ್ತವನ್ನು ಬಯಸುವ ವ್ಯಕ್ತಿಗಳಿಗೆ ಜ್ಞಾನಿಯ ಜೀವಂತ ವ್ಯಕ್ತಿತ್ವ ಮಾಡುವ ಸಹಾಯ ಕಡಿಮೆಯದೇನು ಅಲ್ಲ. ತಾನು ತನ್ನನ್ನು ಉತ್ತಮ ಪಡಿಸಿಕೊಂಡು ಸಮಾಜಕ್ಕೆ ಉಪಯುಕ್ತವಾಗಬೇಕು ಎಂದು ಬಯಸುವ ,ಭೂಮಿಯ ಮೇಲಿರುವ ಪ್ರತಿಯೊಬ್ಬ ಪ್ರಜ್ಞಾವಂತ ಜೀವಿಗೂ ಇಲ್ಲಿ ಒಂದು ಅನುಸರಣಾತ್ಮಕ ಆದರ್ಶವಿದೆ. ಇದನ್ನು ಸಾಧಿಸಲು ಬಯಸುವವರು ಮನಸ್ಸಿನ ಶಾಂತಿಯನ್ನು ಮತ್ತು ಸಂಪೂರ್ಣ ಸಮಚಿತ್ತತೆಯನ್ನು ಪಡೆದಿರಬೇಕು ಎಂದು ಗೀತೆಯೂ ಹೇಳುತ್ತದೆ. ಕರ್ಮರಾಹಿತ್ಯ ಕಾಮ್ಯಕರ್ಮ ಇವುಗಳ ವೈಪರೀತ್ಯವನ್ನು ತೊರೆದು ಸತತವಾದ ಕರ್ಮದಲ್ಲಿ ಅವಿರತವಾಗಿ ತೊಡಗಿ ಕಾರ್ಯಭಾರದ ಮಧ್ಯೆಯೂ ಶಾಂತ ಮನಸ್ಸಿನಿಂದ ಉಳಿಯಬೇಕು. ಎಲ್ಲರಲ್ಲೂ ಅದೇ ಆತ್ಮನನ್ನು ಕಾಣುವುದು, ಮನಃಪಟಲದಲ್ಲಿ ಸದಾ ಪರಮಾತ್ಮನಿಂದ ಸ್ಫೂರ್ತಿಯನ್ನು ಹೊಂದಿದ ಮಹಾತ್ಮರ ಸ್ಮರಣೆ, ಪರಬ್ರಹ್ಮವನ್ನು ,ಕೇವಲ ಪರಬ್ರಹ್ಮವನ್ನು ಮನಸ್ಸಿನಲ್ಲಿ

ತುಂಬಿಕೊಂಡವರಾಗಿ ಇರುವುದು ಮತ್ತು ವೈವಿಧ್ಯಮಯವಾದ ಈ ಪ್ರಪಂಚದಲ್ಲಿ ಎಲ್ಲೆಲ್ಲೂ ಪರಬ್ರಹ್ಮನನ್ನೇ ಕಾಣುವುದು ,ಇವುಗಳನ್ನು ಕರತಲಾಮಲಕ ಮಾಡಿಕೊಳ್ಳಲು ಮಾಡುವ ಪ್ರಯತ್ನ ವಿಶೇಷ ಶಾಂತತೆಯನ್ನು, ಕ್ಷಮಾಪ್ರವೃತ್ತಿ, ಸಮವೃತ್ತಿ ,ಎಲ್ಲರನ್ನೂ ಪ್ರೀತಿಸುವ ಮನಸ್ಸನ್ನು ಹೊಂದಲು ಸಹಾಯಕವಾಗುತ್ತದೆ. ಇವು ಜೀವನದಲ್ಲಿ ಗೆಲುವನ್ನು ಪಡೆಯಲು ಬೇಕಾದ ನಿಯಮಗಳು.

ಈ ನಿಯಮಗಳನ್ನು ಅನುಷ್ಠಾನಕ್ಕೆ ತರಲು ಯಾವುದೋ ಅಸಾಧಾರಣ ವಿಶೇಷ ಅರ್ಹತೆಗಳು ಬೇಕು ಎಂಬ, ಕೆಲವರಿಗಷ್ಟೇ ಸೀಮಿತವಾಗುವ ಮೀಸಲಾತಿ ಇಲ್ಲ. ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೀಗೆ ಹೇಳುತ್ತಾನೆ, "ಇದಂ ತೆ ನಾತಪಸ್ಕಾಯ ನಾ ಭಕ್ತಾಯ ಕದಾಚನ; ನಚಾ ಶುಶ್ರೂಷವೇ ವಾಚ್ಯಂ ನಚ ಮಾಂ ಯೋsಭ್ಯಸೂಯತಿ". ಇದನ್ನು ಅತಪಸ್ಕನಿಗೆ, ಅಭಕ್ತನಿಗೆ,ಅಶುಶ್ರೂಷನಿಗೆ, ನನ್ನಲ್ಲಿ ಅಸೂಯೆ ಮಾಡುವವನಿಗೆ ಹೇಳಬಾರದು. ಇದೇ ಅರ್ಹತೆಯ ಸಾಮಾನ್ಯ ನಿಯಮಗಳು. ಮಾತು ಕೃತ್ಯ ಮತ್ತು ಆಲೋಚನೆಗಳಲ್ಲಿ ನೈಪುಣ್ಯತೆಯನ್ನು ಪಡೆಯಬೇಕು. 17ನೇ ಅಧ್ಯಾಯದಲ್ಲಿ ಇದನ್ನು ಹೀಗೆ ವಿವರಿಸಲಾಗಿದೆ. "ಪೂಜನೆಯು, ಶೌಚವು, ನೇರ ನಡೆ-ನುಡಿಯು, ಬ್ರಹ್ಮಚರ್ಯೆಯು ಮತ್ತು ಅಹಿಂಸೆಯು, ಅನುದ್ವೇಗ ಕರವು ಸತ್ಯವು ಪ್ರಿಯವೂ ಉಪಯುಕ್ತವೂ ಆದ ಮಾತುಗಳು, ಸ್ವಾಧ್ಯಾಯವು, ಮನಸ್ಸಿನ ಶಾಂತತೆಯು, ಸೌಮ್ಯ ಮನಸ್ಸು, ಮೌನವೂ, ಆತ್ಮನಿಗ್ರಹವು ಮತ್ತು ಸ್ವಭಾವದಲ್ಲಿ ಶುದ್ಧಿಯು" 17: 14ರಿಂದ 16. ಇದನ್ನು ಅನುಸರಿಸುವುದು ತಪಸ್ಸು ಎನಿಸಿಕೊಳ್ಳುತ್ತದೆ. ಆತನು ದೇವರಲ್ಲಿ ಭಕ್ತಿ ಇದ್ದವನು ಶಾಸ್ತ್ರಗಳಲ್ಲಿ ಶ್ರದ್ಧೆ ಇರುವವನು ಆಗಬೇಕು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ತನ್ನನ್ನು ತಾನು ಉದ್ಧರಿಸಿ ಕೊಳ್ಳಬೇಕೆಂಬ ನೈಜಇಚ್ಛೆಯೊಂದು ಹೊರತು ಮತ್ತೇನು ವಿಶೇಷ ಅರ್ಹತೆಯ ಅವಶ್ಯಕತೆ ಇಲ್ಲ. ಈ ಒಂದು ಅರ್ಹತೆ ಹೊಂದಿದ್ದಲ್ಲಿ ಪ್ರತಿಯೊಬ್ಬನು ಸ್ವಾಭಾವಿಕವಾಗಿ ತನ್ನ ತನ್ನ ಕರ್ತವ್ಯದಲ್ಲಿ ತೊಡಗಬಹುದು. "ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ". ತನ್ನ ತನ್ನ ಕರ್ಮದಲ್ಲಿ ನಿರತನಾದ ನರನು ಪರಿಪೂರ್ಣತೆಯನ್ನು ಸಂಸಿದ್ಧಿಯನ್ನು ಹೊಂದುವನು.

ಯಾರು ತಮ್ಮನ್ನು ತಾವು ಉತ್ತಮಗೊಳಿಸಲು ಮತ್ತು ತಾವಿರುವ ಪರಿಸರವನ್ನು ಉತ್ತಮಗೊಳಿಸಲು ಬಯಸುತ್ತಾರೋ, ಯಾರು ಕುತ್ಸಿತ ತನದಿಂದ ಹಾಗೂ ಅಧರ್ಮದಿಂದ ಉಂಟಾದ ಕೆಡುಕನ್ನು ಕಷ್ಟಗಳನ್ನು ನಿವಾರಿಸಿಕೊಳ್ಳಲು ಇಚ್ಛಿಸುತ್ತಾರೋ ಅವರಿಗೆ ಗೀತೆಯು ಅತ್ಯುತ್ತಮ ಪ್ರಾಯೋಗಿಕ (ಅನುಸರಣಾತ್ಮಕ) ಮೌಲ್ಯ ಉಳ್ಳದ್ದಾಗಿದೆ. ಐರೋಪ್ಯ ಅನುಭಾವವನ್ನು ವರ್ಣಿಸಲು ಉಪಯೋಗಿಸಿದ ವಾಕ್ಯವನ್ನು ಬಹುಶಃ ಇನ್ನೂ ಹೆಚ್ಚು ಸೂಕ್ತವಾಗಿ ಔಚಿತ್ಯ ಪೂರ್ಣವಾಗಿ ಭಗವದ್ಗೀತೆಯ ವಿಷಯದಲ್ಲಿ ಉಲ್ಲೇಖಿಸಬಹುದು. ಗೀತೆಯ ಬೋಧನೆಗಳು ಸಂಸಾರಕ್ಕೆ ಎಷ್ಟು ಒಳ್ಳೆಯದೋ ಹಾಗೆಯೇ

ಸಂತೆಮಾಳಕ್ಕೂ, ಶಾಸನಸಭೆಗೂ, ಅಧ್ಯಯನಕ್ಕೂ ಅಷ್ಟೇ ಏಕೆ ರಣರಂಗದಲ್ಲೂ ಸಹ ಅನ್ವಯಿಸಬಹುದಾಗಿದೆ ಮತ್ತು ಜೀವನದ ಯಾವುದೇ ನಿಲ್ದಾಣದಲ್ಲಿ ಇದ್ದರೂ ತನ್ನ ನಡತೆಯನ್ನು ನಿಜವಾದ ಮನುಷ್ಯನಂತೆ, (ಏಕೆಂದರೆ ಪೂರ್ಣವಾದ ಮನುಷ್ಯನ ಜೀವನ ಭಗವಂತನ ಜೀವನದಂತೆ) ನಡೆಸಲು ಸಾಧ್ಯ ಎಂದು ತಿಳಿಸುತ್ತದೆ.

**ಓಂ ತತ್ಸತ್**